ರೇವಣಸಿದ್ಧ ಪರಂಪರೆ : ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ಗಂಗಾಧರ್ ಕೊಡ್ಲಿಯವರ್

ಮಾರ್ಗದರ್ಶಕರು
ಎಸ್.ಕೆ.ಕೊಪ್ಪಾ
ವಿಶ್ರಾಂತ ಪ್ರಾಧ್ಯಾಪಕರು

ವಚನಪಿತಾಮಹಾ ಡಾ.ಫ.ಗು.ಹಳಕಟ್ಟಿ
ಸಂಶೋಧನ ಕೇಂದ್ರ, ವಿಜಯಪುರ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ರೇವಣಸಿದ್ಧ ಪರಂಪರೆ:
ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಗಂಗಾಧರ್ ಕೊಡ್ಲಿಯವರ್

ಮಾರ್ಗದರ್ಶಕರು

ಎಸ್.ಕೆ.ಕೊಪ್ಪಾ

ವಿಶ್ರಾಂತ ಪ್ರಾಧ್ಯಾಪಕರು

ವಚನಪಿತಾಮಹಾ ಡಾ.ಫ.ಗು.ಹಳಕಟ್ಟಿ

ಸಂಶೋಧನ ಕೇಂದ್ರ, ವಿಜಯಪುರ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಗಂಗಾಧರ್ ಕೊಡ್ಲಿಯವರ್ ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ರೇವಣಸಿದ್ಧ ಪರಂಪರೆ: ಸಾಂಸ್ಕೃತಿಕ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಭಾಷಾ ನಿಕಾಯಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ.ಎಸ್.ಕೆ.ಕೊಪ್ಪಾ
ವಿಶ್ರಾಂತ ಪ್ರಾಧ್ಯಾಪಕರು
ಶ್ರೀ ಗು.ರಾ.ಗಾಂಧಿ ಕಲಾ ಹಾಗೂ ಶ್ರೀ ವೈ.ಎ.ಪಾಟೀಲ
ವಾಣಿಜ್ಯ ಮಹಾವಿದ್ಯಾಲಯ, ಇಂಡಿ

ಸ್ಥಳ: ವಿಜಯಪುರ
ದಿನಾಂಕ: ೨೫-೦೬-೨೫

ಸಂಶೋಧಕರ ಪ್ರಮಾಣ ಪತ್ರ

ರೇವಣಸಿದ್ಧ ಪರಂಪರೆ: ಸಾಂಸ್ಕೃತಿಕ ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯಕ್ಕೆ ಪ್ರಾಧ್ಯಾಪಕರಾದ **ಡಾ.ಎಸ್.ಕೆ.ಕೊಪ್ಪಾ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಗಂಗಾಧರ್ ಕೊಡ್ಲಿಯವರ್
ಸಂಶೋಧನ ವಿದ್ಯಾರ್ಥಿ

ಸ್ಥಳ: ವಿಜಯಪುರ
ದಿನಾಂಕ: 28.06.2018

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

೧.೧. ಪೀಠಿಕೆ

ಭಾರತ ಬಹುಮುಖಿ ಸಂಸ್ಕೃತಿಯ ದೇಶ, ಅನೇಕ ಸಂಸ್ಕೃತಿ, ಉಪಸಂಸ್ಕೃತಿ ಮತ್ತು ಪ್ರತಿ ಸಂಸ್ಕೃತಿಗಳ ಬೀಡು. ವಿವಿಧ ಪಂಥ, ಧರ್ಮ ಹಾಗೂ ಜಾತಿಗಳನ್ನು ಒಳಗೊಂಡಿದೆ. ಇಂತಹ ಹಲವು ಪಂಥಗಳು ಧರ್ಮದ ರೂಪವನ್ನು ಪಡೆದುಕೊಂಡು ಅವುಗಳದ್ದೇ ಆದ ಆಚಾರ, ವಿಚಾರ, ನಂಬಿಕೆ, ಆಚರಣೆ, ಉತ್ಸವಗಳನ್ನು ಒಳಗೊಂಡ ಪರಂಪರೆಗಳನ್ನು ಹೊಂದಿದೆ. ದೇಶದ ಉದ್ದಗಲವು ಹಲವು ಬಗೆಯ ಸಿದ್ಧರ ಪರಂಪರೆಗಳನ್ನು ತನ್ನದಾಗಿಸಿಕೊಂಡಿದೆ. ಉದಾಹರಣೆಗೆ ಭೌದ್ಧಸಿದ್ಧರು, ಜೈನಸಿದ್ಧರು, ನಾಥಸಿದ್ಧರು, ರಸಸಿದ್ಧರು, ಮಹೇಶ್ವರ ಸಿದ್ಧರು, ಕಪಾಲಿ ಸಿದ್ಧರು, ಶೈವಸಿದ್ಧರು ಇತ್ಯಾದಿಯಾಗಿ ಹಲವು ಸಿದ್ಧರನ್ನು ಹಾಗೂ ಅವರು ಹುಟ್ಟುಹಾಕಿದ ಪರಂಪರೆಗಳನ್ನು ನಾವು ಕಾಣಬಹುದಾಗಿದೆ. ಸಾಮಾನ್ಯವಾಗಿ ಸಿದ್ಧ ಎಂದರೆ ಪರಿಪೂರ್ಣವಾದ, ಪಕ್ವವಾದ ಸಾಧನೆಯ ಗುರಿ ಮುಟ್ಟಿದವ ಎಂದು ಅರ್ಥೈಸಬಹುದಾಗಿದೆ. ಭಾರತೀಯ ಸಿದ್ಧ ಪರಂಪರೆಯನ್ನು ಅವಲೋಕಿಸಿದಾಗ ಕ್ರಿ.ಶ ೧ನೇ ಶತಮಾನದ ಸಂದರ್ಭದಲ್ಲಿ ಭೌದ್ಧ ಧರ್ಮವು ಹಲವು ಭಾಗಗಳಾಗುತ್ತ ಹೋಗಿ, ಕ್ರಿ.ಶ ೯ನೇ ಶತಮಾನದ ವೇಳೆಗಾಗಲೆ ಅನೇಕ ಮಾರ್ಪಾಟುಗಳಿಗೆ ಒಳಗಾಗಿ ಸಿದ್ಧ ಪರಂಪರೆಯ ಉಗಮಕ್ಕೆ ಕಾರಣವಾಯಿತೆನ್ನಬಹುದು.

ಮಿಥಿಲೆಯ ಜ್ಯೋತೀರೀಶ್ವರ ಠಾಕೂರ್ ಬರೆದ ೧೪ನೇಯ ಶತಮಾನದ 'ಗ್ರಂಥ ವರ್ಣ ರತ್ನಾಕರ' ಕೃತಿಯಲ್ಲಿ ಒಟ್ಟು ೭೭ ಸಿದ್ಧರನ್ನು ಪಟ್ಟೀಕರಿಸಿದ್ದಾನೆ. ಈ ಸೂಚಿಯನ್ನು ಕೆಲವರು ನಾಥ ಸಿದ್ಧರ ಸೂಚಿ ಎಂದಿರುವುದೂ ಉಂಟು. ಆದರೆ ಇದು ಕೇವಲ ನಾಥ ಸಿದ್ಧರ ಸೂಚಿ ಎಂದು ಹೇಳಲು ಯಾವ ಆಧಾರವೂ ಇಲ್ಲ.[1] ಮುಂದುವರೆದು ಮಹಾಪಂಡಿತ

ರಾಹುಲ ಸಾಂಕೃತ್ಯಾಯನು ಸಿದ್ಧರ ಪಟ್ಟಿಯನ್ನು ಟಿಬೆಟ್ಟಿನ ಸಸ್ಕ್ಯ ವಿಹಾರದ ಐದು ಗುರುಗಳ ಗ್ರಂಥಾವಳಿಯಾದ ' ಸಸ್ಕ್ಯಬ್ಕಂ ಬುಮ್'ನ ಆಧಾರದ ಮೇಲೆ ತಯಾರಿಸಿಕೊಟ್ಟಿದ್ದಾನೆ. ಇದರಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬ ಸಿದ್ಧನ ಹೆಸರಿನೊಂದಿಗೆ ಅವನ ಜಾತಿ, ದೇಶ ಹಾಗೂ ಸಮಕಾಲೀನ ರಾಜ ಅಥವಾ ಸಿದ್ಧರ ಹೆಸರಿನ ವಿವರಣೆಯು ದೊರೆಯುತ್ತದೆ. ಈ ಪಟ್ಟಿಯಲ್ಲಿ ಒಟ್ಟು ೮೪ ಸಿದ್ದರ ವಿವರಗಳಿವೆ. ಈ ಚೌರಾಸೀ (೮೪) ಸಿದ್ಧರ ಕಾಲ ೮ನೇಯ ಶತಮಾನದಿಂದ ೧೨ನೇಯ ಶತಮಾನದವರೆಗೂ ಹಬ್ಬಿದೆ. ಈ ಪಟ್ಟಿಯಿಂದ ಸಿದ್ಧರಲ್ಲಿ ಎಲ್ಲ ಜಾತಿಯವರೂ ಇದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಶೂದ್ರರ ಸಂಖ್ಯೆಯೇ ಹೆಚ್ಚು, ಅನಂತರ ಬ್ರಾಹ್ಮಣರು, ರಾಜಕುಮಾರರು, ರಾಜರು, ಕ್ಷತ್ರಿಯರು, ಕಾಯಸ್ಥರು, ಚಮ್ಮಾರರು, ವಣಿಕರು, ಬೆಸ್ತರು, ನೇಕಾರರು, ಅಗಸ, ದೊಂಬ, ಭೋವಿ, ದರ್ಜಿ, ರಾಜಕುಮಾರಿ ಈ ರೀತಿ ಸಮಾಜದ ಎಲ್ಲ ವರ್ಗದ ಜನರೂ ಇದ್ದರು. ಕಾಮರೂಪ, ಚಂಪ, ಒರಿಸ್ಸಾದಿಂದ ಹಿಡಿದು ಮಾಳವ, ಮಾರವಾಡ, ಸಿಂಧ್‌ನವರೆಗೆ, ಕಾಂಚಿ ಕರ್ನಾಟಕದಿಂದ ಹಿಡಿದು ಕಾಶ್ಮೀರದವರೆಗೆ ಈ ಪಂಥ ಹುಟ್ಟಿತ್ತು. ಈ ರೀತಿ ದೇಶವ್ಯಾಪಿಯಾದ ಆಂಧೋಲನವಾಗಿತ್ತು. ಈ ಸಾಧಕರಲ್ಲಿ ವರ್ಣ ಬೇಧವಾಗಲೀ, ವರ್ಗ ಬೇಧವಾಗಲೀ ಇರಲಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಸಮಾಜದ ವಿವಿಧ ಹಂತಗಳಿಂದ ಬಂದ ಈ ಸಾಧಕರು ಧಾರ್ಮಿಕ ಸಾಮ್ರಾಜ್ಯದಲ್ಲಿ ಲೋಕತಂತ್ರವನ್ನು ಸ್ಥಾಪಿಸಿದರು. ಅವರ ಧರ್ಮ ಜನತೆಯ ಧರ್ಮವಾಗಿತ್ತು. ಅದರ ಪೋಷಣೆಯಲ್ಲಿ ಜನತೆಯ ಜೊತೆಗೆ ಆಳರಸರ ಸಹಕಾರವೂ ಇತ್ತು.[೨]

ಸಿದ್ಧರ ಸಾಧನಾತ್ತ ಸಹಜ ಸಂಯಮದಿಂದ ಆರಂಭವಾಗುತ್ತದೆ. ಈ ಸಹಜ ಸಂಯಮ ಎರಡು ರೂಪದಲ್ಲಿ ಪ್ರತಿಫಲಿತವಾಗಬೇಕು. ಮೊದಲನೆಯದು ಸದಾಚಾರ. ಎರಡನೆಯದು ಮದ್ಯಮ ಮಾರ್ಗ. ಈ ಎರಡೂ ರೂಪಗಳಲ್ಲಿ ಗುರೂಪದೇಶ ತುಂಬಾ ಮಹತ್ವದಿದೆ. ಈ ಉಪದೇಶದಿಂದ ಹೃದಯದಲ್ಲಿ ವಿಚಾರಗಳ ಪ್ರವೃತ್ತಿ ಎರಡಿ ಕ್ಷೇತ್ರಗಳಲ್ಲಿ ಹರಿಯುತ್ತದೆ. ಒಂದರಲ್ಲಿ ಒಂದು ಸಾಧನೆಯ ಮಾರ್ಗವನ್ನು ಪ್ರಶಸ್ತಗೊಳಿಸುತ್ತ ಕ್ರಿಯಾತ್ಮಕವಾಗುತ್ತದೆ. ಅದರಲ್ಲಿ ಭೋಗದಲ್ಲೂ ಕೂಡ ನಿರ್ವಾಣದ ರೂಪ ನಿಚ್ಚಳವಾಗಿ ತೋರುತ್ತದೆ. ಎಂದರೆ ಸಂಸಾರ ಮತ್ತು ನಿರ್ವಾಣ ಇವೆರಡೂ ಒಂದೇ ತತ್ವದ ಎರಡು ರೂಪಗಳೆಂದು ಭಾಸವಾಗುತ್ತದೆ.[೩]

೧.೨. ಅಧ್ಯಯನದ ಉದ್ದೇಶ

ಈಚಿನ ದಿನಗಳಲ್ಲಿ ಚರಿತ್ರೆ ಅಧ್ಯಯನಕ್ಕಿಂತ ಸಂಸ್ಕೃತಿ ಅಧ್ಯಯನ ಹೆಚ್ಚಿನ ಪ್ರಾಶಸ್ತ್ಯ ಪಡೆದು ಅದರ ಕ್ಷೇತ್ರ ವಿಸ್ತಾರವಾಗುತ್ತಿದೆ. ಸಂಸ್ಕೃತಿಯ ಅವಲೋಕನವಿಲ್ಲದೆ ಚರಿತ್ರೆಯ ಅವಲೋಕನ ಅಪೂರ್ಣ ಎಂಬ ನಂಬಿಕೆ ಈಗ ನೆಲೆಗೊಂಡಿದೆ. ಭಾಷೆ–ಸಾಹಿತ್ಯ, ಮತ–ಧರ್ಮ, ಜಾತಿ –

ಪಂಗಡ, ಕಲೆ–ಆಚರಣೆ, ಜಾನಪದ ಮುಂತಾದ ನೆಲೆಗಳಲ್ಲಿ ಈ ಅಧ್ಯಯನ ಬಹುಮುಖಿಯಾಗಿ ಸಂಕೀರ್ಣ ಸ್ವರೂಪದ್ದಾಗಿ ನಡೆಯುತ್ತಲಿದೆ. ಭಾರತೀಯ ಸಾಮಾಜಿಕ ಪರಿಸರದಲ್ಲಿ ಒಂದೊಂದು ಜನಾಂಗವೂ ಹೇಗೆ ತನ್ನ ಪ್ರತ್ಯೇಕತೆಯನ್ನೂ, ವಿಶೇಷತೆಯನ್ನೂ ಹೊಂದಿದೆ ಎನ್ನುವುದರ ಪರಿಶೀಲನೆ ಅವಶ್ಯಕ.[೪]

ಹಾಲುಮತ ಎಂಬ ಹೆಸರಲ್ಲಿ ಸುಪರಿಚಿತವಾಗಿರುವ ಕುರುಬ ಕುಲ ಕರ್ನಾಟಕವಷ್ಟೇ ಅಲ್ಲದೆ ಭಾರತದ ಪುರಾತನ ಸಮುದಾಯಗಳಲ್ಲೊಂದು ಎಂಬುದು ಈಗಾಗಲೆ ಶೃತಪಟ್ಟಿರುವ ಸಂಗತಿ. ಕರ್ನಾಟಕದ ಸಂಬಂಧದಲ್ಲೂ ಇವರು ತುಂಬಾ ಮೂಲದವರೆ ಎನಿಸಿದ್ದಾರೆ. ಇವರ ವೃತ್ತಿಯು ಮೂಲದಲ್ಲಿ ಕುರಿ ಸಾಕಾಣಿಕೆಯೇ ಆದರೂ ನಂತರ ಬದಲಾಗುತ್ತ ಬಂದ ಸಾಮಾಜಿಕ ಸನ್ನಿವೇಶಗಳನ್ನು ಅನುಸರಿಸಿ ಅವರು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿ ಅವರ ಬದುಕು ಕೃಷಿ, ಕಂಬಳಿ ನೇಯ್ಗೆ, ಯೋಧ ವೃತ್ತಿ ಮುಂತಾದವುಗಳತ್ತ ಮುಖ ಮಾಡಬೇಕಾಯಿತು. ಅವರ ಜೀವನ ಶೈಲಿ ಇಷ್ಟಿಷ್ಟೆ ಸಂಕೀರ್ಣವಾಗುತ್ತ ಮೂಲ ನೆಲೆ ಒಳಗಿದ್ದರೂ ಹೊರಚಹರೆಗಳು ಬೇರೆ ಎಂಬಂತಾಯಿತು. ಹೀಗಾಗಿ ಕುರುಬ ಸಮುದಾಯ ಅನೇಕ ಪಾರಂಪರಿಕ ವೈಶಿಷ್ಟ್ಯಗಳನ್ನು ತನ್ನೊಳಗಿಟ್ಟುಕೊಂಡು ಕಾಲಾಂತರದಲ್ಲಿ ಸಾಗಿಬಂದಿರುವ ಒಂದು ಸಂಕೀರ್ಣ ಸಂಸ್ಕೃತಿಯದು ಎಂಬುದರಲ್ಲಿ ಸಂದೇಹವಿಲ್ಲ.[೫] ಅಂತಹ ಸಂಸ್ಕೃತಿ ಒಂದರ ಬಹುತೇಕ ಎಲ್ಲ ಮಗ್ಗಲುಗಳ ಗಂಭೀರ ಅಧ್ಯಯನವಾಗಬೇಕಿದೆ. ಈ ಹಿನ್ನೆಲೆಯು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಈ ಸಮುದಾಯ ಕುರಿತ ಶಾಸನಗಳು, ಸಾಹಿತ್ಯಿಕ ಕೃತಿಗಳಂತಹ ಲಿಖಿತ ಆಕರಗಳು ಹಾಗೆಯೇ ಮೌಖಿಕ ಆಕರಗಳು ಅವರ ದೈವಗಳು, ಧಾರ್ಮಿಕ ಸಾಂಸ್ಕೃತಿಕ ಪುರುಷರು, ಸಂಪ್ರದಾಯಗಳು, ಆಚರಣೆಗಳು, ವಿವಿಧ ಬಗೆಯ ಮಠಗಳು, ಅವುಗಳು ಸಾಗಿ ಬಂದ ರೀತಿ ಈ ಸಮುದಾಯಕ್ಕೆ ಸಂಬಂಧಿಸಿದ ಸಾಹಿತ್ಯಗಳು ಆಕರಗಳಾಗಿ ಈ ಸಂಸ್ಕೃತಿಯನ್ನು ಆಪ್ತವಾಗಿ ಪರಿಚಯಿಸುವುದಲ್ಲದೆ ಈ ಬಗೆಗೆ ನಡೆಸಬಹುದಾದ ಅಧ್ಯಯನದ ವಿಸ್ತಾರ ಮತ್ತು ಆಳಗಳನ್ನು ಸೂಚಿಸುತ್ತವೆ.

ಪ್ರಾಚೀನ ಕಾಲದಿಂದಲೂ ಕುರುಬ ಜನಾಂಗದವರು ತಮ್ಮ ಮೂಲ ಗುರುಗಳೆಂದು ಆರಾಧಿಸಿಕೊಂಡು ಬಂದಿರುವ ಮಹಾಪುರುಷರಲ್ಲಿ ಶ್ರೀ ಗುರು ರೇವಣಸಿದ್ಧರಿಗೆ ಅಗ್ರಸ್ಥಾನ ಸಲ್ಲುತ್ತದೆ. ಕರ್ನಾಟಕದ ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಸಿದ್ಧನಾಗಿರುವ ಈತ ಕುರುಬ ಮತ್ತು ವೀರಶೈವ ಸಮಾಜಗಳೆರಡಕ್ಕೂ ಪೂಜ್ಯನೀಯ ವ್ಯಕ್ತಿಯಾಗಿದ್ದಾನೆ. ಈತನನ್ನು ಕುರಿತು ಲಿಖಿತ ಪರಂಪರೆಯಲ್ಲಿಯೂ ಹಾಗೂ ಮೌಖಿಕ ಪರಂಪರೆಯಲ್ಲಿಯೂ ಸಾಕಷ್ಟು ಪ್ರಮಾಣದ ಸಾಹಿತ್ಯ ದಾಖಲೆಗಳು ಸೃಷ್ಟಿಯಾಗಿರುವುದು ಕಂಡುಬರುತ್ತದೆ. ಈ ಒಂದೊಂದು ಪರಂಪರೆಯ ಆಕರ ಸಾಮಗ್ರಿಗಳನ್ನು ಇಟ್ಟುಕೊಂಡು ಒಂದೊಂದು ಸ್ವತಂತ್ರ ಅಧ್ಯಯನ ಕೈಗೊಳ್ಳಬಹುದಾದಷ್ಟು

ವಿಫುಲ ಪ್ರಮಾಣದ ಆಕರ ಸಾಮಗ್ರಿಗಳು ದೊರೆಯುತ್ತಿರುವುದು ಈತನ ಪ್ರಸಿದ್ಧಿಗೆ ಮಹಿಮಾಸ್ಪದ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.[೬]

ಐತಿಹಾಸಿಕ ವ್ಯಕ್ತಿಯಾಗಿರುವ ರೇವಣಸಿದ್ಧನನ್ನು ಕುರಿತು ಕಾವ್ಯಗಳು, ಜನಪದ ಹಾಡುಗಳು, ಶಾಸನಗಳು ರಚನೆಗೊಂಡಿವೆ. ರೇವಣಸಿದ್ಧರನ್ನು ಕುರಿತು ಪುರಾಣಗಳನ್ನು ವೀರಶೈವರು ಹಾಗೂ ಹಾಲುಮತ ಜನಾಂಗದವರು ರಚಿಸಿರುವುದು ಕಂಡುಬರುತ್ತದೆ. ಇವುಗಳಿಂದ ತಿಳಿದುಬರುವ ಸಂಗತಿಗಳೆಂದರೆ ಕುರುಬ ಜನಾಂಗದ ಶಾಂತಿಮಯ ಮುತ್ತಯ್ಯನೆ ರೇವಣಸಿದ್ಧರ ತಂದೆ. ಆತನೂ ಶಿವಭಕ್ತ, ಗುರುಭಕ್ತ. ಈತನು ಪಲ್ಲಿಪಾಕಿ ಸೀಮೆಯಲ್ಲಿ ನೆಲೆಸಿರುವಾಗ ರೇವಣಸಿದ್ಧರು ಜನಿಸಿದರು. ಇವರು ಮೊದಲು ನಾಥಸಿದ್ಧನಾಗಿದ್ದು ಅನಂತರ ಶೈವಸಿದ್ಧರಾದರು. ಇವರು ಸುಮಾರು ೧೦೭ ವರ್ಷಗಳವರೆಗೆ ಬದುಕಿದ ದೀರ್ಘಾಯುಷಿ ಎಂದು ಗೊತ್ತಾಗುತ್ತದೆ. ಮೇಲಿನ ಈ ಅಭಿಪ್ರಾಯವನ್ನು ಬೆಂಬಲಿಸುವಂತೆ ಕ್ರಿ.ಶ ೧೧೮೭ರ ಸಿರವಾಳ ಶಾಸನವೂ ಕೂಡ ರೇವಣಸಿದ್ಧರನ್ನು ಶಾಂತಿಮಯ್ಯಂಗಳ ಪುತ್ರ ಎಂದು ಹೇಳಿರುವುದನ್ನು ಗಮನಿಸಬಹುದಾಗಿದೆ. ಅಲ್ಲದೆ ಸಿದ್ಧಪುರುಷನಾದ ರೇವಣಸಿದ್ಧರಿಗೆ ಜನ್ಮ ನೀಡಿದ ತಂದೆ ಶಾಂತಿಮಯ್ಯನೂ ಅಸಮಾನ್ಯನಾದ ವ್ಯಕ್ತಿಯೆ ಆಗಿದ್ದ ಎಂಬುದು ಸ್ಪಷ್ಟವಾಗುತ್ತದೆ.

೧೨ನೆಯ ಶತಮಾನದ ಶರಣ ಚಳುವಳಿಯ ಕಾಲಘಟ್ಟದಲ್ಲಿ ರೇವಣಸಿದ್ಧ ಹಾಗೂ ಸಿದ್ಧರಾಮರ ನೇತೃತ್ವದಲ್ಲಿ ಕುರುಬ ಸಮುದಾಯಕ್ಕೆಂದೆ ಗುರುಪರಂಪರೆಯ ಒಡೆಯರ ಎರಡು ಪಂಗಡಗಳನ್ನು ರೂಪಿಸಿಕೊಳ್ಳಲಾಗಿದೆ. ರೇವಣಸಿದ್ಧರ ನೇತೃತ್ವದಲ್ಲಿ ರೂಪಗೊಂಡ ಒಡೆಯರ ಶಾಖೆಗೆ ಶಾಂತ ಒಡೆಯರ ಪಂಗಡವೆಂದು ಕರೆಯುತ್ತಾರೆ. ಸಿದ್ಧರಾಮರ ನೇತೃತ್ವದಲ್ಲಿ ರೂಪುಗೊಂಡ ಒಡೆಯರ ಶಾಖೆಗೆ ಮಂಕ ಒಡೆಯರ ಪಂಗಡವೆಂದು ಕರೆಯುತ್ತಾರೆ. ಈ ಒಡೆಯರ ಕುರಿತು ಸಣ್ಣ ಪುಟ್ಟ ಚರ್ಚೆಗಳನ್ನು ಹೊರತುಪಡಿಸಿದರೆ ವ್ಯಾಪಕವಾದ ಸಂಶೋಧನೆಗಳು ನಡೆದದ್ದು ಇತ್ತೀಚಿನ ದಿನಗಳಲ್ಲಿ ಮಾತ್ರ. ಈ ಸಂಶೋಧನೆಗಳಿಗೆ ಚಾಲನೆ ದೊರೆತಿದ್ದು ಡಾ. ಎಂ.ಎಂ. ಕಲಬುರ್ಗಿ ಹಾಗೂ ಡಾ. ವೈ.ಸಿ ಭಾನುಮತಿ ಅವರು ಸಂಪಾದಿಸಿದ 'ಸಿದ್ಧಮಂಕ ಚರಿತೆ' ಮತ್ತು ಡಾ:ಎಂ.ಎಂ.ಕಲಬುರ್ಗಿ, ಸಿ.ಕೆ ಪರುಶರಾಮಯ್ಯ, ಡಾ: ಎಫ್.ಟಿ ಹಳ್ಳೀಕೇರಿ ಅವರು ಸಂಪಾದಿಸಿದ 'ತಗರು ಪವಾಡ' ಕೃತಿಗಳ ಪ್ರಕಟಣೆಗಳೊಂದಿಗೆ. ಕುರುಬರ ಗುರುಗಳಾದ ಶಾಂತ ಒಡೆಯರು, ಮಂಕ ಒಡೆಯರು ಹಾಗೂ ಅಮೋಘ ಒಡೆಯರನ್ನು ಗಮನದಲ್ಲಿಟ್ಟುಕೊಂಡು ಡಾ: ಬಿ.ಜಿ ಬಿರಾದಾರ ಅವರು 'ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ೨೦೦೭ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಂಶೋಧನಾ ಪ್ರಬಂಧ ಸಿದ್ಧಪಡಿಸಿ ಡಾಕ್ಟರೇಟ್ ಪದವಿಯನ್ನು ಹಾಗೂ ಡಾ: ಚನ್ನಪ್ಪ ಕಟ್ಟಿ ಅವರು 'ಅಮೋಘ ಸಿದ್ಧ ಪರಂಪರೆ: ಒಂದು ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ೨೦೧೦ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ

ಸಂಶೋಧನಾ ಪ್ರಬಂಧ ಸಿದ್ಧಪಡಿಸಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿರುವುದನ್ನು ಗಮನಿಸಬಹುದಾಗಿದೆ.

ಒಡೆಯರ ಪಂಗಡಗಳನ್ನು ಇಡಿಯಾಗಿ ನೋಡಿದ ಡಾ: ಬಿ.ಜಿ ಬಿರಾದಾರ ಅವರ ಮಹಾ ಪ್ರಬಂಧ ಈ ನಿಟ್ಟಿನಲ್ಲಿ ನಡೆದ ಮಹತ್ವದ ಚಟುವಟಿಕೆಯೆಂದೇ ಭಾವಿಸಬೇಕು. ಇಡಿಯಾಗಿ ನೋಡುವುದೇ ಇದರ ಉದ್ಧೇಶವಾಗಿರುವ ಕಾರಣದಿಂದ ಅದು ಸಹಜವಾಗಿಯೆ ವಿಸ್ತಾರದ ಕಡೆಗೆ ಗಮನ ಹರಿಸಬೇಕಾಗುತ್ತದೆ. ವಿಸ್ತಾರವನ್ನು ಗಮನಿಸುವ ಸಂದರ್ಭದಲ್ಲಿ ಅದರ ಆಳವನ್ನು ಅದೇ ಕಾಲಕ್ಕೆ ಗಮನಿಸಲು ಸಾಧ್ಯವಾಗದೇ ಹೋಗುತ್ತದೆ. ಹೀಗಾಗಿ ಒಡೆಯರ ಮೂರು ಪಂಗಡಗಳಲ್ಲಿ ಒಂದೊಂದನ್ನೆ ಆಯ್ದುಕೊಂಡು ಒಂದೊಂದರ ಕುರಿತು ಆಳವಾದ ಅಧ್ಯಯನ ಮಾಡುವುದನ್ನು ನಂತರದ ಸಂಶೋಧನಾ ಲೋಕ ಕೈಗೆತ್ತಿಕೊಳ್ಳಬೇಕಾಗುತ್ತದೆ. ಈ ಕ್ರಮದ ಮುಂದುವರಿಕೆ ಭಾಗವೆನ್ನುವಂತೆ ಡಾ: ಚನ್ನಪ್ಪಕಟ್ಟಿ ಅವರು ಅಮೋಘಿ ಒಡೆಯರ ಪಂಗಡ ಕುರಿತು ಮಹಾಪ್ರಬಂಧವನ್ನು ಮಂಡಿಸಿದ್ದಾರೆ. 'ಅಮೋಘಿ ಸಿದ್ಧಪರಂಪರೆ : ಒಂದು ಅಧ್ಯಯನ' ದ ಈ ಮಹಾ ಪ್ರಬಂಧದಲ್ಲಿ ಡಾ: ಚನ್ನಪ್ಪ ಕಟ್ಟಿ ರವರು ಬಹಳ ಶ್ರಮವಹಿಸಿ ಅಮೋಘಿ ಸಿದ್ಧಪರಂಪರೆಯ ವಿಸ್ತಾರ ಮತ್ತು ಆಳಗಳನ್ನು ಕ್ರಮಿಸಿ ಇಡಿಯಾಗಿ ಅಮೋಘಿ ಸಿದ್ಧಪರಂಪರೆಯನ್ನು ಕಟ್ಟಿಕೊಟ್ಟಿದ್ದಾರೆ. ಈ ಸಂಶೋಧನ ಮಹಾ ಪ್ರಬಂಧವು ಒಂದು ಮೈಲುಗಲ್ಲಾಗಿದೆ.

ಈ ಹಿನ್ನೆಲೆಯಲ್ಲಿ ಕುರುಬರ ಮೂರು ಗುರುಪರಂಪರೆಗಳಲ್ಲಿ ಒಂದಾದ ರೇವಣಸಿದ್ಧ ಪರಂಪರೆಯ ಸಾಂಸ್ಕೃತಿಕ ಅಧ್ಯಯನ ಕುರಿತು ಸಂಶೋಧನೆ ನಡೆಸಲು ನಿರ್ಧರಿಸಲಾಯಿತು. ಕರ್ನಾಟಕ ರಾಜ್ಯದ ಭೌಗೋಳಿಕ ವ್ಯಾಪ್ತಿಯನ್ನೂ ಮೀರಿ ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ತಮಿಳುನಾಡಿನಲ್ಲೀರುವ ಅಪಾರ ಸಂಖ್ಯೆಯ ರೇವಣಸಿದ್ಧರ ಪ್ರಮುಖ ಮಠಮಾನ್ಯಗಳ ಕ್ಷೇತ್ರಕಾರ್ಯ ಮಾಡುವುದರ ಮೂಲಕ, ಆ ನೆಲೆಗಳಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿರುವ ಜಾತ್ರೆ, ಉತ್ಸವ, ನಂಬಿಕೆ, ಆಚರಣೆ, ಸೇವೆ ಮತ್ತು ಕಟ್ಟಳೆಗಳಲ್ಲಿರುವ ಒಟ್ಟು ಸಾಂಸ್ಕೃತಿಕ ಅನನ್ಯತೆಗಳನ್ನು ಗುರುತಿಸಿ, ಸಾಹಿತ್ಯಿಕ, ದಾಖಲಾತ್ಮಕ ಮತ್ತು ಮೌಖಿಕ ಆಕರಗಳಲ್ಲಿ ಹುದುಗಿರುವ ರೇವಣಸಿದ್ಧ ಪರಂಪರೆಯನ್ನು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಕೋನದಿಂದ ಅವಲೋಕಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶ. ಸುಮಾರು ಒಂದು ಸಾವಿರ ವರ್ಷಗಳ ಚರಿತ್ರೆ ಹೊಂದಿರುವ ರೇವಣಸಿದ್ಧ ಪರಂಪರೆ ಇಂದಿಗೂ ಜೀವಂತವಾಗಿದೆ. ಈ ಕಾಲಘಟ್ಟದಲ್ಲಿ ರೇವಣಸಿದ್ಧ ಪರಂಪರೆಯು ಎಂತಹ ಸ್ಥಿತಿ ತಲುಪಿದೆ ಎಂದು ಶೋಧಿಸಿಕೊಳ್ಳುವುದು ಹಾಗೂ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಈ ಸಂದರ್ಭದಲ್ಲಿ, ದೇಶೀ ಸಂಸ್ಕೃತಿಯಾದ ರೇವಣಸಿದ್ಧ ಪರಂಪರೆಯ ಮಾದರಿ ಏನಾದರೂ ಪರಿಹಾರದ ದಾರಿ

ತೋರಬಹುದೇ ಎಂದು ಶೋಧಿಸಿಕೊಳ್ಳುವ ಉದ್ದೇಶವು ಈ ಅಧ್ಯಯನದ ಆಶಯವಾಗಿದೆ.

೧.೩ ಅಧ್ಯಯನದ ವ್ಯಾಪ್ತಿ

ಕರ್ನಾಟಕದ ಧಾರ್ಮಿಕ, ಸಾಮಾಜಿಕ, ಇತಿಹಾಸದಲ್ಲಿ ರೇವಣಸಿದ್ಧನದ್ದು ಬಹುದೊಡ್ಡ ಹೆಸರು. ಜೀವಿತ ಕಾಲಾವಧಿಯಲ್ಲಿ ಧಾರ್ಮಿಕತೆಯನ್ನು ಮೀರಿ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲೂ ತನ್ನ ಪ್ರಭಾವ ಬೀರಿದವನಾಗಿದ್ಧಾನೆ. ಕರ್ನಾಟಕದ ಲಿಂಗಾಯಿತ ಹಾಗೂ ಕುರುಬ ಸಮಾಜಗಳ ಲಿಖಿತ ಮತ್ತು ಅಲಿಖಿತ ಸಾಹಿತ್ಯ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಹರಡಿಕೊಂಡಿದ್ದಾನೆ. ತನ್ನದೆ ಆದ ಗುರುಪರಂಪರೆಯ ಹುಟ್ಟಿಗೆ ಕಾರಣವಾಗಿದ್ಧಾನೆ. ರೇವಣಸಿದ್ಧನು ಸಿದ್ಧರಲ್ಲಿ ಸಿದ್ಧನಾಗಲೇಬೇಕೆಂಬಂತೆ ನಾಡಿನಾದ್ಯಂತ ಸಂಚರಿಸಿ ಕರ್ನಾಟಕದ ಸಿದ್ಧಪರಂಪರೆಯಲ್ಲಿ ಬಹುದೊಡ್ಡ ಹೆಸರನ್ನು ಪಡೆದವನು.

ಪುರಾಣಗಳು ಮತ್ತು ಐತಿಹ್ಯಗಳು ರೇವಣಸಿದ್ಧನನ್ನು ಅರಿತು ೭೦೦ ವರ್ಷ ಮರೆತು ೭೦೦ ವರ್ಷ ಕಾರಣ ಆತನ ಜೀವಿತ ಅವಧಿ ೧೪೦೦ ವರ್ಷಗಳೆಂದು ಹೇಳುತ್ತಿದ್ದರೂ, ಚಾರಿತ್ರಿಕವಾಗಿ ಈತನು ೧೧ನೆಯ ಶತಮಾನದ ಕೊನೆಯ ದಶಕದಲ್ಲಿ ಹುಟ್ಟಿ ೧೨ನೆಯ ಶತಮಾನದ ಕೊನೆಯ ದಶಕದಲ್ಲಿ ನಿಧನ ಹೊಂದಿರುವುದಾಗಿ ತಿಳಿದುಬರುವುದು. ರೇವಣಸಿದ್ಧ ಕೇವಲ ಧಾರ್ಮಿಕ ಪುರುಷನಾಗಿರದೆ ಸಾಮಾಜಿಕ ಕಳಕಳಿಯನ್ನು ಹೊಂದಿದ್ದನೆಂಬುದು ಮುಖ್ಯವಾಗುವುದು.

ರೇವಣಸಿದ್ಧ ಇಂದು ಕುರುಬರಲ್ಲಿ ಮತ್ತು ವೀರಶೈವರಲ್ಲಿ ಸಾಂಸ್ಕೃತಿಕ ನಾಯಕನಾಗಿ ಪ್ರಚಾರದಲ್ಲಿದ್ದಾನೆ. ಈ ಸಮಸ್ಯೆ ನಿರ್ಮಾಣವಾದುದು ಹೇಗೆ? ಎಂದು ? ಎಂಬುದು ಮುಖ್ಯ ಪ್ರಶ್ನೆಯಾಗಿದ್ದು ಅದನ್ನು ಹೀಗೆ ವಿವರಿಸಬಹುದು. ಒಬ್ಬ ಮಹಾತ್ಮನ ಹೆಸರು ಮೇಲುಜಾತಿ ಕೆಳಜಾತಿಗಳಲ್ಲಿ ಪರಿಗಣಿತವಾಗುತ್ತಿದ್ದರೆ ಅದು ಮೂಲತ: ಕೆಳಜಾತಿಗೆ ಸಂಬಂಧಿಸಿದುದೇ ಆಗಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಇಂದು ವೀರಶೈವ ಜಾತಿಗೆ ಎಳೆಯಲ್ಪಟ್ಟಿದ್ದರೂ ರೇವಣಸಿದ್ಧ ಮೂಲತ: ಕುರುಬ ಜಾತಿಯವನಾಗಿರಬೇಕು. ಕುರುಬರ ಜನಪದ ಸಾಹಿತ್ಯ, ದೇವಾಲಯ, ಮಠ, ಆಚರಣೆಗಳು, ಇತ್ತೀಚೆಗೆ ಪ್ರಕಟವಾದ ತಗರ ಪವಾಡ ಕೃತಿ, ತಾಮ್ರ ಪಟ ಮೊದಲಾದ ದಾಖಲೆಗಳು ಇವನು ಜಾತಿಯಿಂದ ಕುರುಬನೆಂದು ಇನ್ನೂ ದೃಢಪಡಿಸಿವೆ. ಇತ್ತೀಚೆಗೆ ಇಷ್ಟೆಲ್ಲ ಆಕರ ಸಾಮಗ್ರಿಗಳು ಬೆಳಕಿಗೆ ಬಂದಿದ್ದರೂ ರೇವಣಸಿದ್ಧನ ಪೂರ್ವ ಅಭ್ಯಾಸಕ್ಕೆ ಇವು ಸಾಲುವುದಿಲ್ಲವೆಂದೆ ಹೇಳಬೇಕು. ಹೀಗಾಗಿ ವಿದ್ವಾಂಸರಾದವರು ಈತನಿಗೆ ಸಂಬಂಧಿಸಿದ ಸಾಂಸ್ಕೃತಿಕ, ಭೌತಿಕ, ಲಿಖಿತ, ಮೌಖಿಕ ಇತ್ಯಾದಿ ಸಾಮಗ್ರಿ ಶೋಧಕ್ಕೆ ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ, ಕ್ಷೇತ್ರ ಕಾರ್ಯ ಪೂರೈಸಬೇಕು. ಹೀಗೆ ಮಾಡಿದರೆ ಇದು ಕುರುಬ ಸಮಾಜದ

ಅಧ್ಯಯನವೆನಿಸುತ್ತಲೆ ಕರ್ನಾಟಕ ಸಂಸ್ಕೃತಿಯ ಭಾಗಶಃ ಅಧ್ಯಯನವೇ ಆಗುತ್ತದೆ ಮತ್ತು ೧೨ನೆಯ ಶತಮಾನದ ಬಸವಣ್ಣನ ಕ್ರಾಂತಿಗೆ ಒದಗಿಬಂದ ಹಿನ್ನೆಲೆಯಾಗಿ ಪರಿಣಮಿಸುತ್ತದೆ.[೭]

ರೇವಣಸಿದ್ಧ ಸಂಪ್ರದಾಯ(ಶಾಂತಮುತ್ತಯ್ಯ ಸಂಪ್ರದಾಯ/ ಶಾಂತ ಒಡೆಯರ ಸಂಪ್ರದಾಯ)ದ ದೇವಾಲಯ–ಮಠ, ಒಡೆಯರು–ಭಕ್ತರು, ಕೌಟುಂಬಿಕ ವ್ಯವಸ್ಥೆ–ಧಾರ್ಮಿಕ ಆಚರಣೆ ಇತ್ಯಾದಿಗಳ ಅಭ್ಯಾಸ ತುಂಬಾ ಮಹತ್ವದ್ದಾಗಿದೆ. ಈ ಸಂಪ್ರದಾಯದ ಬಹಳಷ್ಟು ಮಠಗಳು ವೀರಶೈವ ಪಂಚಾಚಾರ್ಯರ ವಶಕ್ಕೆ ಹೋಗಿದ್ದರೂ ಉಳಿದಿರುವ ಮಠಗಳ ಸಂಖ್ಯೆ ಸಣ್ಣದೇನಲ್ಲ. ಈ ಎಲ್ಲ ಮಠ ಸಂಪ್ರದಾಯಗಳ ಮೂಲ ಗುರು ರೇವಣಸಿದ್ಧನ ಶಿಷ್ಯನಾದ ಶಾಂತಮುತ್ತಯ್ಯನೆಂದು, ಈತನ ಮೂಲ ಮಠ ವಿಜಯಪುರ ಜಿಲ್ಲೆಯ ಮುದ್ದೇ ಬಿಹಾಳ ತಾಲ್ಲೂಕು ಸರೂರು ಗ್ರಾಮವೆಂದು ದೃಢಪಟ್ಟಿದೆ. ಹಾಗೂ ಇಲ್ಲಿರುವ ರೇವಣಸಿದ್ಧೇಶ್ವರ ಪೀಠವೆ ಕುರುಬರ ಮೂಲ ಗುರುಪೀಠವೆಂದು ಇದರಿಂದ ಸ್ಪಷ್ಟವಾಗುತ್ತದೆ.

ಶಾಂತಮುತ್ತಯ್ಯನ ತರುವಾಯ ಆತನ ವಂಶಜರು ಕುರುಬ ಕುಲದ ಗುರುಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಕರ್ನಾಟಕದ ಒಳ ಹೊರಗೆ ಅಪಾರ ಸಂಖ್ಯೆಯಲ್ಲಿ ಹರಡಿಕೊಂಡಿರುವ ಕುರುಬ ಜನಾಂಗದವರಿಗೆ ಮಾರ್ಗದರ್ಶನ ಮಾಡುವುದು ಈ ಮೂಲ ಪೀಠ ಒಂದರಿಂದಲೆ ಸಾಧ್ಯವಿಲ್ಲವೆಂದು ಮನಗಂಡ ಇಲ್ಲಿಯ ಪೀಠಾಧಿಪತಿಗಳು ಮುಂದಿನ ಕಾಲಘಟ್ಟಗಳಲ್ಲಿ ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ಶಾಖಾ ಮಠಗಳನ್ನು ಸ್ಥಾಪಿಸಿದರು. ಆ ಮಠಗಳಿಗೆ ತಮ್ಮ ಶಾಖೆಯವರನ್ನೆ ಪೀಠಾಧಿಪತಿಗಳನ್ನಾಗಿ ನೇಮಿಸಿ ಆಯಾ ಭಾಗದ ಕುರುಬ ಜನಾಂಗದವರ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಲು ಅನುವು ಮಾಡಿಕೊಟ್ಟರು. ಹೀಗೆ ಜನತೆಯ ಅಗತ್ಯಕ್ಕೆ ಅನುಗುಣವಾಗಿ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆ ಪಡೆದಿರುವ ಗುರುವರ್ಗದವರ ವಿಸ್ತಾರವನ್ನು ಗಮನಿಸ ಬಹುದಾಗಿದೆ.[೮]

ರೇವಣಸಿದ್ಧನ ಮಠಮಾನ್ಯಗಳ ಭೌಗೋಳಿಕ ವಿಸ್ತಾರವನ್ನು ಗಮನಿಸಿದರೆ ಕರ್ನಾಟಕ ರಾಜ್ಯವಲ್ಲದೆ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತಮಿಳುನಾಡು ರಾಜ್ಯಗಳಲ್ಲಿಯೂ ಇರುವುದನ್ನು ಮನಗಾಣಬಹುದಾಗಿದೆ. ಬಹು ವಿಸ್ತೃತವಾದ ಭೌಗೋಳಿಕ ವಿಸ್ತಾರವನ್ನು ಹೊಂದಿರುವ ರೇವಣಸಿದ್ಧನ ನೆಲೆಗಳನ್ನು ಕೇಂದ್ರೀಕೃತ ಪಟ್ಟಿಯಲ್ಲಿ ತರುವುದು ಕಷ್ಟಕರವಾಗಿದೆ. ಕಾರಣ ರೇವಣಸಿದ್ಧನ ನೆಲೆಗಳನ್ನು ಭೌಗೋಳಿಕವಾಗಿ ವಿಂಗಡಿಸಿಕೊಂಡು ಅಧ್ಯಯನಕ್ಕೆ ಒಳಪಡಿಸುವುದು ಅವಶ್ಯಕವಾಗಿದೆ. ಅಧ್ಯಯನಕಾರ ರೇವಣಸಿದ್ಧನ ನೆಲೆಗಳನ್ನು ಉತ್ತರ ಕರ್ನಾಟಕದ ನೆಲೆಗಳು, ಮಧ್ಯ ಕರ್ನಾಟಕದ ನೆಲೆಗಳು, ದಕ್ಷಿಣ ಕರ್ನಾಟಕದ ನೆಲೆಗಳು,

ಹಾಗೂ ಕರ್ನಾಟಕೇತರ ಆಂಧ್ರಪ್ರದೇಶದ ನೆಲೆಗಳು, ಮಹಾರಾಷ್ಟ್ರ ರಾಜ್ಯದ ನೆಲೆಗಳು, ತಮಿಳುನಾಡು ರಾಜ್ಯದ ನೆಲೆಗಳು ಎಂಬುದಾಗಿ ವಿಂಗಡಿಸಿಕೊಂಡಿದ್ದಾನೆ. ಮುಂದುವರೆದು ಈ ಅಧ್ಯಯನದ ಅವಧಿಯಲ್ಲಿ ಮಾಡಬಹುದಾದ ರೇವಣಸಿದ್ಧನ ಅತಿ ಪ್ರಮುಖ ನೆಲೆಗಳನ್ನು ಕ್ಷೇತ್ರ ಕಾರ್ಯ ಮಾಡಿ ಅಲ್ಲಿ ದೊರೆತ ಫಲಿತಗಳನ್ನು ವಿಶ್ಲೇಷಣೆ ಮಾಡಿ, ಸಾಂಸ್ಕೃತಿಕ ಅನನ್ಯತೆಗಳನ್ನು ಗುರುತಿಸಲಾಗಿದೆ. ಈ ಅಧ್ಯಯನದ ವ್ಯಾಪ್ತಿಯು ಬಹು ವಿಸ್ತೃತತೆಯನ್ನು ಪಡೆದುದಾಗಿದೆ. ಮುಂದುವರೆದು ಈ ಎಲ್ಲಾ ರೇವಣಸಿದ್ಧನ ನೆಲೆಗಳ ಕೇಂದ್ರೀಕೃತ ಪಟ್ಟಿಯನ್ನು ತಯಾರಿಸಲು ಪ್ರಯತ್ನಿಸಲಾಗಿದೆ.

೧.೪. ಅಧ್ಯಯನದ ಸ್ವರೂಪ

ಸಂಸ್ಕೃತಿ ಎಂಬುದರ ಅರ್ಥವನ್ನು ಒಂದು ವ್ಯಾಖ್ಯಾನದಲ್ಲಿ ಹೇಳಲು ಸಾಧ್ಯವಿಲ್ಲ. ಆದರೂ ಇದರ ಅರ್ಥ ಸ್ವರೂಪ, ವ್ಯಾಪ್ತಿ ವೈಶಾಲತೆಯನ್ನು ಕುರಿತಾಗಿ ಅನೇಕ ವಿದ್ವಾಂಸರು ಚರ್ಚೆ ಮಾಡಿರುವುದನ್ನು ಗಮನಿಸಬಹುದಾಗಿದೆ. ಮುಂದುವರೆಗೆ ಸಮಾಜೋಧಾರ್ಮಿಕ ಅಧ್ಯಯನದ ಹಿನ್ನೆಲೆಯಲ್ಲಿ ಅದರ ಸ್ವರೂಪವನ್ನು ಹೀಗೆ ನಿರೂಪಿಸಬಹುದಾಗಿದೆ. 'ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೆ ಸಂಸ್ಕೃತಿ'. ಈ ಸಂಸ್ಕೃತಿಯು ಆಚಾರ ವಿಚಾರಗಳಲ್ಲಿ ಧರ್ಮಗಳಲ್ಲಿ ವ್ಯಕ್ತವಾಗುತ್ತದೆ.[೮] ಅಂದರೆ ಜನಾಂಗವು ರೂಢಿಸಿಕೊಂಡು ಬಂದಿರುವ ಜೀವನ ಪದ್ಧತಿ, ಆಚಾರ–ವಿಚಾರ, ನಡೆ–ನುಡಿ, ಸಾಮಾಜಿಕ ವ್ಯವಸ್ಥೆ, ಧರ್ಮ–ಕಲೆ ಇತ್ಯಾದಿಗಳನ್ನು ಕುರಿತು ನಡೆಸುವ ಅಧ್ಯಯನವೆ ಸಾಂಸ್ಕೃತಿಕ ಅಧ್ಯಯನವೆಂದು ಹೇಳಬಹುದಾಗಿದೆ. ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಜನಾಂಗವು ಮುಂದೆ ವೃತ್ತಿ ಇತ್ಯಾದಿ ಕಾರಣವಾಗಿ ಬೇರೆ ಪ್ರದೇಶಕ್ಕೆ ವಲಸೆ ಹೋದರೂ ಕೂಡ ತನ್ನ ಮೂಲ ಸಂಸ್ಕೃತಿಯ ತಂತುಗಳನ್ನು ಉಳಿಸಿಕೊಂಡೇ ಬಂದಿರುತ್ತಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಪ್ರತಿಯೊಂದು ಜನಾಂಗವು ತಾನು ಬಾಳುವ ಪರಿಸರ, ಆಯ್ದುಕೊಂಡ ಉದ್ಯೋಗ, ವ್ಯವಹರಿಸುವ ರೀತಿಗಳಿಗೆ ತಕ್ಕಂತೆ ಆಹಾರ ಪದ್ಧತಿ–ಉಡುಗೆ ತೊಡುಗೆ, ಆಚಾರ–ವಿಚಾರ, ನಂಬಿಕೆ–ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡಿರುವುದೇ ಆಗಿರುತ್ತದೆ. ತನ್ನ ನಂಬಿಕೆಗಳ ಅನುಸಾರವಾಗಿ ದೈವಭಕ್ತಿ, ಆರಾಧನಾ ವಿಧಾನಗಳನ್ನು ರೂಢಿಸಿಕೊಂಡಿರುವುದಾಗಿರುತ್ತದೆ. ಈ ಅಧ್ಯಯನದಲ್ಲಿ ರೇವಣಸಿದ್ಧ ಸಾಂಸ್ಕೃತಿಕ ಪರಂಪರೆಯನ್ನು ಅವಲೋಕಿಸಲಾಗಿದೆ. ರೇವಣಸಿದ್ಧ ಪರಂಪರೆಯು ಮುಂದುವರಿದ ಭಾಗವಾದ ಶಾಂತಮುತ್ತಯ್ಯ ಪರಂಪರೆಯ ಒಡೆಯರುಗಳ ನೇತೃತ್ವದಲ್ಲಿ ಹಾಲುಮತ ಜನಾಂಗದವರ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳು ನಡೆಯುತ್ತವೆ. ಇಂತಹ ಕಾರ್ಯಗಳಲ್ಲಿ ರೇವಣಸಿದ್ಧನನ್ನು ನೆನೆಯುವ ಹಾಗೂ ಆತನ

ಆಶೀರ್ವಾದವನ್ನು ಬೇಡುವುದನ್ನು ಗಮನಿಸಬಹುದಾಗಿದೆ. ರೇವಣಸಿದ್ದ ಪರಂಪರೆಯ ಹೆಜ್ಜೆ ಗುರುತುಗಳನ್ನು ಆತನಿಗೆ ಸಂಬಂಧಿಸಿದ ಜಾತ್ರೆ ಉತ್ಸವಗಳಲ್ಲಿ ಇಂದಿಗೂ ಕಾಣಬಹುದು.

ಗುರುರೇವಣ, ಗುರುರೇವಣಸಿದ್ಧೇಶ್ವರ, ಸಿದ್ಧೇಶ್ವರ, ಕರಿಸಿದ್ಧೇಶ್ವರ, ಕಾಡುಸಿದ್ಧೇಶ್ವರ, ದೊಡ್ಡಯ್ಯ, ಚಿಕ್ಕಯ್ಯ ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ರೇವಣಸಿದ್ಧ ಇಂದಿಗೂ ಹಾಲುಮತ ಸಮುದಾಯದ ಆರಾಧ್ಯ ದೈವವಾಗಿ ಭಕ್ತಿ ಭಾವದ ನೆಲೆಯಾಗಿ ಸೆಲೆಯಾಗಿದ್ದಾನೆ. ಹಾಗೂ ಕುಲಸಂಬಂಧಿ ಆಚರಣೆ, ವ್ಯವಹಾರ ಇತ್ಯರ್ಥದ ತಾಣವಾಗಿದ್ಧಾನೆ. ಇಂದಿಗೂ ಹಾಲುಮತ ಸಮುದಾಯದ ಕುಲದೈವ ಶ್ರೀ ಬೀರಲಿಂಗನ ಧಾರ್ಮಿಕ ಉತ್ಸವ, ಜಾತ್ರೆ ಆಚರಣೆಗಳ ಉತ್ಸವ ಹೊರಟಾಗ ಆತನ ಜೊತೆಗೆ ಶ್ರೀ ಗುರು ರೇವಣಸಿದ್ಧರ ಕಳಸವಿರುವುದನ್ನು ಗಮನಿಸಬಹುದಾಗಿದೆ. ಈ ಸಂಪ್ರದಾಯ ಇಂದಿಗೂ ಮುಂದುವರೆದಿದೆ.

ರೇವಣಸಿದ್ಧನ ನೆಲೆಗಳು ಅಪಾರ. ಈ ನೆಲೆಗಳಲ್ಲಿ ಇಂದಿಗೂ ಜಾತ್ರೆ–ಉತ್ಸವಗಳು ನಡೆಯುತ್ತಲಿವೆ. ಇವುಗಳಲ್ಲಿ ಕಂಥಾಧಾರಣ ಸೇವೆ, ಪಲ್ಲಕ್ಕಿ ಉತ್ಸವ, ಗದ್ದುಗೆ ಧಾವಳಿ, ಜಾಡಿ ಸೇವೆ, ಚಂದ್ರಮಂಡಲೋತ್ಸವ, ಗಂಗೆ ಪೂಜೆ, ಬಿಲ್ವವೃಕ್ಷ ಉತ್ಸವ, ಮಡಲಕ್ಕಿ ಪಯಣ, ಗದ್ದುಗೆ ಸೇವೆ, ಮಂಡೆ ಸೇವೆ, ಉಯ್ಯಾಲೋತ್ಸವಗಳಂತವುಗಳು ಪ್ರಮುಖವಾದವುಗಳು. ಹಾಲುಮತ ಸಮುದಾಯ ತಲೆಮಾರಿನಿಂದ ತಲೆಮಾರಿಗೆ ರೇವಣಸಿದ್ಧನ ಪಾರಂಪರಿಕ ಸೇವಾಕರ್ತರಾಗಿ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ. ಒಂದೊಂದು ಬುಡಕಟ್ಟಿಗೂ ಒಂದು ನಿರ್ದಿಷ್ಟ ಕಾಯಕ ನೀಡಲಾಗಿದೆ. ಉದಾಹರಣೆಗೆ ಚಾಮರದವರು, ಗಂಧಬಟ್ಟಲಿನವರು, ಪಟೇಗಾರರು, ನಂದಿಧ್ವಜದವರು ಇತ್ಯಾದಿ.

ಒಂದೆಡೆ ನೆಲೆಯಾಗಿ ನಿಲ್ಲದ ರೇವಣಸಿದ್ಧ ಲೋಕಸಂಚಾರಿ. ಆತನು ಆ ಸ್ಥಳಕ್ಕೆ ಬಂದಿದ್ಧನು, ಆ ಸ್ಥಳದಲ್ಲಿ ಕೆಲಕಾಲ ತಂಗಿದ್ದನು ಎಂದು ಹೇಳಲಾಗುವ ಹಲವಾರು ಸ್ಥಳಗಳು ಪ್ರಸ್ತುತ ಕರ್ನಾಟಕ ರಾಜ್ಯದ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿವೆ. ಆ ಸ್ಥಳಗಳು ಪ್ರಸ್ತುತ ರೇವಣಸಿದ್ಧನ ನೆಲೆಗಳಾಗಿವೆ. ಅಪಾರ ಭೌಗೋಳಿಕ ವಿಸ್ತಾರವನ್ನು ಹೊಂದಿರುವ ರೇವಣಸಿದ್ಧನ ನೆಲೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ (೧) ಉತ್ತರ ಕರ್ನಾಟಕದ ನೆಲೆಗಳು (೨) ಮಧ್ಯ ಕರ್ನಾಟಕದ ನೆಲೆಗಳು (೩) ದಕ್ಷಿಣ ಕರ್ನಾಟಕದ ನೆಲೆಗಳು (೪) ಕರ್ನಾಟಕೇತರ ನೆಲೆಗಳೆಂದು ವಿಭಾಗಿಸಿಕೊಂಡು ಅಧ್ಯಯನದ ಅವಧಿಯಲ್ಲಿ ಸಾಧ್ಯವಾದ ಪ್ರಮುಖ ನೆಲೆಗಳನ್ನು ಕ್ಷೇತ್ರಕಾರ್ಯ ಮಾಡಿ, ಅಲ್ಲಿ ದೊರೆತ ಸಾಂಸ್ಕೃತಿಕ ಅನನ್ಯತೆಗಳನ್ನು ವಿಶ್ಲೇಷಿಸಲಾಗಿದೆ. ಹಾಗೂ ರೇವಣಸಿದ್ಧ ಪರಂಪರೆ : ಸಾಂಸ್ಕೃತಿಕ ಅಧ್ಯಯನದ ಫಲಿತಗಳನ್ನು ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೧. ಸಿದ್ಧಸಾಹಿತ್ಯ, ಡಾ.ಮ.ಸು.ಕೃಷ್ಣಮೂರ್ತಿ, ಪರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦ ಪು.೧೪–೧೫

೨. ಅದೇ, ಪು.೧೫

೩. ಅದೇ, ಪು.೨೪

೪. ಹಾಲುಮತ ಸಂಸ್ಕೃತಿ–೧, ಡಾ: ಎಫ್.ಟಿ.ಹಳಳಿಕೇರಿ, ಮುನ್ನುಡಿ ಭಾಗ, ವಿಕಾಸ ಪರಕಾಶನ, ಹೊಸಪೇಟೆ ಪು.V

೫. ಅದೇ, ಪು.V-VI

೬. ಕನ್ನಡ ಸಾಹಿತ್ಯದಲ್ಲಿ ರೇವಣಸಿದ್ಧರು ಎಂಬ ವಿಷಯ ಕುರಿತು ಡಾ: ಶಕುಂತಲಾ ಗೋಪಶೆಟ್ಟಿ ಅವರು ಅಧ್ಯಯನ ಮಾಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

೭. ಸಿದ್ಧಸಂಪ್ರದಾಯದ ಜಗದ್ಗುರು ರೇವಣಸಿದ್ಧ, ಸಮ್ಮೇಳನಾಧ್ಯಕ್ಷರ ಭಾಷಣದ ಭಾಗ, ಡಾ: ಎಂ.ಎಂ. ಕಲಬುರ್ಗಿ, ಹಾಲುಮತ ವ್ಯಾಸಂಗ–೫, ಸಂ.ಡಾ:ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೨–೧೩

೮. ಕುರುಬರ ಗುರು ಒಡೆಯರು, ಡಾ: ಬಿ.ಜಿ.ಬಿರಾದಾರ, ವಿಕಾಸ ಪ್ರಕಾಶನ, ಹೊಸಪೇಟೆ, ಪು. ೧೦೪

೯. ಅದೇ, ಪು.೧೩೬

ಅಧ್ಯಾಯ : ಎರಡು

ಈವರೆಗಿನ ಅಧ್ಯಯನದ ಸಮೀಕ್ಷೆ

೨.೧. ಅಧ್ಯಯನಗಳು

೨.೨. ಕೃತಿಗಳು

ಅಧ್ಯಾಯ : ಎರಡು

ಈವರೆಗಿನ ಅಧ್ಯಯನ ಸಮೀಕ್ಷೆ

೨.೧ ಅಧ್ಯಯನಗಳು

೨.೧.೧ ಕುರುಬರ ಗುರು ಒಡೆಯರು

ಕುರುಬರ ಗುರು ಒಡೆಯರು ಸಾಂಸ್ಕೃತಿಕ ಅಧ್ಯಯನವು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಿ.ಜಿ.ಬಿರಾದಾರರವರು ಸಲ್ಲಿಸಿದ ಪಿಎಚ್‌ಡಿ ಮಹಾ ಪ್ರಬಂಧವಾಗಿದೆ. ಈ ಪ್ರಬಂಧವು ಕುರುಬರ ಗುರುಪರಂಪರೆಯನ್ನೂ ಇತಿಹಾಸವನ್ನೂ ಸಮಗ್ರವಾಗಿ ತಿಳಿಸುವುದರ ಜೊತೆಗೆ ವರ್ತಮಾನದಲ್ಲಿ ಈ ಸಮಾಜ ತನ್ನ ಪಾರಂಪರಿಕ ಗುರುಪರಂಪರೆಯಾದ ಶೈವ ಪರಂಪರೆಯನ್ನು ಮರೆಮಾಚಿ ತನ್ನದಲ್ಲದ ವೈದಿಕ ಪರಂಪರೆಯನ್ನು ಹುಟ್ಟು ಹಾಕಿದ ತಪ್ಪನ್ನು ತಿದ್ದಿಕೊಳ್ಳಬೇಕಾದ ಅಗತ್ಯತೆಯನ್ನು ಒತ್ತಿಹೇಳಿದೆ.

ಎಂಟು ಅಧ್ಯಾಯಗಳನ್ನು ಒಳಗೊಂಡ ಈ ಮಹಾಪ್ರಬಂಧವು ಕುರುಬರ ಐತಿಹಾಸಿಕ ಹಿನ್ನೆಲೆಗಳ ಸಾಮಾಜಿಕ ಸಂರಚನೆ, ಕುರುಬರ ಗುರು ಒಡೆಯರ ಪರಂಪರೆಗಳು, ಭೌಗೋಳಿಕ ಪ್ರಸಾರ, ಸಾಂಸ್ಕೃತಿಕ ಸಂಗತಿಗಳು, ಗುರುಪರಂಪರೆಯ ಮಹಾಪುರುಷರು, ಒಡೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಗತಿ ಇವೆ ಮೊದಲಾದ ವಿಷಯಗಳನ್ನು ಒಳಗೊಂಡಿದೆ. ಕರ್ನಾಟಕದಾದ್ಯಂತ ಕಂಡುಬರುವ ಒಡೆಯರ ನೆಲೆಗಳನ್ನು ಗುರುತಿಸಿ, ಅಲ್ಲಿ ನಡೆಯುವ ಕಂಥಾಧಾರಣೆ ಸೇವೆಯ ಸಂದರ್ಭಗಳಲ್ಲಿನ ವಿಧಿವಿಧಾನಗಳನ್ನು ದಾಖಲಿಸಲಾಗಿದೆ. ಗುರುಪರಂಪರೆಯಲ್ಲಿ ಒಡೇರಮ್ಮನ ಪಾತ್ರದ ಬಗ್ಗೆ ವಿಶೇಷವಾಗಿ ಚರ್ಚಿಸಲಾಗಿದೆ. ಹೀಗೆ ಒಡೆಯರ ವಿವಿಧ ಧಾರ್ಮಿಕ ಕ್ರಿಯೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಪ್ರಬಂಧವು ಕುರುಬರ ಗುರು ಪರಂಪರೆಯ ಬಗೆಗೆ ಸಮಗ್ರವಾದ ತಿಳುವಳಿಕೆಯನ್ನು ಕೊಡುವಲ್ಲಿ ಪ್ರಬಂಧವು ಸಫಲವಾಗಿದೆ.

೨.೧.೨. ಹಾಲುಮತ ಗುರು ಸರೂರ ಶಾಂತಮುತ್ತಯ್ಯ

ಹಾಲುಮತ ಗುರು ಸರೂರು ಶಾಂತಮುತ್ತಯ್ಯ ಒಂದು ಅಧ್ಯಯನವು ರಾಜಶ್ರೀ ಪಾಟೀಲ್‌ರವರು ಎಂ.ಫಿಲ್ ಪದವಿಗಾಗಿ ಡಾ.ಎಫ್.ಟಿ.ಹಳ್ಳಿಕೇರಿರವರ ಮಾರ್ಗದರ್ಶನದಲ್ಲಿ ಸಿದ್ಧಗೊಳಿಸಿದ ಸಂಪ್ರಬಂಧವಾಗಿದೆ. ಶಾಂತಮುತ್ತಯ್ಯನ ಇತಿವೃತ್ತ ವಿಚಾರ ರಚನೆಗೊಂಡ ಸಾಹಿತ್ಯ, ಇಂದಿಗೂ ನಡೆಯುವ ಆಚರಣೆ, ಉತ್ಸವ, ಸಂಪ್ರದಾಯಗಳ ಬಗೆಗಿನ ವಿವರಗಳನ್ನು ಈ ಸಂಪ್ರಬಂಧವು ಕಟ್ಟಿಕೊಡುತ್ತದೆ. ಇಲ್ಲಿ ಲಿಖಿತ ಮತ್ತು ಮೌಖಿಕ ಆಕರಗಳ ನೆರವಿನಿಂದ ಶಾಂತಮುತ್ತಯ್ಯನ ಜೀವನ ವೃತ್ತಾಂತವನ್ನು, ತಗರ ಪವಾಡ ಹಾಗೂ ಸರೂರು, ಶಿರವಾರಗಳಲ್ಲಿ ದೊರೆಯುವ ಶಿಲಾಶಾಸನಗಳ ಆಧಾರಗಳಿಂದ ಶಾಂತಮುತ್ತಯ್ಯನ ಜೀವನ ವೃತ್ತಾಂತವನ್ನು ಕಟ್ಟಿಕೊಟ್ಟಿದ್ದಾರೆ. ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮವು ಶಾಂತಮುತ್ತಯ್ಯನ ಮೂಲ ನೆಲೆ ಎಂಬುದು ಈ ಕೃತಿಯಿಂದ ಸ್ಪಷ್ಟವಾಗುತ್ತದೆ. ಶಾಂತಮುತ್ತಯ್ಯನ ಸುತ್ತ ನಡೆಯುವ ಆಚರಣೆ, ಉತ್ಸವ ಮತ್ತು ಸಂಪ್ರದಾಯಗಳನ್ನು ಈ ಕೃತಿಯಲ್ಲಿ ದಾಖಲಿಸಲಾಗಿದೆ.

ಈ ಕೃತಿಯು ಕುರುಬರ ಗುರುಪರಂಪರೆಯಲ್ಲಿ ಶಾಂತ ಒಡೆಯರು, ಮಂಕ ಒಡೆಯರು ಹಾಗೂ ಅಮೋಘ ಒಡೆಯರು ಎಂಬ ಮೂರು ಶಾಖೆಗಳಿರುವುದನ್ನು ನಿಖರವಾಗಿ ಗುರುತಿಸಿದೆ. ಈ ಸಂಪ್ರಬಂಧ ಶಾಂತಮುತ್ತಯ್ಯನ ಮೂಲಕ ಕುರುಬ ಸಮಾಜದ ಗುರುಪರಂಪರೆ ಮತ್ತು ಸಂಪ್ರದಾಯವನ್ನು ತಿಳಿದುಕೊಳ್ಳುವಲ್ಲಿ ಮುಖ್ಯ ಆಕರ ಗ್ರಂಥವಾಗಿ ನೆರವಾಗುತ್ತದೆ.

೨.೧.೩. ರೇವಣಸಿದ್ಧ ಒಂದು ಅಧ್ಯಯನ

ರೇವಣಸಿದ್ಧ ಒಂದು ಅಧ್ಯಯನವು ಪಿಎಚ್‌ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಶ್ರೀಮತಿ ಶಕುಂತಲಾ ಗೋಪಶೆಟ್ಟಿರವರು ಸಾದರಪಡಿಸಿದ ಮಹಾ ಪ್ರಬಂಧವಾಗಿದೆ. ರೇವಣಸಿದ್ಧರನ್ನು ಕುರಿತಾದ ಕಾವ್ಯ, ಪುರಾಣ ಮತ್ತು ಶಾಸನಗಳ ನೆಲೆಗಳಲ್ಲಿ ರೇವಣಸಿದ್ಧನ ಚರಿತ್ರೆಯನ್ನು ಕಟ್ಟುವ ಪ್ರಯತ್ನವನ್ನು ಇಲ್ಲಿ ಕಾಣಬಹುದಾಗಿದೆ. ಪ್ರಬಂಧದಲ್ಲಿ ರೇವಣಸಿದ್ಧ ಸಾಹಿತ್ಯ ಸೃಷ್ಟಿಸಿದ ಕವಿಗಳ ಪರಿಚಯ, ಸಾಹಿತ್ಯಗಳ ಕಥಾವಸ್ತು ಸಮೀಕ್ಷೆ ಮತ್ತು ಶಾಸನಗಳನ್ನು ಸೇರಿದಂತೆ ಅನುಶಂಘಿಕ ಕೃತಿಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ. ಮುಂದುವರೆದು ರೇವಣಸಿದ್ಧನ ಕೃತಿಗಳಲ್ಲಿನ, ಸನ್ನಿವೇಶ, ಪಾತ್ರಚಿತ್ರಣ, ಭಾಷೆ, ಶೈಲಿಗಳ ಸಾಹಿತ್ಯಿಕ ವಿಶ್ಲೇಷಣೆಯ ಜೊತೆಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆಚಾರ ವಿಚಾರ, ಸ್ಥಳನಾಮಗಳ ಸಾಂಸ್ಕೃತಿಕ ವಿಶ್ಲೇಷಣೆಯನ್ನು ಮಾಡಿದ್ದಾರೆ. ಕೊನೆಯಲ್ಲಿ ರೇವಣಸಿದ್ಧ ಪುಣ್ಯಕ್ಷೇತ್ರಗಳ ವಿವರಗಳನ್ನು ಪಟ್ಟೀಕರಿಸಿದ್ದಾರೆ. ಒಟ್ಟಿನಲ್ಲಿ ಬಸವ ಪೂರ್ವ ಯುಗದ ಶರಣನೊಬ್ಬನ ವ್ಯಕ್ತಿತ್ವ ನಿರೂಪಿಸುವ ನೆಪದಲ್ಲಿ ಕನ್ನಡ ಕಾವ್ಯಗಳ ಸಾಂಸ್ಕೃತಿಕ ಅಧ್ಯಯನವನ್ನು ಈ ಮಹಾಪ್ರಬಂಧದ ಮೂಲಕ ಪೂರೈಸಿಕೊಟ್ಟಿದ್ದಾರೆ.

೨.೧.೪. ಹಾಲುಮತ ಅಧ್ಯಯನ ಆಕರಗಳು

ಡಾ. ಅನ್ನಪೂರ್ಣ ಗೋಸ್ಬಾಳರವರ ಹಾಲುಮತ ಅಧ್ಯಯನ ಆಕರಗಳು ಕೃತಿಯಲ್ಲಿ; ಕರ್ನಾಟಕದ ಹಾಲುಮತ ಸಂಸ್ಕೃತಿ ಕುರಿತಾದ ಕಾವ್ಯ ಪುರಾಣಗಳು, ಶಾಸನ, ತಾಮ್ರಶಾಸನ, ಸನ್ನದು, ನಿರೂಪ, ಕಾಗದಪತ್ರ, ಡೊಳ್ಳಿನ ಹಾಡು, ಹೇಳಿಕೆ ಇತ್ಯಾದಿಗಳ ಸ್ವರೂಪಗಳನ್ನು ಗುರುತಿಸಿ ಅವುಗಳ ವೈಶಿಷ್ಟ್ಯತೆ ಮತ್ತು ವೈರುಧ್ಯಗಳನ್ನು ಅವಲೋಕಿಸಲಾಗಿದೆ. ಪ್ರಾಚೀನ ಕವಿಗಳಿಂದ ರಚನೆಯಾದ ಕಾವ್ಯ ಪುರಾಣಗಳಾದ ತಗರಪವಾಡ, ಸಿದ್ಧಮಂಕ ಚರಿತೆ, ಹಾಲುಮತೋತ್ತೇಜಕ ಪುರಾಣ, ಮರುಳಸಿದ್ಧನ ಚರಿತೆ, ಚನ್ನಬಸವ ಕವಿಯ ಹಾಲುಮತ ಪುರಾಣಗಳಂತಹ ಕೃತಿಗಳನ್ನು ಸ್ವರೂಪ ಮತ್ತು ವಿಶ್ಲೇಷಣೆಯನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಕುರುಬರ ಇತಿಹಾಸ, ಸಂಸ್ಕೃತಿ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳ ಕುರಿತಾದ ಶಿಲಾಶಾಸನ, ತಾಮ್ರಶಾಸನ, ಕಾಗದ ಪತ್ರಗಳ ನೆಲೆಗಳಿಂದ ಕುರುಬರ ಸಾಮಾಜಿಕ, ಧಾರ್ಮಿಕ ಸಂಗತಿಗಳತ್ತ, ಈ ಉಲ್ಲೇಖಗಳು ಹೊಸ ವಿಚಾರಗಳನ್ನು ತೆರೆದಿಟ್ಟಿವೆ. ಮೌಖಿಕ ರೂಪದಲ್ಲಿ ಇಂದಿಗೂ ಹಾಲುಮತ ಸಮುದಾಯದ ಅನೇಕ ಆಚಾರ ವಿಚಾರ ಸಂಸ್ಕೃತಿಗಳು ಜೀವಂತವಾಗಿವೆ. ವಿಶೇಷವಾಗಿ ಡೊಳ್ಳಿನ ಹಾಡುಗಳು ಕುರುಬರ ಸಮಗ್ರ ಸಂಸ್ಕೃತಿಯನ್ನು ಸಾರುತ್ತವೆ. ಇಂತಹ ಡೊಳ್ಳಿನ ಹಾಡುಗಳ ಸಂಗ್ರಹ, ಸಂಶೋಧನೆ ಮತ್ತು ವಿಶ್ಲೇಷಣೆಯ ವ್ಯಾಪ್ತಿಯನ್ನು ಇಲ್ಲಿ ಚರ್ಚಿಸಲಾಗಿದೆ. ಆಧುನಿಕ ಸಾಹಿತ್ಯದ ನೆಲೆಯಲ್ಲಿ ಹಾಲುಮತ ಸಮುದಾಯದ ಇತಿಹಾಸ, ಗುರುಪರಂಪರೆ, ದೈವಗಳು, ಉಪ-ಪಂಗಡಗಳು, ಆಚರಣೆ ಸಂಪ್ರದಾಯ ಕಲೆಗಳನ್ನು ಕುರಿತಾದ ಗ್ರಂಥಗಳ ವಿಷಯಾನುಸಾರ ವರ್ಗೀಕರಣ ಮಾಡಿ; ಅವುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ದೇಶಿ ಮತ್ತು ವಿದೇಶಿ ವಿದ್ವಾಂಸರು ಹಾಲುಮತ ಸಂಸ್ಕೃತಿಯನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡಿದ್ದಾರೆ. ಈ ಎಲ್ಲ ವಿದ್ವಾಂಸರ ಹಾಲುಮತ ಸಂಸ್ಕೃತಿ ಬಗೆಗಿನ ಅಧ್ಯಯನದ ಕೊಡುಗೆಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ಪಿಎಚ್.ಡಿ. ಪ್ರಬಂಧಗಳಲ್ಲಿ ಆಕರ ಸಂಗ್ರಹ, ಸಂಗ್ರಹಿತ ಆಕರಗಳ ವಿಶ್ಲೇಷಣೆ, ವಿಶ್ಲೇಷಿತ ಆಕರಗಳ ವ್ಯಾಖ್ಯಾನ ಎಂದು ಮೂರು ಪ್ರಕಾರಗಳನ್ನು ಗುರುತಿಸಬಹುದಾದರೆ ಈ ಕೃತಿಯ ಮುಖ್ಯ ಉದ್ದೇಶ ಆಕರ ಸಂಗ್ರಹವಾಗಿದ್ದರೂ, ಅಲ್ಲಿಗೆ ನಿಲ್ಲದೆ ಮುಂದುವರಿದು. ವಿಶ್ಲೇಷಣೆಯ ನೆಲೆಯನ್ನು ಇದು ತಲುಪಿದೆ. ಆಕರ ಸಂಗ್ರಹದಲ್ಲಿ ಸಮಗ್ರತೆ ಇದರ ಮೊದಲ ಸಾಧನೆಯಾಗಿದೆ. ಪ್ರಾಚೀನ ಸಾಹಿತ್ಯ ಕೃತಿಗಳನ್ನು, ಶಾಸನ ಸನದು ಕೈಪಿಯತ್ತು ರೂಪದ ದಾಖಲೆಗಳನ್ನು ಆಧುನಿಕ ಗ್ರಂಥ ಲೇಖನಗಳನ್ನು ಮೌಖಿಕ ಸಾಹಿತ್ಯ ಮತ್ತು ಆಚರಣೆಗಳನ್ನು ಜಿಡದಂತೆ ಸಂಗ್ರಹಿಸುವಲ್ಲಿ ಡಾ.ಅನ್ನಪೂರ್ಣ ಗೋಸ್ಬಾಳ ಅವರು ತುಂಬ ಶ್ರಮವಹಿಸಿದ್ದಾರೆ. ಈ ದೊಡ್ಡ ರಾಶಿಯನ್ನು ನೋಡಿದರೆ ಇಂದು ಯಾರೂ ಈ ಪ್ರಮಾಣದಲ್ಲಿ ದುಡಿಯಲಾರರೆಂಬ ಭಾವನೆ ಮೂಡುತ್ತದೆ.

ಇದು ಕೇವಲ ಆಕರಗಳ ರಾಶಿಯಲ್ಲಿ, ಈ ರಾಶಿಯನ್ನು ಬೇಸರವಿಲ್ಲದೆ ಓದಿ ತಾಳ್ಮೆಯಿಂದ ವರ್ಗೀಕರಿಸಿ, ಅವುಗಳಿಂದ ಪ್ರಕಟವಾಗುವ ಮನಸ್ಸಿನಿಂದ ನೋಡಿರುವ ಬರವಣಿಗೆಯಲ್ಲಿ ಭಾಷೆಯ ಮುಗ್ದತೆ ಉಳಿಸಿಕೊಂಡಿರುವ ಶ್ರೇಯಸ್ಸು ಈ ಕೃತಿಗೆ ಸಲ್ಲುತ್ತದೆ.[೧]

೨.೨. ಕೃತಿಗಳು

೨.೨.೧. ರೇವಣಸಿದ್ಧ ಮತ್ತು.....

ಡಾ.ಕೆ.ರವೀಂದ್ರನಾಥರವರು ಸಂಪಾದಿಸಿದ ಡಾ.ಎಂ.ಎಂ.ಕಲಬುರ್ಗಿಯವರ ರೇವಣಸಿದ್ಧ ಮತ್ತು ..... ಪ್ರಬಂಧಗಳ ಸಂಕಲನವು ಸಂವಹನ ಪ್ರಕಾಶನ ಮೈಸೂರುದಿಂದ ಪ್ರಕಟಿತವಾಗಿದೆ. ಈ ಕೃತಿಯಲ್ಲಿ ಲಿಂಗಾಯತ ಧಾರ್ಮಿಕ ಚರಿತ್ರೆಯಲ್ಲಿ ರೇವಣಸಿದ್ಧನ ಮೂಲಕ ನಡೆದಿರುವ ಧಾರ್ಮಿಕ ಪಂಥಗಳ ಸಮೀಕರಣ, ಆ ಪರಿಣಾಮವಾಗಿ ಲಿಂಗಾಯತರ ಪೂರ್ವಚರಿತೆಯಲ್ಲಿ ನಡೆದಿರಬಹುದಾದ ಧಾರ್ಮಿಕ ಸ್ಥಿತ್ಯಂತರಗಳನ್ನು ಡಾ.ಎಂ.ಎಂ.ಕಲಬುರ್ಗಿ ಯವರು ಸಾಹಿತ್ಯ, ಶಾಸನ, ಶಿಲ್ಪ, ಆಚರಣೆ, ಸ್ಥಳನಾಮ ಅಧ್ಯಯನಗಳ ಮೂಲಕ ಪರಾಮರ್ಶಿಸುವ ಪ್ರಯತ್ನ ಮಾಡಿದ್ದಾರೆ. ಕಾರಣ ಈ ಕೃತಿಯು ಕರ್ನಾಟಕದ ಮಧ್ಯಕಾಲೀನ ಧಾರ್ಮಿಕ ವಿದ್ಯಮಾನಗಳ ಬೆಳವಣಿಗೆಗಳ ಚಾರಿತ್ರಿಕ ಕೃತಿಯಾಗಿದೆ. ಡಾ.ಎಂ.ಎಂ.ಕಲಬುರ್ಗಿಯವರು ಪ್ರತಿಪಾದಿಸಿದ ಚಾರಿತ್ರಿಕ ನಿರೂಪಣೆಯನ್ನು ಈ ಕೃತಿಯಲ್ಲಿ ೪ ಪ್ರಮೇಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಪ್ರಮೇಯ-೧: ನಾಥ: ಶುದ್ಧಶೈವ ಪಂಥಗಳ ವಿಲಿನೀಕರಣ ಸಹಜ ಇತಿಹಾಸ

ಕರ್ನಾಟಕ ಶರಣ ಚಳುವಳಿಯ ಕಾಲಘಟ್ಟದಲ್ಲಿ ಸಿದ್ಧ(ನಾಥ) ಮತ್ತು ಲಾಕುಳ ಶೈವ ಪಂಥಗಳ ವಿಲೀನೀಕರಣ ಇತಿಹಾಸ ಮುಖ್ಯವಾದುದು. ಈ ವಿಲೀನೀಕರಣಕ್ಕೆ ಗುರಿಯಾದ ವ್ಯಕ್ತಿ ರೇವಣಸಿದ್ಧ. ಈ ಘಟನೆಗಳ ಸತ್ಯಾಸತ್ಯತೆಯನ್ನು ರೇವಣಸಿದ್ಧ, ರೇವಣಸಿದ್ಧ ಚರಿತ್ರೆಯ ಎರಡು ಸಂಪ್ರದಾಯಗಳು, ಸಿದ್ಧರಾಮ ಶಿವಯೋಗಿಯಾದ ರೇವಣಸಿದ್ಧ ಶಿವಾಚಾರ್ಯನಾದ ಮತ್ತು ತಗರ ಪವಾಡ ಶೀರ್ಷಿಕೆಗಳಲ್ಲಿ ಚರ್ಚಿಸಿದ್ದಾರೆ.

ತಗರ ಪವಾಡ ಕೃತಿಯನ್ನು ವಿಶ್ಲೇಷಿಸುತ್ತ ಕೃತಿಯಲ್ಲಿ ಶಾಂತಮುತ್ತಯ್ಯನೆ ಕೇಂದ್ರ ವ್ಯಕ್ತಿಯಾದರೂ ರೇವಣ ಸಿದ್ಧನಿಗೆ ಗುರುಸ್ಥಾನ ನೀಡಿದೆ ಸತ್ತ ತಗರಿಗೆ ಭಸಿತವಿಟ್ಟು ಪಾದೋದಕ ಸಿಂಪಡಿಸಲು ತಗರು ಮರುಜೀವ ಪಡೆಯುವ ಸಂದರ್ಭದಲ್ಲಿ ಬಸವಾದಿ ಪ್ರಮಥರ ಮತ್ತು ಶಾಂತಮುತ್ತಯ್ಯರ ನಡುವಿನ ಭಕ್ತಿಗೌರವಗಳನ್ನು ನೋಡಿದರೆ ಶೈವನಾಥ ಪಂಥೀಯನಾದ ರೇವಣಸಿದ್ಧ ಬಸವಪಂಥದ ಲಿಂಗಾಯಿತನಾಗಿರಲಿಲ್ಲ ಎಂಬ ಸ್ಪಷ್ಟ ಅಭಿಪ್ರಾಯವನ್ನು ಡಾ.ಎಂ.ಎಂ.ಕಲಬುರ್ಗಿಯವರು ವ್ಯಕ್ತ ಪಡಿಸುತ್ತಾರೆ. ಕಕ್ಕೇರಿ(೧೧೭೨), ಹೂತಗಲ್ಲ(೧೨೦೮)ರ

ಕಾಲಮಾನದ ಶಾಸನಗಳನ್ನು ಉಲ್ಲೇಖಿಸಿತ್ತಾ; ರೇವಣಸಿದ್ಧನ ಕಾಲಮಾನವನ್ನು ೧೧ನೇ ಶತಮಾನದ ಕೊನೆಯ ದಶಕದಿಂದ ೧೨ನೇಯ ಶತಮಾನದ ಕೊನೆಯ ದಶಕದವರೆಗೆ ಇರಬಹುದೆಂದು; ಈ ಕಾರಣದಿಂದ ರೇವಣಸಿದ್ಧನ ಕಾಲಕ್ಕಾಗಲೇ ನಾಥ ಸಂಪ್ರದಾಯ ಶುದ್ಧಶೈವ ಸಂಪ್ರದಾಯದಲ್ಲಿ ಸೇರುತ್ತಿರುವುದನ್ನು ಡಾ.ಎಂ.ಎಂ.ಕಲಬುರ್ಗಿಯವರು ವಿವರಿಸುತ್ತಾರೆ.

ಈ ಕೃತಿಯಲ್ಲಿ ಹರಿಹರ ಕವಿಯ ರೇವಣಸಿದ್ದೇಶ್ವರ ರಗಳೆ ಹಾಗೂ ಜಾಲವಾದಿ ಮಲ್ಲಣ್ಣ ಕವಿಯ ರೇವಣಸಿದ್ಧ ಕಾವ್ಯವನ್ನು ತೌಲನಿಕವಾಗಿ ಚರ್ಚಿಸಿದ್ದಾರೆ. ರೇವಣಸಿದ್ಧನ ಚರಿತ್ರೆಯನ್ನು ರೂಪಿಸುವ ಎರಡು ಕಾವ್ಯ ಸಂಪ್ರದಾಯಗಳು ಹುಟ್ಟಿದ ಬಗೆಯನ್ನು ತಿಳಿಸಿದ್ದಾರೆ. ಮುಂದುವರೆದು ಸಿದ್ಧಪಂಥದ ರೇವಣಸಿದ್ಧನ ಚರಿತ್ರೆಗೆ ಜಾಲವಾದಿ ಮಲ್ಲಣ್ಣನ ಭಕ್ತಪ್ರಜ್ಞೆ ಕಾರಣವಾದರೆ, ಶೈವಪಂಥದ ರೇವಣಾಚಾರ್ಯ ಚರಿತ್ರೆಗೆ ಹರಿಹರನ ಆಚಾರ್ಯ ಪ್ರಜ್ಞೆ ಕಾರಣವೆಂದು ಗುರುತಿಸಿದ್ದಾರೆ.

ಸಿದ್ಧಸಂಪ್ರದಾಯದ ರೇವಣಸಿದ್ಧ ಆಚಾರ್ಯ ಸಂಪ್ರದಾಯದವನಾಗಿ ಹರಿಹರನ ರಗಳೆಯಲ್ಲಿ ಹೇಗೆ ಚಿತ್ರಿತವಾದ ಎಂಬುದನ್ನು ವಿವರಿಸಿದ್ದಾರೆ ಹಾಗೂ ರೇವಣಸಿದ್ಧ ಮತ್ತು ಸಿದ್ಧರಾಮರು ಶಿವಸಿದ್ಧ ಸಂಪ್ರದಾಯಕ್ಕೆ ಸೇರಿದ ಕುರುಬ ಜಾತಿಯವರು: ಇವರಲ್ಲಿ ರೇವಣಸಿದ್ಧ ಹಿರಿಯ ತಲೆಮಾರಿನವನು, ಕಾರಣ ಈತ ಬಸವ ಚಳುವಳಿಗೆ ಒಳಗಾಗಲಿಲ್ಲ; ಸಿದ್ಧರಾಮ ಬಸವಣ್ಣನ ಸಮಕಾಲೀನನಾದ್ದರಿಂದ ಆತನ ಪ್ರಭಾವಕ್ಕೆ ಒಳಗಾಗಿ ನಾಥಯೋಗಿಯಾಗಿದ್ದ ಸಿದ್ಧರಾಮ ಶಿವಯೋಗಿಯಾದ ಮುಂದುವರೆದು ಶಿವಯೋಗಿ ಆಗದೇ ಉಳಿದಿದ್ದ ಬಸವಪೂರ್ವದ ನಾಥ ಪಂಥೀಯನಾಗಿದ್ದ ರೇವಣಸಿದ್ಧನನ್ನು ಶಿವಾಚಾರ್ಯನನ್ನಾಗಿ ಮಾಡುವ ಮೂಲಕ ಆಚಾರ್ಯ ಸಂಪ್ರದಾಯವು ಅನುಭಾವ ಸಂಪ್ರದಾಯಕ್ಕಿಂತ ಪ್ರಾಚೀನ ಎಂಬ ಸುಳ್ಳು ಇತಿಹಾಸ ರಚನೆಗೆ ಕಾರಣವಾಯಿತು ಎಂಬುದನ್ನು ಡಾ. ಎಂ.ಎಂ.ಕಲಬುರ್ಗಿ ವಿವರಿಸಿದ್ಧಾರೆ.

ಇಲ್ಲಿನ ಚರ್ಚೆಗಳು ರೇವಣಸಿದ್ಧನ ಹೆಸರಿನಲ್ಲಿ ನಡೆದ ನಾಥ ಸಂಪ್ರದಾಯ ಮತ್ತು ಶುದ್ಧ ಶೈವಸಂಪ್ರದಾಯಗಳ ವಿಲೀನಕರಣದ ಧಾರ್ಮಿಕ ಪಲ್ಲಟಗಳ ನಿಜ ಇತಿಹಾಸ.

ಪ್ರಮೇಯ-೨ : ಆಚಾರ್ಯಪೀಠ ಸ್ಥಾಪನೆಯ ಕೃತಕ ಇತಿಹಾಸ

ಕನ್ನಡ ವಚನಗಳನ್ನು ಉಪೇಕ್ಷಿಸಿ, ಈ ಆಚಾರ್ಯರು ಪ್ರಾಚೀನತೆ ಸ್ಥಾಪಿಸುವ ಸಲುವಾಗಿ ಮತ್ತು ಶರಣ ಧರ್ಮದ ಭಕ್ತರ ಮೇಲೆ ಅಧಿಕಾರ ಸ್ಥಾಪಿಸುವ ಸಲುವಾಗಿ ವಚನಗಳನ್ನು ಪ್ರಕ್ಷಿಪ್ತಗೊಳಿಸಿ, ಸಂಸ್ಕೃತ ಗ್ರಂಥಗಳನ್ನು ಪುರಸ್ಕರಿಸಿದರು. ಆರಾಧ್ಯ ಸಿದ್ಧಾಂತಗಳನ್ನು ಪ್ರತಿಪಾದನೆ ಮಾಡುವುದರ ಮೂಲಕ ಯಜ್ಞೋಪವಿತದ ಜೊತೆ ಲಿಂಗಧಾರಣೆಗೆ ಮುಂದಾದರು.ಸ್ಥಾವರದಿಂದ ಜಂಗಮದ ಕಡೆಗೆ ಮುಖಮಾಡಿದ್ದ ಅದ್ವೈತ ತತ್ವದ ಲಿಂಗಾಯತ ಧರ್ಮವು ದ್ವೈತತತ್ವದ

ಆಚಾರ್ಯಪೀಠಗಳಿಂದಾಗಿ ಜಂಗಮದಿಂದ ಸ್ಥಾವರಕ್ಕೆ ಹೊರಳಿ, ತನ್ನ ಆಸ್ತಿತ್ವತೆಯನ್ನು ಕಳೆದುಕೊಂಡ ಬಗೆಯನ್ನು ವಿವರಿಸಿದ್ದಾರೆ.

ಪ್ರಮೇಯ–೩:

ಆಗಮ ಮತ್ತು ವಚನಾಗಮನಗಳ ಇತಿಹಾಸದಲ್ಲಿ ಅನುಭಾವ ಸಾಹಿತ್ಯ ಮತ್ತು ಆಗಮ ಸಾಹಿತ್ಯಗಳ ಸಮೀಕರಣ ಪ್ರಕ್ರಿಯೆ. ಅನುಭಾವ ಸಾಹಿತ್ಯದ ಧ್ಯೇಯ ವಾಕ್ಯಗಳು, ಮಾಯವಾಗಿ ಆಚಾರ ಸಾಹಿತ್ಯದ ಪರ್ಯಾಯ ಧ್ಯೇಯವಾಕ್ಯಗಳ ಆಗಮನವಾದುದು ಕೇವಲ ಶೈವವ್ರತವಾಗಿದ್ದ ವೀರಶೈವ ಎಂಬುದು ಮತದ ಹೆಸರಾಗಿ ಚಲಾವಣೆಗೆ ಬಂದ ಬಗೆಯನ್ನು ವಿವರಿಸಲಾಗಿದೆ.

ಪ್ರಮೇಯ–೪: ವೀರಶೈವ ಮತವಲ್ಲ–ವ್ರತವೆಂಬ ಸ್ಪಷ್ಟೀಕರಣದ ಇತಿಹಾಸ

ಲಿಂಗಾಯತ ವೀರಶೈವ ಪರ್ಯಾಯ ಪದಗಳ ಬಗೆಗಿನ ಚರ್ಚೆಗಳು, ಈ ಎರಡೂ ಪದಗಳು ಎರಡು ಭಿನ್ನ ಸಂಪ್ರದಾಯಗಳನ್ನು ಸೂಚಿಸುವ ಪದಗಳೆಂಬ ಅರ್ಥದಲ್ಲಿ ಚರ್ಚೆಗಳು ಇನ್ನೂ ಶೈವ ಸಿದ್ದಾಂತದ ಪ್ರಭಾವಕ್ಕೆ ಒಳಗಾಗದ ಶರಣ ಸಿದ್ಧಾಂತವು ಸ್ವತಂತ್ರ ಸೃಷ್ಟಿಯೆಂಬ ನಿರೂಪಣೆಯನ್ನು ಶೈವ ಲಿಂಗಾಯತ ಶಾಸನೋಕ್ತ ಸ್ಥಿತ್ಯಂತರ ಚರಿತ್ರೆಯನ್ನು ಈ ಪ್ರಮೇಯ ಕಟ್ಟಿಕೊಡುತ್ತದೆ.

ಒಟ್ಟಿನಲ್ಲಿ ರೇವಣಸಿದ್ಧ ಮತ್ತು... ಕೃತಿಯು ಮಧ್ಯಕಾಲೀನ ಕರ್ನಾಟಕದ ಲಿಂಗಾಯತ ಚರಿತ್ರೆಯಲ್ಲಿ ಆದ ಪಲ್ಲಟಗಳು ಹಾಗೂ ಆ ಮೂಲಕ ಲಿಂಗಾಯತದ ಅಸ್ತಿತ್ವತೆಯನ್ನು; ಈ ಕೃತಿಯಲ್ಲಿ ಡಾ.ಎಂ.ಎಂ. ಕಲಬುರ್ಗಿ ಅವರು ಅನಾವರಣಗೊಳಿಸಿದ್ದಾರೆ.

೨.೨.೨ ಡಾ. ಎಂ.ಎಂ.ಕಲಬುರ್ಗಿ ಹಾಲುಮತ ಅಧ್ಯಯನ

ಹಾಲುಮತ ಅಧ್ಯಯನಗಳೂ, ಕುರುಬ ಸಮಾಜ ಸಂಸ್ಕೃತಿ ಚರಿತ್ರೆ ಬಗೆಗಿನ ಎಂ.ಎಂ. ಕಲಬುರ್ಗಿ ಅವರ ಹದಿಮೂರು ಸಂಶೋಧನ ಸಂಪ್ರಬಂಧಗಳ ಸಂಪುಟ, ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಎಫ್.ಟಿ. ಹಳ್ಳಿಕೇರಿ ಅವರು ಅಧ್ಯಯನ ಪೂರ್ಣ ಪ್ರಸ್ತಾವನೆಯೊಂದಿಗೆ ಸಂಪಾದಿಸಿದ್ದಾರೆ.

ಸಾಹಿತ್ಯ ದೊಡ್ಡದು, ಸಾಹಿತ್ಯಕ್ಕಿಂತ ಸಮಾಜ ಇನ್ನೂ ದೊಡ್ಡದು ಎಂಬ ನಿಲುವಿನಿಂದ ಇತ್ತೀಚಿನ ವರ್ಷಗಳಲ್ಲಿ ಕಲ್ಬುರ್ಗಿಯವರು ತಮ್ಮ ಸಂಶೋಧನೆಯಲ್ಲಿ ಹೊಸ ಆಯಾಮವನ್ನು ಕಂಡುಕೊಂಡಿದ್ದಾರೆ. ಈ ಕಾರಣವಾಗಿ ಕರ್ನಾಟಕದ ಬಹು ದೊಡ್ಡ ಸಮಾಜಗಳಲ್ಲಿ ಒಂದಾದ ಕುರುಬ ಸಂಸ್ಕೃತಿ ಕುರಿತು ತಲಸ್ಪರ್ಶಿ ಅಧ್ಯಯನ ಮಾಡಿದ್ದಾರೆ. ಆ ಮೂಲಕ ಕುರುಬ ಸಮಾಜದ ಮೂಲ ಬೇರುಗಳ ಹುಡುಕಾಟ ಆ ಸಮಾಜದಲ್ಲಾದ ಧಾರ್ಮಿಕ ಮತ್ತು ಸಾಮಾಜಿಕ

ಪ್ರಮಾದಗಳನ್ನು ಗುರುತಿಸಿ ಅವುಗಳನ್ನು ಸರಿಪಡಿಸಬೇಕಾದ ಅವಶ್ಯಕತೆಯತ್ತ ಸಮಾಜ ಸಂಶೋಧಕರ ಗಮನ ಸೆಳೆದಿದ್ದಾರೆ.

ಕನ್ನಡ ಸಂಶೋಧನೆಯ ಆಕರ ಶೋಧ, ಚಾರಿತ್ರಿಕ ಶೋಧ, ಸಾಂಸ್ಕೃತಿಕ ಶೋಧ ಹಾಗೂ ಸಾಮಾಜಿಕ ಕಾರಣ ಶೋಧಗಳು ಎಂಬ ಆಯಾಮಗಳಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಈ ಎಲ್ಲ ನಾಲ್ಕು ಆಯಾಮಗಳಲ್ಲಿ ಸಂಶೋಧನೆ ಕೈಗೊಂಡವರಲ್ಲಿ ಎಂ.ಎಂ.ಕಲ್ಬುರ್ಗಿಯವರು ಬಹು ಮುಖ್ಯರಾಗುತ್ತಾರೆ. ಕುರುಬ ದೈವ ಸಂಪ್ರದಾಯ ಗುರು ಪರಂಪರೆ, ಸಾಮಾಜಿಕ ಜೀವನ ಪದ್ಧತಿ, ಧಾರ್ಮಿಕ ಆರಾಧನೆ, ಆಚರಣೆಗಳಂತಹ ವೈವಿಧ್ಯಮಯ ಸಂಸ್ಕೃತಿಯನ್ನು ಈ ಮೊದಲು ಚಾರಿತ್ರಿಕ ನೆಲೆಯಲ್ಲಿ ಅಭ್ಯಾಸ ಮಾಡುತ್ತ ಬಂದುದನ್ನು ಕಾಣುತ್ತೇವೆ. ಈ ಅಭ್ಯಾಸದ ಫಲದಿಂದ ಹಾಲುಮತ ದರ್ಶನ, ಭಾರತದ ಕುರುಬರ ಚರಿತ್ರೆ, ಕರ್ನಾಟಕದ ಕುರುಬರು ಎಂಬಿತ್ಯಾದಿಯಾದ ಕೃತಿಗಳು ರಚನೆಯಾದವು. ಈ ಕೃತಿಗಳು ಕೇವಲ ಕುರುಬ ಸಾಂಪ್ರದಾಯಿಕ ಇತಿಹಾಸವನ್ನು ತಿಳಿಸುವಲ್ಲಿ ಸೀಮಿತವಾದವು. ಸಂಶೋಧನಾತ್ಮಕ ನೆಲೆಯಲ್ಲಿ ಕುರುಬ ಸಮುದಾಯ ಕುರಿತು ಆಗಬೇಕಾದ ಅಧ್ಯಯನದ ಅವಶ್ಯಕತೆಯನ್ನು ತಿಳಿಸಿದವು. ಈ ಕೊರತೆಯನ್ನು ತುಂಬುವ ಕಾರ್ಯ ಡಾ.ಎಂ.ಎಂ.ಕಲಬುರ್ಗಿಯವರಿಂದ ನಡೆಯಿತು ಇದರ ಫಲಿತವೇ ಹಾಲುಮತ ಅಧ್ಯಯನ.

ರೇವಣಸಿದ್ಧ ಚರಿತ್ರೆಯ ಎರಡು ಸಂಪ್ರದಾಯಗಳು, ಕುರುಬರ ಗುರು ಶಾಂತಮುತ್ತಯ್ಯ, ಸಿದ್ಧರಾಮ ಶಿವಯೋಗಿಯಾದ ರೇವಣಸಿದ್ಧನನ್ನು ಶಿವಾಚಾರ್ಯ ಮಾಡಿದರು, ತಗರು ಪವಾಡ, ಸಿದ್ಧಮಂಕ ಚರಿತೆ, ಕುರುಬ ಸಮಾಜ ಮತ್ತು ಲಿಂಗಾಯತ ಸಮಾಜ ಎಂಬಿತ್ಯಾದಿಯಾದ ಕುರುಬರ ಸಂಸ್ಕೃತಿಗೆ ಕಲಬುರ್ಗಿಯವರು ೧೩ ಸಂಶೋಧನಾ ಸಂಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಆ ಎಲ್ಲಾ ಸಂಪ್ರಬಂಧಗಳ ಗುಚ್ಚವೇ ಹಾಲುಮತ ಅಧ್ಯಯನಗಳು. ಇಲ್ಲಿಯ ಸಂಪ್ರಬಂಧಗಳ ವಿಷಯಗಳ ವರ್ಗೀಕರಣವು ಆಯಾ ಸಂಪ್ರಬಂಧಗಳು ಹೇಳ ಬಯಸುವ ಸಂಗತಿಗಳನ್ನು ಸರಳಗೊಳಿಸಿವೆ. ರೇವಣಸಿದ್ಧ ಪರಂಪರೆ, ಸಾಂಸ್ಕೃತಿಕ ಅಧ್ಯಯನಗಳೆಡೆ ಹೊಸ ಆಯಾಮಗಳನ್ನು ತೆರೆದಿವೆ.

೨.೨.೩. ಹಾಲುಮತ ಕಿರಣ

ಹಾಲುಮತ ಸಂಸ್ಕೃತಿ, ಸಂಶೋಧನಾ ಪ್ರತಿಷ್ಠಾನ, ಹೊಸಪೇಟೆ ಪ್ರಕಾಶನದಲ್ಲಿ ಡಾ.ಅನ್ನಪೂರ್ಣ ಗೋಸ್ಬಾಳ್‌ರವರ ಹಾಲುಮತ ಕಿರಣ ಕೃತಿಯು ಪ್ರಕಟಣೆಗೊಂಡಿದೆ. ಕರ್ನಾಟದಲ್ಲಿ ಹಾಲುಮತ ಸಂಸ್ಕೃತಿ ಹಾಗೂ ಸಂಬಂಧಿಸಿದ ಚರಿತ್ರೆಯ ಅಧ್ಯಯನಗಳು ಶಂಭಾಜೋಷಿಯವರಿಂದ ಪ್ರಾರಂಭವಾದವು. ಮುಂದುವರೆದು ಈ ಅಧ್ಯಯನಗಳಿಗೆ ಅಕಾಡೆಮಿ

ಶಿಸ್ತು ತಂದುಕೊಟ್ಟವರು ಡಾ. ಎಂ.ಎಂ.ಕಲಬುರ್ಗಿ ಯವರು. ಇದರ ಫಲಶೃತಿಯೇ ಹಾಲುಮತ ಕಿರಣ ಕೃತಿಯು.

ಹಾಲುಮತ ಕಿರಣ ಕೃತಿಯು ಒಟ್ಟು ೧೩ ಪ್ರಬಂಧಗಳನ್ನು ಒಳಗೊಂಡಿದೆ. ಈ ಪೈಕಿ ೧೨ ಪ್ರಬಂಧಗಳು ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದವುಗಳಾಗಿವೆ. ಮೊದಲನೆಯ ಪ್ರಬಂಧವು ರೇವಣಸಿದ್ಧೇಶ್ವರನ ನಿಜ ಚರಿತ್ರೆ ಪಲ್ಲಟವಾದ ರೀತಿಯನ್ನು ಚರ್ಚಿಸುತ್ತಾರೆ. ನಾಥಪಂಥದ ರೇವಣಸಿದ್ಧನನ್ನು ಶಿವಾಚಾರ್ಯನನ್ನಾಗಿ ಮಾಡಿ ಅನುಭಾವ ಸಂಪ್ರದಾಯಕ್ಕಿಂತ ಆಚಾರ್ಯ ಸಂಪ್ರದಾಯ ಪ್ರಾಚೀನ ಎಂಬ ಕೃತಕ ಚರಿತ್ರೆ ಕಟ್ಟಲಾಯಿತೆಂಬುದನ್ನು ಕಾವ್ಯಗಳ ಆಧಾರದಿಂದ ಸಾಬೀತುಪಡಿಸುತ್ತಾರೆ. ತಗರಪವಾಡ ಮತ್ತು ಸಿದ್ಧಮಂಕ ಚರಿತೆ ಕೃತಿಗಳ ತೌಲನಿಕ ಅಧ್ಯಯನದಲ್ಲಿ, ಈ ಕೃತಿಗಳು ಕುರುಬ ಸಮುದಾಯದ ಇತಿಹಾಸ ತಿಳಿಸಿಕೊಡುವಲ್ಲಿ ಪ್ರಮುಖ ಆಕರಗಳಾಗಿವೆ ಎಂದು ಹೇಳುತ್ತ ಅವುಗಳನ್ನು ಪರಿಚಯಿಸುತ್ತಾರೆ. ಎರಡೂ ಕೃತಿಗಳು ಬಹಳಷ್ಟು ಸಾಮ್ಯತೆ ಪಡೆದು ಒಂದೇ ದಾರಿಯ ಎರಡು ಕವಲುಗಳಾಗಿವೆ ಎಂಬುದನ್ನು ಹಾಗೂ ಅಲ್ಲಿರುವ ಗುರುಪರಂಪರೆ ಮುಂತಾದ ಸಂಸ್ಕೃತಿಯ ವಿಚಾರಗಳನ್ನು ಬಿಚ್ಚಿಟ್ಟಿದ್ದಾರೆ.

ಮುಂದುವರೆದು ಚನ್ನಬಸವ ಕವಿಯ ಹಾಲುಮತ ಪುರಾಣ, ಯಲ್ಲನಗೌಡ ಅತ್ತಿಕೊಳ್ಳರವರ ಹಾಲುಮತ ಚರಿತ್ರೆಗಳು ಎಂಬ ಲೇಖನಗಳಲ್ಲಿ, ಈ ಕೃತಿಗಳು ಹಾಲುಮತ ಸಂಸ್ಕೃತಿಯ ಚಲನ ವಲನಗಳನ್ನು ಹೇಗೆ ಹೇಳುತ್ತವೆಂಬುದನ್ನು ವಿವರಿಸುತ್ತಾ ಕುರುಬ ಸಮುದಾಯದ ಪ್ರಾಚೀನ ಪರಂಪರೆ, ಆರಾಧ್ಯ ದೈವಗಳು, ಆಚಾರ ವಿಚಾರ, ಜಾತ್ರೆ ಉತ್ಸವಗಳನ್ನು ನಿರೂಪಿಸುತ್ತಾರೆ. ವಿಶೇಷವಾಗಿ ಅತ್ತಿಕೊಳ್ಳರವರ ಹಾಲುಮತ ಚರಿತೆಯ ಸಿದ್ಧರಾಮನ ಕುರುಬ ಸಮುದಾಯಕ್ಕೆ ಗುರುವಾದ ಬಗೆ, ಗುರು ಪರಂಪರೆಯ ಮುಖ್ಯಸ್ಥರ ಸರೂರು ಗ್ರಾಮ ಇವೇ ಮುಂತಾದ ವಿಷಯಗಳು ಚರಿತ್ರೆಕಾರರಿಗೆ ಮಹತ್ವದ ಆಕರ ಸಾಮಗ್ರಿಗಳನ್ನು ಒದಗಿಸುತ್ತವೆ.

ಹಾಲುಮತ ಸಂಸ್ಕೃತಿಯ ಅಧ್ಯಯನಗಳಲ್ಲಿ ಆಕರ ಸಾಮಗ್ರಿಯನ್ನು ಒದಗಿಸುವ ಸಮುದಾಯದ ಸಿದ್ಧ, ಶರಣ, ಸಂತರ ಕುರಿತ ಕಾವ್ಯ, ಚರಿತ್ರೆ, ಸ್ಥಳಗಳು ಇತ್ಯಾದಿ ವಿಷಯಗಳನ್ನು ಪರಿಚಯಿಸುವ ಕೃತಿಯು ಇದಾಗಿದೆ.

೨.೨.೪. ಹೇಳಿಕೀ ಮಾಡ್ಯಾರ ಒಡೆಯರು

ಜಾನಪದ ಅಧ್ಯಯನದಲ್ಲಿ ನಡೆದ ವಿಶೇಷ ಪ್ರಯತ್ನದ ಫಲಿತವೇ ಡಾ.ಎಂ.ಎಂ.ಪಡಶೆಟ್ಟಿರವರು ಸಂಪಾದಿಸಿದ ಹೇಳಿಕೆಗಳ ಸಂಗ್ರಹ. ಮಳೆ ಬಂದರೆ ಬೆಳೆ, ಬೆಳೆ ಬಂದರೆ ಗ್ರಾಮೀಣ ಬದುಕು ಹಸನ. ಕಾರಣ ಮಳೆ ದೈವ ರೂಪವನ್ನು ಪಡೆಯುತ್ತದೆ. ಈ ದೈವದ ಅವಕೃಪೆಗೆ ಪಾತ್ರರಾದಾಗ ಅತಿಮಾನವ ಶಕ್ತಿಯನ್ನು ನಂಬಿ, ಪೂಜಿಸಿ, ಅವುಗಳ ಮರೆಹೋಗುವುದು

ಅನಿವಾರ್ಯವಾಗುತ್ತದೆ. ಇಂತಹಾ ಕೆಲ ಸಂಪ್ರದಾಯಗಳಲ್ಲಿ ಗುರ್ಚಿ ಪೂಜೆಯು ಒಂದು ವಿಧ. ಹೇಳಿಕೆ ಮಾಡುವುದು ಕೂಡ ಇಂತಹ ಒಂದು ಆಚರಣೆ.

ಈ ಹೇಳಿಕೆಗಳನ್ನು ಕುರುಬ ಗುರುಸಂಪ್ರದಾಯದ ಒಡೆಯರುಗಳು ನುಡಿಯುವರು ಎಂದು ಲೇಖಕರು ಇಲ್ಲಿ ಗುರುತಿಸಿದ್ದಾರೆ. ಕುರುಬರ ಆರಾಧ್ಯ ದೈವ ಹಾಗೂ ಗುರುಪರಂಪರೆಯ ಮತಮಾನ್ಯಗಳಲ್ಲಿ ಜಾತ್ರೆ ಉತ್ಸವ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಇಂತಹಾ ಹೇಳಿಕೆಗಳನ್ನು ಒಡೆಯರುಗಳು ಮಾಡುತ್ತಾರೆ ಎಂಬುದನ್ನು ಗುರುತಿಸಿದ್ದಾರೆ. ಈ ಪ್ರಸ್ತಾವನೆಯು ಸುಮಾರು ೨೦೫ ಹೇಳಿಕೆಗಳ ಸಂಗ್ರಹವಾಗಿದೆ. ಈ ಹೇಳಿಕೆಗಳು ಕೇವಲ ಮಳೆ ಬೆಳೆ ಕುರಿತಾದ ಹೇಳಿಕೆಗಳಿಗೆ ಸೀಮಿತವಾಗಿರದೆ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಿಗೂ ವಿಸ್ತಾರಗೊಂಡಿವೆ. ಕೃತಿಯ ಪ್ರಸ್ತಾವನೆಯಲ್ಲಿ ಕೆಲ ಮುಖ್ಯ ಸಂದರ್ಭದ ಹೇಳಿಕೆಗಳನ್ನು ಪ್ರಧಾನವಾಗಿ ಸಂಗ್ರಹಿಸಿ ಚರ್ಚಿಸಿದ್ದಾರೆ. ಒಟ್ಟಿನಲ್ಲಿ ಇಂತಹಾ ಹೇಳಿಕೆಗಳು ಗ್ರಾಮೀಣ ರೈತರ ಬದುಕಿನಲ್ಲಿ ಜೀವ ಸೆಲೆಯಾಗಿವೆ. ಹಾಗೂ ಕುರುಬ ಗುರುಪರಂಪರೆಯ ಒಡೆಯರುಗಳ ಸಾಮಾಜಿಕ ಬದ್ಧತೆ ಮತ್ತು ಕಾಳಜಿಯನ್ನು ಎತ್ತಿತೋರುತ್ತವೆ ಎಂಬುದರ ಬಗೆಗೆ ಲೇಖಕರು ಗಮನ ಸೆಳೆದಿದ್ದಾರೆ.

ಕೊನೆ ಟಿಪ್ಪಣಿ

೧. ಹಾಲುಮತ ಅಧ್ಯಯನದ ಆಕರಗಳು, ಡಾ.ಅನ್ನಪೂರ್ಣಗೋಸ್ಬಾಳ, ಡಾ.ಎಂ.ಎಂ.ಕಲಬುರ್ಗಿಯವರ ಬೆನ್ನುಡಿ, ವಿದ್ಯಾನಿಧಿ ಪ್ರಕಾಶನ, ಗದಗ.

ಅಧ್ಯಾಯ : ಮೂರು

ರೇವಣಸಿದ್ಧ ಪರಂಪರೆ : ಅಧ್ಯಯನದ ಆಕರಗಳು

೩.೧. ಸಾಹಿತ್ಯಿಕ ಆಕರಗಳು

೩.೨. ದಾಖಲಾತ್ಮಕ ಆಕರಗಳು

೩.೩. ಮೌಖಿಕ ಆಕರಗಳು

ಅಧ್ಯಾಯ : ಮೂರು

ರೇವಣಸಿದ್ಧ ಪರಂಪರೆ : ಅಧ್ಯಯನದ ಆಕರಗಳು

ಪ್ರಾಚೀನ ಕಾಲದಿಂದಲೂ ಕುರುಬ ಜನಾಂಗದವರು ತಮ್ಮ ಮೂಲ ಗುರುವೆಂದು ಆರಾಧಿಸಿಕೊಂಡು ಬಂದಿರುವ ಮಹಾಪುರುಷರಲ್ಲಿ ರೇವಣಸಿದ್ಧನಿಗೆ ಅಗ್ರಸ್ಥಾನ ಸಲ್ಲುತ್ತದೆ. ಕರ್ನಾಟಕದ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಸಿದ್ಧನಾಗಿರುವ ರೇವಣಸಿದ್ಧ ಕುರುಬ ಮತ್ತು ಲಿಂಗಾಯಿತ ಸಮಾಜಗಳೆರೆಡಕ್ಕೂ ಪೂಜನೀಯ ವ್ಯಕ್ತಿಯಾಗಿದ್ದಾನೆ. ರೇವಣಸಿದ್ಧನನ್ನು ಕುರಿತು ಲಿಖಿತ ಪರಂಪರೆಯಲ್ಲಿಯೂ ಮತ್ತು ಮೌಖಿಕ ಪರಂಪರೆಯಲ್ಲಿಯೂ ಸಾಕಷ್ಟು ಪ್ರಮಾಣದ ದಾಖಲೆಗಳು ಸೃಷ್ಟಿಯಾಗಿರುವುದು ಕಂಡುಬರುತ್ತದೆ. ಈ ಒಂದೊಂದು ಪರಂಪರೆಯ ಆಕರ ಸಾಮಗ್ರಿಗಳನ್ನು ಕೇಂದ್ರೀಕರಿಸಿ ಒಂದೊಂದು ಸ್ವತಂತ್ರ್ಯ ಅಧ್ಯಯನಗಳನ್ನು ಕೈಗೊಳ್ಳಬಹುದಾದಷ್ಟು ವಿಫುಲ ಪ್ರಮಾಣದ ಆಕರ ಸಾಮಗ್ರಿಗಳು ದೊರೆಯುತ್ತಿರುವುದು ಈತನ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ.

ಕುರುಬ ಜಾನಪದ ಸಾಹಿತ್ಯ, ದೇವಾಲಯ, ಮಠ, ಆಚರಣೆಗಳು ಹಾಗೂ ಇತ್ತೀಚೆಗೆ ಪ್ರಕಟವಾದ ತಗರ ಪವಾಡ ಕೃತಿ, ಶಾಸನ, ತಾಮ್ರಪಟ ಇನ್ನು ಮೊದಲಾದ ದಾಖಲೆಗಳು ಇವನು ಜಾತಿಯಿಂದ ಕುರುಬನೆಂದು ಇನ್ನೂ ದೃಢಪಡಿಸಿವೆ. ಇತ್ತೀಚಿನ ಇಷ್ಟೆಲ್ಲಾ ಆಕರ ಸಾಮಗ್ರಿಗಳು ಬೆಳಕಿಗೆ ಬಂದಿದ್ದರೂ ರೇವಣಸಿದ್ಧನ ಪೂರ್ಣ ಅಭ್ಯಾಸಕ್ಕೆ ಇದು ಸಾಲುವುದಿಲ್ಲವೆಂದೇ ಹೇಳಬೇಕು. ಹೀಗಾಗಿ ವಿದ್ವಾಂಸರಾದವರು ಈತನಿಗೆ ಸಂಬಂಧಿಸಿದ ಸಾಂಸ್ಕೃತಿ, ಭೌತಿಕ, ಲಿಖಿತ, ಮೌಖಿಕ ಇತ್ಯಾದಿ ಸಾಮಗ್ರಿ ಶೋಧಕ್ಕಾಗಿ ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಕ್ಷೇತ್ರ ಕಾರ್ಯ ಪೂರೈಸಬೇಕು. ಹೀಗೆ ಮಾಡಿದರೆ ಇದು ಕುರುಬ ಸಮಾಜದ ಅಧ್ಯಯನವೆನಿಸುತ್ತಲೇ ಕರ್ನಾಟಕ ಸಂಸ್ಕೃತಿಯ ಭಾಗಶಃ ಅಧ್ಯಯನವೇ ಆಗುತ್ತದೆ. ಮತ್ತು ೧೨ನೇ ಶತಮಾನದ ಬಸವಣ್ಣನ ಕ್ರಾಂತಿಗೆ ಒದಗಿ ಬಂದ ಹಿನ್ನೆಲೆಯಾಗಿ ಪರಿಣಮಿಸುತ್ತದೆ ಎಂದು ಡಾ.ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಿಸಿದ್ದಾರೆ.[1]

ಇಲ್ಲಿಯವರೆಗೆ ಲಿಖಿತ ಸಾಹಿತ್ಯವನ್ನು ಆಕರವಾಗಿ ಬಳಸಿಕೊಂಡು ಅಲ್ಲಲ್ಲಿ ಕೆಲ ರೇವಣಸಿದ್ಧ ಹಾಗೂ ಆತನ ಪರಂಪರೆಯ ಅಧ್ಯಯಗಳು ನಡೆದಿವೆಯಾದರೂ ಮೌಖಿಕ ಸಾಹಿತ್ಯ ಕಾವ್ಯ, ಪುರಾಣ, ಹಾಡು, ಕತೆ ಹಾಗೂ ದೇವಾಲಯ (ಸ್ಮಾರಕ)ನೆಲೆಗಳನ್ನು ಪೂರಕವಾಗಿಸಿ ಸ್ವತಂತ್ರ್ಯ ಅಧ್ಯಯನಗಳು ನಡೆದಿಲ್ಲವಾದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿರುವ ರೇವಣಸಿದ್ಧ ಪರಂಪರೆಯ ಪ್ರಮುಖ ನೆಲೆಗಳ ಕ್ಷೇತ್ರಕಾರ್ಯ ಮಾಡಲಾಗಿದೆ. ಅಲ್ಲಿ ದೊರೆತಿರುವ ಮಾಹಿತಿಗಳನ್ನು ಬಳಸಿಕೊಂಡು ಅಲ್ಲಿ ಕಂಡ ರೇವಣಸಿದ್ಧ ಪರಂಪರೆಯನ್ನು ಅವಲೋಕಿಸಲಾಗಿದೆ. ಜಾಲವಾದಿ ಮಲ್ಲಣ್ಣಕೃತ ರೇವಣಸಿದ್ದೇಶ್ವರ ಕಾವ್ಯ, ತಗರು ಪವಾಡ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಹಾಲುಮತ ಸಾಹಿತ್ಯ, ಶಾಸನಗಳು, ಹೇಳಿಕೆಗಳು, ಡೊಳ್ಳಿನಪದಗಳು, ಮಂಗಳಾರತಿ ಪದಗಳು, ನಿರೂಪಗಳು, ಸನದುಗಳು ಮೊದಲಾದ ದಾಖಲೆಗಳು ರೇವಣಸಿದ್ಧ ಪರಂಪರೆಗೆ ಆಕರಗಳನ್ನು ಒದಗಿಸುತ್ತವೆ.

೩.೧. ಸಾಹಿತ್ಯಿಕ ಆಕರಗಳು

೩.೧.೧ ರಸ್ತಾಪುರ ಭೀಮಕವಿಯ : ಹಾಲುಮತೋತ್ತೇಜಕ ಪುರಾಣ

ರಸ್ತಾಪುರ ಭೀಮಕವಿಯ ಹಾಲುಮತ್ತೋತ್ತೇಜಕ ಪುರಾಣವು ಕುರುಬ ಸಮುದಾಯದ ಪ್ರಾಚೀನ ಇತಿಹಾಸ, ಸಮಾಜದ ನಾಯಕರ ಚರಿತ್ರೆ ಇತ್ಯಾದಿಗಳೆಡೆ ಗಮನ ಸೆಳೆಯುವ ಕೃತಿಯಾಗಿದೆ. ಈ ಕೃತಿಯನ್ನು ಡಾ. ಎಫ್.ಟಿ.ಹಳ್ಳಿಕೇರಿ ಸಂಪಾದಿಸಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಸಾರಾಂಗವು ಪ್ರಕಟಿಸಿದೆ. ಈ ಕೃತಿಯು ರೇವಣಸಿದ್ಧ, ಸಿದ್ಧರಾಮೇಶ್ವರ, ಶಾಂತಮುತ್ತಯ್ಯ, ಸಿದ್ಧಮಂಕ, ಆದಿಗೊಂಡ, ಬೀರೇಶ್ವರ, ಮಾಳಿಂಗರಾಯ ಇನ್ನೂ ಮುಂತಾದ ಹಾಲುಮತ ಸಾಂಸ್ಕೃತಿಕ ನಾಯಕರ ಚರಿತ್ರೆ ಹಾಗೂ ಸಮಾಜದ ಏಳಿಗೆಗಾಗಿ ಅವರು ಮಾಡಿದ ಕಾರ್ಯಗಳತ್ತ ಕೇಂದ್ರಿತವಾಗಿದೆ.

ತಗರು ಪವಾಡ, ಸಿದ್ಧಮಂಕ ಚರಿತೆ ಕೃತಿಗಳಂತೆ; ಹಾಲುಮತೋತ್ತೇಜಕ ಪುರಾಣವು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರಿದೆ. ಈ ಕೃತಿಯಲ್ಲಿ ರೇವಣಸಿದ್ಧೇಶ್ವರನೆ ನಾಯಕ, ಈತನನ್ನು ಕೇಂದ್ರೀಕರಿಸಿಕೊಂಡ ಘಟನಾವಳಿಗಳಿವೆ. ಹಾಲುಮತದ ಮೂಲಪುರುಷರೆಂದು ಗುರುತಿಸಲ್ಪಡುವ ಮುದ್ದಪ್ಪ, ಮುದ್ದವ್ವ, ಆದಿಗೊಂಡ, ಪದುಮಗೊಂಡ, ಶಿವಸಿದ್ಧ, ಬೀರಪ್ಪ, ಮಾಳಿಂಗರಾಯ, ರೇವಣಸಿದ್ಧರು ಮೆರೆದ ಪವಾಡಗಳನ್ನು ಈ ಕೃತಿ ಒಳಗೊಂಡಿದೆ. ಹಾಲುಮತ ಸಂಬಂಧಿ ಕಥನಗಳಲ್ಲಿ ಅತ್ಯಂತ ಜನಪ್ರಿಯವಾದ ಕುರುಬ ಲಿಂಗಾಯಿತ ಮುಖಾಮುಖಿಯ ಕಥನ ಇಲ್ಲಿಯೂ ಇದೆ. ಆದರೆ ಸತ್ತ ಕುರಿಯನ್ನು ಬದುಕಿಸಿದವನು ಮಾಳಿಂಗರಾಯನಾಗಿದ್ದಾನೆ. ಈ ಕೃತಿಯಲ್ಲಿ ಪುರಾಣ ಮತ್ತು ಚರಿತ್ರೆಯ ಅಂಶಗಳು ಒಟ್ಟಾರೆಯಾಗಿರುವುದರಿಂದ ಈ

ಕೃತಿಯು ರೇವಣಸಿದ್ಧೇಶ್ವರ, ಶಿವಪದ್ಮ, ಶಿವಸಿದ್ಧ, ಬೀರೇಶ್ವರ; ವೀರಗೊಲ್ಲಾಳೇಶ್ವರ ಮತ್ತು ಮಾಳಿಂಗರಾಯರ ವೃತ್ತಾಂತಗಳನ್ನು ಸಾಧ್ಯಂತವಾಗಿ ನಿರೂಪಿಸಿವೆ. ಈ ಕೃತಿಯು ೯ ಸಂಧಿಗಳನ್ನು ಒಳಗೊಂಡು, ೫೯೩ ವಾರ್ಧಕ ಷಟ್ಪದಿಗಳಲ್ಲಿ ರಚಿತವಾಗಿದೆ.

ಈ ಕೃತಿಯ ಉಪೋದ್ಘಾತದಲ್ಲಿ; ಪಂಡಿತರ ಸನ್ನಿಧಿಗೆ ಪೋಗಿ ಪೂರ್ವಕವಿಗಳಿಂದುಕ್ತಮಾದ ಉದ್ಗ್ರಂತಗಳಲ್ಲಿರ್ಪ ಆಧಾರಗಳಿಂದಲೂ, ಕವಿಕುಲತಿಲಕರಾದ ಬೊಮ್ಮ ಕವಿಗಳಿಂದುಕ್ತಮಾದ ಶ್ರೀ ರೇವಣಸಿದ್ಧೇಶ್ವರನ ಕಥಾ ಶಕ್ತಿಯಿಂದಲೂ, ಶ್ರೀ ಗುರು ಶರಬೇಶ್ವರನ ಪ್ರಸಾದದಿಂದಲೂ ಆ ಬೊಮ್ಮಕವಿಗಳು ರಚಿಸಿದ ಲೀಲೆಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿ ಶ್ರೀ ಸಿದ್ಧೇಶ್ವರನು ಹಾಲ್ಮತದಲ್ಲಿ ತೋರಿದ ಸಲ್ಲೀಲೆಗಳನ್ನು ವಿಸ್ತಾರವಾಗಿ ಬಿಡಿಗನ್ನಡ, ನುಡಿಗಳಿಂದಲೂ, ಸುಲಭಶೈಲಿಯಿಂದಲೂ ಸರ್ವರಿಗೂ ಗೋಚರವಗುವಂತೆ ಲೋಕೋಪಕಾರಕ್ಕೂ ಮತೋದ್ಧಾರಕ್ಕೂ ವಿಸ್ತಾರವಾಗಿ ಹೇಳಿ ೯ ಅಧ್ಯಾಯವಾಗಿ ಅಲ್ಪಮತಿಗೆ ತೋಚಿದಷ್ಟು ರಚಿಸಿರುವೆನು. ಮತ್ತು ೫೦೦ ವರ್ಷಗಳ ಒಳಗಡೆಯಲ್ಲಿ ಬರೆದು ಹಾಕಿ ತಾಳವಾಲೆ ಲೇಖನಗಳು ದೊರೆತುದರಿಂದ ಅವುಗಳನ್ನು ವಿಶದವಾಗಿ ನೋಡಿ ಬಲ್ಲ ಪಂಡಿತರಿಗೆ ತೋರಿಸಿ ಸಪ್ರಮಾಣವಾಗಿರುವವನ್ನೇ ಇದರಲ್ಲಿ ಕೂಡಿಸಲ್ಪಟ್ಟಿರುವೆನು ಎಂದು ಹೇಳಿಕೊಂಡಿರುವುದನ್ನು ಗಮನಿಸಿದಾಗ ಕವಿಯು ಈ ಕೃತಿಯನ್ನು ರಚನೆಮಾಡುವ ಸಂದರ್ಭದಲ್ಲಿ ಆತನಿಗೆ ದೊರೆತ ೫೦೦ ವರ್ಷಗಳಷ್ಟು ಹಿಂದೆ ರಚಿತವಾದ ಆಕರಗಳನ್ನು ಬಳಸಿಕೊಂಡಿದ್ದಾನೆ ಎಂಬುದು ತಿಳಿದುಬರುವುದು. ಈತನು ಜೀವಿಸಿದ ಕಾಲಮಾನವನ್ನು ಕ್ರಿ.ಶ. ೧೮೭೭ ಎಂದು ಜನಪದ ಕವಿ ಚರಿತೆಯಲ್ಲಿ ವಿದ್ವಾಂಸರು ದಾಖಲಿಸಿರುವ ಕಾರಣ; ಈತನು ಬಳಸಿಕೊಂಡ ಆಕರಗಳು ಸುಮಾರು ಕ್ರಿ.ಶ. ೧೩೭೭ ಗಳಷ್ಟು ಹಿಂದೆ ರಚಿತವಾಗಿರುವ ಸಾಧ್ಯತೆಗಳಿವೆ.

೩.೧.೨. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ: ಹಾಲುಮತ ಪುರಾಣ

ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಬರೆದ ಪದ್ಯ ರೂಪದ ಕಥಾನಕವಿದು. ಈ ಕೃತಿಯು ಸರವೂರಿನ ಮಂಕ ಒಡೆಯರ ಪರಂಪರೆಗೆ ಬದ್ಧಗೊಳಿಸಿಕೊಂಡು ಬರೆದ ಕಾವ್ಯವಾಗಿದೆ. ಈ ಕೃತಿಯನ್ನು ಹಾಲುಮತ ಪುರಾಣವೆಂದು ಕರೆದಿದ್ದರೂ ಕಾವ್ಯದ ಕೊನೆಯಲ್ಲಿಯ ಕೆಳಗಿನ ಉಲ್ಲೇಖದಿಂದ

ಮರುಳಸಿದ್ಧಯ್ಯನ ವರಚರಿತವ ಕೇಳೆ
ಹರನೊಲಿವನು ಕರುಣದಿ
ಕುರುಬರ ಕಥೆಯೆಂದು ಜರಿಯಲು ಬೇಡ
ಮರುಳಸಿದ್ಧಯ್ಯ ತಾ ಕುರುಬ (೫–೧೦೭)

ಈ ಚರಿತ್ರೆಯನ್ನು ಮರುಳಸಿದ್ಧನ ಚರಿತೆಯೆಂದು ಹಾಗೂ ಚರಿತೆಯೊಳಗಿನ ಮರುಳಸಿದ್ಧ ಕುರುಬ ಜಾತಿಗೆ ಸೇರಿದವನೆಂದೂ ತಿಳಿಯುವುದು. ಹಾಲುಮತ ಪರಂಪರೆಯನ್ನು ತಿಳಿಸುವ ಈ ಕಾವ್ಯ ಸಿದ್ಧಮಂಕ ಚರಿತೆ, ತಗರ ಪವಾಡ ಕೃತಿಗಳ ಮುಂದುವರಿಕೆಯಾದರೂ ಸಿದ್ಧಮಂಕ ಚರಿತೆಯ ಪ್ರತಿಕೃತಿಯಂತಿದೆ. ತಗರ ಪವಾಡದ ಶಾಂತಮುತ್ತಯ್ಯನಾಗಲಿ, ಸಿದ್ಧಮಂಕ ಚರಿತೆಯ ಹೆಗ್ಗಗೌಡನಾಗಲಿ ಈ ಕೃತಿಯಲ್ಲಿ ಬರುವುದಿಲ್ಲ. ಇಲ್ಲಿ ರೇವಣಸಿದ್ಧನೆ ಸತ್ತ ತಗರನ್ನು ಬದುಕಿಸಿ ಕಲ್ಯಾಣ ಪ್ರವೇಶ ಪಡೆಯುತ್ತಾನೆ.

ಪ್ರಸ್ತುತ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮದವನಾದ ಸಿದ್ಧಮಂಕನು ತಪಸ್ಸು ಮಾಡಿದುದರ ಬಗೆಗಿನ ವಿವರಗಳು ಆ ಊರಿನ ಎರಡು ಶಾಸನಗಳಿಂದ ಮತ್ತು ಒಡೆಯರ ಹೇಳಿಕೆಗಳಿಂದ ತಿಳಿಯಬಹುದಾಗಿದೆ. ಸರೂರು ಗ್ರಾಮದಿಂದ ಎರಡು ಮೂರು ಕಿಲೋ ಮೀಟರ್ ದೂರದಲ್ಲಿ ತೂಗು ಗುಡ್ಡವಿದ್ದು, ಅಲ್ಲಿ ಸಿದ್ಧಮಂಕ ತಪಸ್ಸು ಮಾಡಿದ್ದನೆಂಬ ಸ್ಥಳವನ್ನು ಈಗಲೂ ಗ್ರಾಮಸ್ಥರು ತೋರಿಸುವರು.

ಈ ಕೃತಿಯಲ್ಲಿ ಶೈವದಿಂದ ವೀರಶೈವ ಮತ್ತು ಬಂಡಾರದಿಂದ ವಿಭೂತಿಯತ್ತ ವಾಲುವ ಸಂಸ್ಕೃತಿಯನ್ನು ಕಾಣುವುದರ ಜೊತೆಗೆ ಕುಲಬೇದ ನಿರಾಕರಣೆಯನ್ನು ಹಾಗೂ ಶರಣರ ಸಮ್ಮುಖದಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳುವಲ್ಲಿ ಕುರುಬರು ಸಫಲವಾದುದನ್ನು ಗಮನಿಸಬಹುದಾಗಿದೆ.

೩.೧.೩ ಚೆನ್ನಬಸವಕವಿಯ ಹಾಲುಮತ ಪುರಾಣ

ಈ ಕೃತಿಯು ೧೯೫೯ ರಲ್ಲಿ ಶ್ರೀ ಚೆನ್ನಬಸವಶಾಸ್ತ್ರಿಯವರಿಂದ ರಚಿತವಾಗಿ ರೇಣುಕ ಗುರುಕುಲಾಶ್ರಮ, ಚಿಕ್ಕಬೂದಿಹಾಳ್‌ದಿಂದ ಪ್ರಕಟವಾಗಿದೆ. ಈ ಪುರಾಣವು ೧೪ ಸಂಧಿ, ೧೬೨೯ ಪದಗಳುಳ್ಳ ಸಾಂಗತ್ಯ ಕೃತಿಯಾಗಿದೆ. ಕೃತಿಯ ಎರಡನೆಯ ಸಂಧಿಯಲ್ಲಿ ೧೩೯ ಪದಗಳಿವೆ. ಈ ಕೃತಿಯು ಕುರುಬರ ಆರಾಧ್ಯ ದೈವಗಳಾದ ಶಿವಪದ್ಮ, ಶಿವಸಿದ್ಧ ಬೀರೇಶ್ವರ. ಮಾಳಿಂಗರಾಯ, ಶಾಂತಮುತ್ತಯ್ಯ, ರೇವಣಸಿದ್ಧ ಮೊದಲಾದವರ ಉಪಕತೆಗಳನ್ನು ಹೊಂದಿದ ಒಂದು ಪುರಾಣವಾಗಿದೆ. ಈ ಕೃತಿಯು ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣದ ಕತೆಯನ್ನು ಹೋಲುವುದು. ರಸ್ತಾಪುರ ಭೀಮಕವಿಯ ಮೇಲೆ ಜನಪದ ಹಾಲುಮತ ಮಹಾಕಾವ್ಯದ ದಟ್ಟ ಪ್ರಭಾವ ಬೀರಿದ್ದರೆ. ಹಾಲುಮತೋತ್ತೇಜಕ ಪುರಾಣದ ಪ್ರಭಾವವು ಚನ್ನಬಸವ ಕವಿಯ ಹಾಲುಮತದ ಪುರಾಣದ ಮೇಲಾಗಿದೆ. ಭೀಮಕವಿಯ ಹಾಲುಮತೋತ್ತೇಜಕ ಪುರಾಣವು ವಾರ್ಧಿಕ ಷಟ್ಪದಿಯಲ್ಲಿ ರಚನೆಯಾಗಿದ್ದರೆ ಈ ಕಾವ್ಯ ಸಾಂಗತ್ಯದಲ್ಲಿ ರಚಿತವಾಗಿದೆ. ಈ ಕೃತಿಯಲ್ಲಿ ಬೀರೇಶ್ವರ ಸಂಮುಖದಲ್ಲಿ ಸತ್ತ ಗೂಳಿಯನ್ನು ಕಲ್ಯಾಣದಲ್ಲಿ ಬದುಕಿಸಿದವನು ವೀರ ಮಾಳಿಂಗರಾಯ.

ಕುರುಬರ ಕುಲಗುರು ಶಾಂತಮುತ್ತಯ್ಯ ಇತರ ಕೃತಿಗಳಲ್ಲಿ ತಗರು ಪವಾಡ ಮೆರೆದರೆ ಈ ಕೃತಿಯಲ್ಲಿ ರಟ್ಟುಮತಶಾಸ್ತ್ರದ ರಚನೆ ಮಾಡಿದನು ಎಂಬ ಹೊಸ ವಿಚಾರವನ್ನು ತಿಳಿಸುತ್ತದೆ. ಇಲ್ಲಿಯ ಕಥಾ ನಾಯಕರು ಭೂಲೋಕದಿಂದ ಕೈಲಾಸಕ್ಕೆ, ಕೈಲಾಸದಿಂದ ಭೂಲೋಕ್ಕೆ ಓಡಾಡುತ್ತ ಶಿವನೊಂದಿಗೆ ನಿರಂತರ ಒಡನಾಟವನ್ನು ಹೊಂದಿದವರಾಗಿದ್ದಾರೆ. ದೇವ ಮಾನವ, ಭೂಲೋಕ ಕೈಲಾಸ ಮೊದಲಾದವುಗಳಲ್ಲಿನ ಅಂತರ ಕಡಿಮೆಯಾಗಿ ಸಮಾನತೆಯನ್ನು ಕಾಯ್ದುಕೊಳ್ಳಲಾಗಿದೆ. ಒಟ್ಟಿನಲ್ಲಿ ಕುರುಬ ಸಮಾಜದ ಆರಾಧ್ಯ ದೈವ (ಬೀರ ದೇವರು) ಕುಲ ಗುರುಗಳು (ಒಡೆಯರುಗಳು), ಜನನ ಮರಣ ನಾಮಕರಣದಂತಹಾ ಸಂದರ್ಭದಲ್ಲಿಯ ಆಚರಣೆಗಳು, ಜಾತ್ರೆ ಉತ್ಸವಗಳು, ಕರಿಯ ಕಂತೆ, ಕಂಬಳಿ ಗದ್ದಿಗೆ ಬಗೆಗಿನ ನಾನಾ ವಿಧದ ಸಂಸ್ಕೃತಿಯನ್ನು ತಿಳಿಸುವಲ್ಲಿ ಈ ಕಾವ್ಯ ಯಶಸ್ವಿಯಾಗಿದೆ.

ಪುರಾಣವು ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಕತೆಯನ್ನು ಹೋಲುತ್ತದೆ ಯಾದರೂ ಭೀಮಕವಿ ಕೃತಿಯನ್ನು ಷಟ್ಪದಿಯಲ್ಲಿ ರಚಿಸಿದರೆ ಚನ್ನಬಸವ ಕವಿ ಸಾಂಗತ್ಯದಲ್ಲಿ ರಚಿಸಿದ್ದಾರೆ. ಕುರುಬರ ರಟ್ಟುಮತ ಶಾಸ್ತ್ರ ಮತ್ತು ಒಡೆಯರ ಗುರು ಶಾಂತಮುತ್ತಯ್ಯನ ಬಗೆಗಿನ ವಿಶೇಷ ಮಾಹಿತಿಗಳನ್ನು ಈ ಕೃತಿಯಲ್ಲಿ ಗಮನಿಸಬಹುದಾಗಿದೆ. ಈ ಕೃತಿಯ ಮೇಲೆ ಜನಪದ ಹಾಲುಮತ ಕಾವ್ಯದ ದಟ್ಟ ಪ್ರಭಾವವಿರುವುದು ಕಾವ್ಯದಲ್ಲಿಯ ಎಲ್ಲಾ ಕಥಾ ಪ್ರಸಂಗಗಳು ರೇವಣಸಿದ್ಧರ ಸಮುಖದಲ್ಲಿ ನಡೆಯುವುದು ವಿಶೇಷವಾಗಿದೆ.

೩.೧.೪ ಜಾಲವಾದಿಯ ಮಲ್ಲಣ್ಣ ಕೃತ : ರೇವಣಸಿದ್ಧೇಶ್ವರ ಕಾವ್ಯ

ಜಾಲವಾದಿ ಮಲ್ಲಣ್ಣ ಕೃತ **'ರೇವಣ ಸಿದ್ಧೇಶ್ವರ ಕಾವ್ಯ'** ವನ್ನು ಮೊದಲಬಾರಿಗೆ ಡಾ. ಎಂ.ಎಸ್.ಸುಂಕಾಪುರ ಸಂಪಾದಿಸಿ, ಧಾರವಾಡದ ಶ್ರೀ ಮುರುಘಾಮಠ ಆಶ್ರಯದ ಪ್ರಕಾಶನದಲ್ಲಿ ಹೊರತಂದಿದ್ದಾರೆ. ಪುರಾಣಗಳನ್ನು 'ಮಹಾಪುರಾಣ' ಮತ್ತು 'ಲಘು ಪುರಾಣ' ಗಳೆಂದು ವಿಂಗಡಿಸುವುದಾದರೆ, ಪ್ರಸ್ತುತ ರೇವಣಸಿದ್ಧೇಶ್ವರ ಕಾವ್ಯವು ಲಘು ಪುರಾಣ ವರ್ಗಕ್ಕೆ ಸೇರುವುದು. ಕವಿಯು ಕಾವ್ಯದೊಳಗೆ ತನ್ನ ಹೆಸರನ್ನು ಮಲ್ಲು, ಕವಿಮಲ್ಲು, ಕವಿಮಲ್ಲಣ್ಣ ಎಂದು ಹೇಳಿಕೊಂಡಿರುವನು. ಹಾಗೂ ಗ್ರಂಥಾದಿಯ ಪ್ರತಿಯೊಂದು ಸಂಧಿಯ ಅಂತ್ಯದಲ್ಲಿ ಜಾಲವಾದಿಯ ಶಂಕರಲಿಂಗನನ್ನು ನೆನೆದಿರುವ ಕಾರಣ ಈತನು ಪ್ರಸ್ತುತ ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಜಾಲವಾದಿ ಗ್ರಾಮದಲ್ಲಿ ಇಂದಿಗೂ ಪೂಜೆಗೊಳ್ಳುತ್ತಿರುವ ಶಂಕರ ಲಿಂಗ ದೇವನ ಭಕ್ತನಿರಬಹುದೆಂದು ಹೇಳಬಹುದಾಗಿದೆ. ಕಾವ್ಯಾಂತ್ಯದಲ್ಲಿ ಕೆಲವಾರ ಸ್ವಾಮಿಗಳ ಪಾದಕ್ಕೆ ಬೇಕಾದ ಪುಷ್ಪವ ಧರಿಸುವೆ ಎಂದು ಸೂಚಿಸಿರುವುದನ್ನು ಗಮನಿಸಿದರೆ ಅದೇ ಪ್ರದೇಶದ ಕೆಲ್ಲೂರ ಗ್ರಾಮವಾಸಿಯಾಗಿರಬಹುದಾಗಿದೆ.[2]

ಜಾಲವಾದಿ ಮಲ್ಲಣ್ಣ ವಿರಚಿತ ರೇವಣಸಿದ್ಧೇಶ್ವರ ಕಾವ್ಯವು ಒಟ್ಟು ೭ ಸಂಧಿಗಳನ್ನೊಳಗೊಂಡು ೩೭೯ ಭಾಮಿನಿ ಷಟ್ಪದಿಗಳಲ್ಲಿ ರಚಿತವಾಗಿವೆ. ಕಾವ್ಯದ ಒಂದನೇಯ ಸಂಧಿ ೪ನೇ ಷಟ್ಪದಿಯಲ್ಲಿ, **ರೇವಣನ ಕಾವ್ಯವ ನಿರ್ಮಿಸಿದನ್ನೈ ಪೂರ್ವ ಬಿತ್ತಿಯು ಮೇಲೆ ಚಿತ್ರವನು** ಎಂದು ಹೇಳಿಕೊಂಡಿರುವುದರಿಂದ ಕವಿ ಪೂರ್ವದ ಕೃತಿಯ ಆಧಾರದ ಮೇಲೆ ರಚಿಸಿದನೆಂದು ತಿಳಿಯುತ್ತಾದರೂ, ಯಾವ ಕೃತಿಯೆಂದು ತಿಳಿಯುವುದಿಲ್ಲ. ಕಾವ್ಯದಲ್ಲಿ ಸಾಮಾನ್ಯನ ಬಡತನವನ್ನು ನಿವಾರಿಸುವ, ಕುಟಿಲ ಸಿದ್ಧರ ಗರ್ವ ಮುರಿಯುವ ಎರಡೂ ಕ್ರಿಯೆಗಳು ಕಾವ್ಯದುದ್ದಕ್ಕೂ ಕಂಡುಬರುತ್ತವೆ. ಆರಂಭದ ಸಂಕ್ಷಿಪ್ತ ಪೀಠಿಕೆಯ ಬಳಿಕ ನೇರವಾಗಿ ಚರಿತ್ರೆಯ ಚಿತ್ರೀಕರಣಕ್ಕೆ ಕವಿ ತೊಡಗುವುದರಿಂದ ಇದು ಜಾನಪದ ಕೃತಿಯಾಗಿರುವ ಸಂಭವವೂ ಇದೆ.[೩] ಕವಿಯು ಇಲ್ಲಿ ರೇವಣಸಿದ್ಧನಿಗೆ ಸಂಬಂಧಿಸಿದ ಘಟನೆಗಳಲ್ಲಿ, ಪವಾಡಗಳಲ್ಲಿ ಆತನಿಗೆ ಪೂರಕವಾದ ಕೆಲವೊಂದನ್ನು ಆರಿಸಿಕೊಂಡಿದ್ದಾನೆ. ಕೆಲವು ಬಾರಿ ಒಂದೇ ಘಟನೆಯನ್ನು ಕೆಲವು ಬದಲಾವಣೆಗಳೊಂದಿಗೆ ಪುನಃ ಚಿತ್ರಿಸಿದ್ದಾನೆ. ಮಹಾಪುರುಷರ ಬದುಕು ಪ್ರತಿಷ್ಠಿತರ ಕೈಯಲ್ಲಿ ಪುರಾಣ ಮಾರ್ಗ ಹಿಡಿದರೆ ಸಾಮಾನ್ಯ ಕವಿಯಾದ ಮಲ್ಲಣ್ಣ ವಿರಚಿತ ರೇವಣಸಿದ್ದೇಶ್ವರ ಕಾವ್ಯವು ಚರಿತ್ರೆ ಮಾರ್ಗ ಹಿಡಿದಿರುವುದು ವಿಶೇಷವಾಗಿದೆ.

ರೇವಣಸಿದ್ಧನು ಕೊಲ್ಲಿಪಾಕಿ ಸೋಮೇಶ್ವರ ದೇವಾಲಯದ ಲಿಂಗದಲ್ಲಿ ಉದ್ಭವಿಸಿದ ಮತ್ತು ಲಿಂಗದಲ್ಲೇ ಐಕ್ಯನಾದ, ಅಗಸ್ತ್ಯನೊಂದಿಗೆ ಗೋಷ್ಠಿ ನಡೆಸಿದ, ಕಂಚಿಯ ವಿಷ್ಣು ಪ್ರತಿಮೆ ಸ್ಥಿರಗೊಳಿಸಿದ, ಕೊಲ್ಲಾಪುರದ ಚಿಕ್ಕಲಾದೇವಿಗೆ ಖಡ್ಗ ದೀಕ್ಷೆ ನೀಡಿದ, ಬನವಾಸಿಯಲ್ಲಿ ವಿಕ್ರಮಾಧಿತ್ಯನಿಗೆ ಖಡ್ಗ ನೀಡಿದ, ಮಂಗಳವಾಡದಲ್ಲಿ ಕೆರೆ ಕಟ್ಟಿಸಿದ, ಚೋಳ ರಾಜಕುಮಾರಿಯಿಂದ ರುದ್ರಮುನಿ ಜನಿಸಿದ, ಲಂಕೆಯಲ್ಲಿ ಮೂರು ಕೋಟಿ ಲಿಂಗ ಸ್ಥಾಪಿಸಿದ, ಹಾವಿನಾಳ ಕಲ್ಲಯ್ಯನಿಗೆ ದೀಕ್ಷೆ ನೀಡಿದ ಪೌರಾಣಿಕ ಪ್ರಸಂಗಗಳು ಈ ಕೃತಿಯಲ್ಲಿ ಕಂಡುಬರುವುದಿಲ್ಲ.

ಸೇಷ್ಟಿಗೀಶ್ವರ ಸಿದ್ದರೇವಣ
ಜಟ್ಟೂರ ಪಟ್ಟಣಕೆ ಬಂದನು
ಹೊಟ್ಟೆಗಿಲ್ಲದೆ ಬಳೆದನೀಗಲೆ ಒಬ್ಬನೆಂದೆನುತ
ಅಟ್ಟಡವಿ ಅರಣ್ಯದೊಳು ತಾ
ನಟ್ಟ ನೇಗಿಲ ಹೊಡೆವ ಸ್ತ್ರೀಯಳು
ಕೊಟ್ಟಣವ ಕೊಡ ನೀರ ಹೊಯ್ವಳು ನಿಟ್ಟು ಪಾಪದಲಿ

(೧ನೇ ಸಂಧಿ, ೮ನೇ ಷಟ್ಪದಿ)

ಮೇಲಿನ ಷಟ್ಪದಿಯನ್ನು ಗಮನಿಸಿದಾಗ ರೇವಣಸಿದ್ಧನನ್ನು ಕುರಿತು ಬೇರೆ ಕೃತಿಗಳು ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಿಂದ ಉದ್ಭವನಾದನೆಂದು ಹೇಳುತ್ತಿದ್ದರೆ, ಈ ಕೃತಿಯು ಆ ಪವಾಡವನ್ನು ಬಿಟ್ಟು ಜಟ್ಟೂರು ಹೆಸರಿನ ಗ್ರಾಮಕ್ಕೆ ಸಂಬಂಧಿಸಿದವನೆಂದು ಸೂಚಿಸುತ್ತದೆ.

ಆಚಿಗೊಂಡನ ಮನೆಗೆ ತೆರಳುತ
ವಾಚದಲಿ ಕುಳ್ಳಿರುವ ದೊರೆಗಳ
ಕಾಚಕಟ್ಟಲಿಕ್ಕಿಲ್ಲದರುವೆಯ ಹಾಗೆ ಮಾಡುವೆನು
ಈ ಚರಿತ್ರೆಯ ಬದುಕಿನವರನು
ಆಚಿಗೊಂಡನ ತೆಳಗೆ ನಡೆಸುವೆ
ಸೂಚನೆಯ ಮನೆಗಳನು ಕೇಳುತ ಬಂದ ಗುರುಸಿದ್ಧ

(೧ನೇ ಸಂಧಿ, ೧೪ನೇ ಷಟ್ಪದಿ)

ಮೇಲಿನ ಷಟ್ಪದಿಯಲ್ಲಿ ಜಟ್ಟೂರಿನ ಆಚಿಗೊಂಡ ಮತ್ತು ಬನದೇವಿ ದಂಪತಿಗಳ ಆಶ್ರಯದಲ್ಲಿ ರೇವಣಸಿದ್ಧ ಆಳಾಗಿ ನಿಂತು ಕೃಷಿ ಕಾರ್ಯ ಮಾಡಿದನೆಂದು ತಿಳಿಯುವುದು. ಕಾವ್ಯ ಮುಂದುವರೆದು ಬಿಜ್ಜಳನನ್ನು ಮದುವೆಯಾದ ರೇವನಸಿದ್ಧರಸಿ ಚಾಕೂರಿನ ಮಹಾಬಳ ಮತ್ತು ಜಕ್ಕಲೆಯರ ಮಗಳು, ಬಿಜ್ಜಳನ ಇನ್ನೊಬ್ಬ ಅರಸಿಯ ಹೆಸರು ಸೋಮತಿ, ಬೀಯುಳ್ಳಿ ಸಿದ್ಧನ ಗರ್ವ ಮುರಿದದ್ದು ಸಗರದಲ್ಲಿ ಎಂಬ ಚಾರಿತ್ರಿಕ ಅಂಶಗಳನ್ನು ಹಾಗೂ ಆತನ ಪವಾಡಗಳನ್ನು ವಿವರಿಸುವ ಘಟನೆಗಳನ್ನು ಪೂರಕವಾಗಿಟ್ಟುಕೊಂಡು ರಚಿಸಿದ ಈ ಕಾವ್ಯವು ಒಂದು ದೇಸೀ ಸಾಹಿತ್ಯ ನೆಲೆಯ ರೇವಣಸಿದ್ಧನ ನೆಲೆಯಾಗಿ ನಿಲ್ಲುವುದು. ಶುದ್ಧ ಚರಿತ್ರೆಯ ದೃಷ್ಟಿಯಿಂದ ಈ ಕಾವ್ಯ ಒಂದಿಷ್ಟು ಬೇರೆಯಾಗಿದ್ದರೂ ಹರಿಹರನ ರಗಳೆಯಲ್ಲಿರುವಂತೆ ರೇವಣಸಿದ್ಧನು ಕೊಲ್ಲಿಪಾಕಿಯಲ್ಲಿ ಲಿಂಗೋದ್ಭವನಾದ ಹಾಗೂ ಅಗಸ್ತ್ಯ ಸಂದರ್ಶನ ಮೊದಲಾದ ಘಟನೆಗಳು ಇಲ್ಲಿ ಕಾಣದಿರುವುದು ಮುಖ್ಯವೆನಿಸುತ್ತದೆ.

ಕವಿ ಮಲ್ಲಣ್ಣ ರೇವಣಸಿದ್ಧನ ಬಗೆಗೆ ತಾನು ಓದಿ ಕೇಳಿ ತಿಳಿದುಕೊಂಡಿದ್ದ ಘಟನೆಗಳನ್ನು ತನ್ನ ಪ್ರತಿಭೆಯಿಂದ ಕಾವ್ಯವಾಗಿಸಿದ್ದಾನೆ. ಆ ಮೂಲಕ ರೇವಣಸಿದ್ಧನನ್ನು ಆರಾಧಿಸಿದ್ದಾನೆ. ಕೃತಿಯ ಸಾಹಿತ್ಯಿಕ ಮಟ್ಟ ಸಾಧಾರಣವಾಗಿದ್ದರು ಈ ಕಾವ್ಯ ಕೆಲವು ಆಚಾರಗಳೆಡೆ ಗಮನ ಸೆಳೆಯುತ್ತದೆ. ಈ ಕಾರಣದಿಂದ ಕಾವ್ಯ ಪುರಾಣವಾಗಿ ಸೋತು ಚರಿತ್ರೆಯಾಗಿ ಗೆದ್ದಿದೆ. ಹಾಗೂ ಶಿಷ್ಟ ಕಾವ್ಯವಾಗಿ ಸೋತು ಜಾನಪದ ಕಾವ್ಯವಾಗಿ ಗೆದ್ದಿದೆ.

ಸಾಂದರ್ಭಿಕವಾಗಿ ಹರಿಹರ ರಚಿಸಿದ ರೇವಣಸಿದ್ಧನ ಕುರಿತಾದ ರಗಳೆಯನ್ನು ಇಲ್ಲಿ ಗಮನಿಸುವುದಾದರೆ ಮೂಲತಃ ಆಗಮ ಪರಂಪರೆಯ ಶುದ್ಧಶೈವ ಬ್ರಾಹ್ಮಣ. ಕನ್ನಡ ನಾಡಿನ ಸಂಕ್ರಮಣ ಕಾಲದ ವ್ಯಕ್ತಿಯಾಗಿದ್ದ ಕಾರಣ ಈತನು ಶರಣಧರ್ಮ, ಲೀನವಾಗುತ್ತಿದ್ದ ಸಿದ್ಧಪಂಥ(ನಾಥ) ಮತ್ತು ತನ್ನ ಶುದ್ಧ ಶೈವ ಧರ್ಮದೊಳಗಿನ ಶಿವಪರ ವ್ಯಕ್ತಿಗಳನ್ನು ಕುರಿತು ಸಾಹಿತ್ಯ ರಚಿಸಿದನು.[೪]

ಇವರಲ್ಲಿ ರೇವಣಸಿದ್ಧನ (ನಾಥ) ಸಿದ್ಧಪ್ರಜ್ಞೆ ಮತ್ತು ತನ್ನ ಶುದ್ಧ ಶೈವ ಪ್ರಜ್ಞೆಗಳ ಸಮನ್ವಯದಲ್ಲಿ ರಗಳೆಯನ್ನು ರಚಿಸಿದ ಹರಿಹರನ ಶುದ್ಧ ಶೈವವು ಆಚಾರ ಚಹರೆಯುಳ್ಳದ್ದು, ಹೀಗಾಗಿ ಭಕ್ತ ಪ್ರಜ್ಞೆಯ ರೇವಣ ಸಿದ್ಧನ ಚರಿತ್ರೆ ಹರಿಹರನ ಕೃತಿಯಲ್ಲಿ ಆಚಾರ್ಯ ಪ್ರಜ್ಞೆಯೆಡೆಗೆ ವಾಲಿತು.

ಈ ಕಾರಣದಿಂದಾಗಿ ಹರಿಹರ ಭಕ್ತ ಪ್ರಜ್ಞೆಯು ಜಟ್ಬೂರಿನ ಆಚಿಗೊಂಡನ ಪ್ರಸಂಗ, ಬೀಯಳ್ಳಿ ಸಿದ್ಧನು ಸಗರರಾಯನಿಂದ ಬೆಳ್ಳಿಯ ಗುಂಡಾದ ಪ್ರಸಂಗ, ಚಾಕೂರಿನ ಜಕ್ಕಲೆಯ ಪ್ರಸಂಗಗಳನ್ನು ಕೈಬಿಟ್ಟು ಕಲ್ಯಾಣದ ಗಾಣಿಗ ಕಲ್ಲಿಶೆಟ್ಟಿ ಪ್ರಸಂಗ, ಮಂಗಳವಾಡದಲ್ಲಿ ಬಿಜ್ಜಳನ ಅರಮನೆ ಉರಿದು ಸೈನ್ಯಕ್ಕೆ ಉಣಬಡಿಸಿದ ಪ್ರಸಂಗ, ಮಾಸನೂರಿನ ತಗಣಿಖಡ್ಗ ಪ್ರಸಂಗ, ಮಾಸನೂರಿನಲ್ಲಿ ಗೋರಕ್ಷಕನ ಗರ್ವಭಂಗಗೊಳಿಸಿ ಕನ್ಯಾಸೆರೆ ಬಿಡಿಸಿದ ಪ್ರಸಂಗಗಳನ್ನು ಉಳಿಸಿಕೊಂಡು ಹೊಸದಾಗಿ ಕೈಲಾಸದ ರೇಣುಕ ಗಣೇಶ್ವರನೆ ರೇವಣಸಿದ್ಧನಾಗಿ ಕೊಲ್ಲೀಪಾಕಿಯ ಸೋಮೇಶ್ವರಲಿಂಗದಲ್ಲಿ ಅಯೋನಿಜನಾಗಿ ಹುಟ್ಟಿ ಕೊನೆಯಲ್ಲಿ ಅಲ್ಲಿಯೇ ಐಕ್ಯನಾದ ಪ್ರಸಂಗ ಇತ್ಯಾದಿಗಳನ್ನು ರಗಳೆಯಲ್ಲಿ ಸೇರಿಸಿದ್ದಾನೆ.

ಭಕ್ತಪ್ರಜ್ಞೆಯ ರೇವಣಸಿದ್ಧ ಚರಿತ್ರೆ ಹಾಗೂ ಆಚಾರ ಪ್ರಜ್ಞೆಯ ರೇವಣಾಚಾರ್ಯ ಚರಿತ್ರೆಗಳನ್ನು ಹೋಲಿಸಿದರೆ ಚರಿತ್ರೆಯು ಅಲ್ಲಿ ಭಕ್ತರ ಐತಿಹ್ಯ (Legend)ಕ್ಕೆ ತಿರುಗಿದರೆ ಆಚಾರ್ಯಪುರಾಣವು (Myth)ಗೆ ತಿರುಗಿದೆ. ನೈಜ ಘಟನೆಗಳೇ ಆಗಿರಬಹುದಾದ ಜಟ್ಬೂರು, ಚಾಕೂರು, ಸಗರರಾಯನ ಪ್ರಸಂಗಗಳನ್ನು ಕೈಬಿಟ್ಟು ರಗಳೆ ರಚಿಸಿದ್ದು, ಹರಿಹರನ ಚರಿತ್ರೆಯ ವಿಮುಖತೆಗೆ ನಿದರ್ಶನವೆನಿಸುತ್ತದೆ. ಹಾವಿನಾಳ ಕಲ್ಲಯ್ಯನಿಗೆ ರುದ್ರಮುನಿ ದೀಕ್ಷೆ ನೀಡಿದುದನ್ನು ಹೇಳುವ ಮೂಲಕ ಹರಿಹರ ಚಾರಿತ್ರಿಕ ಪ್ರಜ್ಞೆ ಮೆರೆದಿದ್ದರೂ ಕೊಲ್ಲಿಪಾಕಿಯಲ್ಲಿ ರೇವಣಸಿದ್ಧ ಲಿಂಗೋದ್ಭವನಾದದ್ದು, ಲಂಕೆಯಲ್ಲಿ ಮೂರು ಕೋಟಿ ಲಿಂಗ ಸ್ಥಾಪಿಸಿದ್ದು, ಅಗಸ್ತ್ಯನ ಕೂಡ ಶಿವಗೋಷ್ಠಿಯಲ್ಲಿದುದು ಕಲ್ಪಿತ ಘಟನೆಗಳೆಂದು ಹೇಳಬಹುದು. ಇವುಗಳೆಲ್ಲ ರೇವಣಸಿದ್ಧ ಚರಿತ್ರೆಯ ಮುಂದಿನ ದಿನಗಳಲ್ಲಿ ಆಚಾರ್ಯಮುಖಿಯಾಗಿ ಬೆಳೆದುದರ ಬೀಜಗಳೆಂದು ಹೇಳಬಹುದು.[೪]

೩.೧.೫ ಸಿದ್ದಪ್ಪ ಮೇಟಿ ಜನಪದ ಹಾಲುಮತ ಮಹಾಕಾವ್ಯ

ಭಾರತವು ಅನೇಕ ಸಮುದಾಯ ಸಂಸ್ಕೃತಿಗಳ ಗುಚ್ಛ. ಇಲ್ಲಿಯ ಒಂದೊಂದು ಸಮುದಾಯ ದವರಿಗೆ ಅವರದೇ ಆದ ಐತಿಹಾಸಿಕ, ಚಾರಿತ್ರಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ ಹಿನ್ನೆಲೆಗಳಿರುವುದನ್ನು ಗಮನಿಸಬಹುದಾಗಿದೆ. ಇವುಗಳಲ್ಲಿ ಕುರುಬ ಸಮುದಾಯವೂ ಒಂದು. ಧರ್ಮ, ಇತಿಹಾಸ, ಆಚರಣೆ, ಸಂಪ್ರದಾಯದ ಮೂಲಕ ತನ್ನದೇ ಆದ ಮೌಖಿಕ ಪರಂಪರೆಯನ್ನು ಬೆಳೆಸಿಕೊಂಡಿವೆ. ಅವುಗಳಲ್ಲಿ ಮೈಲಾರಲಿಂಗನ ಕಾವ್ಯ, ಏಳುಕೊಳ್ಳದ ಯಲ್ಲಮ್ಮನ ಕಾವ್ಯ,

ಮಾಳಿಂಗರಾಯನ ಕಾವ್ಯ ಮೊದಲಾದವು ಮೌಖಿಕ ಪರಂಪರೆಯ ಕಾವ್ಯಗಳಾಗಿವೆ. ಈ ಕಾವ್ಯಗಳ ಪರಂಪರೆಗೆ ಸೇರುವ ಮಹತ್ವದ ಕಾವ್ಯವೆ ಜನಪದ ಹಾಲುಮತ ಕಾವ್ಯ.

ಜನಪದವು ಜನರ ಜೀವನಾಡಿಯಾದ ಮೌಖಿಕ ಸಾಹಿತ್ಯದ ಗತಕಾಲದ ಪರಂಪರೆಯ ಜೊತೆಗೆ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತದೆ. ಡೊಳ್ಳಿನಪದ, ಕೋಲಾಟದ ಪದ, ಮದುವೆ ಪದ, ಕಾವ್ಯ ಪುರಾಣಗಳು, ಒಗಟು, ಹೇಳಿಕೆಗಳು, ಕಾರಣೀಕಗಳು, ಸಾಹಿತ್ಯಿಕ ಆಕರಗಳಿಗೆ ಮೂಲವಾದರೆ; ಕಲೆ ಮತ್ತು ಆಚರಣೆಗಳು ಸಾಹಿತ್ಯೇತರ ಆಕರಗಳಾಗುತ್ತವೆ. ಇವುಗಳಲ್ಲಿ ಪೌರಾಣಿಕ ಮತ್ತು ಚಾರಿತ್ರಿಕ ಅಂಶಗಳು ಹಾಸುಹೊಕ್ಕಾಗಿವೆ. ಹಾಲುಮತದ ಜನಪದವನ್ನು ಅವಲೋಕಿಸಿದಾಗ ಶಾಂತಮುತ್ತಯ್ಯ, ರೇವಣಸಿದ್ಧ, ಸಿದ್ಧರಾಮ, ಬೀರಪ್ಪ, ಮಾಳಿಂಗರಾಯರಂಥವರು ಕೈಲಾಸದಿಂದ ಭೂಲೋಕಕ್ಕೆ, ಭೂಲೋಕದಿಂದ ಕೈಲಾಸಕ್ಕೆ ಓಡಾಡುತ್ತ ನೇರವಾಗಿ ಶಿವನೊಂದಿಗೆ ಸಂಪರ್ಕವುಳ್ಳವರಾಗಿದ್ದಾರೆ. ಇಂಥವರು ಭೂಲೋಕದಲ್ಲಿ ಪವಾಡ ಮೆರೆದವರಾಗಿದ್ದಾರೆ. ಈ ಕಾರಣಗಳಿಂದಾಗಿ ನಿಖರವಾದ ಚರಿತ್ರೆಯನ್ನು ಕೊಡುವಲ್ಲಿ ಮೌಖಿಕ ಆಕರಗಳು ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಈ ಸಾಲಿಗೆ ಜನಪದ ಹಾಲುಮತ ಕಾವ್ಯವು ಸೇರುವುದು.

ಜಾನಪದ ವಿದ್ವಾಂಸರಾದ ಡಾ.ವೀರಣ್ಣದಂಡೆಯವರು ಇದರ ಸಂಪಾದಕರು. ಈ ಕಾವ್ಯವನ್ನು ಹಾಡುತ್ತಿದ್ದ ಸಿದ್ಧಪ್ಪ ಮೇಟಿಯವರಿಂದ ಸುದೀರ್ಘವಾಗಿ ಹಾಡಿಸಿ ಸಂಗ್ರಹಿಸಿ ಸಂಪಾದಿಸಿದ್ದಾರೆ. ಜನಪದ ಹಾಲುಮತ ಮಹಾಕಾವ್ಯ ಅಧಿಕೃತವಾಗಿ ಹಾಲುಮತದ ಬಗ್ಗೆ ಮಾಹಿತಿಯನ್ನು ಒದಗಿಸುವ ಮೂಲ ಆಕರ. ಮೌಖಿಕ ಪರಂಪರೆಯಲ್ಲಿ ದೊರೆತ ಈ ಕೃತಿ ಒಂದು ಜನಪದ ಪುರಾಣ ಕೃತಿ. ಸುದೀರ್ಘವಾಗಿರುವ ಇಡೀ ಕೃತಿಯ ಕತೆಗೆ ಪೌರಾಣಿಕ ನೆಲೆಗಳೆ ಒಂದು ಅಲೌಕಿಕ ಹಾಸನ್ನು ಒದಗಿಸುತ್ತದೆ. ಪ್ರಸ್ತುತ ಈ ಕೃತಿ ಸಂಪೂರ್ಣವಾಗಿ ಡೊಳ್ಳಿನ ಹಾಡಿನ ರೂಪದಲ್ಲಿರುವ ಪದ್ಯಕೃತಿ. ಕೃತಿಯು ಶಾಂತಮುತ್ತಯ್ಯ, ರೇವಣಸಿದ್ಧ, ಸಿದ್ಧರಾಮ, ಬೀರಪ್ಪ, ಮಾಳಿಂಗರಾಯರಂಥ ಕೆಲವು ಚಾರಿತ್ರಿಕ ವ್ಯಕ್ತಿಗಳನ್ನು ಪರಿಚಯಿಸುತ್ತದೆ. ಬೀರಪ್ಪನು ಕಥೆಯ ಕೇಂದ್ರ ವ್ಯಕ್ತಿಯಾದರೂ ಈ ಮೇಲಿನ ಪಾತ್ರಗಳು ಪೂರಕವಾಗಿವೆ. ಜನಪದ ಹಾಲುಮತ ಮಹಾಕಾವ್ಯವು ಪೌರಾಣಿಕ ಕಲ್ಪನೆಯ ತಳಹದಿಯ ಮೇಲೆ ಹುಟ್ಟುಹಾಕಿದ ಸಂಸ್ಕೃತಿಯ ಫಲವಾಗಿದೆ. ಇಲ್ಲಿಯ ಸನ್ನಿವೇಶಗಳೆಲ್ಲ ಪೌರಾಣಿಕ ಹಾಗೂ ಜನಪದ ಆಶಯಗಳಿಂದ ತುಂಬಿದೆ. ಉದ್ದಕ್ಕೂ ಕತೆಯ ಎಳೆ ಒಮ್ಮೆ ಪೌರಾಣಿಕ ಆವರಣ ಪ್ರವೇಶಿಸಿದರೆ ಮರು ಹೆಜ್ಜೆಗೆ ಜಾನಪದ ಕ್ಷೇತ್ರ ಪ್ರವೇಶಿಸುತ್ತದೆ. ಹೀಗೆ ಕಾವ್ಯದುದ್ದಕ್ಕೂ ಸಾಮಾನ್ಯ ಜೀವನದ ಘಟನೆಗಳನ್ನು ಚಿತ್ತರಿಸುತ್ತಲೇ ಪೌರಾಣಿಕ ಅಂಗಳಕ್ಕೆ ಏರಿ ಹೋಗುತ್ತದೆ. ಕಾವ್ಯದ ಮುಖ್ಯ ನಾಯಕನಾದ ಬೀರಪ್ಪನು ಶಿವನ ಅವತಾರಿಯೇ ಆಗಿದ್ದು, ಅವನ ವಂಶಜನೆಂದೇ ಕಾವ್ಯ ಹೇಳುತ್ತದೆ. ಹಾಗಾಗಿ ಸಂಪೂರ್ಣ ಕಾವ್ಯವು ಶಿವನ ಲೀಲೆ ಎಂಬಂತೆಯೇ ಚಿತ್ರಿತವಾಗಿದೆ.

ಈ ಮಹಾಕಾವ್ಯದಲ್ಲಿ ಒಟ್ಟು ೧೪ ಅಧ್ಯಾಯಗಳಿದ್ದು, ೧೨ನೇ ಅಧ್ಯಾಯವು ಅಮೋಘಸಿದ್ಧನ ವೃತ್ತಾಂತ ಹಾಗೂ ೧೪ನೇಯ ಅಧ್ಯಾಯವು ಇತರ ಶರಣರ ವೃತ್ತಾಂತಗಳು ಎಂಬ ಶೀರ್ಷಿಕೆಯಲ್ಲಿ ವಿಸ್ತೃತಗೊಂಡಿದೆ. ಈ ಅಧ್ಯಾಯದಲ್ಲಿ ಸಗರದಲ್ಲಿ ವಾಸಿಸುವ ರೇವಣಸಿದ್ಧ; ಅಗಸನ ಹೆಂಡತಿಯಾದ ಹಾರೂರ ಗುಂಡವ್ವನನ್ನು ಪುನರ್ ಬದುಕಿಸಿದ ಪವಾಡವನ್ನು ಒಳಗೊಂಡಿದೆ. ಕುರುಬ ಸಮುದಾಯದ ಪ್ರಾಚೀನತೆ ಪರಂಪರೆ, ಆರಾಧ್ಯ ದೈವಗಳು, ಉದ್ಯೋಗ, ಆಚರಣೆಗಳು, ಜಾತ್ರೆ, ಉತ್ಸವಗಳ ವೈಶಿಷ್ಟ್ಯತೆಗಳನ್ನು ಹಾಗೂ ರೇವಣಸಿದ್ಧನ ಕೆಲ ವಿವರಗಳನ್ನು ತಿಳಿಸುತ್ತಿರುವುದರಿಂದ ಈ ಕಾವ್ಯವು ಸಾಂಸ್ಕೃತಿಕ ಮಹತ್ವನ್ನು ಪಡೆಯುತ್ತದೆ. ಒಟ್ಟಾರೆಯಾಗಿ ಜನಪದ ಹಾಲುಮತ ಕಾವ್ಯವು ತನ್ನ ಕಥಾ ಸ್ವರೂಪದಿಂದ, ಅಲೌಕಿಕತೆಯಿಂದ ಪೌರಾಣಿಕ ಮತ್ತು ಜನಪದೀಯ ಅಂಶಗಳಿಂದ ಮೌಖಿಕ ಪರಂಪರೆಯಲ್ಲಿ ಮಂಟೇಸ್ವಾಮಿ ಕಾವ್ಯ, ಮೈಲಾರಲಿಂಗನ ಕಾವ್ಯ, ಮಲೆಮಾದೇಶ್ವರ ಕಾವ್ಯ, ಜುಂಜಪ್ಪನ ಕಾವ್ಯ ಇವುಗಳ ಜೊತೆ ತನ್ನದೇ ಸ್ಥಾನ ಪಡೆದುಕೊಂಡು ಕರ್ನಾಟಕದ ಮೌಖಿಕ ಪರಂಪರೆಯ ಉನ್ನತಿಗೆ ಕಾರಣವಾಗಿರುವುದನ್ನು ಗಮನಿಸಬಹುದಾಗಿದೆ. ಹಾಗೆಯೇ ಹಾಲುಮತ ಸಂಪ್ರದಾಯದ ಆರಾಧ್ಯ ದೈವಗಳಲ್ಲಿ ಪ್ರಮುಖನಾದ ಬೀರಪ್ಪನ ವೃತ್ತಾಂತವನ್ನು ನಿರೂಪಿಸುವ ಮಹತ್ವದ ಆಕರಗ್ರಂಥವೂ ಇದಾಗಿದೆ.

೩.೧.೬ ಸಿದ್ಧಮಂಕ ಚರಿತೆ

ಸಿದ್ದಮಂಕ ಚರಿತೆ ಕೃತಿಯನ್ನು ಡಾ. ಎಂ.ಎಂ.ಕಲ್ಬುರ್ಗಿ ಮತ್ತು ಡಾ.ವೈ.ಸಿ.ಭಾನುಮತಿಯವರು ಕೃತಿಯ ಮೂಲ ಹಸ್ತ ಪ್ರತಿಯಿಂದ ಪರಿಷ್ಕರಿಸಿದ್ದಾರೆ. ಈ ಕೃತಿ ಲಿಂಗಾಯತ ಸಮಾಜ ಕುರುಬ ಸಮಾಜಗಳ ಏಕೀಕರಣವನ್ನು ಧ್ವನಿಸುವ ಪುರಾಣೀಕೃತ ಇತಿಹಾಸ ಕೃತಿಯಾಗಿದೆ. ಹಾಲುಮತದ ಶಿಷ್ಟ ಸಾಹಿತ್ಯದ ಮೊದಲ ಪುರಾಣ ಸಿದ್ಧಮಂಕ ಚರಿತೆ ಎಂದು ಡಾ.ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯಿಸಿದ್ದಾರೆ. ೧೭ನೇ ಶತಮಾನದ ಈ ಸಾಂಗತ್ಯ ಕೃತಿಯು ನಾಲ್ಕು ಸಂಧಿಗಳನ್ನು ಹೊಂದಿದೆ. ಕರ್ನಾಟಕದಲ್ಲಿ ಬೇಡರ ಬೇಟೆ ಸಂಸ್ಕೃತಿ, ಕುರುಬರ ಪಶುಪಾಲನಾ ಸಂಸ್ಕೃತಿ, ಲಿಂಗಾಯತರ ಕೃಷಿ ಸಂಸ್ಕೃತಿ ಎಂಬುದಾಗಿ ಮೂರು ಘಟ್ಟಗಳು ಬೆಳೆದು ಬಂದಿವೆ. ಈ ಘಟ್ಟಗಳಲ್ಲಿ ಕ್ರಮವಾಗಿ ಬೇಟೆಗೆ ಸಹಕಾರಿಯಾದ ನಾಯಿ ಲಾಂಛನವುಳ್ಳ ಭೈರವ, ಪಶುಪಾಲನೆಗೆ ಸಹಕಾರಿಯಾದ ನಾಯಿ ಲಾಂಛನವುಳ್ಳ ಮೈಲಾರ, ಕೃಷಿ ಕಾರ್ಯಕ್ಕೆ ಸಹಕಾರಿಯಾದ ನಂದಿ ಲಾಂಛನವುಳ್ಳ ಶಿವ ದೇವತೆಗಳು ಸೃಷ್ಟಿಯಾಗುತ್ತ ಬಂದಿವೆ. ಅಂದರೆ ಭೈರವನೇ ಮೈಲಾರನಾಗಿ, ಮೈಲಾರನೇ ಶಿವನಾಗಿ ಪರಿವರ್ತನೆಗೊಳ್ಳುತ್ತಾ ಬಂದಿದ್ದಾನೆ. ಈ ಕ್ರಮವನ್ನು ನೋಡಿದರೆ ಲಿಂಗವಂತರಿಗೆ ಹತ್ತಿರದ ಘಟ್ಟದವರಾಗಿದ್ದಾರೆ ಕುರುಬರು. ಹೀಗಾಗಿ ಈ ಎರಡೂ ಸಮುದಾಯಗಳಿಗೆ ರೇವಣಸಿದ್ದ ಗುರುವಾಗಿದ್ದಾನೆ. ಅಮುಗೀದೇವ, ಗೊಲ್ಲಾಳ ಮೊದಲಾದ ಕುರುಬ ಶರಣರು ಲಿಂಗಾಯತರಲ್ಲಿ ಕಂಡುಬರುತ್ತಾರೆ.[೫]

ಈ ಕೃತಿಯು ಪವಾಡ ರೀತಿಯಲ್ಲಿ ಸಿದ್ಧರಾಮನ (ಧೂಳಿ ಮಾಕಾಳನ) ಜನನ, ಶಿವನ ಹುಡುಕಾಟ, ಬರಡು ಕಪಿಲೆಯಿಂದ ಕರು ಹುಟ್ಟಿದ ದಿನ ಶಿವ ಪುನಃ ಬರುವ ಆಶ್ವಾಸನೆ. ಮಂಕು ಮರುಳನ ಜನನ, ಸಿದ್ಧರಾಮನ ಶಿಷ್ಯನಾಗಲು ಮಂಕು ಮರುಳ ಸರೂರು ಗ್ರಾಮದ ಕೋಡುಗಲ್ಲಿನ ಮೇಲೆ ಸೂಜಿಯೂರಿ ತಲೆಕೆಳಗಾಗಿ ಉಗ್ರ ತಪಸ್ಸು ಮಾಡಿದ, ರೇವಣ ಸಿದ್ಧರ ಸ್ಪರ್ಶದಿಂದ ಎಚ್ಚೆತ್ತ ಮಂಕಯ್ಯನು ರಾಜಧಾನಿಯಿಂದ(ಕಲ್ಯಾಣದಿಂದ) ಹೊರಗೆ ಏಳು ಬೇಲಿಯ ಒಳಗೆ ಕುರುಬ ಗೌಡ ಬದುಕಿದ್ದು, ಅವರು ಗ್ರಾಮದೊಳಗೆ ಸೇರುವಂತೆ ಮಾಡು ಎಂದು ಭಿನ್ನವಿಸುವ ಮಂಗಳವಾಡದ ಬಿಜ್ಜಳ ಕುರುಬರನ್ನು ಹೊರಹಾಕಿದ ತನ್ನ ತಪ್ಪನ್ನು ಒಪ್ಪಿಕೊಳ್ಳುವನು. ಸಿದ್ಧರಾಮ ಮಂಕ ತಂದೆಯ ಆದೇಶದಂತೆ ನಡೆದುಕೊಳ್ಳಲು ತಿಳಿಸಿ, ಶರಣರ ಮುಂದೆ ಕುರುಬರ ಹಣೆಗೆ ವಿಭೂತಿಯನ್ನಿತ್ತು ಹರಸಿದನು ಎಂಬ ಪ್ರಸಂಗಗಳನ್ನು ಒಳಗೊಂಡ ಈ ಕೃತಿಯು ಸಿದ್ಧರಾಮ ಚರಿತೆಯ ಸಂಕ್ಷಿಪ್ತ ಕಥಾಸಾರವಾಗಿದೆ.

ಲಿಂಗಾಯತ ಮತ್ತು ಕುರುಬ ಸಮಾಜಗಳ ಏಕೀಕರಣದ ಹಿನ್ನೆಲೆಯಲ್ಲಿ ಕುರುಬರ ಬೀರಪ್ಪ–ವೀರಗಾರ, ಲಿಂಗಾಯತರ–ವೀರಭದ್ರ–ಪುರವಂತ ಸಂಪ್ರದಾಯಗಳಲ್ಲಿ ವಿಶೇಷ ಹೋಲಿಕೆಗಳಿರುವುದನ್ನು ಗಮನಿಸಬಹುದಾಗಿದೆ. ಲಿಂಗಾಯತರು ಮತ್ತು ಹಂಡೆ ಕುರುಬರನ್ನು ಬೇರ್ಪಡಿಸಿ ಹೇಳಲಾಗದಂತಹ ಏಕೀಕರಣವಾದುದನ್ನು ಹಾಗೂ ಒಡೆಯರು ಈ ಎರಡೂ ಸಮಾಜದಲ್ಲಿ ಗುರುಗಳಾಗಿರುವುದನ್ನು ಗಣನೆಗೆ ತೆಗೆದುಕೊಳ್ಳಬಹುದಾಗಿದೆ. ಇಂತಹ ವಿಶೇಷ ಸಂಕ್ರಮಣ ಸಂದರ್ಭದ ಘಟನೆಗಳನ್ನು ಸಿದ್ಧಮಂಕ ಚರಿತೆ ಮೂಲವಾಗಿರಿಸಿಕೊಂಡಿದೆ. ಈ ಕಾರಣದಿಂದ ಈ ಕೃತಿಯ ಕುರುಬ ಸಮಾಜವನ್ನು ಪ್ರತಿನಿಧಿಸುವ ರೇವಣಸಿದ್ಧ, ಸಿದ್ಧರಾಮ, ಮಂಕಯ್ಯ ತಂದೆ ಹೆಗ್ಗೇಗೌಡರು ಮತ್ತು ಲಿಂಗಾಯತ ಸಮಾಜವನ್ನು ಪ್ರತಿನಿಧಿಸುವ ಬಸವಾದಿ ಶರಣರು ಏಕೀಕರಣಗೊಳ್ಳುವ ಕ್ರಿಯೆಯಲ್ಲಿ ಕಥೆಯಾಗಿ ಬೆಳೆದಿದೆ. ಭಂಡಾರ ಸಂಸ್ಕೃತಿಯಿಂದ, ವಿಭೂತಿ ಸಂಸ್ಕೃತಿಗೆ ಹೊರಳುವ ಸಿದ್ಧ ಪಂಥೀಯರು ಶರಣಧರ್ಮೀಯರಾಗುವ ಕ್ರಿಯೆ ಪರೋಕ್ಷವಾಗಿ ಇಲ್ಲಿ ಕಾಣಿಸುವುದು ಉದಾಹರಣೆಗೆ ಅಲ್ಲಮಪ್ರಭು ಕಾರಣವಾಗಿ ಸಿದ್ಧರಾಮ, ಸಿದ್ಧರಾಮ ಕಾರಣವಾಗಿ ಮಂಕಯ್ಯ ತಂದೆ, ಶರಣ ಸಂಸ್ಕೃತಿಗೆ ಹೊರಳಿದ ಎರಡು ಘಟನೆಯ ಸಂಯುಕ್ತ ಸಂಪುಟವಾಗಿದೆ.[೬] ಈ ಸಿದ್ಧಮಂಕ–ಚರಿತೆ ಸಿದ್ಧರಾಮನ ಚರಿತೆಯೆಂದು ಈ ಕೃತಿಯಲ್ಲಿ ಕರೆದಿದ್ದರೂ ಇದು ನಿಜ ಅರ್ಥದಲ್ಲಿ ಮಂಕಯ್ಯ ತಂದೆ ಚರಿತ್ರೆಯೂ ಆಗಿದೆ.

ಕುರುಬ ಜನಾಂಗವು ಮತಾಂತರ ಪ್ರಕ್ರಿಯೆಗೆ ಒಳಗಾಗುವ ಮತ್ತು ಒಂದು ಕುಲವು ತನ್ನ ನೆಲೆಯನ್ನು ಭದ್ರಪಡಿಸಿಕೊಂಡು ಸಮಾಜದಲ್ಲಿ ಗುರುತಿಸಿಕೊಳ್ಳುವ ಹೋರಾಟ, ೧೨ನೆಯ ಶತಮಾನದ ಶರಣರ ಒಳಜಗಳ, ಬಸವಣ್ಣನ ಸಮ್ಮುಖದಲ್ಲಿ ನ್ಯಾಯ ನಿರ್ಣಯ ಮೊದಲಾದ ಘಟನೆಗಳು ಈ ಕೃತಿಯಲ್ಲಿ ಗಮನ ಸೆಳೆಯುತ್ತವೆ. ಒಟ್ಟಾರೆ ಕುಲಭೇದ, ನಿರಾಕರಣೆ ಇಲ್ಲಿ

ಕೇಂದ್ರ ಪ್ರಜ್ಞೆಯಾಗಿದೆ. ಸಂಪ್ರದಾಯಗಳಿಗೆ ಒಳಪಟ್ಟ ಜನಸಮ್ಮುಖ ನಿರ್ಧಾರ, ನಿರ್ಣಯಗಳು ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಪರಿಚಯಿಸುತ್ತದೆ.[೭]

೩.೧.೨ ತಗರು ಪವಾಡ

ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಕೃತಿಗಳು ಪುರಾಣೀಕೃತಗೊಂಡಿವೆ. ಕೆಲವು ಮಾತ್ರ ಚರಿತ್ರೆಯ ಭಾಗವಾಗಿವೆ. ಉದಾಹರಣೆಗೆ ಪಂಪಭಾರತವು ಪುರಾಣದ ಚರಿತ್ರೀಕರಣವಾದರೆ; ಸಿದ್ಧರಾಮ ಚಾರಿತ್ರವು ಚರಿತ್ರೆಯ ಪುರಾಣೀಕರಣವಾಗಿದೆ. ಡಾ.ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಡಾ.ಎಫ್.ಟಿ.ಹಳ್ಳಿಕೇರಿಯವರು ಸಂಪಾದಿಸಿ, ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಿತ ತಗರ ಪವಾಡ ಕೃತಿಯು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರಿದ ಕೃತಿಯಾಗಿದೆ. ಇಂತಹ ಕೃತಿಗಳ ಅಧ್ಯಯನವೆಂದರೆ; ಸಾಹಿತ್ಯದಲ್ಲಿ ಇತಿಹಾಸವನ್ನೂ; ಆ ಇತಿಹಾಸದಲ್ಲಿ ಸಂಸ್ಕೃತಿಯನ್ನು ಹುಡುಕುವುದೇ ಆಗಿದೆ.

ತಗರ ಪವಾಡ ಕೃತಿಯು ನೇರವಾಗಿ ಕುರುಬ ಸಮಾಜಕ್ಕೆ ಸಂಬಂಧಿಸಿದ ಒಂದು ಪ್ರಾಚೀನಕೃತಿ. ಕುರುಬರ ಗುರು ಶಾಂತಮುತ್ತಯ್ಯನ ಚರಿತ್ರೆಯನ್ನು ಹಾಗೂ ಅದರೊಳಗಿನ ಕುರುಬರ ಸಂಸ್ಕೃತಿಯನ್ನು ಹೇಳುವ ಈ ಕೃತಿಯು ಸ್ಥಳೀಯ ಚರಿತ್ರೆಯ ಅಧ್ಯಯನಕ್ಕೆ ತುಂಬಾ ಮಹತ್ವದ ಆಕರವಾಗುವುದು. ಗದುಗಿನ ಶ್ರೀ ತೋಂಟದಾರ್ಯ ಮಠದ ಪ್ರಕಾಶನದಲ್ಲಿ ಹೊರತಂದ ಸಿದ್ಧಮಂಕ ಚರಿತೆಯೂ ಕೂಡ; ತಗರ ಪವಾಡ ಕೃತಿಯಲ್ಲಿರುವಂತೆ ಸತ್ತ ಕುರಿಯನ್ನು ಹಾಲಿನ ಕಂಬಿಯ ಮೇಲೆ ಹೊತ್ತು ತಂದು ಬದುಕಿಸುವ ವಿಷಯವನ್ನಾಧಾರಿತ ಸಾಂಗತ್ಯ ಕೃತಿ. ಈ ಎರಡೂ ಕೃತಿಗಳಲ್ಲಿನ ವಿಷಯ ಒಂದೇ ಆಗಿದ್ದರೂ, ಕುರುಬ ಸಮಾಜದ ಎರಡು ಭಿನ್ನ ಸಂಪ್ರದಾಯಗಳ ಚರಿತ್ರೆಗಳು ಇಲ್ಲಿ ಒಡಮೂಡಿ ಈ ಪೈಕಿ ತಗರ ಪವಾಡ ಕೃತಿಯು ಶಾಂತಮುತ್ತಯ್ಯನ ಸಂಪ್ರದಾಯದೆಡೆ ಬೆಳಕು ಚೆಲ್ಲಿದೆ.

ದೇಸೀ ಸಾಹಿತ್ಯ ಕೃತಿಗಳನ್ನು ಅವಲೋಕಿಸಿದಾಗ, ಅದರಲ್ಲೂ ಸಮಾಜದ ಕೆಳವರ್ಗದ ಸಾಮಾನ್ಯ ಸಾಂಸ್ಕೃತಿಕ ನಾಯಕನನ್ನು ಕುರಿತದ್ದಾದರೆ, ಆ ಕೃತಿಯು ಲಿಖಿತದಿಂದ ಮೌಖಿಕಕ್ಕೆ, ಮೌಖಿಕದಿಂದ ಲಿಖಿತಕ್ಕೆ ಬದಲಾಗುತ್ತಲೇ ಇರುವ ಕಾರಣ , ಕೃತಿಯು ಅನೇಕ ಹೆಸರುಗಳನ್ನು, ಕಾಲ ಕಾಲದಲ್ಲಿ ಪಡೆಯುತ್ತಾ ಹೋಗುವುದು. ತಗರ ಪವಾಡ ಕೃತಿಯು ಇದಕ್ಕೆ ಹೊರತಾಗಿಲ್ಲ. ಈ ಕೃತಿಯ ಲಭ್ಯವಾಗಿರುವ ಮೂರೂ ಹಸ್ತ ಪ್ರತಿಗಳಲ್ಲಿ ಆರಂಭದ ಸಾಲುಗಳು ಹಾಳಾಗಿರುವುದರಿಂದ, ಕೃತಿನಾಮ ಲಭ್ಯವಾಗಿರುವುದಿಲ್ಲ. ತಗರು ಬದುಕಿಸಿದ ಪವಾಡ ಕೃತಿಯ ಕೇಂದ್ರ ವಸ್ತುವಾಗಿರವುದರಿಂದಲೂ ಹಾಗೂ ಸಾಮಾನ್ಯವಾಗಿ ಎಲ್ಲ ಜನರು ಈ ಕಾವ್ಯವನ್ನು ತಗರ ಪವಾಡ ವೆಂದು ಕರೆಯುವುದರಿಂದ ಈ ಕೃತಿಯನ್ನು, ತಗರ ಪವಾಡ ಎಂದು

ಹೆಸರಿಸಬಹುದಾಗಿದೆ ೬. ಈ ಕೃತಿಯನ್ನು ರೇವಣಸಿದ್ದೇಶ್ವರ ಮಹಾತ್ಮೆ ಮತ್ತು ರೇವಣಸಾಂಗತ್ಯ ತಗರ ಪವಾಡ ಎಂದೂ ಕರೆಯಲಾಗಿದೆ. ಈ ಕೃತಿಯಲ್ಲಿ ಕುರುಬರ ಗುರು ಶಾಂತಮುತ್ತಯ್ಯನ ಚರಿತ್ರೆಯನ್ನು; ಈ ಚರಿತ್ರೆಯಲ್ಲಿ ಸೇರಿಕೊಂಡಿರುವ ಕುರುಬ ಸಂಸ್ಕೃತಿಯನ್ನು ಅಭ್ಯಸಿಸುವುದೇ ಆಗಿದೆ. ಈ ಕೃತಿಯನ್ನು ಒಬ್ಬ ನಿರ್ದಿಷ್ಟ ಕವಿ ಬರೆದಿದ್ದರೂ ಲಿಖಿತ ಮತ್ತು ಮೌಖಿಕ ಕ್ರಿಯೆಗೆ ಒಳಪಟ್ಟು ಕವಿಯ ಹೆಸರು ಬಿಟ್ಟು ಹೋಗಿದೆ. ಎರಡನೇ ಸಂಧಿಯ ಮೊದಲ ಪದ್ಯದಲ್ಲಿ ವಿವರಿಸಿದ ಕೇಳ್ದ ಸಿದ್ದೇಶ ಎಂಬುದಾಗಿರುವುದರಿಂದ ಸಿದ್ಧೇಶ ಎಂಬುವವನು ಕೃತಿಕಾರನಾಗಿರ ಬಹುದಾಗಿದೆ.

ಈ ಕೃತಿಯ ಕೇಂದ್ರ ವ್ಯಕ್ತಿ ಶಾಂತಯ್ಯ. ಎಂಟು ಸಂಧಿಗಳ ಈ ಕಾವ್ಯದ ಪ್ರಾರಂಭದಲ್ಲಿ ಪೂರ್ವಜರ ಜೀವನ ಕಥನವನ್ನು ಬಿಟ್ಟರೆ ಶಾಂತಯ್ಯನ ಜೀವನ ಮೂರನೇಯ ಸಂಧಿಯ ಉತ್ತರಾರ್ಧದಿಂದ ಆರಂಭವಾಗುತ್ತದೆ. ಅವನ ಮುಂದಿನ ಜೀವನದಲ್ಲಿ ಸರೂರಿನ ಲಿಂಗ ದೀಕ್ಷೆ ಮತ್ತು ಕಲ್ಯಾಣದ ತಗರ ಪವಾಡ ವಿಜಯ ಘಟನೆಗಳು ಮುಖ್ಯವೆನಿಸುತ್ತವೆ.

ಲಿಂಗಧೀಕ್ಷೆ ಸಂದರ್ಭದಲ್ಲಿ ರೇವಣಸಿದ್ಧಯ್ಯ ಶಾಂತಮುತ್ತಯ್ಯ ಸಂಬಂಧ, ತಗರ ಪವಾಡ ಸಂದರ್ಭದಲ್ಲಿ ಬಸವಣ್ಣ ಶಾಂತಮುತ್ತಯ್ಯ ಸಂಬಂಧ ಮುಖ್ಯವೆನಿಸುತ್ತವೆ. ಈ ಎರಡೂ ಸಂದರ್ಭಗಳು ಕುರುಬ ಹಾಗೂ ಶರಣ ಸಮಾಜಗಳ ಸಾಮರಸ್ಯವನ್ನು ಧ್ವನಿಸುತ್ತವೆ. ಇದಕ್ಕೆ ನಿದರ್ಶನವೆನ್ನುವಂತೆ ರೇವಣಸಿದ್ಧನು ಕುರುಬರಿಗೂ, ಲಿಂಗಾಯತರಿಗೂ ಪೂಜನೀಯನಾಗಿದ್ದಾನೆ. ಅಂತೆಯೇ ಸಿದ್ಧರಾಮ, ಅಮೋಘಿಸಿದ್ಧ, ಗೊಲ್ಲಾಳ ಮೊದಲಾದವರು ಎರಡೂ ಸಮಾಜಗಳಲ್ಲಿ ತುಂಬ ಮುಖ್ಯರೆನಿಸಿದ್ದಾರೆ. ಹಂಡೆ ಕುರುಬರು ಈ ಕಾರಣದಿಂದಾಗಿ ಲಿಂಗಾಯತರಾಗಿ ಬೆಳೆದಿದ್ದಾರೆ. ಈ ಎರಡೂ ಸಂಪ್ರದಾಯಗಳಲ್ಲಿನ ಕೆಲವು ಧಾರ್ಮಿಕ ಆಚರಣೆಗಳು ಬಹು ಮುಖ್ಯವೆನಿಸುತ್ತವೆ. ಅಂದು ಶಾಂತಮುತ್ತಯ್ಯನಿಗೆ ರೇವಣಸಿದ್ಧ ನೀಡಿದ ಲಿಂಗಧೀಕ್ಷೆ ಪ್ರಚಲಿತದಲ್ಲಿರುವ ಕಳಸ ಹೂಡುವುದೇ ಆಗಿದೆ. ಈ ಕಳಸಗಳು ಆಚಾರ್ಯರನ್ನು ಸಂಕೇತಿಸುವುದು ಮುಂದುವರೆದು ಧೀಕ್ಷಾ ಪ್ರಸಂಗದ ವಿಭೂತಿ ಧಾರಣೆ, ಮಂತ್ರಬೋಧನೆ, ಲಿಂಗಾಂಗಿ ಶಬ್ದಗಳ ಬಳಕೆಗಳು ಮತಾಂತರದ ಇಲ್ಲವೆ ಗುರು ಕರುಣೆಯ ಸಾಂಕೇತಿಕಗಳಾಗಿವೆ.

ಈ ಕೃತಿಯಲ್ಲಿ ಬರುವ ಬಸವ, ಬಿಜ್ಜಳ, ಕಿನ್ನರಿ ಬೊಮ್ಮಯ್ಯ ಮೊದಲಾದವರು ಆ ಕಾಲದ ಪ್ರಸಿದ್ಧರೇ ಆಗಿದ್ದಾರೆ. ಕೃತಿಯಲ್ಲಿ ಬಸವಣ್ಣನನ್ನು ಕುರಿತು ಸಂಭೋಧಿಸುವಾಗ ಬಳಸಿದ ನಾಮ ವಿಶೇಷಣಗಳನ್ನು ನೋಡಿದಾಗ ಕೃತಿಯಲ್ಲಿ ಶಾಂತಯ್ಯನನ್ನು ಬಿಟ್ಟರೆ ಎದ್ದು ಕಾಣುವ ವ್ಯಕ್ತಿತ್ವವುಳ್ಳವನು ಬಸವಣ್ಣನಾಗಿದ್ದಾನೆ. ಶಾಂತಯ್ಯನಿಗೆ ಪವಾಡ ಮೆರೆಯಲು ನೈತಿಕ ಬಲ ನೀಡುವ ವ್ಯಕ್ತಿಯಂತೆ ಆತನ ಹಣೆಗೆ ವಿಭೂತಿಯನ್ನು ಹಚ್ಚಿ ಪವಾಡ ವಿಜಯವನ್ನು ಗೈಯ್ಯುವಂತೆ

ಹಾರೈಸುತ್ತಾನೆ. ಪವಾಡದ ನಂತರ ಶಾಂತಯ್ಯನ ಅಪೇಕ್ಷೆಯಂತೆ ಕಲ್ಯಾಣದಿಂದ ಹೊರಹಾಕಲ್ಪಟ್ಟಿದ್ದ ಕುರುಬರನ್ನೆಲ್ಲ ಒಳ ಕರೆದು ಭಸಿತವನಿಟ್ಟು ಸುಖದಿಂದಿರಿ ಹಾಲುಮತದವರೆನಿಸಿ (೫–೩೭) ಎಂದು ಹೇಳಿ, ಕ್ಷೀರ ಕುಲಕೆ ನೀನು ಒಡೆಯನಾಗು ಎಂದು ಶಾಂತಯ್ಯನನ್ನು ಹಾರೈಸುತ್ತಾನೆ. ಅಲ್ಲದೆ ಗುರುವೀತ ನಮಗೆ ಶಾಂತಯ್ಯ (೭–೪೨) ಎಂದು ಘೋಷಿಸಿ, ಮೂರೇಣಿನ ಕಂಥೆಯನ್ನು ಕುರುಹಾಗಿ ನೀಡುವನು. ಈ ಕುರುಹು ಕುರುಬ ಕುಲಕ್ಕೆ ಸಾಮಾಜಿಕ ಘನತೆಯ ಧ್ಯೋತಕವಾಗಿದೆ.

ತಗರು ಪವಾಡ ಕೃತಿಯಲ್ಲಿ ಕುರುಬರಿಗೆ ಸಂಬಂಧಿಸಿದ ಸಂಪ್ರದಾಯಗಳು ನೇರವಾಗಿ ಉಲ್ಲೇಖಿತವಾಗಿವೆ. ಉದಾಹರಣೆಗೆ ಪದ್ಮಗೊಂಡನ ರಾಕ್ಷಸಿ ಹೆಂಡತಿಯ ಮಕ್ಕಳು ಉಣ್ಣೀ ಕಂಕಣದವರೆನಿಸಿಕೊಂಡರೆ ಪದ್ಮಗೊಂಡನ ಇನ್ನೊಬ್ಬ ಹೆಂಡತಿ ಲಿಂಗಮ್ಮನ ಮಕ್ಕಳು ಹತ್ತಿ ಕಂಕಣದವರೆನಿಸಿಕೊಂಡಿದ್ದಾರೆ. ಈ ಹತ್ತಿಕಂಕಣದವರು ಉಣ್ಣೆಕಂಕಣದವರಿಗಿಂತ ಶ್ರೇಷ್ಠರಾಗಿರುವರೆಂಬ ಭಾವನೆಯನ್ನು ಇಲ್ಲಿ ಗಮನಿಸಬಹುದಾಗಿದೆ. ಕುರುಬ ಸಮಾಜದವರು ಯಾವುದೇ ಕಂಕಣಕ್ಕೆ ಸೇರಿದವರಾಗಿದ್ದರೂ ಅಂದು ಬಸವಣ್ಣ ದಯಪಾಲಿಸಿದ ಮೂರೇಣಿನ ಕಂತೆಯೇ ಇಂದಿಗೂ ಶ್ರೇಷ್ಠವಾಗಿರುವುದು.

ರೇವಣಸಿದ್ಧನಿಗೆ ಅರ್ಪಿಸುವ ಮೂರೇಣಿನ ಕಂತೆಯ ಸೇವೆಯು ಇಂದಿಗೂ ಕಂಥಾಧಾರಣ ಸೇವೆ ಎಂಬ ಹೆಸರಿನಿಂದ ಪ್ರಚಲಿತದಲ್ಲಿವೆ. ರೇವಣಸಿದ್ಧನಿಗೆ ಅರ್ಪಿಸುವ ಕಂತೆಯನ್ನು ಕುರುಬ ಸಮಾಜದವರು ಅತ್ಯಂತ ಶ್ರದ್ಧಾ ಭಕ್ತಿಯಿಂದ ತಯಾರಿಸುವರು. ಕಂತೆಯ ತಯಾರಿಕೆಗಾಗಿ ಅಚ್ಚಕುರಿಯ ಉಣ್ಣೆ (ಕಂತೆ ಕುರಿ ಉಣ್ಣೆ) ಯನ್ನು ಮೊದಲು ವಿಧಿವಿಧಾನದಿಂದ ಪೂಜಿಸಿ ನಿಯುಕ್ತರಾದವರಿಂದ ಕತ್ತರಿಸಿ ಮಡಿಯಿಂದ ತಂದು ಕೈಯಿಂದಲೇ ನೂಲು ತೆಗೆದು ಉತ್ಸವದೊಂದಿಗೆ ರೇವಣಸಿದ್ಧನಿಗೆ ಅರ್ಪಿಸುತ್ತಾರೆ. ಇಂದಿಗೂ ರೇವಣಸಿದ್ಧನ ಅನೇಕ ನೆಲೆಗಳಲ್ಲಿ ಕಂಥಾಧಾರಣ ಸೇವೆ ಪ್ರಚಲಿತದಲ್ಲಿರುವುದನ್ನು ಗಮನಿಸಬಹುದಾಗಿದೆ. ಇಂತಹಾ ವಿಶೇಷವಾದ ಕುರುಬ ಸಮಾಜದ ಉತ್ಸವ ಇಲ್ಲಿ ಎಡೆಪಡೆದಿದೆ. ತಗರು ಪವಾಡದಲ್ಲಿನ ಈ ಬಗೆಗಿನ ವಿವರಣೆಯಲ್ಲಿ ಆ ಕಾಲದ ಕುರುಬ ಸಮುದಾಯದ, ಸಾಂಸ್ಕೃತಿಕ, ಆಹಾರ ಸೇವನೆಯ ದಿನನಿತ್ಯದ ಬದುಕಿನ ಚಿತ್ರಣಗಳನ್ನು ನಾವು ಗಮನಿಸಬಹುದಾಗಿದೆ.

ಈ ಕಾರಣದಿಂದಾಗಿ ತನ್ನದೇ ಆದ ಮಿತಿಯಲ್ಲಿ ಕೃತಿಯು ಆ ಕಾಲದ ಸಾಂಸ್ಕೃತಿಕ ಚಿತ್ರಣವನ್ನು ಕಟ್ಟಿಕೊಡುತ್ತದೆ. ಈ ಕಾರಣದಿಂದಾಗಿ ಇಂತಹ ದೇಸೀ ಕೃತಿಗಳು ಸಾಮಾಜಿಕ ಏಕೀಕರಣ, ಸಂಸ್ಕೃತಿಯ ಪ್ರತಿಪಾದನೆ ದೃಷ್ಟಿಯಿಂದ ಬಹು ಮುಖ್ಯವೆನಿಸುತ್ತವೆ.

ಭಾರತದಲ್ಲಿ ಸಮಾಜ ಮತ್ತು ಧರ್ಮಗಳ ನಡುವಿನ ಬಂಧ ಬಿಡಿಸಲಾರದ್ದು. ಸಮಾಜೋ ಧಾರ್ಮಿಕ ವ್ಯವಸ್ಥೆಯೇ ಸಂಸ್ಕೃತಿಯಾಗಿದೆ. ಈ ಕೃತಿಯಲ್ಲಿ ಇಂತಹಾ ಸಂಸ್ಕೃತಿಯ ಕೆಲವು ಆಕೃತಿಗಳು ಒಡಮೂಡಿವೆ.

ಸಿದ್ಧಮಂಕ ಚರಿತ್ರೆಯಲ್ಲಿ ಸಿದ್ಧರಾಮನಿಗೆ, ತಗರು ಪವಾಡದಲ್ಲಿ ರೇವಣಸಿದ್ಧನಿಗೆ ಪ್ರಾಶಸ್ತ್ಯ. ಈ ಕಾರಣದಿಂದಾಗಿ ರೇವಣಸಿದ್ಧ ಸಂಪ್ರದಾಯ ಮತ್ತು ಸಿದ್ಧರಾಮ ಸಂಪ್ರದಾಯ ಎಂಬ ಎರಡು ಕವಲುಗಳಾಗಿರಬಹುದು. ಕಾರಣ ಶೈವ(ನಾಥ) ಪಂಥೀಯನಾದ ರೇವಣಸಿದ್ಧ ಬಸವ ಪಂಥದ ಲಿಂಗಾಯಿತನಾದುದು ಸಂದೇಹ. ಆದರೆ ಶೈವನಾಥ ಪಂಥೀಯನಾದ ಸಿದ್ಧರಾಮ ಲಿಂಗಾಯಿತನಾದುದು ಸ್ಪಷ್ಟ.

ಈ ಸೂಕ್ಷ್ಮ ವ್ಯತ್ಯಾಸವು ರೇವಣಸಿದ್ಧ ಪರಂಪರೆಯ ಶಾಂತಮುತ್ತಯ್ಯ, ಸಿದ್ಧರಾಮ ಪರಂಪರೆಯ ಮಂಕಸಿದ್ಧರಲ್ಲಿರುವಂತೆ ಕಾಣುತ್ತದೆ. ಹೀಗಿದ್ದೂ ಕಾವ್ಯದಲ್ಲಿ ಶಾಂತಮುತ್ತಯ್ಯ ಮತ್ತು ಬಸವಣ್ಣ ಪರಸ್ಪರ ಗೌರವಿಸುವುದನ್ನು ಗಮನಿಸಿದಾಗ. ರೇವಣಸಿದ್ಧನ ತಲೆಮಾರಿನಲ್ಲಿ ಲಿಂಗಾಯತವಾಗದ ಕುರುಬ ಸಮಾಜ ಶಾಂತಮುತ್ತಯ್ಯ ತಲೆಮಾರಿನಲ್ಲಿ ಆಗಿರುವ ಸಾಧ್ಯತೆ ಇದೆ.[೯]

೩.೨ ದಾಖಲಾತ್ಮಕ ಆಕರಗಳು

೩.೨.೧ ಶಾಸನಗಳು

ಶಾಸನಗಳು ಕಾವ್ಯ ಪುರಾಣಗಳಂತೆ ಕಲ್ಪನೆ ನಿಷ್ಠ ರಚನೆಗಳಲ್ಲ, ಅವು ಸ್ಥಳೀಯ ಮಹಾಜನರ ಸಾಕ್ಷಿಯಲ್ಲಿ ಬರೆದ ಅಂದಂದಿನ ನೈಜ ಘಟನೆಯ ದಾಖಲೆಗಳು. ಅವುಗಳಲ್ಲಿ ಸಂಬಂಧಪಟ್ಟ ವ್ಯಕ್ತಿಯ ಬಗ್ಗೆ ಒಂದಿಷ್ಟು ಪ್ರಶಂಸೆ ಇರಬಹುದಾದರೂ, ಜರುಗಿದ ಸತ್ಯ ಘಟನೆ ಮಾತ್ರ ಅಲ್ಲಿ ದಾಖಲಾಗಿರುತ್ತದೆ. ಹೀಗಾಗಿ ವಿಶ್ವಾಸಾರ್ಹ ಆಕರಗಳೆಂದು ಶಾಸನಗಳು ಪರಿಗಣಿಸಲ್ಪಡುತ್ತವೆ.

ರೇವಣಸಿದ್ಧನಿಗೆ ಸಂಬಂಧಿಸಿದಂತೆ ಹಲವು ದಾಖಲೆಗಳು ಚರ್ಚಿಸುತ್ತವೆ. ಅವುಗಳಲ್ಲಿ ಶಾಸನಗಳು, ಸಾಹಿತ್ಯಿಕ ಕೃತಿಗಳು, ಜಾನಪದ ಹಾಡು, ಆಚರಣೆಗಳು ಪ್ರಮುಖವಾಗಿವೆ. ಇವುಗಳ ಮೂಲಕ ರೇವಣಸಿದ್ಧ ಪರಂಪರೆಯ ಧಾರ್ಮಿಕ, ಸಾಮಾಜಿಕ ವಿಧ್ಯಮಾನಗಳನ್ನು ಚರ್ಚೆಗೆ ಒಳಪಡಿಸಬಹುದಾಗಿದೆ. ದಾಖಲೆಗಳಲ್ಲಿ ಅಧಿಕವಾಗಿ ಶಾಸನ ಸಾಹಿತ್ಯ ಮತ್ತು ವಿರಳವಾಗಿ ಸನ್ನದು, ಕೈಪಿಯತ್ತು, ಕಡತ, ಬಖೈರು, ನಾಮೆಗಳನ್ನು ಗುರ್ತಿಸಬಹುದು. ಈ ದಾಖಲು ಸಾಹಿತ್ಯಗಳನ್ನು ಪ್ರಧಾನ ದಾಖಲು ಸಾಹಿತ್ಯ ಮತ್ತು ಗೌಣ ಸಾಹಿತ್ಯವೆಂದು ಡಾ. ಕೆ.ರವೀಂದ್ರನಾಥ್ ರವರು ವಿಭಾಗಿಸಿ ಪ್ರಧಾನ ಆಕರಗಳಲ್ಲಿ ಶಾಸನಗಳನ್ನು ಮತ್ತು ಕಡತ, ಬಿನ್ನವತ್ತಳೆ, ದಿನಚರಿ, ಕೈಪಿಯತ್ತು.... ಇತ್ಯಾದಿಗಳನ್ನು ಗೌಣ ಸಾಹಿತ್ಯ ಆಕರಗಳೆಂದು ಕರೆದಿದ್ದಾರೆ.

೩.೨.೧.೧ ಸರೂರು ಶಾಸನಗಳು

ಶಾಂತಮುತ್ತಯ್ಯನ ಕಾರ್ಯಕ್ಷೇತ್ರ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮ. ಈ ಗ್ರಾಮದ ಮಲ್ಲಿಕಾರ್ಜುನ (ರೇವಣಸಿದ್ಧ) ದೇವಾಲಯದ ಆವರಣದಲ್ಲಿಯ ಕ್ರಿ.ಶ. ೧೨೦೮ರ

ಶಾಸನದಲ್ಲಿ ಮಂಕಯಂಗಳಿಗೆ ಮಲ್ಲಿನಾಥ ರಾಮವಂಬನು ಸಂನಿಧಾನದಲು ಎಂಬ ಹಾಗೂ ಕ್ರಿ.ಶ. ೨೦೧೦ರ ಶಾಸನದಲ್ಲಿ ಅರಸನ ಹಳ್ಳಿಯ ವೀರನಗೌಡರ ಅನಗುಂದ ಬೀಚಗುರು ತಂನಮಗ ಕಾಲದಾ ಗುರುವಿಗೆ ಮಲ್ಲಿನಾಥ ದೇವರು ಸ್ಥಾನವಧಾರಾ ಪೂರ್ವಕ ಮಾಡಿಕೊಟ್ಟರು ಎಂಬ ವಾಕ್ಯಗಳು ಕುರುಬರ ಪರಂಪರೆಯಲ್ಲಿ ಸಿದ್ಧರಾಮೇಶ್ವರನ ಅನುಯಾಯಿಯಾದ ಸಿದ್ಧಮಂಕನ ಬಗೆಗೆ ತಿಳಿಸುತ್ತದೆ. ಈ ಉಲ್ಲೇಖಗಳಿಂದ ೧೨-೧೩ನೇ ಶತಮಾನಗಳಲ್ಲಿ ಮಲ್ಲಿಕಾರ್ಜುನ ದೇವಾಲಯವು ಸಿದ್ಧರಾಮನ ಅನುಯಾಯಿಗಳ ಕೇಂದ್ರವಾಗಿರುವ ಸಾಧ್ಯತೆಗಳಿವೆ. ತಗರು ಪವಾಡ ಮೆರೆದ ಶಾಂತಮುತ್ತಯ್ಯನು ಕುರುಬರ ಕುಲಗುರುವಾಗಿ ಇಲ್ಲಿ ಪೂಜಿಸಲ್ಪಡುತ್ತಾನೆ. ಪೂರಕವಾಗಿ ಸರೂರು ಸಂಪ್ರದಾಯ ಎಂಬ ಗೋತ್ರವು ಕುರುಬರಲ್ಲಿದೆ. ಈ ನೆಲೆಯಲ್ಲಿ ಸರೂರು ಕ್ಷೇತ್ರವು ಹಾಲುಮತದ ಸಾಂಸ್ಕೃತಿಕ ಮಹತ್ವಉಳ್ಳದ್ದಾಗಿದೆ.

೩.೨.೧.೨ ತುರುವೇಕೆರೆ ಶಾಸನ

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಕೇಂದ್ರದಲ್ಲಿರುವ ಶ್ರೀ ರೇವಣಸಿದ್ಧೇಶ್ವರ ಮಠದಲ್ಲಿ ದೊರೆತ ತಾಮ್ರ ಶಾಸನವು ವಿಜಯನಗರದ ದೊರೆಗಳಾದ ವೀರಪ್ರತಾಪ ರಾಮರಾಜಯ್ಯ ಸದಾಶಿವರಾಯ ವೆಂಕಟಾದ್ರಿರಾಜ ಇವರುಗಳ ಸಮುಖದಲ್ಲಿ ವಿವಿಧ ಮಠದ ಮುಖ್ಯಸ್ಥರುಗಳು, ಸಮಾಜದ ಹಿರಿಯರುಗಳ ನೇತೃತ್ವದಲ್ಲಿ ನಡೆದ ಕುರುಬರಿಗೆ ಗುರುಗಳಾರು ಎಂಬ ವಾದ ವಿವಾದದಲ್ಲಿ ಶಾಂತಯ್ಯ ಗೆದ್ದು ಮಂಕನನ್ನು ಸೋಲಿಸಿ ಕೊನೆಗೆ ಹಾಲುಮತಕ್ಕೆ ಶಾಂತಯ್ಯನೆ ಗುರು ಎಂದು ಸಭೆ ನಿರ್ಣಯಿಸುವ ವಿಷಯವನ್ನು ತಿಳಿಸುತ್ತದೆ. ಈ ಶಾಸನವನ್ನು ಸರಿ ಸುಮಾರು ೧೮ನೇ ಶತಮಾನದಲ್ಲಿ ನಕಲು ಮಾಡಿರುವ ಸಾಧ್ಯತೆಗಳಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಶಾಸನದಲ್ಲಿ ಶಾಂತಮುತ್ತಯ್ಯನು ಸಿದ್ಧಮಂಕನನ್ನು ಗೆದ್ದ ಪ್ರಸ್ತಾಪ ತಿಳಿದುಬರುವುದು. ಇಂದಿಗೂ ಕುರುಬರ ಗುರು ಒಡೆಯರಲ್ಲಿ ರೇವಣಸಿದ್ಧೇಶ್ವರರ ಅನುಯಾಯಿಗಳಾದ ಶಾಂತೊಡೆಯರು, ಸೊಲ್ಲಾಪುರದ ಸಿದ್ಧರಾಮನ ಅನುಯಾಯಿಗಳಾದ ಮಂಕೊಡೆಯರು, ಅಮೋಘಸಿದ್ದೇಶ್ವರನ ಅನುಯಾಯಿಗಳಾದ ಅಮೋಘಿ ಒಡೆಯರು ಎಂಬ ಪಂಗಡಗಳಿವೆ. ಈ ಮೇಲಿನ ತಾಮ್ರ ಶಾಸನವು ಕುರುಬರಿಗೆ ಶಾಂತೊಡೆಯರೇ ಗುರುಗಳು ಎಂಬುದನ್ನು ತಿಳಿಸುತ್ತದೆ.

೩.೨.೧.೩ ಕೊಟ್ಟೂರು ಶಾಸನ

ಕ್ರಿ.ಶ. ೧೫೮೦ರ ಈ ಕಾಲಮಾನದ ಈ ಶಾಸನವು ಕುರಿತೆರಿಗೆಯ ಬಗೆಗೆ ತಿಳಿಸುವುದು. ರಾಮರಾಜಯ್ಯನ ಮಗನಾದ ಮಾದಿನಾಯಕನು ತನ್ನ ತಂದೆ ತಾಯಿಯರಿಗೆ ಒಳ್ಳೆಯದಾಗಲೆಂದು: ಆ ಕಾಲದಲ್ಲಿ ಕೊಟ್ಟೂರು ಸೀಮೆಯ ಕುರುಬರಿಗೆ ವಿಧಿಸುವ ಕುರಿ ತೆರಿಗೆಯನ್ನು ದಾನಬಿಡುವ ವಿವರಗಳನ್ನು ಹೊಂದಿದೆ.

ಆ ಶಾಸನದ ಭಾಗ ಹೀಗಿದೆ. ಕೊಟ್ಟೂರು ಸೀಮೆಯ ಕುರುಬರ ಕುಲ ಸಿದ್ಧಪ್ಪ ಒಡೆಯರ ಮಕ್ಕಳು, ಸಿದ್ಧಪ್ಪ ಒಡೆಯರಿಗೂ ಅಳಿಯ ರೇವಣ್ಣ ಒಡೆಯರಿಗೂ, ಅಚ್ಯುತ್ತಪ್ಪ ಒಡೆಯರಿಗೂ. ಲಿಂಗಣ್ಣ ಒಡೆಯರಿಗೂ; ಬಾಗುಳಿಯ ಗೋಪನಗೌಡ ಮಗ ಚಿಕ್ಕಣ್ಣಗೌಡ ಗುರುವನಗೌಡ ಇವರು ಮುಂತಾದ ಕೊಟ್ಟೂರು ಸೀಮೆಯ ಸಮಸ್ತ ಕುರುಬ ಪ್ರಜೆಗಳಿಗೆ ಕೊಟ್ಟ ಧರ್ಮಶಾಸನದ ಪಟ್ಟಿಯ ಕ್ರಮವೆಂತೆಂದರೆ ನಾವು ಆದವನಿ ಹತ್ತಿನಾವಳಿತದ ಪಾಂಡ್ಯನಾಡ ಕೋಗಳಿ ವೇಂಠೆಮಕ್ಕೆ ಸಲುವ ಕೊಟ್ಟೂರು ಸೀಮೆಯೊಳಗಣ, ಗ್ರಾಮಗಳಿಗೆ ಇಂತಹಾ ಕುರುಬ ವಕ್ಕಲುಗಳು ಅರಮನೆಗೆ ತೆರುವಂತಾ ಕುರಿದೆರಿಗೆಯನು, ಪಕ್ಕದ ಸಮಯ ಪ್ರಸಂಗಗಳು ಬಂದು ಮಹಾ ಪರ್ವದಾ ಪುಣ್ಯಕಾಲದಲ್ಲು ಶ್ರೀಬಾಗುಳಿಯ ಕಲ್ಲಿನಾಥದೇವರ ಸನ್ನಿಧಿಯಲ್ಲಿ ನಮ್ಮ ಗುರುಸ್ವಾಮಿಗೂ ಮಾತಾಪಿತೃಗಳಿಗೂ ಪುಣ್ಯವಾಗಬೇಕೆಂದು ನಿಮ್ಮ ಸಮಸ್ತ ಪ್ರಜೆಗಳಿಗೆ ನಿಮ್ಮ ಪುತ್ರಪಾತ್ರ ಪರಂಪರೆಯಾಗಿ ಸರ್ವಸಾಮಾನ್ಯವಾಗಿ ನಡೆದ ಹಾಗೆ ಆ ಕುರಿದೆರಿಗೆಯನ್ನು ಬಿಟ್ಟು ಧರ್ಮಧಾರೆಯ ನೆರೆದು ಕೊಟ್ಟೆವು. ಈ ಕುರಿದೆರಿಗೆಯನ್ನು ಮಾನ್ಯಮಾಡಿ ಬಿಟ್ಟಂಥ ಧರ್ಮವನು. ನಾವು ನಮ್ಮ ಸ್ವಾನುರುಚಿಯಿಂದಲೂ ಪ್ರವಚಾಒಡಂಬಟ್ಟು ಕೊಟ್ಟ ಕುರಿದೆರಿಗೆಯ ಸರ್ವಮಾನ್ಯವಾಗಿ ಬಿಟ್ಟ ಧರ್ಮಶಾಸನ ಕಲ್ಲು.[೧೦]

ಈ ಶಾಸನದಲ್ಲಿ ಬರುವ ಒಡೆಯರು ಎಂಬುದು ಹಾಲುಮತದ ಗುರುಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಉಪ ಪಂಗಡವಾಗಿದೆ. ಮಧ್ಯ ಕರ್ನಾಟಕದಲ್ಲಿ ಇಂದಿಗೂ ಈ ಒಡೆಯರ ಮನೆತನಗಳಿವೆ. ಇವರು ಸಸ್ಯಾಹಾರಿಗಳಾಗಿದ್ದು ಕುರುಬರ ಹುಟ್ಟು, ಸಾವು ಮತ್ತು ಮಂಗಳಕಾರ್ಯಗಳ ಪೌರೋಹಿತ್ಯವನ್ನು ವಹಿಸಿಕೊಳ್ಳುತ್ತಾರೆ. ಇಲ್ಲಿ ಉಲ್ಲೇಖವಾಗಿರುವ ಸಿದ್ಧಪ್ಪ, ರೇವಣ್ಣ, ಲಿಂಗಪ್ಪ ಮುಂತಾದ ವ್ಯಕ್ತಿನಾಮಗಳು ಕುರುಬರಲ್ಲಿ ಈಗಲೂ ಕಂಡುಬರುತ್ತವೆ.

ಕೊಟ್ಟೂರು ಸೀಮೆಯ ಕುರುಬಕುಲ ಬಸಪ್ಪ ಒಡೆಯರ ಮಕ್ಕಳು ಸಿದ್ಧಪ್ಪ ಒಡೆಯರಿಗೂ ಅಳಿಯ ರೇವಣ ಒಡೆಯರಿಗೂ, ಸಮಸ್ತ ಕುರುಬ ಪ್ರಜೆಗಳಿಗೆ ಕೊಟ್ಟ ಧರ್ಮಶಾಸನ ಎಂಬ ಉಲ್ಲೇಖವು ಒಡೆಯರನ್ನು ಚರ್ಚಿಸುತ್ತದೆ.

೩.೨.೧.೪ ಗಾದಿಗನೂರು ತಾಮ್ರಶಾಸನಗಳು

ಗಾದಿಗನೂರು ಗ್ರಾಮವು ಹೊಸಪೇಟೆ ಬಳ್ಳಾರಿ ಮುಖ್ಯ ರಸ್ತೆಯಲ್ಲಿ ಹೊಸಪೇಟೆಯಿಂದ ೩೦.೦೦ ಕಿ.ಮೀ. ದೂರದಲ್ಲಿರುವುದು. ಗ್ರಾಮದಲ್ಲಿ ಪುರಾತನ ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಶ್ರೀ ರೇವಣಸಿದ್ಧೇಶ್ವರ ಮಠವಿದೆ. ಆ ಗ್ರಾಮದ ಸಿದ್ದಯ್ಯಸ್ವಾಮಿ ಒಡೆಯರ ಎಂಬುವವರ ಮನೆಯಲ್ಲಿದ್ದ ಅಪ್ರಕಟಿತ ೩ ತಾಮ್ರ ಪತ್ರಗಳನ್ನು ಡಾ. ಎಫ್.ಟಿ.ಹಳ್ಳಿಕೇರಿ ಅವರು ಶೋಧಿಸಿದ್ದಾರೆ. ಶ್ರೀಮಠಕ್ಕೆ ೧೮೬೭ರಲ್ಲಿ ಸಣ್ಣಸಿದ್ಧಯ್ಯನವರು ಒಡೆಯರಾಗಿದ್ದರು ಹಾಗೂ ಇವರು ಮೂಲತಃ ದೇವಲಾಪುರದವರು. ಸಣ್ಣಸಿದ್ದಯ್ಯನವರ ತಂದೆ ಬಸಪ್ಪ, ಆತನಿಗೆ ತಿಮ್ಮಪ್ಪ,

ಹಿರೇಸಿದ್ಧಪ್ಪ ಮತ್ತು ಸಣ್ಣಸಿದ್ಧಪ್ಪ ಎಂಬ ಮೂವರು ಮಕ್ಕಳಿರುವ ಸಂಗತಿ ಈ ತಾಮ್ರಪತ್ರಗಳಿಂದ ತಿಳಿದುಬರುತ್ತದೆ. ಗಾದಿಗನೂರು ದೇವಲಾಪುರಗಳು ವಿಜಯನಗರ ಪ್ರದೇಶದಲ್ಲಿದ್ದುದರಿಂದ ವಿದ್ಯಾನಗರ ಸಂಸ್ಥಾನ ಮತ್ತು ವಿದ್ಯಾನಗರ ಸರಕಾರ ಎಂದು ಪ್ರಾರಂಭವಾಗುತ್ತವೆ.

೩.೨.೧.೪.೧ ತಾಮ್ರಪತ್ರ

ಈ ತಾಮ್ರಪತ್ರವು ೧೮೬೨ರಲ್ಲಿ ರಚನೆಗೊಂಡಿದೆ. ಹಾಗೂ ಈ ತಾಮ್ರ ಪತ್ರವು ಒಳಗೊಂಡಿರುವ ವಿಷಯಗಳನ್ನು ಡಾ.ಎಫ್.ಟಿ.ಹಳ್ಳಿಕೇರಿಯವರು ಹೀಗೆ ಕ್ರೋಢೀಕರಿಸಿದ್ದಾರೆ. ೧೮೬೨ರಲ್ಲಿ ಗಾದಿಗನೂರು ಶ್ರೀ ರೇವಣಸಿದ್ಧೇಶ್ವರ ಮಠದ ಅಧಿಪತಿಗಳಾದವರು ದೇವಲಾಪುರದ ಸಣ್ಣಸಿದ್ಧಯ್ಯನವರು. ಚಿತ್ರಕಲ್ಲು ದೊಡ್ಡಯ್ಯ, ಗುತ್ತಿ ತಿಮ್ಮಯ್ಯ, ಯರೂರು ಮಲ್ಲಯ್ಯ, ಗದ್ವಾಲಿ ರಾಮಯ್ಯ, ಹಿರೇಸಮುದ್ರದ ನಂಬೆಣ್ಣ, ಹೊಸಪೇಟೆಯ ಲಿಂಗಣ್ಣ, ಊರುಕುಂದಿ ಹೇಮಯ್ಯ, ರಾಯದುರ್ಗದ ಹುಚ್ಚಯ್ಯ ಹಾಗೂ ವಂದವಾಗಲ ಬೀರಯ್ಯ ಮುಂತಾದ ಸಮಸ್ತ ದೇವಾಚಾರದವರು ಒಡೆಯರ ಸಣ್ಣಮುದ್ದಯ್ಯನವರಿಗೆ ಕಾಣಿಕೆ ಕೊಡುವ ಕುರಿತು ವಿಜ್ಞಾಪನೆ ಮಾಡಿಕೊಂಡ ವಿವರಗಳಿವೆ. ಹಾಲುಮತಸ್ತ ಜನರ ಪೈಕಿ ಸಂಡೂರು ಕರಿಬಸಣ್ಣನು ಈ ಒಡೆಯರಿಗೆ ಪ್ರತೀ ವರ್ಷ ಒಣಮಗ್ಗ ಒಂದಕ್ಕೆ ಒಂದು ರೂಪಾಯಿ, ಎಂಟು ಎತ್ತಿನ ಕಮತಕ್ಕೆ ೧೪ ಗಿದ್ದನ ದವಸ, ಮೂರು ಕುಯ್ಲಿಗೆ ಒಂದು ಕುರಿ, ಒಂದು ಲಗ್ನಕ್ಕೆ ೫ ಟೆಂಕೆ ರೊಕ್ಕವನ್ನು ಕೊಡಬೇಕು. ಈ ವಿವಿಧ ಕಾಣಿಕೆಗಳನ್ನು ಒಡೆಯರು ಓಲೆ ಬರೆದ ಪ್ರಕಾರ ಮಾಘಮಾಸದಲ್ಲಿ ಸಮಸ್ತ ಹಾಲುಮತಸ್ತ ಜನರು ಒಡೆಯರಿಗೆ ಕೊಡಬೇಕು. ಈ ಪ್ರಕಾರ ಸಮಸ್ತ ದೈವಾಚಾರದವರು ಪ್ರತೀ ವರ್ಷ ತಪ್ಪದೆ ನಡೆದುಕೊಳ್ಳಬೇಕು. ಈ ಪತ್ರವನ್ನು ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್‌ಹಃ ಶಾಲಿವಾಹನ ಶಕ ವರ್ಷಂಗಳು ೧೭೯೪ ರಲ್ಲಿ ಬರೆಸಲಾಗಿದೆ.

೩.೨.೧.೪.೨ ತಾಮ್ರಪತ್ರ

ಈ ತಾಮ್ರಪತ್ರವು ೨೯ನೇ ಜನವರಿ ೧೮೭೧ ರಂದು ಬರೆದುದಾಗಿದೆ. ಈ ತಾಮ್ರ ಪತ್ರವು ೨೦ ಸಾಲುಗಳನ್ನು ಹೊಂದಿದೆ. ಆರಂಭದಲ್ಲಿ ವಿದ್ಯಾನಗರ ಸರ್ಕಾರ ಎಂದಿದೆ. ನಂತರದಲ್ಲಿ ಒಡೆಯರ ಬಸಪ್ಪನ ಮಕ್ಕಳು ತಿಮ್ಮಪ್ಪ, ಹಿರೇಸಿದ್ಧಪ್ಪ ಮತ್ತು ಸಣ್ಣಸಿದ್ಧಪ್ಪ, ಇವರಲ್ಲಿ ಸಣ್ಣಸಿದ್ಧಪ್ಪನು ಪ್ರಬೋಧೂತ ಸಂವತ್ಸರ (೧೭೯೨)ದ ವಿವರಗಳಿವೆ.

ಆ ವಿವರಗಳು ಇಂತಿವೆ. ೧. ಪೂರ್ವದ ಹಿರಿಯರಂತೆ ನಡೆದುಕೊಳ್ಳುತ್ತಾ ಬರಬೇಕೆಂದು ಸೂಚಿಸಲಾಗಿದೆ ೨. ಕುಲದವರಿಂದ ಕಾಣಿಕೆ ತೆಗೆದುಕೊಳ್ಳುತ್ತ ಕುಲ ಮತಾಚಾರ ಪದ್ಧತಿಗೆ ವಿರೋಧವಾಗದಂತೆ   ನಡೆದುಕೊಳ್ಳಬೇಕು. ೩.ಸ್ವಾಮಿರಾವ್ ಮಜುಂದಾರ್ ಎಂಬುವವರ ಉಲ್ಲೇಖ ಹೊಂದಿದೆ.(ಬಹುಶಃ ಈತ ಸ್ಥಾನಿಕ ಅಧಿಕಾರಿ ಅಥವಾ ದಳವಾಯಿ ಆಗಿರಬಹುದಾಗಿದೆ)

೪.ವೆಂಕಟರಾಮರಾಜನು ಆನೆಗೊಂದಿ ಸಂಸ್ಥಾನದಲ್ಲಿ ಪ್ರಧಾನಿಯಾಗಿದ್ದನೆಂದು ಬನವಾಸಿ ಸ್ಥಳದ ಕೈಪಿಯತ್ತು ತಿಳಿಸುತ್ತದೆ.

೩.೨.೧.೪.೩ ತಾಮ್ರಪತ್ರ

ಎರಡನೆ ತಾಮ್ರ ಪತ್ರದಲ್ಲಿಯ ವಿಷಯವನ್ನೆ ಈ ತಾಮ್ರ ಪತ್ರವು ಹೊಂದಿದ್ದು ಕಾಲದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿದೆ. ಸಣ್ಣ ಸಿದ್ಧಪ್ಪನು ಅರ್ಜಿ ಸಲ್ಲಿಸಿದ ಕಾಲ ಅಂಗೀರ ಸನಾಮ ಸಂವತ್ಸರ (೧೭೯೪) ದ ಆಶ್ವೀಜ ಶುದ್ಧ. . . . . . ಒಂದು ಕೊನೆಯಲ್ಲಿ ಕುಮಾರ ರಾಘವ ರಾಜ ದೇವನ ಉಲ್ಲೇಖವಿದೆ.

ಈ ಮೇಲಿನ ಮೂರು ತಾಮ್ರ ಪತ್ರಗಳು ಗಾದಿಗನೂರು ಶ್ರೀ ರೇವಣಸಿದ್ದೇಶ್ವರ ಮಠದ ಗುರುಗಳಾದ ಒಡೆಯರ ಸಣ್ಣಸಿದ್ಧಪ್ಪನಿಗೆ ಸಂಬಂಧಿಸಿದ ವಿವರಗಳನ್ನು ನೀಡುತ್ತವೆ. ಪರಂಪರಾನುಗತ ವಾಗಿ ಈಗಲೂ ಈ ಮನೆತನದ ಒಡೆಯರೇ ಗಾದಿಗನೂರು ಮಠದ ಗುರುಗಳಾಗಿದ್ದಾರೆ. ಶ್ರೀ ಸಿದ್ಧಯ್ಯಸ್ವಾಮಿ ಒಡೆಯರ್ ಎಂಬುವವರು ಪ್ರಸ್ತುತ ಗುರುಗಳಾಗಿದ್ದಾರೆ. ಹಾಗೂ ಗಾದಿಗನೂರು ಸುತ್ತಮುತ್ತಲಿನ ಹಳ್ಳಿಯ ಕುರುಬರ ಮನೆತನಗಳು ಶ್ರೀಮಠದ ವ್ಯಾಪ್ತಿಗೆ ಬರುತ್ತವೆ.

೩.೨.೨ ತಾಮ್ರದ ಗುರುತಿನ ಬಿಲ್ಲೆಗಳು

ಒಡೆಯರುಗಳಿಗೆ ಗುರುತನದ ಹಕ್ಕುಗಾರಿಕೆಯನ್ನು ವಹಿಸಿಕೊಟ್ಟ ವಿವರಗಳನ್ನು ಒಳಗೊಂಡಂತಹುಗಳು ಈ ತಾಮ್ರದ ಗುರುತಿನ ಬಿಲ್ಲೆಗಳು. ಈ ಬಿಲ್ಲೆಗಳಲ್ಲಿ ಒಡೆಯರ ಹೆಸರು ಮತ್ತು ಊರು ಗುರುತನದ ಹಕ್ಕುಗಾರಿಕೆಯನ್ನು ನೀಡಿದ ದಿನಾಂಕ ಇತ್ಯಾದಿ ವಿವರಗಳಿರುತ್ತವೆ. ಅಂತಹ ಎರಡು ಬಿಲ್ಲೆಗಳು ದೇವಲಾಪುರದ ಸಿದ್ಧಯ್ಯನವರ ಮನೆಯಲ್ಲಿವೆ. ದೇವನಾಗರಿ ಲಿಪಿಯಲ್ಲಿರುವ ಆ ಬಿಲ್ಲೆಗಳ ವಿವರಗಳು ಕೆಳಗಿನಂತಿವೆ.

ತಾಮ್ರದ ಬಿಲ್ಲೆಯ ಮೇಲೆ ಒಡೆಯರ ಮತ್ತು ಊರಿನ ಹೆಸರು ಹಾಗೂ ಗುರುತನದ ಹಕ್ಕುಗಾರಿಕೆಯನ್ನು ವಹಿಸಿಕೊಟ್ಟ ದಿನಾಂಕ ಇತ್ಯಾದಿ ವಿವರಗಳಿರುತ್ತವೆ. ಈ ಬಿಲ್ಲೆಗಳನ್ನು ಒಡೆಯರುಗಳು ಭಕ್ತರ ಮನೆಗೆ ಧಾರ್ಮಿಕ ಕಾರ್ಯಗಳಿಗೆ ಹೋಗುವಾಗ ಅಥವಾ ಜನಾಂಗದ ಸಾಮಾಜಿಕ, ಧಾರ್ಮಿಕ ಕಾರ್ಯಗಳ ಸಂದರ್ಭದಲ್ಲಿ ಇವುಗಳನ್ನು ಕೈರಟ್ಟೆಗೆ ಕಟ್ಟಿಕೊಂಡು ಹೋಗುವುದು ವಾಡಿಕೆಯಾಗಿದೆ.

ಇಂತಹಾ ಎರಡು ಬಿಲ್ಲೆಗಳು ದೇವಲಾಪುರದ ಸಿದ್ಧಯ್ಯನವರ ಮನೆಯಲ್ಲಿ ದೊರೆತಿವೆ. ಈ ಬಿಲ್ಲೆಗಳ ಮೇಲಿನ ವಿವರಗಳನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಈ ತಾಮ್ರಪತ್ತದ ಬಿಲ್ಲೆಗಳಲ್ಲಿ ನಮೂದಾಗಿರುವ ವಿವರಗಳಿಂದ ಗುರುಪರಂಪರೆ ಹಾಗೂ ಸಂಸ್ಕೃತಿಯ ಬಗೆಗಿನ ಹೊಸ ಸಂಗತಿಗಳನ್ನು ತಿಳಿಯಬಹುದಾದ ಆಕರಗಳಾಗಿವೆ.

೩.೨.೨.೧ ತಾಮ್ರ ಚಪ್ಪಡ (ಬಿಲ್ಲೆ)

ಶ್ರೀ

ಶ್ರೀ ರೇವಣಸಿದ್ಧೇಶ್ವರ

ಹಾಲುಮತಾಚಾರ

ಸರೂರು ಮಠದ

ಬಸವಯ್ಯನವರು

ನವಂಬರ ೭ ಸನ್ (೧೮೬೨) ೧೭೮೪

ಸಾ.ದೇವಲಾಪುರ, ತಾಲ್ಲೂಕು ಹೊಸಪೇಟೆ, ಬಳ್ಳಾರಿ ಜಿಲ್ಲೆ

೩.೨.೨.೨ ತಾಮ್ರ ಚಪ್ಪಡ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಶಿವನಿಗ್ರಾಮ ಶ್ರೀ ರೇವಣಸಿದ್ಧೇಶ್ವರ ಸಿಂಹಾಸನದ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ; ಪ್ರಸ್ತುತ ಶ್ರೀ ಅಜ್ಜಪ್ಪ ಒಡೆಯ ವಂಶಸ್ಥರಾದ ಶ್ರೀ ರೇವಣ್ಣ ಒಡೆಯರರವರ ಮನೆಯಲ್ಲಿ ತರೆತಲಾಂತರದಿಂದ; ಧಾರ್ಮಿಕ ಆಚರಣೆಯಲ್ಲಿ ಉಪಯೋಗಿಸುತ್ತಿರುವ ತಾಮ್ರದ ಚಪ್ಪಡವು ದೊರೆಯಿತು. ಈ ಚಪ್ಪಡವು ಒಡೆಯರುಗಳಿಗೆ ಕುರುಬ ಸಮಾಜದ ಧಾರ್ಮಿಕ ಕಾರ್ಯಕ್ರಮಗಳ ನೇತೃತ್ವವನ್ನು ವಹಿಸಿಕೊಳ್ಳುವ ಮತ್ತು ಮತ ಸಂಬಂಧಿ ಕುಲಾಚಾರಗಳನ್ನು ನಡೆಸಿಕೊಂಡು ಹೋಗುವ ಧಾರ್ಮಿಕ ಹಕ್ಕನ್ನು ನೀಡಿದ ತಾಮ್ರಬಿಲ್ಲೆಯಾಗಿದೆ. ಶ್ರೀ ಶ್ರೀ ಶ್ರೀ ಜಗದ್ಗುರು ಶ್ರೀ ರೇವಣಸಿದ್ಧೇಶ್ವರಸ್ವಾಮಿ ಶಿವನೆ ಸವುಸ್ತಾನಂ ಹಾಸನಾಧೀಶ್ವರ ೧೦೦೮ ಸದ್ಗುರು ಮಠಾಧಿಪತಿ ವಡೆಯ ಎಂದು ತಾಮ್ರದ ಚಪ್ಪಡದಲ್ಲಿ ಬರೆಯಲಾಗಿದೆ. ಈ ಚಪ್ಪಡವು ತಲಾತಲಾಂತರದಿಂದ ತಮ್ಮ ಮನೆಯಲ್ಲಿರುವುದಾಗಿ ಆಕಾಲದಿಂದ ಇಲ್ಲಿಯವರೆಗೂ ಕುರುಬರ ಧಾರ್ಮಿಕ ಆಚರಣೆ ಹಾಗೂ ರೇವಣಸಿದ್ಧನ ಆಚರಣೆ, ಜಾತ್ರೆ, ಮಹೋತ್ಸವಗಳಲ್ಲಿ ಕೈಗೆ ಕಟ್ಟಿಕೊಂಡು ನೆರವೇರಿಸುತ್ತಿರುವುದಾಗಿ ಒಡೆಯರು ಹೇಳುವರು. ತಾಮ್ರ ಚಪ್ಪಡದಲ್ಲಿಯ ವಿವರಗಳು ಹಾಗೂ ಸ್ಥಳೀಯ ಮಠದ ಒಡೆಯರುಗಳ ಹೇಳಿಕೆಗಳಿಂದ; ರೇವಣಸಿದ್ಧ ಸಂಪ್ರದಾಯದ ಒಡೆಯರುಗಳು ಹಾಗೂ ದೈವ ಶ್ರೀ ರೇವಣಸಿದ್ಧನ ನಡುವೆ ಇರುವ ಅವಿನಾಭಾವ ಸಂಬಂಧವನ್ನು ಸೂಚಿಸುತ್ತದೆ. ಈ ಬಿಲ್ಲೆಗಳಿಂದ ಮಠದ ವಿವರ, ಆ ಮಠದ ಗುರುವಿನ ಹೆಸರು, ಆತನಿಗೆ ಒಡೆತನ ದೊರೆಕಿದ ಕಾರಣ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ. ಇಂತಹಾ ಅನೇಕ ತಾಮ್ರ ಪತ್ರಗಳು ಮತ್ತು ಬಿಲ್ಲೆಗಳು ಒಡೆಯರ ಮಠಗಳಲ್ಲಿವೆ. ಇವುಗಳು ಗುರುಪರಂಪರೆ ಹಾಗೂ ಸಂಸ್ಕೃತಿಯ ಬಗೆಗಿನ ಹೊಸ ಸಂಗತಿಗಳನ್ನು ತಿಳಿಸುವ ಸಾಧ್ಯತೆಗಳಿವೆ.

೩.೨.೩ ಸನದುಗಳು

ರಾಜರು, ಗುರುಗಳು, ಮಂತ್ರಿ ಮಹೋದಯರು ಹಾಗೂ ಇನ್ನಿತರೆ ಆಡಳಿತ ವರ್ಗದವರು ತಮಗೆ ದತ್ತವಾದ ಅಧಿಕಾರಗಳನ್ನು ಬಳಸಿಕೊಂಡು ಸಂಬಂಧಿಸಿದ ವ್ಯಕ್ತಿಗಳಿಗೆ/ ಸಂಸ್ಥೆಗಳಿಗೆ ಹಕ್ಕು ಪತ್ರವನ್ನು/ ಆದೇಶ ಪತ್ರವನ್ನು ಹೊರಡಿಸಿರುತ್ತಾರೆ. ಅಂಥವುಗಳಿಗೆ ಸನದುಗಳು ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ.

೩.೨.೩.೧ ಸರೂರು ಸನದು

ಕುರುಬರ ಮೂಲ ಧಾರ್ಮಿಕ ನೆಲೆಯಾದ ಸರೂರು ಮಠದ ಸ್ವಾಮಿಗಳು/ಒಡೆಯರುಗಳು ೧೯೦೪ ರ ಜೂನ್ ೬ರಂದು ಹೊರಡಿಸಿದ ಸನದಿನ ಒಂದು ಭಾಗ ಮಹತ್ವದ್ದಾಗಿದೆ. ಸನ್ನಿಧಿಯಿಂದ ಹುಕುಂ ವಿಧಿಸುವುದು ಏನೆಂದರೆ ಮೈಸೂರು ದೇಶಕ್ಕೆ ಸೇರಿದ ಹಾಲುಮತಾಚಾರಕ್ಕೆ ಗುರುಗಳಾದಂಥ ಅಣತೀ ಮಠಕ್ಕೆ ಸೇರಿದ ಒಳಗೆರೆಹಳ್ಳಿಯ ಒಡೆಯರ ರೇವಪ್ಪನವರಿಗೆ, ಇದೇ ಮೈಸೂರು ದೇಶಕ್ಕೆ ಸೇರಿದ ಸಮಸ್ತ ಹಾಲುಮತಾಚಾರಕ್ಕೆ ಆಚಾರವಿಚಾರ ಶಿಕ್ಷೆ, ಮೋಕ್ಷ ಕೊಡುವುದಕ್ಕೂ ಆಯಾಕಾಲಕ್ಕೆ ಸಮಸ್ಥಾನದವರಾದ ನಾವುಗಳು ಮುಕ್ಕಾಂ ಸರಕೀಟು ಮಾಡಿ ನಿಮ್ಮ ದೇಶಕ್ಕೆ ಬರಲು ಬಹಳ ದೂರ ಫಾಸಲೆಯಾದ್ದರಿಂದಲೂ ಕಾಶಿದೇಶವನ್ನೂ, ಪೂನಾದೇಶಗಳನ್ನೂ ಸ್ವದೇಶಗಳನ್ನೂ ಸರಕೀಟು ಮಾಡುವುದೇ ಸಾಕಾಗುವುದರಿಂದ ನಿಮ್ಮ ದೇಶದ ಆಚಾರ ಬಾಬ್ತು ಬಹಳ ತಕರಾರು ಆಯಾಯ ಓಟನ್ನೆ ಬಂದು ನೋಡಲು ಅವಕಾಶವಿಲ್ಲದ್ದರಿಂದ ನೀವುಗಳು ಸಮಸ್ಥಾನಕ್ಕೆ ರ್‍ವಾಸಪೀಠಸ್ಥರಾದ್ದರಿಂದ ನೀವು ನಿಮ್ಮ ವಂಶ ಪರಂಪರೆಯವರೆಗೂ ಯಾವ ಕಾಲಕ್ಕೂ ತಪ್ಪದೆ ಮೈಸೂರು ದೇಶದಲ್ಲಿ ಇರತಕ್ಕ ಹಾಲುಮತಾಚಾರಕ್ಕೂ, ಮಠ ಅಧಿಕಾರಿಗಳಿಗೂ ಆಚಾರ ವಿಚಾರ ಶಿಕ್ಷೆ ಕೊಡುವುದಕ್ಕೂ ಕಾಣಿಕೆ ವಸೂಲ್ ಮಾಡುವುದಕ್ಕೂ ಅಧಿಕಾರ ಕೊಡಲು ಈ ಆಜೂಬಾಜಿಗಾಗಿ ೪ ಬೆಳ್ಳಿಬಿಲ್ಲೆ, ೩೦ ಹಿತ್ತಾಳೆಬಿಲ್ಲೆ, ೧ ಮೊಹರು, ೧ ಛಡಿ ಈ ಸನದನ್ನು ಕೊಟ್ಟು ಅಧಿಕಾರ ಮಾಡಲು ನಿಮಗೆ ವಹಿಸಿರುತ್ತೆ. ಕಾಡಪ್ಪಯ್ಯ ಒಡೆಯರ್ ಸರೂರು ಎಂಬುದಾಗಿದೆ.[೧೧]

೩.೨.೩.೨ ಡಂಬಳ ಸನದು

ಗದಗಜಿಲ್ಲೆ ಮುಂಡರಗಿ ತಾಲ್ಲೂಕಿನ ಡಂಬಳದಲ್ಲಿರುವ ಶ್ರೀ ರೇವಣಸಿದ್ಧೇಶ್ವರ ಗುರುಮನೆಯ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆತ ಸನದು ಸರೂರು ಹಾಲುಮತ ಸಂಸ್ಥಾನದ ಮೊಹರನ್ನು ಹೊಂದಿದ್ದು ಕೆಳಗಿನಂತಿದೆ.

ಶ್ರೀಮದ್ಗುರು ಚಕ್ರವರ್ತಿಗಳಾದ ರಾಜ ರಾಜ ಪೂಜಿತ ರಾಜಮಾನ್ ರಾಜಶ್ರೀ ಧಾರವಾಡ ಜಿಲ್ಲಾ ಗದಗ ತಾಲ್ಲೂಕು ಮುಂಡರಗಿ ಪೀಠ ಪೈಕಿ ಡಂಬಳ ಸಂಸ್ಥಾನ ಮಠದಲ್ಲಿರುವ ಶ್ರೀ ಗುರು ರೇವಣಸಿದ್ಧೇಶ್ವರ ಮಹಾಸ್ವಾಮಿಗಳ ಸನ್ನಿಧಿಗೆ ಬರಕೊಟ್ಟ ವಚನ ಪತ್ರವು ಯಿಂತಿ ನಮಸ್ಕಾರಗಳು.

ಅಡವಿ ಸೋಮಾಪುರದ ಹಾಲುಮತದವರು ದೈವದ ಗುರುಗಳಿಗೆ ಹೇಳಿಕೊಂಡದರಿಂದ ನಮ್ಮ ದೈವದಲ್ಲಿ ಕ್ರಿಯಾ ಆಚಾರ ನಡೆಯದರಿಂದ ನಮ್ಮ ಗ್ರಾಮದಲ್ಲಿ ಐದು ಮಂದಿ ಪಂಚರನ್ನು ನೇಮಿಸಬೇಕಂತಾ ಗುರುಗಳಿಗೆ ತಿಳಿಸಿದರು. ಆದ್ದರಿಂದ ದೈವದ ಅನುಮತಿಯಿಂದ ಪಂಚಮರು ಗುರುಗಳು ಹೇಳಿಕಿ ಪ್ರಕಾರ ನಡೆದುಕೊಳ್ಳುತ್ತೇವೆಂದು ಒಪ್ಪಿದ್ದರಿಂದ ಪಂಚಮರನ್ನು ನೇಮಿಸಿರುತ್ತೇವೆ ಅವರು ಯಾರೆಂದರೆ ೧. ಸಂಜೀವಪ್ಪಾ ಸೋಮನಕಟ್ಟಿ ೨. ಮರಿಯಪ್ಪ ಜಡಿ ೩. ಮಾದೇವಪ್ಪ ಕರಿ ೪. ಹನಮಪ್ಪಾ ಹೊಸಳ್ಳಿ ೫. ಹೊಣೆಪ್ಪ ಮರಿಸಂಗಪ್ಪ ಹುಡೇದ, ೫ ಮಂದಿ ಪಂಚರು ಗುರುಗಳ ಹೇಳಿಕಿ ಪ್ರಕಾರ ಚಾಚೂ ತಪ್ಪದೆ ನಡೆದುಕೊಳ್ಳುತ್ತೇವೆ ಅಂತಾ ಬರಕೊಟ್ಟ ವಚನ ಪತ್ರವು ಮತ್ತು ಪಂಚರು ಹೇಳಿದ ಪ್ರಕಾರ ದೈವದವರೂನು ನಡೆದುಕೊಳ್ಳುತ್ತೇವೆ ಅಂತಾ ಬರಕೊಟ್ಟ ವಚನ ಪತ್ರವು ಯಿಂಥಿ ನಮಸ್ಕಾರಗಳು, ಅಡಿಯಲ್ಲಿ ಸಂಬಂಧಿಸಿದವರ ಹೆಬ್ಬೆರಳಿನ ಗುರುತು ಹಾಗೂ ಸಹಿಗಳಿವೆ. ಈ ಸನದುಗಳು ಆಕಾಲದ ರೇವಣಸಿದ್ಧ ಪರಂಪರೆಯ ಸಾಮಾಜಿಕ, ಧಾರ್ಮಿಕ ನಡುವಳಿಕೆಗಳತ್ತ ವಿವರಗಳನ್ನು ನೀಡುತ್ತವೆ.

೩.೨.೪ ನಿರೂಪಗಳು

ಸಾಮಾನ್ಯವಾಗಿ ಬರಹರೂಪದಲ್ಲಿರುವ ಆಜ್ಞಾಪತ್ರ/ಆದೇಶ ಪತ್ರವನ್ನು ನಿರೂಪವೆಂದು ಕರೆಯಲಾಗಿದೆ. ಇವುಗಳನ್ನು ದಾನನಿರೂಪ, ಉಪಾದಿನಿರೂಪ ಮತ್ತು ಆದೇಶ ನಿರೂಪಗಳೆಂದು ವರ್ಗೀಕರಿಸಬಹುದಾಗಿದೆ. ಇತ್ತೀಚಿನ ಶೋಧಗಳಿಂದ ಕುರುಬರಿಗೆ ಸಂಬಂಧಿಸಿದ ಕೆಲವು ನಿರೂಪಗಳು ದೊರೆತಿವೆ. ಈ ಪೈಕಿ ರೇವಣಸಿದ್ಧ ಪರಂಪರೆಗೆ ಸಂಬಂಧಿಸಿದ ಕೆಲವು ನಿರೂಪಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕುರುಬ ಗುರುಗಳು ಯಾರು ಎಂಬ ವಿಷಯದಲ್ಲಿ ರೇವಣಸಿದ್ಧ, ಸಿದ್ಧರಾಮ ಹಾಗೂ ಅಮೋಘಸಿದ್ಧ ಪರಂಪರೆಯ ಒಡೆಯರುಗಳಲ್ಲಿ ಮನಸ್ತಾಪಗಳು ಇದ್ದದ್ದು, ಅವುಗಳನ್ನು ಗುರುಹಿರಿಯರ ಸಮ್ಮುಖದಲ್ಲಿ ಬಗೆಹರಿಸಿಕೊಂಡ ಬಗ್ಗೆ ನಿರೂಪಗಳನ್ನು ಹೊರಡಿಸಲಾಗಿದೆ. ಅಂತಹಾ ಅನೇಕ ನಿರೂಪಗಳು ಈಗಲೂ ಒಡೆಯರ ಮನೆ ಮಠಗಳಲ್ಲಿವೆ. ಈ ನಿರೂಪಗಳನ್ನು ಡಾ. ಎಫ್.ಟಿ.ಹಳ್ಳಿಕೇರಿ ಮತ್ತು ಬಿ.ರಾಜಶೇಖರಪ್ಪರವರು ಶೋಧಿಸಿ ಪ್ರಕಟಿಸಿದ್ದಾರೆ. ಸಮಾಜದ ದೃಷ್ಟಿಯಲ್ಲಿ ಅಪಾರಾಧಿಗಳಾದವರಿಂದ ಗುರುಮಠಕ್ಕೆ ದಂಡವನ್ನು ಪಡೆದುಕೊಂಡು. ಬಳಗದವರಿಗೆಲ್ಲ

ಕುಲದ ಊಟವನ್ನು ಹಾಕಿಸಿಕೊಂಡ ನಂತರ ಶುದ್ಧಮಾಡಿದ ವಿವರಗಳನ್ನು ತಿಳಿಸುವ ನಿರೂಪಗಳು ಕುರುಬರಲ್ಲಿ ಅಧಿಕ ಪ್ರಮಾಣದಲ್ಲಿವೆ. ನಿದರ್ಶನಕ್ಕಾಗಿ ಒಂದು ನಿರೂಪದ ಒಕ್ಕಣಿಕೆಯನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಶ್ರೀಮದ್ ಸಚ್ಚಿದಾನಂದ ಅವಿರಳ ಪರಂಜ್ಯೋತಿ ಸ್ವರೂಪಮಾನರಾದ ಹಾಲುಮತ ಕ್ಷೀರಸಾಗರಕ್ಕೆ ಕಾರಣಕರ್ತರಾದ ಸರವೂರು ಶಾಖೆಗೆ ಸೇರಿದ ಶಾಂತಮುತ್ತು ಒಡೆಯರಾದ ಆಸಂಧಿ ಸಿಂಹಾಸನದ ಗುರುಗಳು ವಡೇರ ಭಾವಿಸಿದ್ಧಪ್ಪ ಸ್ವಾಮಿಗಳವರ ಮಕ್ಕಳು ವಡೇರ್ ಶಿದ್ರಾಮಪ್ಪ ಸ್ವಾಮಿಗಳ ಸನ್ನಿಧಿ ಇಂದಾ. ಸನ್ ೧೯೪೧ ನೇ ಇಸವಿ ಜುಲೈ ತಾರೀಖು ೧೦ ರಲ್ಲಿ ಚಿಕ್ಕಮಗಳೂರು ತಾಲ್ಲೂಕು ಲಕ್ಕೇದ ಹೋಬಳಿ ಶಿಂದಿಗೆರೆ ಗ್ರಾಮದಲ್ಲಿರುವ ದಿಣ್ಣೇನಹಳ್ಳಿ ಕೆಂಚೆಗೌಡನ ಹೆಂಡತಿ ಅಪರಾಧಿ ಮಳ್ಳಮ್ಮನೆಂಬ ಗಂಡಸತ್ತ ವಿಧವೆಯು ಗರ್ಭಿಣಿಯಾಗಿದ್ದರಿಂದ ಮೇಲ್ಕಂಡ ತಪ್ಪಿತಸ್ತಳಿಗೆ ರಾಜ್ಯದ ದೊಡ್ಡಿ ಯಜಮಾನರುಗಳು ಮತ್ತು ಗ್ರಾಮದ ದೊಡ್ಡಿ ಯಜಮಾನರುಗಳು, ಬಳಗಸ್ಥರು ಸಹ ಸೇರಿ ಮೇಲ್ಕಂಡ ಗುರುಗಳು ಸಹ ಸೇರಿ ಕುಲದ ಊಟವನ್ನು ಗುರುವಿನ ದಂಡವನ್ನು ತೆಗೆದುಕೊಂಡು ಮಳ್ಳಮ್ಮನಿಗೆ ಶುದ್ಧ ನಿರೂಪವನ್ನು ಕೊಟ್ಟಿರುತ್ತೇವೆ ಎಂಬುದಾಗಿದೆ. ಈ ನಿರೂಪವು ಸಮಾಜದ ದೃಷ್ಟಿಯಿಂದ ಅಪರಾಧಿಯಾದ ವಿಧವೆ ಮಳ್ಳಮ್ಮನಿಂದ ಹೇಳಿಕೆಯನ್ನು ಪಡೆದುಕೊಂಡು ಅವಳಿಂದ ಗುರುಮಠಕ್ಕೆ ದಂಡಪಡೆದು ಬಂಧುಬಾಂಧವರಿಗೆಲ್ಲ ಕುಲದ ಊಟವನ್ನು ಹಾಕಿಸಿಕೊಂಡು ನಂತರ ಶುದ್ಧೀ ಮಾಡಿದ ವಿವರವನ್ನು ತಿಳಿಸುತ್ತದೆ.

೩.೩. ಮೌಖಿಕ ಆಕರಗಳು

೩.೩.೧ ಹಾಲುಮತದ ಡೊಳ್ಳಿನ ಹಾಡುಗಳು

ಡೊಳ್ಳು ವಾದ್ಯ ಕುರುಬರ ಅವಿಭಾಜ್ಯ ಅಂಗ. ಕಲಾ ಸಂಸ್ಕಾರದ ಸಂಕೇತ ಹಾಗೂ ದೈವೀಭಾವನೆಯ ಕುರುಹು ಆಗಿದೆ. ಡೊಳ್ಳು ಮೇಳ ಅಥವಾ ಕಲೆ ಎನ್ನುವುದು ಕೇವಲ ಹವ್ಯಾಸಿ ಮತ್ತು ವೃತ್ತಿ ಮಾದರಿಯದಲ್ಲ. ಅದೊಂದು ರಕ್ತಗತವಾದ ನಿರಂತರ ಪ್ರಕ್ರಿಯೆ. ತಮಗೆ ಬೇಕಾದಾಗ, ಬಿಡುವೆನಿಸಿದಾಗ ಹಾಡುವ ಹಾಗೂ ಸೇವೆ ಮಾಡುವ ಪ್ರವೃತ್ತಿ ಇಲ್ಲಿನದ್ದು. ಹಾಡಿನಿಂದಲೇ ಸಕಲ ಸಂಪತ್ತು ಗಳಿಸುವ ನೆಲೆ ಇಲ್ಲಿನದಲ್ಲ. ನಿರಂತರ ಬದುಕಿಗೆ ಇದೊಂದು ಬದಲಾವಣೆಯ ಪರಿ ಮಾತ್ರ. ತನ್ನ ಇಷ್ಟ ದೈವಾರಾಧನೆಯ ಕ್ರಮ ಮಾತ್ರ.[೧೨] ಸಾಮಾನ್ಯವಾಗಿ ಡೊಳ್ಳು ಹಾಡುಗಾರಿಕೆ ತಮ್ಮ ಆರಾಧ್ಯ ದೈವದ ಮುಂದೆ ಪರ ಊರಿನ ಆಮಂತ್ರಿತ ಸಂದರ್ಭದಲ್ಲಿ ಮತ್ತು ಜಾತ್ರೆ ಉತ್ಸವಗಳಲ್ಲಿ ಕಂಡುಬರುತ್ತವೆ. ಈ ಡೊಳ್ಳಿನ ಹಾಡುಗಳನ್ನು ೧. ಪುರಾಣದ ಹಾಡುಗಳು ೨. ಪವಾಡದ ಹಾಡುಗಳು ೩. ವಿಡಂಬನಾ ರೀತಿ ಹಾಡುಗಳು ೪. ದಮನದ

ಹಾಡುಗಳು ೫. ಚುಟುಕುಗಳೆಂದು ಅರ್ಜುನ ಗೊಳಸಂಗಿಯವರು ವಿಂಗಡಿಸಿದ್ದಾರೆ. ಐತಿಹಾಸಿಕ, ಪೌರಾಣಿಕ, ರಾಮಾಯಣ, ಮಹಾಭಾರತದ ನೀತಿ ಪದ, ತತ್ವಗಳು ಡೊಳ್ಳು ಹಾಡುಗಳಲ್ಲಿರುತ್ತವೆ ಯಾದರೂ ಮುಖ್ಯವಾಗಿ ಬೀರದೇವರು, ಮಾಳಿಂಗರಾಯ, ರೇವಣಸಿದ್ಧ, ಕರಿಸಿದ್ಧ, ಅಮೋಘಸಿದ್ಧರಿಗೆ ಸಂಬಂಧಿಸಿದಂತೆ ಹೆಚ್ಚಾಗಿ ಹಾಡಿಕೆ ಮಾಡುತ್ತಾರೆ. ಡೊಳ್ಳಿನ ಹಾಡುಗಳಲ್ಲಿ ತನ್ನ ದೈವದ ಜೊತೆಗೆ ಸರ್ವ ದೈವಗಳ ಹಾಗೂ ಸರ್ವ ಮತಗಳ ಪ್ರೀತಿಯನ್ನು ಇಲ್ಲಿ ಕಾಣಬಹುದಾಗಿದೆ.

ಹಾಲುಮತದ ಡೊಳ್ಳಿನ ಪದಗಳಲ್ಲಿ; ಕುರುಬರ ದೈನಂದಿನ ಬದುಕಿನ ಚಿತ್ತಾರಗಳನ್ನು ಕಾಣಬಹುದು. ಹಾಲುಮತ ಸಂಸ್ಕೃತಿಯ ಭಕ್ತಿ ಮತ್ತು ಆರಾಧನೆಯನ್ನು ಡೊಳ್ಳಿನ ಪದಗಳು ವಿವರಿಸುವುದರ ಜೊತೆಗೆ ಹಾಲುಮತದ ದೈವಗಳು, ಗುರುಪರಂಪರೆ ಮುಂತಾದ ವಿಚಾರಗಳನ್ನು ತಿಳಿಸುವ ಮೌಖಿಕ ಆಕರಗಳಾಗಿವೆ. ವ್ಯಷ್ಠಿ ನೆಲೆಯಲ್ಲಿ ಪ್ರಾರಂಭವಾದ ಡೊಳ್ಳಿನ ಪದಗಳು ಸಮಷ್ಠಿ ನೆಲೆಯಲ್ಲಿ ಜನಪ್ರಿಯವಾಗಿದೆ. ಕುರುಬ ಜನಾಂಗದ ಕಲೆಯಾಗಿ ಡೊಳ್ಳು ಕುಣಿತ, ದಟ್ಟಿ ಕುಣಿತ ಮುಂತಾದ ಬೇರೆ ಕಲಾಪ್ರಕಾರಗಳಿದ್ದರೂ ಅಗ್ರಸ್ಥಾನ ಸಲ್ಲುವುದು ಇವರ ಡೊಳ್ಳಿನ ಹಾಡಿನ ಮೇಳಗಳಿಗೆ. ರೇವಣಸಿದ್ಧ, ಬೀರದೇವರು, ಅಮೋಘಸಿದ್ಧ, ಮಾಳಿಂಗರಾಯ, ಮಾಯವ್ವ ಇವರನ್ನು ಕುರಿತಾದ ಡೊಳ್ಳಿನ ಹಾಡುಗಳು ಸಾಹಿತ್ಯ ಭಕ್ತಿ ಎರಡನ್ನೂ ಸ್ಪುರಿಸುತ್ತವೆ. ಕುಲದೈವಗಳನ್ನಲ್ಲದೆ ಬೇರೆ ವಿಷಯಗಳನ್ನು ಒಳಗೊಂಡ ಹಾಡುಗಳು ಇತ್ತೀಚೆಗೆ ರಚಿತಗೊಂಡಿವೆ. ಡೊಳ್ಳಿನ ಹಾಡುಗಳನ್ನು ಸಂದರ್ಭದ ದೃಷ್ಟಿಯಿಂದ ಎರಡು ರೀತಿಯಾಗಿ ಹಾಡಲ್ಪಡುವುದನ್ನು ಗಮನಿಸಬಹುದು. ೧. ಊರಾಡುವ ಸಂದರ್ಭದಲ್ಲಿ ಹಾಡುವ ಹರಕೆಯ ಹಾಡು ಸಂಪ್ರದಾಯವಾಗಿ ಬೆಳೆದುಬಂದದ್ದು. ೨. ದಿಮ್ಮಿಟ್ಟು ಹಾಡುವ ಗೋಷ್ಠಿ ವಿಧಾನ ದೇವರ ಸೇವೆಗಾಗಿ ಬಂದದ್ದು. ಡೊಳ್ಳಿನ ಹಾಡಿನ ಮೇಳದಲ್ಲಿ ಡೊಳ್ಳು ಸಹವಾದ್ಯವಾಗಿ ತುಂಬಾ ಪರಿಣಾಮಕಾರಿಯಾಗಿರುವುದರಿಂದ ಈ ಹಾಡುಗಳಿಗೆ ಡೊಳ್ಳಿನ ಹಾಡುಗಳು ಎಂಬ ಹೆಸರು ಬಂದಿದೆ. ಈ ಹಾಡುಗಳಲ್ಲಿ ಸ್ತುತಿಪರ ಹಾಡು ಮಾತ್ರ ಚಿಕ್ಕದಾಗಿದ್ದು, ಉಳಿದ ಹಾಡುಗಳು ಸಾಮಾನ್ಯವಾಗಿ ದೀರ್ಘವಾಗಿರುತ್ತವೆ. ಡೊಳ್ಳಿನ ಹಾಡುಗಳು ಬಹುತೇಕ ಕಥಾವಾಹಕಗಳು. ಕಥೆ ಇರದ ಹಾಡುಗಳೂ ಇವೆ. ಆದರೆ ಅವುಗಳು ಸಂಖ್ಯೆಯಲ್ಲಿ ಕಡಿಮೆ. ಸ್ತುತಿ, ಮುಖ್ಯ ಹಾಡು, ಹರಕೆಯ ಪದ ಯಾವುದೇ ಇರಲಿ ಕೊನೆಯಲ್ಲಿ ಹಾಲುಮತಕ ಮೇಲೊಂದು ಗಿರಿಯೋ ಗಿರಿಗೊಂದ ಕ್ವಾಣಗನುರದೇವೋ ಎಂದು, ಹೆಜ್ಜೆ ಹೆಜ್ಜೆಗೆ ಪವಾಡ ಮಾಡ್ಯಾನ ಗುಜ್ಜ ಮಾಯವ್ವನ ತಮ್ಮನೋ ಎಂದು ಮುಕ್ತಾಯ ಪಡೆಯುತ್ತವೆ.

ಮುಖ್ಯ ಹಾಡು ಸಾಮಾನ್ಯವಾಗಿ ದೀರ್ಘವಾಗಿರುತ್ತದೆ. ಎರಡು ಅಥವ ನಾಲ್ಕು ಸಾಲಿಗೆ ಒಂದರಂತೆ ಒಂದೊಂದು ನುಡಿ ಇರುತ್ತದೆ. ಐದಿ ಕಥೆಗಳು ಅಥವಾ ಕಥೆ ಇರದ ದೀರ್ಘವಿಷಯಗಳು

ಒಂದೊಂದೇ ಹಾಡಿನಲ್ಲಿ ಮುಕ್ತಾಯ ಪಡೆಯುತ್ತದೆ. ಮುಖ್ಯವಾದ ಹಾಡಿಗೆ ಪಲ್ಲವಿಯಲ್ಲಿ ಒಂದು ಪೀಠಿಕೆ ಇರುತ್ತದೆ. ಪ್ರಾರಂಭದಲ್ಲಿ ಬಹಳಷ್ಟು ಹಾಡುಗಳು ಕೇಳುಗರೊಂದಿಗೆ ಸಂಭಾಷಿಸುತ್ತದೆ.

೧. **ಗುರುಹಿರಿಯರಿಗೆ ಶರಣು ಮಾಡುವೆನು**
ಶರಣು ಮಾಡುವೆನು
ಕರುಣದಿಂದ ಕೇಳಿರಿ ಕುಂತಾ
ಮರಣರಹಿತ ಮಹಾದೇವನ ಭಜಿಸುತ
ಹೇಳುವೆ ಮುಂದಿನ ವೃತ್ತಾಂತ

೨. **ಗುಲ್ಲ ಮಾಡದೆನ್ನ ಸೊಲ್ಲ ಕೇಳಿರಿ**
ನಿಂತು ಕೇಳುವೆನು ಕೈಮುಗದಾ
ಮುಂಡಾಸುರನೆಂಬ ಪುಂಡ ದೈತನ್ಯಾ
ರುಂಡಕಡಿದ ರೇವಣಸಿದ್ಧ

ಈ ಬಗೆಯ ಪ್ರಾರಂಭದಿಂದ ಸಭಿಕರಿಗೂ, ತನಗೂ ಮಧ್ಯದಲ್ಲಿ ಒಂದು ಬಗೆಯ ಆತ್ಮೀಯ ಸೇತುವೆ ನಿರ್ಮಾಣಗೊಳ್ಳುತ್ತದೆಂಬ ಪರಿಜ್ಞಾನ ಹಾಡು ಕಟ್ಟುವವನಿಗಿದೆ. ಹೀಗೆ ಸಭಿಕರೊಂದಿಗೆ ಸಂಭಾಷಿಸುತ್ತಿರುವ ಪ್ರಾರಂಭದ ಮಾತುಗಳಲ್ಲೇ ವಸ್ತುವೂ ಅಡಕವಾಗಿರುವುದನ್ನು ಗಮನಿಸಬಹುದಾಗಿದೆ.

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಮನಗೂಳಿ ಗ್ರಾಮದಲ್ಲಿ ಶ್ರೀ ರೇವಣಸಿದ್ಧೇಶ್ವರ ಡೊಳ್ಳಿನ ಹಾಡಕಿ ಸಂಘವಿದ್ದು; ಸಂಘದ ಸದಸ್ಯರೂ ರೇವಣಸಿದ್ಧನ ಕುರಿತಾದ ಹಾಡುಗಳನ್ನು ಸ್ವಗ್ರಾಮದ ಶ್ರೀಮಠದಲ್ಲಿ ಹಾಡುವುದಲ್ಲದೆ; ಇತರೆಡೆಯೂ ಹೋಗಿ ಹಾಡುವರು. ಈ ರೇವಣಸಿದ್ಧನಿಗೆ ಸಂಬಂಧಿಸಿದ ಹಾಡುಗಳು ಜನಪದ ಸಂಗ್ರಹದಿಂದ ಆಯ್ದು ಹಾಗೂ ಸ್ವರಚಿತ ಹಾಡುಗಳಾಗಿರುತ್ತವೆ. ಶ್ರೀ ಯಲ್ಲಪ್ಪ ರಾಮಪ್ಪರೊಳ್ಳಿ ಪ್ರಸ್ತುತ ಮನಗೂಳಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಹಾಡಕಿ ಸಂಘದ ಅಧ್ಯಕ್ಷರೂ ಆಗಿದ್ದಾರೆ.

ಈ ರೀತಿ ವಿಷಯ ವೈವಿಧ್ಯಗಳಿಂದ ಕೂಡಿದ ಡೊಳ್ಳಿನ ಹಾಡುಗಳು ಒಂದು ಜನಾಂಗ ಬದುಕಿದ ರೀತಿಯ ಪ್ರತಿಬಿಂಬವಾಗಿವೆ. ಕುರುಬ ಜನಾಂಗದ ಇಂಥಾ ಹಾಡು, ಕಲೆ, ಮತಾಚರಣೆಗಳ ಒಡಲಲ್ಲಿ ಚದುರಿ ಹೋಗಿರುವ ಅನೇಕ ಜಾನಪದ ಅಂಶಗಳನ್ನು ಸಂಯೋಜಿಸಿ ಈ ಜನಾಂಗ ನಡೆದುಬಂದ ದಾರಿಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಒಟ್ಟಾರೆಯಾಗಿ ಡೊಳ್ಳಿನ ಪದಗಳು ಹಾಲುಮತದ ಸಾಂಸ್ಕೃತಿಕ ನಾಯಕರ ಹಾಗೂ ಗುರುಪರಂಪರೆಯ ಧಾರ್ಮಿಕ

ಅಭಿವ್ಯಕ್ತಿಯಾಗಿ ಹಾಗೂ ಸಾಮಾಜಿಕ ಅಭಿವ್ಯಕ್ತಿಯಾಗಿ ಸ್ಥಾನಪಡೆದಿರುವುದನ್ನು ಗಮನಿಸಬಹುದಾಗಿದೆ.

೩.೩.೨ ಹಾಡುಗಳು

ಹಾಡುಗಳು ಜನಪದ ಸಾಹಿತ್ಯದ ಅವಿಭಾಜ್ಯ ಅಂಗ. ತಮ್ಮ ಜೀವನದ ಏಳು ಬೀಳುಗಳನ್ನು ನಗುತ್ತಲೇ ಎದುರಿಸುತ್ತಲೇ ತಮ್ಮ ಜನಾಂಗದ ಆಚಾರ ವಿಚಾರ, ರೂಢಿ ಸಂಪ್ರದಾಯಗಳನ್ನು ಹಾಡಿನ ರೂಪದಲ್ಲಿ ಕಟ್ಟಿ ಹಾಡುತ್ತಿದ್ದರು. ಇಂತಹ ಹಾಡುಗಳಲ್ಲಿ ಅನೇಕ ವೈವಿಧ್ಯಗಳನ್ನು ಕಾಣಬಹುದು. ಒಟ್ಟಾರೆಯಾಗಿ ತಮ್ಮ ದೈನಂದಿನ ಜೀವನದಲ್ಲಿ ಪಡೆದ ಅನುಭವಗಳು ಅನುಭಾವಗಳಾಗಿ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ. ಈ ಕಾರಣದಿಂದಾಗಿ ಜನಪದ ಹಾಡುಗಳು ಅಂದಿನ ಜನಾಂಗದ ಪರಂಪರೆ, ಸಂಪ್ರದಾಯ, ಸಂಸ್ಕೃತಿ ಮುಂತಾದವುಗಳನ್ನು ಪರಿಚಯಿಸಿಕೊಡುವ ಆಕರಗಳಾಗುತ್ತವೆ. ಹಾಗೂ ಇವುಗಳ ಅಧ್ಯಯನ ಬಹು ಮುಖ್ಯವೆನಿಸುತ್ತದೆ. ಹಾಲುಮತದ ರೇವಣಸಿದ್ಧರ ಹಾಡುಗಳನ್ನು: ಶಂ.ಶಿ.ಕುಂಬಾರರವರು ಸಂಪಾದಿಸಿ ವಿಜೇತ ಪ್ರಕಾಶನ, ಗದಗದಿಂದ ಪ್ರಕಾಶನಗೊಳಿಸಿದ್ದಾರೆ. ಈ ಸಂಕಲನದಲ್ಲಿ ರೇವಣಸಿದ್ಧನಿಗೆ ಸಂಬಂಧಿಸಿದ ಸುಮಾರು ೮೦ ಹಾಡುಗಳನ್ನು ಗಮನಿಸಬಹುದಾಗಿದೆ. ಇಲ್ಲಿಯ ಕೆಲವು ಹಾಡುಗಳು ರೇವಣಸಿದ್ಧನನ್ನು ಪೌರಣಿಕಗೊಳಿಸಿದರೆ; ಇನ್ನು ಕೆಲವು ಆತನ ಕಾಲಮಾನ, ಪಂಥ, ಪವಾಡ ಹಾಗೂ ಚಾರಿತ್ರಿಕ ಅಂಶಗಳ ವಿವರಗಳನ್ನು ನೀಡುತ್ತವೆ. ರೇವಣಸಿದ್ಧನ ಹಾಡುಗಳ ಅವಲೋಕನ ವೆಂದರೆ ಆತನ ಪರಂಪರೆ ಜೊತೆ ಜೊತೆ ಜನಪದರ ನಂಬಿಕೆ ಆಚಾರ ವಿಚಾರ ಮತ್ತು ಧಾರ್ಮಿಕ ಸಂಬಂಧಗಳನ್ನು ಮತ್ತಷ್ಟು ತಿಳಿದುಕೊಳ್ಳುವುದು ಎಂದರ್ಥ. ಇಲ್ಲಿ ರೇವಣಸಿದ್ಧನ ಕೆಲ ಹಾಡುಗಳನ್ನು ಗಮನಿಸಬಹುದಾಗಿದೆ.

೧. **ನಾಥ ಪಂಥ ಸ್ವೀಕರಿಸಿದ್ದು**

ರೇವಣಸಿದ್ಧರು ತಂದೆಯ ಮನೆ ಬಿಟ್ಟು ಸಾಗ್ಯಾರಾ
ನಾಥರೊಡನೆ ಹನ್ನೆರೆಡು ವರ್ಷ ದೇಶ ತಿರುಗ್ಯಾರಾ
ನಾಥರಿಂದ ವಿದ್ಯೆ ಕಲಿತು ಸಿದ್ಧಿಪುರಷನೆನಿಸ್ಯಾರಾ

. . . .

೨. **ತಗಣಿಗಳನ್ನು ಕೊಂದದ್ದು**

ಮರ್ತ್ಯದಲ್ಲಿಯ ಸುದ್ಧಿ ತಿಳಿದು ಮಾಡಿ ವಿಚಾರಾ
ಶಿವನು ತನ್ನ ಕಳೆಯನ್ನು ತೆಗೆದು ರೂಪಕೊಟ್ಟರಾ
ಅವನೆ ರೇವಣಸಿದ್ಧನೆಂದು ಪ್ರಸಿದ್ಧ ಆದಾರ

ಗುಡಿಗೆ ಬಂದ ರೇವಣಸಿದ್ಧ ಕಾವಲು ಕುಂತಾರಾ
ಅವನ ನೋಡಿ ತಗಣಿಗಳು ಮಾಡಲಿಲ್ಲ ವಿಚಾರಾ
ತಗಣಿನೋಡಿ ಅಂಜಲಿಲ್ಲಾ ರೇವಣ ಸಿದ್ಧರಾ
ಬಾಯಿ ಹಾಕಿ ಹೀರಲಿಕ್ಕೆ ಸಿದ್ಧರ ನೆತ್ತರಾ
ಅವುಗಳ ಕೈಯಿಂದ ತಪ್ಪಿಸಿಕೊಂಡ ನಮ್ಮ ಗುರುವರಾ
ಕತಾರಿಯಿಂದ ತಗಣಿಗಳನ್ನು ಸೀಳಿ ಒಗೆದಾರಾ

೩. ಕೆರೆ ಕಟ್ಟಿಸಿದ್ದು

ಕಲ್ಯಾಣದಲ್ಲಿ ಕೆರೆಯನ್ನು ಕಟ್ಟಿದ ರೇವಣ ಸಿದ್ಧನ್ನಾ
ಅವನಂತೆ ಇನ್ನೊಬ್ಬ ಕಟ್ಟಿಸ್ದಾ ಅವನು ಯಾರನ್ನಾ
ಸೊಲ್ಲಾಪುರದಾಗ ಕೆರೆಯಕಟ್ಟಿಸಿದ ಸಿದ್ಧರಾಮನಾ
ರಂಕಾಳ ಕೆರೆಯನು ಯಾರು ಕಟ್ಟಿದರು ನೀವು ಹೇಳಿರನ್ನಾ
ಮಾಸನೂರ ಕೆರೆಯನು ಕಟ್ಟಿಸಿದ ಧೀರನ್ಯಾರನಾ
ಇವರಂತೆ ಮತ್ತೊಬ್ಬ ಕಟ್ಟಿಸಿದ ಹೇಳು ಯಾವನಾ

೪. ಅಹಂಕಾರ ತರವಲ್ಲ

ಇಷ್ಟೆಲ್ಲಾ ಹೇಳಿ ಹೋದ ಬಳಿಕ ಬಂತೊ ಹಂಕಾರ
ನನಕಿಂತ ಮೊದಲ ಇವರ ಹತ್ತಿರ ಎಷ್ಟೋ ಶಿಷ್ಯರಾ
ಅವರನೆಲ್ಲಾ ಬಿಟ್ಟು ನನ್ನ ಹತ್ತಿರ ಹೇಳಿಹೋದಾರಾ
ಹೆಚ್ಚಿನವ ನಾನು ಆಗುತೇನೆಂದು ತಿಳಿದೊ ಮನಸಾರಾ
ಗುರುಗಳು ಹೋದ ಬಳಿಕ ಇವನ ಕೇಳಾವ ಅವನ್ಯಾರಾ
ಮಚ್ಛೇಂದ್ರ ನಾಥಾ ಅಲ್ಲೆ ಇದ್ದನೊ ಬಿಟ್ಟು ಗಿರಿನಾರಾ

೫. ರೇವಣಸಿದ್ಧರ ಕಾಲ ನಿರ್ಣಯ

ಇವರಿಗೆ ಎಲ್ಲಾ ಕೃಪೆ ತೋರಿದಾನ ಅರಿಕೇರಿ ಅಂಬಣ್ಣಾ
ರೇವಣ ಸಿದ್ಧನ ಕಾಲನಿರ್ಣಯ ಹೇಳುವೆ ಶಕೆಯನಾ
ಹನ್ನೊಂದ ನೂರಾ ಹತ್ತರಲ್ಲಿ ಜನಿಸಿ ರೇವಣಾ
ಹನ್ನೆರೆಡು ನೂರಾ ಹದಿನೇಳರಲ್ಲಿ ಸಮಾಧಿ ಆದವನಾ

ಅಂತ ಹೇಳಿ ಬರೆದ ಇಟ್ಟ ಒಬ್ಬ ಕವಿಯನಾ
ಅದನ ನೋಡಿ ಇಲ್ಲಿ ಬರೆದ ಕಟ್ಟೂರ ಶಂಕರನಾ

ಪಂಚಾಚಾರ್ಯ ಪೀಠದವರು ಹೀಗೆ ಹೇಳ್ಯಾರಣ್ಣ
ಐದು ಸಾವಿರ ವರ್ಷದ ಹಿಂದೆ ಇವರು ಇದ್ರಣ್ಣಾ
ಹೀಗೆ ಬರೆದದ್ದು ನಂಬಲಾಕ ಬಾರದಂಗ ಐತಣ್ಣಾ

೬. ಕುರುಬರ ಪವಾಡ

ಕಲ್ಯಾಣವನ್ನು ಆಳುವಾಗ ಬಿಜ್ಜಳ ರಾಜರಾ
ಜೈನ, ಬ್ರಾಹ್ಮಣ ಉತ್ತಮವಾದ ಜಾತಿಯ ಜನರಾ
ಕುರುಬರು ಬಂದು ಕಲ್ಯಾಣದಾಗ ಮಾಂಸ ಮಾರ್‍ಯಾರ
ಹೆಚ್ಚಿನ ಜಾತಿಯ ಜನರು ಬಂದು ಕಿವಿಯ ಊದ್ಯಾರಾ
ಅದನು ಕೇಳಿ ಬಿಜ್ಜಳ ರಾಜ ಆಜ್ಞೆಮಾಡ್ಯಾರಾ
ಕಲ್ಯಾಣದಾಗ ಹೊಲಸು ಕುರುಬರು ಬರದಂತೆ ಮಾಡ್ಯಾರಾ
ಆಗಿನ ವೇಳೆಕ ಕುರುಬರ ಮುಖಂಡ ಯಾರು ಇದ್ದರಾ
ತೆಗೆದ ನೋಡ್ರಿ ವಿಚಾರಮಾಡಿ, ನೀವು ಬಲ್ಲವರಾ
ಈ ಸುದ್ದಿ ಸಿದ್ಧರಾಮಾ ರೇವಣಸಿದ್ಧ ಅಲ್ಲಮ ಪ್ರಭುದೇವ್ರಾ

ಮೇಲಿನ ಜನಪದ ಹಾಡುಗಳಲ್ಲಿ ರೇವಣಸಿದ್ಧನ ಕಾಲಮಾನ, ಸಮಕಾಲೀನ ಸಾಮಾಜಿಕ ವ್ಯವಸ್ಥೆ, ದೈವವಾದ ರೇವಣಸಿದ್ಧನ ವ್ಯಕ್ತಿತ್ವ ಹಾಗೂ ಮೇಲಾಗಿರುವ ನಾಥ ಪಂಥದವರ ಪ್ರಭಾವ, ಪವಾಡ, ಇತ್ಯಾದಿಗಳು ರೇವಣಸಿದ್ಧ ಪರಂಪರೆಯ; ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಿವೆ.

೩.೩.೩ ಮಂಗಳಾರತಿ ಪದಗಳು

ಹಾಲುಮತ ಗುರುಪರಂಪರೆಯ ರೇವಣಸಿದ್ಧ, ಅಮೋಘಸಿದ್ಧ ಮತ್ತು ಆರಾಧ್ಯ ದೈವಗಳಾದ ಬೀರಪ್ಪ, ಮಾಳಿಂಗರಾಯ, ಮೈಲಾರಲಿಂಗ ಮೊದಲಾದವರು ಲಿಖಿತ ಹಾಗೂ ಮೌಖಿಕ ಪರಂಪರೆಗಳೆರೆಡರಲ್ಲಿಯೂ ಬಹುಪಾಲು ಚರಿತ್ರೆಯಿಂದ ಹಿಂದೆ ಸರಿದು ಪುರಾಣದೆಡೆಗೆ ಮುಖ ಮಾಡಿ ದೈವಸ್ಥಾನ ಪಡೆದವರಾಗಿದ್ದಾರೆ. ಇವರುಗಳನ್ನೆಲ್ಲ ಕೇಂದ್ರೀಕರಿಸಿಕೊಂಡು ಜನಪದದಲ್ಲಿ ಮಂಗಳಾರತಿ ಪದಗಳು ಜನ್ಮತಾಳಿವೆ. ಮಂಗಳಾರತಿ ಪದಗಳು ಅಲ್ಲಲ್ಲಿ ಸಂಪಾದನೆಗೊಂಡಿವೆ ಯಾದರು ಸಮಗ್ರವಾಗಿ ಸಂಪಾದನೆಗೊಳ್ಳಬೇಕಿದೆ. ರೇವಣಸಿದ್ಧನ ಕುರಿತಾದ ಮಂಗಳಾರತಿ ಪದಗಳನ್ನು ತಗರು ಪವಾಡ ಕೃತಿಯ ಕೊನೆಯಲ್ಲಿ ಸಂಪಾದಕರು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಭಾಗ ೧

ಅಂದಿಗೆ ಮಾಯೆಯನು ಕೊಂದು ಮರ್ಧಿಸಿದವಗೆ
ಒಂದು ಕೊಡ ವಿಷಯವನ್ನು ಧರಿಸಿದವಗೆ
ಒಂದಿದ ದೈಯ್ವಗಳ ಸೆರೆಯ ಬಿಡಿಸಿ
ತಂದ ಅಳವಾಂಡಧರನೀತ ಆದಿಮೂರುತಿಗೆ
ಜಯಮಂಗಳಂ ನಿತ್ಯ ಶುಭಮಂಗಳಂ
ಕಲ್ಯಾಣಪುರದಲ್ಲಿ ಕಡೆಗೆ ತೆಗೆದಿಟ್ಟವರ
ಒಳಿತವರ ಮಾಡಿ ಒಳಗೆ ತೆಗೆದವಗೇ
ಜಯಮಂಗಳಂ ನಿತ್ಯ ಶುಭಮಂಗಳಂ

ಕರಿಯಕಂತೆಯ ಪೊದ್ದು ಕಪ್ಪರವ ಹಿಡಿದವಗೆ
ಕೊರಳಲ್ಲಿ ರುದ್ರಾಕ್ಷಿ ಸರವ ಧರಿಸಿದವಗೆ
ಈ ಧರೆಯೊಳಗೆ ಹಿರಿಯನಿಗೆ ದೈತ್ಯ ಸಂಹಾರನಿಗೆ
ಪರಮ ಆನಂದ ಪಾವನ ಮೂರ್ತಿಗೆ

ಜಯಮಂಗಳಂ ನಿತ್ಯ ಶುಭಮಂಗಳಂ
ಒಂದು ರೂಪಿನಲಿ ತಗುಣೆ ಕೊಂದು ಸುರಗಿಯ ಮಾಡಿ
ತಂದು ಉಜ್ಜೈನಿಯ ವಿಕ್ರಮ ಭೂಪಗೆ

ಮತ್ತೊಂದು ಮಾಸನೂರ ಮಡುವಿನೊಳಗಿದ್ದ
ಸುರಗಿಯ ತಂದು ಬಿಜ್ಜಳಗೆ ತೋರಿಸಿದಾತಗೇ
ಜಯಮಂಗಳಂ ನಿತ್ಯ ಶುಭಮಂಗಳಂ
ಹುತ್ತದ ಮೇಲನ ಮುತ್ತುಗವ ಕಡಿದವಗೆ

ಹುಟ್ಟು ಬಂಜೆಯರಿಗೆಲ್ಲ ಮಕ್ಕಳ ಕೊಟ್ಟ ದೇವಗೆ
ಕಿಚ್ಚುಗಣ್ಣೈಯ್ಯನಿಗೆ ಕಿರಿಜಡೆಯಾತನಿಗೆ
ಸತ್ಯಕಕ್ಕೆ ಒಲಿದ ರೇವಣಸಿದ್ಧಗೇ
ಜಯಮಂಗಳಂ ನಿತ್ಯ ಶುಭಮಂಗಳಂ

ಮೂರು ಕಂಗಣ್ಣೈಯ್ಯನಿಗೆ ಮರುಳ ಸಿದ್ಧೇಂದ್ರನಿಗೆ
ಊರಿಂದ ಬಂದ ಮಹೇಶ್ವರಗೆ ಶಿಲ್ಪಿಯ ಸಿದ್ದಣ್ಣ

ಮಾಯೆಗೆದಾತನಿಗೆ ತಾನು ಒಲಿದು ಬಂದ ರೇವಣಸಿದ್ಧಗೇ
ಜಯಮಂಗಳಂ ನಿತ್ಯ ಶುಭಮಂಗಳಂ

ಸೋಮಸೋಮವಾರ ನೇಮ ಸಿದ್ಧೇಶ್ವರಗೆ ಪ್ರೇಮದಿಂದಲಿ
ಒಲಿವ ನಿಜರೂಪಗೆ ಅಂದಣ ಪಲ್ಲಕ್ಕಿ ಜಾಜಿಹೂವ್ವಿನ ದಂಡೆ
ಯೋಗಿ ಮೂರುತಿ ಕರಿಯ ಸಿದ್ಧೇಂದ್ರಗೆ
ಜಯಮಂಗಳಂ ನಿತ್ಯ ಶುಭಮಂಗಳಂ

ಭಾಗ ೨

ಇಂದು ಬೆಳಗಿರೆ ಚಂದ್ರಶೇಖರ ನಂದಿವಾಹನರೂಢಗೆ
ಕಂದುಗೊರಳಗೆ ಕಾಂತಿಪುರುಷಗೆ ಸುಂದರಾಂಗಿಯ ರಮಣಗೆ
ಗರಳವುಂಡಗೆ ಸುರರ ಪೊರದಗೆ ಸರಸಿಜಾಂಬಕ ಒರದಗೆ
ಪುರವ ಸುಟ್ಟಗೆ ಪಾಲನೇತ್ರಗೆ ನರಗೆ ವರವನು ಕೊಟ್ಟಗೆ

ದಕ್ಷಶಿಕ್ಷಗೆ ಶಿಕ್ಷರಕ್ಷಗೆ ವೃಷಭವಾಹನ ಯಕ್ಷಗೆ
ರಕ್ಷಿತ ಭಕ್ತ ಪ್ರಮುಖಗೆ ಲಕ್ಷಣಾಂತಕ ಜೂಟಗೆ
ರಾಜ ಪುರುದೊಳು ತೇಜ ಮೂರ್ತಿಗೆ ರಾಜರಾಜನ ಸಖನಿಗೆ
ಮಾಜಹರನಿಗೆ ಮಹಿಮ ಪುರುಷಗೆ ರಾಜಶೇಖರ ಮೂರ್ತಿಗೆ

ರೇವಣಸಿದ್ಧನಿಗೆ ಸಂಬಂಧಿಸಿದ ಮೇಲಿನ ಮಂಗಳಾರತಿ ಪದವು ಎರಡು ಭಾಗವಿದ್ದು, ಮೊದಲನೆ ಭಾಗದ ೧, ೨, ೪ ಮತ್ತು ೫ನೇ ಪದಗಳಲ್ಲಿ ಪವಾಡಗಳನ್ನು ೩, ೬ನೇ ಪದಗಳಲ್ಲಿ ವ್ಯಕ್ತಿ ಚಿತ್ರಣವನ್ನು ಹಾಗೂ ೭ನೇ ಪದದಲ್ಲಿ ನೇಮ, ಆಚರಣೆ ಬಗೆಗಿನ ವಿವರವನ್ನು ತಿಳಿಸುತ್ತದೆ. ಎರಡನೆ ಭಾಗವು ಶಿವನ ಸ್ತುತಿಯನ್ನು ಒಳಗೊಂಡಿದೆ. ರೇವಣಸಿದ್ಧನ ಚಿತ್ರಣವನ್ನು ಪವಾಡಮಯ ಜೀವನವನ್ನು ತಿಳಿಸುವುದೆ ಇದರ ಆಶಯವಾಗಿದೆ.

ಶಂ.ಶಿ. ಕುಂಬಾರರವರು ಸಂಪಾದಿಸಿದ ಹಾಲುಮತದ ರೇವಣಸಿದ್ಧರ ಹಾಡುಗಳು ಸಂಕಲನದಲ್ಲಿಯ ರೇವಣಸಿದ್ಧನ ಕುರಿತಾದ ಆರತಿ ಪದವನ್ನು ಗಮನಿಸಬಹುದಾಗಿದೆ.

ಆರತಿ ಬೆಳಗುವೆ ರೇವಣಸಿದ್ಧನಿಗೆ
ರೇವಣ ಸಿದ್ಧನಿಗೆ ಸಿದ್ಧನಾಥನಿಗೆ
ಕಲ್ಲುಶೆಟ್ಟಿಗೆ ನೀನು ಕಣ್ಣು ಕೊಟ್ಟವಗೆ
ಒಬ್ಬನ್ನ ಮನೆಯಲ್ಲಿ ಆಳಾಗಿದುಡಿದವಗೆ

ತ್ರಿಪುರಾಂತಕ ಕೆರೆಯನ್ನು ಕಟ್ಟಿಸಿದವಗೆ
ಸೌಂದರ್ಯ ತಲೆ ಮೇಲೆ ಮಣ್ಣು ಹೊರ್ಸಿದವಗೆ
ಸತಿಯ ಗರ್ಭವನು ಹೊರಗೆ ತಗೆದವಗೆ
ಒಂಭತ್ತು ತಿಂಗಳು ಮುಚ್ಚಿ ಇಟ್ಟವಗೆ
ರುದ್ರಮುನಿ ಎಂದು ಹೆಸರಿಟ್ಟವಗೆ
ತನ್ನ ಮಗನಿಗೆ ತಾನೇ ದೀಕ್ಷೆಕೊಟ್ಟವಗೆ
ಮಾಯಾದೇವಿಯ ಮನೆಯಲಿ ವಾಸ ಮಾಡಿದವಗೆ
ಕಾವಡಿಯಿಂದ ನೀರು ಹೊತ್ತವಗೆ
ಬಿಜ್ಜಳನ ಗರ್ವವನ್ನು ಹರಣ ಮಾಡಿದವಗೆ
ಅರಮನೆಯನ್ನು ಸುಟ್ಟು ತೆಗೆದವಗೆ

ಮೇಲಿನ ಆರತಿ ಪದವು ರೇವಣಸಿದ್ಧನ ಅನೇಕ ಚಾರಿತ್ರಿಕ ಘಟನೆಗಳನ್ನು ಹಾಗೂ ಆತನ ಪವಾಡಗಳ ವಿವರಗಳನ್ನು ನೀಡುವುದು.

೩.೩.೪ ಹೇಳಿಕೆಗಳು

ಪ್ರಕೃತಿಯ ಒಡಲಲ್ಲಿ ಸದಾ ಕಾಲ ತಮ್ಮ ಕುರಿಮರಿಗಳನ್ನು ಮೇಯಿಸುತ್ತ ಬದುಕುತ್ತಿರುವ ಕುರುಬರಿಗೆ ಪ್ರಕೃತಿಯ ಆಗುಹೋಗುಗಳ ಬಗ್ಗೆ ಇರುವ ಅನುಭವ ಸಹಜವಾಗಿ ಬಂದಂತಾಗಿದೆ. ಪ್ರಕೃತಿಯಲ್ಲಿ ಆಗುವ ಹವಾಮಾನದ ವೈಪರೀತ್ಯ, ಮಳೆಯ ಬಗ್ಗೆ ಕುರುಬನಿಗಿರುವ ಅನುಭವವು ಬಹು ನಿಖರವಾದದ್ದು. ಈ ಜೀವನಾನುಭವದ ಹಿನ್ನೆಲೆಯಲ್ಲಿ ಅದನ್ನು ಕುರಿತು ನಿಖರವಾಗಿ ಹೇಳಬಲ್ಲವರಾಗಿದ್ದರು. ಹೀಗೆ ಪರಂಪರಾಗತವಾಗಿ ಪ್ರಕೃತಿಯ ಆಗುಹೋಗುಗಳ ಬಗ್ಗೆ ಅನುಭವ ಉಳ್ಳವರು, ಸ್ವಭಾವತಃ ಮುಗ್ದರೂ, ಅಪಾರ ದೈವಭಕ್ತರೂ ಆದ ಕುರುಬರು ಆಡಿದ ಮಾತಿಗೆ ದೈವತ್ವದ ನೆಲೆ ಪ್ರಾಪ್ತವಾಗಿರಬೇಕು. ಇಂತಹಾ ಅವರ ಮಾತುಗಳೆ ಹೇಳಿಕೆಗಳಾಗಿವೆ. ಈ ಕುರುಬ ಒಡೆಯರ ಹೇಳಿಕೆಗಳಿಗೆ ಉತ್ತರ ಕರ್ನಾಟಕ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ವಿಜಯಪುರ, ಗುಲಬರ್ಗ, ಬೆಳಗಾವಿ ಜಿಲ್ಲೆಗಳಲ್ಲಿ ಜನಮನ್ನಣೆಗೆ ಪ್ರಾಪ್ತವಾಗಿವೆ. ಈ ಭಾಗದ ರೈತರು ಒಡೆಯರು ಹೇಳುವ ಹೇಳಿಕೆಗಳು ಅಕ್ಷರಶಃ ಸತ್ಯವಾಗುತ್ತವೆ ಎಂದು ನಂಬುತ್ತಾರೆ. ಉತ್ತರ ಕರ್ನಾಟಕದಲ್ಲಿ ಕುರುಬರ ಪ್ರಮುಖ ಪುಣ್ಯ ಸ್ಥಳಗಳಾದ ಸರೂರು, ಅರಿಕೇರೆ, ಮಕಣಾಪುರ, ಚಬನೂರು, ಧವಳಾರ ಇತ್ಯಾದಿ ಸ್ಥಳಗಳಲ್ಲಿಯ ಒಡೆಯರುಗಳು ಹೇಳುವ ಹೇಳಿಕೆಗಳು ತುಂಬಾ ಪ್ರಸಿದ್ಧವಾಗಿವೆ. ಸಾಮಾನ್ಯವಾಗಿ ಈ ನೆಲೆಗಳಲ್ಲಿ ಯುಗಾದಿ, ಮಹಾಶಿವರಾತ್ರಿ, ದೀಪಾವಳಿ, ಛಟ್ಟಿಅಮಾವಾಸ್ಯೆ ಸಂದರ್ಭಗಳಲ್ಲಿ ರೇವಣಸಿದ್ಧೇಶ್ವರ, ಅಮೋಘಸಿದ್ಧೇಶ್ವರ ಹಬ್ಬ ಉತ್ಸವಗಳನ್ನು

ಆಚರಿಸುತ್ತಾರೆ. ಈ ಹಬ್ಬಗಳ ಸಂದರ್ಭದಲ್ಲಿ ಡೊಳ್ಳಿನ ವಾಲಗ ನಡೆಯುತ್ತದೆ. ದೇವರ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಗಂಗಾಸ್ನಾನಕ್ಕೆ ಹೋಗುತ್ತಾರೆ. ಪಲ್ಲಕ್ಕಿ ಉತ್ಸವ, ಮೆರವಣಿಗೆಗಳನ್ನು ಮಾಡುತ್ತಾರೆ. ದೇವರ ಈ ಉತ್ಸವ ಸಂದರ್ಭದಲ್ಲಿ ಒಡೆಯರುಗಳ ಮೈಯಲ್ಲಿ ದೇವರು ಪ್ರವೇಶವಾಗುತ್ತದೆ. ಆಗ ಅಲ್ಲಿ ಒಂದು ರೀತಿಯ ದೈವೀ ಆವರಣ ಉಂಟಾಗುತ್ತದೆ. ಆಗ ಒಡೆಯರು ದೈಹಿಕವಾಗಿ ನೆಲೆದ ಮೇಲಿದ್ದರೂ ಭಾವ ಭಗವಂತನಲ್ಲಿ ಲೀನವಾಗಿ ದೈವೀ ಸ್ಫೂರ್ತಿಗೆ ಒಳಗಾಗುತ್ತಾನೆ. ಅವನು ತನಗಾದ ನೈಸರ್ಗಿಕ ಅಧ್ಯಯನದ ಫಲವನ್ನು ಬೆಡಗಿನ ಮಾತಿನಲ್ಲಿ ಒಂದು ರೀತಿಯ ಒಗಟಿನೊಂದಿಗೆ ಉಚ್ಛರಿಸುತ್ತಾನೆ. ಅವುಗಳು ದೇವರ ಹೇಳಿಕೆಗಳಾಗುತ್ತವೆ.

ಒಡೆಯರು ಮಾಡುವ ಹೇಳಿಕೆಗಳಲ್ಲಿ ಬಹುಪಾಲು ಹೇಳಿಕೆಗಳು ಮುಂದೆ ಸಂಭವಿಸ ಬಹುದಾದ ಮಳೆ ಬೆಳೆಗೆ ಕುರಿತವುಗಳಾಗಿರುತ್ತವೆ. ಈ ಸಂದರ್ಭದಲ್ಲಿ ಅಲ್ಲಿ ಸೇರುವವರೆಲ್ಲ ಕೃಷಿಕರೇ ಆಗಿರುವುದರಿಂದ ಅವರ ಆಶೋತ್ತರಗಳಿಗೆ ಅನುಗುಣವಾದ ಹೇಳಿಕೆಗಳೇ ಅಲ್ಲಿ ಜರುಗುತ್ತವೆ. ಉದಾಹರಣೆಯಾಗಿ ೧. ಮಿರಗಕ್ಕ ಕೂರೀಗಿ ಸಾಗ ಮಾಡಬೇಕು ಅನ್ನುದ್ರಾಗ ಕಡ್ಡಿ ಅಡ್ಡ ಬಿತ್ತು. ೨. ಆರಿದ್ರಿಗಿ ಎಂಟಾಣೆ ಭಾಗ ಸಾಗ ಮಾಡೀನೀ, ಸಜ್ಜಿ, ತೊಗರಿ, ಸೇಂಗ, ಒಕ್ಕಲ ಮಗನಿಗೆ ಬಂಗಾರ ಖಡೆ ಒಗದೀನಿ ೩. ಹಿಂಗಾರಿ ಮುಂಗಾರಿ ಕಾಟಾ ಮಾಡುವುದರಾಗ ಹಿಂಗಾರಿ ಮುಂದಾಯಿತು ಎಂಬಂತಹಾ ಹೇಳಿಕೆಗಳು ಸಂಪೂರ್ಣವಾಗಿ ಮುಂದೆ ಸಂಭವಿಸಬಹುದಾದ ಮಳೆ ಬೆಳೆಗೇ ಸಂಬಂಧಪಟ್ಟವುಗಳಾಗಿವೆ ಎಂಬುದು ಗಮನಾರ್ಹವಾದುದು. ಈ ಪ್ರದೇಶದ ಜನರು ಬಹುಪಾಲು ರೈತರು. ಮಳೆ ಬಂದರೆ ಬೆಳೆ, ಬೆಳೆ ಬೆಳೆದರೆ ಬದುಕು, ಇಲ್ಲವಾದರೆ ಶೂನ್ಯ ಈ ಕಾರಣದಿಂದ ಒಡೆಯರ ಈ ಹೇಳಿಕೆಗಳನ್ನು ಅನುಸರಿಸಿ ತಮ್ಮ ಕೃಷಿ ಚಟುವಟಿಕೆಗಳನ್ನು ಮಾಡುತ್ತಾರೆ.

ಮುಂದೆ ಬರಬಹುದಾದ ಕಷ್ಟ ಕಾರ್ಪಣ್ಯ, ರೋಗ ರುಜಿನೆಗಳು ತೊಂದರೆಯನ್ನು ನೀಡಿದಾಗ ೧. ಗಿಡದಾಗ ಹಣ್ಣಾಯಿತು ಗಿಳಿ ಬಾಯೀಗಿ ಹುಣ್ಣ ಹುಟ್ಟೀತು. ೨. ಕುದರೀಗಿ ತಡಿಬಿಗದೀನಿ ಕುದರೀ ಮ್ಯಾಗ ಕುಂದ್ರಲಾಕ ಇಲ್ಲಾಂತಾನ ೩. ಊರ ಅಗಸ್ಯಾಗ ಕ್ವಾಣ ಹೊಕ್ಕೀತು, ರಾಜ ಬಂದು ಅಗಸ್ಯಾಗ ಕುಂತಾನ ಹಗ್ಗ ಹಾಕಿ ಎಳಿಬೇಕು ಅಂತಾನ, ಬಲಿಜ್ವಾಕಿ ಬಲಿಹುಷಾರಿ ಎಂಬಂತಹಾ ಹೇಳಿಕೆಗಳು ಮುಂದೆ ಬರಬಹುದಾದ ಅಪಾಯದ/ತೊಂದರೆಯ ಸೂಚನೆಗಳನ್ನು ನೀಡುತ್ತವೆ.

ಹೇಳಿಕೀ ಮಾಡ್ಯಾರ ಒಡೆಯರು ಎಂಬ ಪ್ರಸ್ತಾವನೆಯನ್ನು ಡಾ.ಎಂ.ಎಂ.ಪಡಶೆಟ್ಟಿ ಅವರು ಹೊರತಂದಿದ್ದಾರೆ. ಈ ಪ್ರಸ್ತಾವನೆಯು ಕುರುಬ ಜನಾಂಗದ ಒಡೆಯರು ನುಡಿದ ೨೦೫ ರಷ್ಟು ಹೇಳಿಕೆಗಳನ್ನು ಒಳಗೊಂಡಿದೆ. ಇವುಗಳಲ್ಲಿನ ಕೆಲ ಹೇಳಿಕೆಗಳನ್ನು ಗಮನಿಸಬಹುದಾಗಿದೆ.

೧.ಆನಿಗಡತರ ಮೋಡ ಒಂಟಿಗಡತರ ಹುಲ್ಲು ಆಡುಮರಿ ಕುಡಿಯಲಿಕ್ಕೆ ನೀರಿಲ್ಲ. ಬರಗಾಲ ಸಂಕೇತವನ್ನು ಸಾರುವ ಈ ಹೇಳಿಕೆ ಒಗಟಿನಲ್ಲಿದ್ದು ಕಾವ್ಯ ಭಾಷೆಯನ್ನು ಹೊಂದಿದೆ. ಇಲ್ಲಿ ಉಪಮಾನ, ಉಪಮೇಯಗಳ ಬಳಕೆಗಳನ್ನು ಕಾಣಬಹುದು. ೨. ಬಾಜಾರದಾಗಿನ ಸೊಲಗಿ ಪಾತಾಳಕ್ಕೆ ತುಳಿಯುವುದರಾಗ ಆಕಾಶಕ್ಕೆ ಜಿಗಿತು ಈ ಹೇಳಿಕೆಯು ಬೆಲೆ ಏರಿಕೆಯ ಸಂಕೇತವಾಗಿದೆ.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮನಗೂಳಿ ಗ್ರಾಮದಲ್ಲಿ; ರೇವಣಸಿದ್ಧನ ಮಠವಿದೆ. ಶ್ರೀಮಠಕ್ಕೆ ಸರೂರು ಶಾಂತಮುತ್ತಯ್ಯನ ಅನುಯಾಯಿಗಳು ಒಡೆಯರುಗಳಾಗಿದ್ದಾರೆ. ಪ್ರಸ್ತುತ ಶ್ರೀ ಮಲ್ಲಯ್ಯ ಸರೂರು ಮತ್ತು ಶ್ರೀ ಸಿದ್ಧಯ್ಯ ಸರೂರು ಇವರುಗಳು ಒಡೆಯರುಗಳಾಗಿದ್ದಾರೆ. ಈ ಕ್ಷೇತ್ರವು ರೇವಣಸಿದ್ಧನ ಪುರಾತನ ನೆಲೆಯಾಗಿದ್ದು; ಹಬ್ಬ ಹರಿದಿನ, ಶ್ರಾವಣಮಾಸದ ವಿಶೇಷ ಪೂಜೆಗಳ ಜೊತೆಗೆ ಪ್ರತಿವರ್ಷ, ಸಾಮಾನ್ಯವಾಗಿ ಅಕ್ಷತೆಯ ಅಮಾವಾಸ್ಯೆಯ ನಂತರ ೫ನೇ ದಿನದಂದು (ಮೇ ತಿಂಗಳು), ಪಲ್ಲಕ್ಕಿ ಉತ್ಸವ ನಡೆಯುವುದು. ಈ ಪಲ್ಲಕ್ಕಿ ಉತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮದ ದೈವಗಳು ಹಾಗೂ ಸಮಾಜದ ಎಲ್ಲ ಜಾತಿ ಜನಾಂಗದವರು ಭಾಗವಹಿಸುವರು. ಈ ಪಲ್ಲಕ್ಕಿ ಉತ್ಸವದ ಮೊದಲದಿನದಂದು ಸಂಜೆ ಸರಿಸುಮಾರು ೬ ಗಂಟೆಯ ಸಮಯದಲ್ಲಿ ರೇವಣಸಿದ್ಧನ ದೇವಾಲಯದ ಆವರಣದಲ್ಲಿ ಹೇಳಿಕೆ ಹೇಳುವ ಧಾರ್ಮಿಕ ಕಾರ್ಯಕ್ರಮ ನಡೆಯುವುದು. ತರೇವಾರಿ ಮುಳ್ಳಿನ ಕಂತೆಗಳನ್ನು ತಂದು ಒಂದೆಡೆ ರಾಶಿ ಮಾಡುವರು. ಆ ಮುಳ್ಳಿನ ರಾಶಿಯನ್ನೇರಿ ಒಡೆಯರುಗಳು ಹೇಳಿಕೆ ಹೇಳುವರು. ಅಂದಿನಿಂದ ಇಂದಿನವರೆಗೂ ಈ ಸಂಪ್ರದಾಯ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ.

ರೇವಣಸಿದ್ಧ ಸಂಪ್ರದಾಯದ ಅತ್ಯಂತ ಮುಖ್ಯ ಧಾರ್ಮಿಕ ನೆಲೆಯಾದ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಶ್ರೀ ರೇವಣಸಿದ್ಧನ ನೆಲೆಯಲ್ಲಿ ಇಂದಿಗೂ ಹೇಳಿಕೆ ಹೇಳುವ ಸಂಪ್ರದಾಯವನ್ನು ಗಮನಿಸಬಹುದಾಗಿದೆ. ಸರೂರು ಗ್ರಾಮದಲ್ಲಿ ರೇವಣಸಿದ್ಧನ ಮತ್ತು ಶ್ರೀ ಶಾಂತಮುತ್ತಯ್ಯನ ಪಲ್ಲಕ್ಕಿ ಉತ್ಸವಗಳು ತೂಗುಗುಡ್ಡಕ್ಕೆ ತೆರಳುವವು. ಮೆರವಣಿಗೆಯ ನಂತರ ನಡೆಯುವ ವಿಶೇಷ ಡೊಳ್ಳಿನ ವಾಲಗದಲ್ಲಿ ಮುಳ್ಳಿನ ಕಂತೆಯನ್ನೇರಿದ, ರೇವಣಸಿದ್ಧ ಸಂಪ್ರದಾಯದ ಒಡೆಯರುಗಳು ಹೇಳಿಕೆ ಹೇಳುವರು. ಈ ಹೇಳಿಕೆಗಳು ಶಿವನಿಂದ ಬಂದ ಮಾತುಗಳು ಎಂಬುದು ಜನರ ನಂಬಿಕೆ. ಈ ಹೇಳಿಕೆಗೆ ಅನುಸಾರವಾಗಿ ಮಳೆ ಬೆಳೆ, ಒಳಿತು ಕೆಡುಕುಗಳನ್ನು ಲೆಕ್ಕಾಚಾರ ಮಾಡಿಕೊಂಡು ಮುಂಬರುವ ವರುಷದ ಜೀವನಕ್ಕೆ ಅಣಿಯಾಗುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆಯಾಗಿ ರೇವಣಸಿದ್ಧ ಸಂಪ್ರದಾಯದ ಒಡೆಯರು ನುಡಿಯುವ ಹೇಳಿಕೆಗಳು ಕುರುಬ ಸಮಾಜದ ಆಚಾರ ವಿಚಾರ ನಂಬಿಕೆ ಹಾಗೂ ಸಾಂಸ್ಕೃತಿಕ ಆಯಾಮಗಳೆಡೆ ವಿವರಗಳನ್ನು ಒದಗಿಸುತ್ತದೆ.

ಕೊನೆ ಟಿಪ್ಪಣಿಗಳು

೧. ಡಾ.ಎಂ.ಎಂ.ಕಲಬುರ್ಗಿ, ಸಮ್ಮೇಳನಾಧ್ಯಕ್ಷರ ಭಾಷಣ, ಹಾಲುಮತ ವ್ಯಾಸಂಗ–೫, ಸಂ.ಡಾ.ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೩

೨. ಜಾಲವಾದಿ ಮಲ್ಲಣ್ಣ ವಿರಚಿತ, ರೇವಣಸಿದ್ಧೇಶ್ವರ ಕಾವ್ಯ, ಪೀಠಿಕೆಯ ಪು.V

೩. ಅದೇ, ಪು.VI

೪. ಡಾ.ಎಂ.ಎಂ.ಕಲಬುರ್ಗಿ, ಪ್ರಬಂಧಗಳ ಸಂಕಲನ, ರೇವಣಸಿದ್ಧ ಮತ್ತು..., ಸಂ.ಡಾ.ಕೆ.ರವೀಂದ್ರನಾಥ, ಸಂವಹನ ಪ್ರಕಾಶನ, ಮೈಸೂರು, ಪು.೧೨

೫. ಡಾ.ಎಂ.ಎಂ.ಕಲಬುರ್ಗಿ, ಹಾಲುಮತ ಅಧ್ಯಯನಗಳು, ಸಂ.ಡಾ.ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ಪು.೬೬

೬. ಅದೇ, ಪು.೬೭

೭. ಡಾ.ಅನ್ನಪೂರ್ಣ ಗೋಸ್ಬಾಳ, ಹಾಲುಮತ ಅಧ್ಯಯನ ಆಕರಗಳು, ವಿದ್ಯಾನಿಧಿ ಪ್ರಕಾಶನ, ಗದಗ, ಪು.೧೮

೮. ಡಾ.ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ(ಸಂ), ತಗರು ಪವಾಡ, ವಿದ್ಯಾನಿಧಿ ಪ್ರಕಾಶನ, ಗದಗ, ಪ್ರಸ್ತಾವನೆಯ ಭಾಗ

೯. ಡಾ.ಕೆ.ರವೀಂದ್ರನಾಥ(ಸಂ), ಡಾ.ಎಂ.ಎಂ.ಕಲಬುರ್ಗಿಯವರ ಪ್ರಬಂಧಗಳ ಸಂಕಲನ ರೇವಣಸಿದ್ಧ ಮತ್ತು..., ಸಂವಹನ ಪ್ರಕಾಶನ, ಮೈಸೂರು, ಪು.೨೩೧

೧೦. ಡಾ.ಅನ್ನಪೂರ್ಣ ಗೋಸ್ಬಾಳ, ಹಾಲುಮತ ಅಧ್ಯಯನ ಆಕರಗಳು, ವಿದ್ಯಾನಿಧಿ ಪ್ರಕಾಶನ, ಗದಗ, ಪು.೬೧

೧೧. ಅದೇ, ಪು.೬೪

೧೨. ಡಾ.ವೀರೇಶ ಬಡಿಗೇರ, ಹಾಲುಮತ ವ್ಯಾಸಂಗ–೪, ಡಾ.ಎಫ್.ಟಿ.ಹಳ್ಳಿಕೇರಿ(ಸಂ), ಪು.೩೩

೧೩. ಡಾ.ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ(ಸಂ), ತಗರು ಪವಾಡ, ವಿದ್ಯಾನಿಧಿ ಪ್ರಕಾಶನ, ಗದಗ, ಪು.೧೨೪

ಅಧ್ಯಾಯ : ನಾಲ್ಕು

ರೇವಣಸಿದ್ಧ ಪರಂಪರೆ: ಚಾರಿತ್ರಿಕ ಹಿನ್ನೆಲೆ

ಳ.೧. ರೇವಣಸಿದ್ಧನ ಇತಿವೃತ್ತ

ಳ.೨. ಸಿದ್ಧಪರಂಪರೆ

ಳ.೩. ಪಂಥ ಪ್ರಭಾವ

ಅಧ್ಯಾಯ : ನಾಲ್ಕು

ರೇವಣಸಿದ್ಧ ಪರಂಪರೆ: ಚಾರಿತ್ರಿಕ ಹಿನ್ನೆಲೆ

೪.೧. ರೇವಣಸಿದ್ಧನ ಇತಿವೃತ್ತ

ರೇವಣಸಿದ್ಧನ ಆಕರಗಳನ್ನು ಅಧ್ಯಯನ ಮಾಡಿದಾಗ, ಆತನು ವ್ಯಕ್ತಿಯಿಂದ ವ್ಯಕ್ತಿತ್ವವಾಗಿ, ವ್ಯಕ್ತಿತ್ವದಿಂದ ದೈವಕ್ಕೆ ಏರಿದವನಾಗಿದ್ದಾನೆ. ತನ್ನ ಸಾಧನೆಗಳಿಂದಾಗಿ ಸಿದ್ಧರಲ್ಲಿ ಸಿದ್ಧನಾದವನು ರೇವಣಸಿದ್ಧ. ಕೇವಲ ಧಾರ್ಮಿಕ ಕ್ಷೇತ್ರವಲ್ಲದೆ ಸಾಮಾಜಿಕ ಹಾಗೂ ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಹಂತ ಹಂತವಾಗಿ ಬೆಳೆದು ಬಹುಮುಖಿ ವ್ಯಕ್ತಿತ್ವವುಳ್ಳವನಾಗಿದ್ದಾನೆ. ಒಂದು ಕಾಲದ ಸಾಂಸ್ಕೃತಿಕ ನಾಯಕನ ಬದುಕನ್ನು ಕುರಿತಾಗಿನ ವಿವರಗಳು ಶಾಸನ, ಐತಿಹ್ಯ, ದಾಖಲೆ ಕಾವ್ಯ ಪುರಾಣಗಳಲ್ಲಿ ಮೌಖಿಕವಾಗಿಯೂ ಲಿಖಿತವಾಗಿಯೂ ಸೃಷ್ಟಿಯಾಗುತ್ತಾ ಬಂದಿವೆ. ಒಂದು ಕಾಲದಲ್ಲಿ ಹೀಗೆ ಸೃಷ್ಟಿಗೊಂಡ ಇವುಗಳು ಮುಂದೊಂದು ದಿನ ಆ ಸಾಂಸ್ಕೃತಿಕ ನಾಯಕನ ಚರಿತ್ರೆಯ ಮರುಸೃಷ್ಟಿಗೆ ಆಕರವಾಗುತ್ತವೆ. ಒಂದು ಇನ್ನೊಂದನ್ನು ಅವಲಂಭಿಸಿ ಅವಸ್ಥಾಂತರಗೊಳ್ಳುವ ಕ್ರಿಯೆಯು ನೇರ ಹಾಗೂ ಸರಳವಾಗಿರದೆ ಅತ್ಯಂತ ಸಂಕೀರ್ಣವಾಗಿರುತ್ತದೆ. ಕಾಲವನ್ನು ನಾವು ಆಳಲು ಸಾಧ್ಯವಿಲ್ಲ; ಕಾಲವೇ ನಮ್ಮನ್ನು ಆಳುತ್ತದೆ. ಕಾಲವೇ ನಮ್ಮ ಶತ್ರು ಮಿತ್ರ. ಇಂತಹಾ ಕಾಲದ ಕುಲುಮೆಯಲ್ಲಿ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ರೂಪಾಂತರಗೊಳ್ಳುವಾಗ ಮೂಲದಿಂದ ಬೇರೆಯದೇ ಆದ ಕೆಲವೊಮ್ಮೆ ಮೂಲಕ್ಕೆ ತದ್ವಿರುದ್ಧವಾದ ಹಲವಾರು ಪಲ್ಲಟಗಳು ಸಂಭವಿಸುತ್ತವೆ. ಕೆಲವು ಸಲ ಈ ಪಲ್ಲಟಗಳು ಕೃತಿಕಾರನ ಅರಿವಿಗೆ ಬಾರದೇ ಘಟಿಸುತ್ತವೆ. ಆದರೆ ಬಹುಪಾಲು ಸಂದರ್ಭದಲ್ಲಿ ಕೃತಿಕಾರನ ಪಂಥದ ಹಿತಾಸಕ್ತಿಗಳಿಗೆ ಪೂರಕವಾಗಿ ಆತನ ಉದ್ದೇಶಗಳನ್ನು ಪೂರೈಸುವಲ್ಲಿ ಸಹಕಾರಿಯಾಗುತ್ತವೆ. ಈ ಸಂದರ್ಭದಲ್ಲಿನ ರಚನೆಗಳು, ವಸ್ತು ಸನ್ನಿವೇಶಗಳನ್ನು ಪಲ್ಲಟ/ವಿರೂಪಗೊಳಿಸುತ್ತವೆ.

ಆಕರಗಳು ಸೃಷ್ಟಿಯಾದ ಹಿನ್ನೆಲೆಯ ವಸ್ತು ಸ್ಥಿತಿಗಳನ್ನು ಗಮನಿಸಿದಾಗ, ಇವುಗಳನ್ನು ಆಧರಿಸಿ ಸಾಂಸ್ಕೃತಿಕ ನಾಯಕನ ಇತಿವೃತ್ತ ವಿಚಾರ ಕಟ್ಟುವಲ್ಲಿ ಹಲವಾರು ಸಂದಿಗ್ಧಗಳು

ಎದುರಾಗುತ್ತವೆ. ಆಕರದೊಳಗಿನ ಯಾವ ಯಾವ ಅಂಶಗಳು ಚರಿತ್ರೆಯ ನಿಜ ಸಂಗತಿಗಳು ? ಯಾವ ಅಂಶಗಳು ಚರಿತ್ರೆಯ ನಿರೂಪಿತ ಕೃತ್ಯಗಳು ಎಂದು ಗ್ರಹಿಸುವುದು ಕಷ್ಟಸಾಧ್ಯವಾಗುತ್ತದೆ. ಒಬ್ಬ ಸಾಂಸ್ಕೃತಿಕ ನಾಯಕನನ್ನು ಕುರಿತಾದ ಸಾಹಿತ್ಯಿಕ ಪಠ್ಯ ಹಾಗೂ ಶಾಸನ ಪಠ್ಯ ಆಕರಗಳು ಲಭ್ಯವಿದ್ದ ಸಂದರ್ಭದಲ್ಲಿ ಸಾಹಿತ್ಯಿಕ ಪಠ್ಯಗಳಿಗಿಂತ ಶಾಸನ ಪಠ್ಯಗಳು ಚರಿತ್ರೆಯನ್ನು ಪುನರ್ ಕಟ್ಟುವಲ್ಲಿ ಹೆಚ್ಚು ಸಹಾಯಕವಾಗುತ್ತದೆ. ಸಾಹಿತ್ಯಿಕ ಪಠ್ಯ (ಕಾವ್ಯ), ಶಾಸನ ಪಠ್ಯಗಳನ್ನು ತೌಲನಿಕವಾಗಿ ನೋಡಿದಾಗ; ರಚನೆಕಾರನ ನೆಲೆಯಲ್ಲಿ ಸೃಷ್ಟಿಗೊಂಡ ಸಾಹಿತ್ಯಿಕ ಪಠ್ಯಗಳು ಆತನ ಅನುಭವ, ಕಲ್ಪನೆ, ಆಶ್ರಯ, ಆತನು ನಂಬಿದ ತತ್ವ ಸಿದ್ಧಾಂತಗಳಿಗೆ ಅನುಗುಣವಾಗಿರುತ್ತವೆ. ಈ ಎಲ್ಲದರ ಪರಿಣಾಮ ಆತನ ರಚನೆಯ ಮೇಲಾಗಿ ವಾಸ್ತವ ಸತ್ಯದಿಂದ ಹಲವು ಬಾರಿ ದೂರವಾಗುತ್ತವೆ. ಶಾಸನಗಳು ಪ್ರಭು ನೆಲೆಯಲ್ಲಿ ರೂಪುಗೊಂಡಿದ್ದರೂ; ಹಲವರ ಸಮಕ್ಷಮದಲ್ಲಿ ಬರೆಯಲ್ಪಟ್ಟು ಸಾಕ್ಷೀಕರಿಸಲ್ಪಡುವುದರಿಂದ; ಅವುಗಳು ಚರಿತ್ರೆಗೆ ಅಧಿಕ ಪ್ರಮಾಣದಲ್ಲಿ ಬದ್ಧವಾಗಿರುವುದು ಅನಿವಾರ್ಯವಾಗಿರುತ್ತದೆ. ರೇವಣಸಿದ್ಧನ ಇತಿವೃತ್ತ ವಿಚಾರವೂ ಇದಕ್ಕೆ ಹೊರತಾಗಿಲ್ಲ. ರೇವಣಸಿದ್ಧನ ಇತಿವೃತ್ತ ವಿಚಾರವು ಸಾಹಿತ್ಯಿಕ ಪಠ್ಯ ಹಾಗೂ ಶಾಸನ ಪಠ್ಯಗಳೆರೆಡರಲ್ಲೂ ಲಭ್ಯವಿದೆ.

ರೇವಣಸಿದ್ಧನ ಚರಿತ್ರೆಯನ್ನು ಕಟ್ಟಿಕೊಡುವ ಸಾಹಿತ್ಯಿಕ ಕೃತಿಗಳು ನಮ್ಮ ಮುಂದಿವೆ. ಅವುಗಳಲ್ಲಿ ಜಾಲವಾದಿ ಮಲ್ಲಣ್ಣ ಕವಿಯ ರೇವಣಸಿದ್ದೇಶ್ವರ ಕಾವ್ಯ, ಚೆನ್ನಬಸವಶಾಸ್ತ್ರಿ ಹಾಲುಮತ ಪುರಾಣ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಡಾ. ವೀರಣ್ಣ ದಂಡೆರವರು ಸಂಪಾದಿಸಿದ ಜನಪದ ಹಾಲುಮತ ಕಾವ್ಯ ಹಾಗೂ ವಚನಗಳು ರೇವಣಸಿದ್ಧನ ಇತಿವೃತ್ತ ರೂಪಿಸಿಕೊಳ್ಳುವಲ್ಲಿ ನಮಗೆ ಲಭ್ಯವಿದ್ದರೂ ರೇವಣಸಿದ್ಧನ ವಿಷಯದಲ್ಲಿ ಸಾಹಿತ್ಯಿಕ ಆಕರಗಳು ಸೃಷ್ಟಿಸಿದ ಪಲ್ಲಟಗಳು; ಆತನ ಇತಿವೃತ್ತ ಕಟ್ಟುವಲ್ಲಿ ಸಹಕಾರಿಯಾಗದೆ ಹಲವುಬಾರಿ ನಿಜ ಚರಿತ್ರೆಯ ದಿಕ್ಕುತಪ್ಪಿಸುವಂತಹುಗಳಾಗಿವೆ. ವಿಷಯ ಸನ್ನಿವೇಶಗಳನ್ನು ಕಾಲಬದ್ಧಗೊಳಿಸಿ ನಿರ್ವಚಿಸಿಕೊಳ್ಳಲು ಚರಿತ್ರೆಯು ಪ್ರಯತ್ನಿಸಿದರೆ ಇದಕ್ಕೆ ವಿರುದ್ಧವಾಗಿ ಸಾಹಿತ್ಯಿಕ ಪಠ್ಯಗಳು ವಿಷಯ ಸನ್ನಿವೇಶಗಳನ್ನು ಕಾಲಾತೀತಗೊಳಿಸಲು ಹವಣಿಸುತ್ತಿರುತ್ತವೆ.

ಹರಿಹರನ ರೇವಣಸಿದ್ಧನ ರಗಳೆಯಂತಹಾ ಕೃತಿಗಳು ಅರಿತು ಏಳನೂರು ವರ್ಷ ಮರೆತು ಮರೆತು ಏಳನೂರು ವರ್ಷ ಎಂದು ರೇವಣಸಿದ್ಧನ ಜೀವಿತವನ್ನು ಸಾವಿರದ ನಾನ್ನೂರು ವರ್ಷದವರೆಗೆ ಕೊಂಡೊಯ್ದು ಪುರಾಣೀಕರಿಸುತ್ತವೆ. ಕಾಲಾತೀತಗೊಳಿಸುವ ಉಪಕ್ರಮವಾಗಿ ಕಥಾನಾಯಕನ ಜನನವನ್ನು ಸಂದಿಗ್ಧಗೊಳಿಸುವ ತಂತ್ರಗಾರಿಕೆ ಬಳಸಿಕೊಳ್ಳಲಾಗುತ್ತದೆ. ಹಾಗೆ ಮಾಡುವ ಮೂಲಕ ನಾಯಕನ ಸುತ್ತಲೂ ಅಲೌಕಿಕತೆಯ ಪರ್ಯಾವರಣ ನಿರ್ಮಿಸಲಾಗುತ್ತದೆ. ರೇವಣಸಿದ್ಧನ ಜನನದ ವಿಷಯದಲ್ಲೂ ಬಹುಪಾಲು ಪಠ್ಯಗಳು ಹೀಗೆಯೇ ಮಾಡಿವೆ. ರೇವಣಸಿದ್ಧನಿಗೆ ಸಂಬಂಧಿಸಿದ ಪಠ್ಯಗಳನ್ನು ಕೂಲಂಕುಷವಾಗಿ ಗಮನಿಸಿದರೆ, ರೇವಣಸಿದ್ಧನ

ಸುತ್ತಲೂ ಅಲೌಖಿಕ ಪರ್ಯಾವರಣ ನಿರ್ಮಿಸುವಲ್ಲಿ ಕೃತಿಕಾರರು ಬಳಸಿದ ತಂತ್ರಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. ೧. ಅವತರಣ ತಂತ್ರ ೨. ಉದ್ಭವ ತಂತ್ರ ಹಾಗೂ ೩. ಆಜ್ಞೇಯ ತಂತ್ರ. ಮೊದಲೆರೆಡು ತಂತ್ರಗಳು ಅಯೋನಿಜತ್ವ ಪರಿಕಲ್ಪನೆಯನ್ನು ತನ್ನದಾಗಿಸಿಕೊಂಡಿವೆ. ಮೂರನೆಯ ತಂತ್ರವು ಯೋನಿಜತ್ವ ಪರಿಕಲ್ಪನೆಯನ್ನು ಒಪ್ಪಿಕೊಂಡಿದೆ. ಮುಂದುವರೆದು ಈ ತಂತ್ರದಲ್ಲಿ ಯೋನಿಜತ್ವ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲಾಗುತ್ತದೆಯಾದರೂ ತಂದೆ ತಾಯಿ ಬಗೆಗಿನ ವಿವರಗಳನ್ನು ನೀಡುವುದಿಲ್ಲ.

ಹರಿಹರನು ತನ್ನ ರಗಳೆಗಳಲ್ಲಿ ಆಯಾ ಕಥಾನಾಯಕನು ಮಾಡಿದ ಸ್ವಯಂಕೃತ ತಪ್ಪಿಗಾಗಿ ಸ್ವರ್ಗದಿಂದ ಭೂಮಿಗೆ ಅವತರಿಸಿದನೆಂದು ಹೇಳುತ್ತಾನೆ. ಇವನ ಪರಿಯನ್ನೆ ಈತನ ನಂತರದ ಹಲವಾರು ಕವಿಗಳು ಅನುಕರಿಸಿದ್ದಾರೆ. ಆದರೆ ರೇವಣಸಿದ್ಧನ ವಿಷಯಕ್ಕೆ ಬಂದಾಗ ಹರಿಹರನನ್ನು ಒಳಗೊಂಡಂತೆ ಬೊಮ್ಮರಸ, ಚನ್ನಬಸವಶಾಸ್ತ್ರಿ, ನಂಜನಗೂಡಿನ ಶ್ರೀಕಂಠಶಾಸ್ತ್ರಿ ಮುಂತಾದವರು ಅವತರಣದ ತಂತ್ರದ ಜೊತೆಜೊತೆಗೆ ಉದ್ಭವ ತಂತ್ರಗಳನ್ನು ಬಳಸಿದ್ದು ಗಮನಾರ್ಹವಾಗಿದೆ. ಮುಂದುವರೆದು ಇವರೆಲ್ಲರೂ ರೇವಣಸಿದ್ಧನ ಜನನವು ಇತಿವೃತ್ತದ ವ್ಯಾಪ್ತಿಯೊಳಗೆ ಬರದಂತೆ ನೋಡಿಕೊಂಡಿದ್ದಾರೆ. ಹಾಗೂ ಆತನ ತಂದೆ ತಾಯಿ, ಜನನ, ವಂಶವೃಕ್ಷ ಇತ್ಯಾದಿ ವಿವರಗಳನ್ನು ನೀಡದೆ ಆತನನ್ನು ದೈವೀಪುರುಷನನ್ನಾಗಿಸಿದ್ದಾರೆ.

ಹರಿಹರನ ರೇವಣಸಿದ್ಧೇಶ್ವರ ರಗಳೆಯಲ್ಲಿ, ಶಿವನ ಒಡ್ಡೋಲಗವು ನಡೆದ ಸಮಯದಲ್ಲಿ, ತನ್ನ ಬಾಯ್‌ತಾಂಬೂಲವನ್ನು ಕೊಡಲು ಶಿವ ರೇಣುಕ (ರೇವಣ)ನನ್ನು ಕರೆದಾಗ ಆತ ಆತುರದಲ್ಲಿ ದಾರುಕನೆಂಬ ದೇವಗಣವನ್ನು ದಾಟಿ ಬರುತ್ತಾನೆ.ಆ ಕಾರಣವಾಗಿ ಭೂಲೋಕದಲ್ಲಿ ಜನಿಸಬೇಕಾದ(ಅವತರಣ) ಶಾಪಕ್ಕೆ ಗುರಿಯಾಗುತ್ತಾನೆ. ಜಡ ಯೋನಿಯಲ್ಲಿ ಜನಿಸುವ ಶಾಪ ತನಗೆ ಬೇಡವೆಂದು ರೇವಣ ಕೇಳಿಕೊಂಡಾಗ ಶಿವನೊಲಿದು ಶಾಪದ ತೀವ್ರತೆಯನ್ನು ಕಡಿಮೆಗೊಳಿಸಿ ಸದಮಳವೆನಿಪ ಲಿಂಗದಲಿ ಜನಿಸು(ಲಿಂಗೋದ್ಭವ) ಎಂದು ವರ ನೀಡುವನು.

ದಾರುಕನನಿಂತು ದಾಂಟುವರೆ ರೇಣುಕ ನಿನಗೆ
ಧಾರುಣಿಯೊಳಗೆವ ಜಡಜನ್ಮವಾದುದು ನಿನಗೆ
ಎನೆರೇಣುಕಂ ಬೆರ್ಚಿ ಕೈಗಳಂ ಮುಗಿವುತಂ
ಮನಸಿಜಹರಂಗೆ ಭಿನ್ನೈಸಿದಂ ನಡುಗುತಂ
ದೇವ ಜಡಯೋನಿಯೊಳ್ಬರಲಾರ್ಪೆನೇ ತಂದೆ
ಎಂದು ರೇವಣ ಶಿವನಲ್ಲಿ ಪ್ರಾರ್ಥಿಸಲಾಗಿ ಶಿವನು
ದಾರುಕನನಿಂತು ದಾಂಟಿದೆ ಪೊಲ್ಲ

ಇದರಿಂದೆ ಸುಖದುಃಖಮಂ ಧರಣಿಯೊಳೆ ಪೊತ್ತು

ಸದಮಳವೆನಿಪ್ಪ ಲಿಂಗದೊಳೆ ಜನನಂಬೆತ್ತು

ಎಂದು ಹಾರೈಸಿದನು. ಹೀಗೆ ರೇವಣಸಿದ್ಧನನ್ನು ಒಬ್ಬ ಅವತಾರಿ ಪುರುಷನನ್ನಾಗಿಸಿ ಲಿಂಗೋದ್ಭವನಾದನೆಂದು ಚಿತ್ರಿಸಿದ್ದನ್ನು ಗಮನಿಸಿದಾಗ ಇಲ್ಲಿ ರೇವಣಸಿದ್ಧನನ್ನು ಒಬ್ಬ ಅವತಾರಿ ಪುರುಷನನ್ನಾಗಿ ಚಿತ್ರಿಸುವುದಕ್ಕೋಸ್ಕರ ಹರಿಹರನು ತನ್ನ ರಗಳೆಯಲ್ಲಿ ಕೊಲ್ಲೀಪಾಕಿಯ ಸೋಮನಾಥ ದೇವಾಲಯದ ಶಿವಲಿಂಗದಲ್ಲಿ ಉದ್ಭವಿಸಿದನು ಎಂದು ಚಿತ್ರಿಸಿದ ಪರಿ ಕೆಳಗಿನಂತಿದೆ.

ಆ ಸೋಮನಾಥನ ಶಿವಾಲಯದ ನಡುವೊಮ್ಮೆ

ಭಾಸುರದ ಶಿವಭಕ್ತಕೋಟಿ ಕುಳ್ಳಿರೇ . . .

ರಾಗದಿಂದಿರ್ದ ಸಭೆ ನಡುಗುತ್ತಮಿರೆ ಕರಂ

ನೆಲಮೊಳಗಿದಂದದಿಂ ಮೇಘಗರ್ಜನೆಯಂತೆ

ಸಲೆ ಲಿಂಗದೊಳಗಣಿಂ ಪೊಣ್ಮುತ್ತಲಿರತಂತೆ

ಪುಟ್ಟುರ್ತಿ ಸಿದ್ಧರೇಣುಕಯ್ಯಂ ನೋಡ

ನಿಷ್ಠೆ ಮಿಗೆ ಸಿದ್ಧರೇವಣನಾಮದಿಂ ನೋಡ

ಕೈಲಾಸದಲ್ಲಿ ತಾನು ಎಸಗಿದ ತಪ್ಪಿಗಾಗಿ ರೇವಣಸಿದ್ಧ ಭೂಮಿಯಲ್ಲಿ ಜನಿಸುವ ಶಾಪಕ್ಕೆ ತುತ್ತಾಗಿ, ಜಡಯೋನಿಯೊಳಗೆ ಜನಿಸುವುದು ಅನಿವಾರ್ಯವಾದಾಗ ಶಿವನನ್ನು ಪ್ರಾರ್ಥಿಸಲು ಕೊಲ್ಲಿಪಾಕಿಯ ಸೋಮನಾಥ ಲಿಂಗದಲ್ಲಿ ಹುಟ್ಟು(ಉದ್ಭವ)ವಂತಾಗುತ್ತದೆ. ಈ ಕಾರಣದಿಂದಾಗಿ ರಗಳೆ ಪುರಾಣಗಳಲ್ಲಿ ಚಿತ್ರಿತವಾಗಿರುವ ರೇವಣಸಿದ್ಧನಿಗೆ ಮನುಷ್ಯ ಸಹಜ ಬಾಲ್ಯವಿಲ್ಲವಾಗಿದೆ.

ಅದೇ ಕಂಥೆಯದೆ ವದನವದೆ ವಜ್ರಕುಂಡಲಮ

ಅದೆ ವಕ್ಷವದೆ ಹಸ್ತವದೆ ಹಿಡಿದಲಾಕುಳಂ

ಅದೆ ಕೋವಣಂ ನೋಡೆತ್ತಮಿರಲುದಿಸಿದಂ

ಸದಮವಳವೆನಿಪ್ಪ ಶಿವಲಿಂಗದಿಂ ಪುಟಿದಂ

. . . .

ಭಸಿತದಿಂ ನೊಸಲಕಣ್ಣಂ ಮುಸುಂಕಿಟ್ಟಲ್ಲಿ

ಎಸೆವೆರಳಂಗಳಿಂ ಬೆಳ ಬೆಳಗುತಂತಲ್ಲಿ

ಜ್ಯೋತಿಯಿಂದಂ ಜ್ಯೋತಿಯೊಗೆದ ತೆರೆದಂತಾಗೆ

ಜಾತು ಪುಟ್ಟಿದನಯೋನಿಜನಿಳೆಗೆ ಪೊಸತಾಗಿ

ಮೇಲಿನ ಹರಿಹರನ ರಗಳೆಯಲ್ಲಿನ ವರ್ಣನೆಗಳನ್ನು ನೋಡಿದಾಗ ಕೊಲ್ಲಿಪಾಕಿಯಲ್ಲಿ ಉದ್ಭವಗೊಳ್ಳುವ ರೇವಣಸಿದ್ಧ ಪಂಥವೊಂದರ ಪಕ್ಕಾ ಪ್ರತಿನಿಧಿಯಾಗಿ ಕಾಣುತ್ತಾನೆ. ಕಂಥೆ, ವಜ್ರಕುಂಡಲ, ಲಾಕುಳ, ಕೋವಣ, ಭಸಿತ ಮುಂತಾದ ಪಂಥ ಲಾಂಛನಗಳನ್ನು ಧರಿಸಿ ಅಯೋನಿಜನಾಗುತ್ತಾನೆ.

ಜಾಲವಾದಿ ಗ್ರಾಮದ ಮಲ್ಲಣ್ಣ ಕವಿ ತನ್ನ ರೇವಣಸಿದ್ಧೇಶ್ವರ ಕಾವ್ಯದಲ್ಲಿ ಅವತರಣ ತಂತ್ರದ ಜೊತೆ ಜೊತೆಗೆ ಅಜ್ಞಾತಗೊಳಿಸುವ ತಂತ್ರವನ್ನೂ ಬಳಸಿಕೊಂಡಿದ್ದಾನೆ. ಭೂಲೋಕದಲ್ಲಿ ನಡೆಯುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ಹೊಡೆದೋಡಿಸುವ ಉದ್ದೇಶದಿಂದ ಶಿವನೇ ರೇವಣಸಿದ್ಧನಾಗಿ ಹುಟ್ಟುವನು ಎಂದು ಪ್ರತಿಪಾದಿಸುವ ಕವಿ, ಶಿವನು ಭೂಮಿಯ ಮೇಲೆ ಸಹಜ ಬಾಲಕನ ವೇಷದಲ್ಲಿ ಕಾಣಿಸಿಕೊಳ್ಳುವನು ಎಂದು ಚಿತ್ರಿಸುತ್ತಾನೆ. ದೇವನ ಅವತಾರವೇ ಆದರೂ ಅವನಲ್ಲಿ ಮನುಷ್ಯ ಸಹಜವಾದ ಹಸಿವು ನೀರಡಿಕೆಗಳಿವೆ. ಈ ಕೃತಿಯಲ್ಲಿ ರೇವಣಸಿದ್ಧ ಮೊದಲು ಕಾಣಿಸಿಕೊಳ್ಳುವುದು ಜಟ್ಟೂರು ಗ್ರಾಮದಲ್ಲಿ . ಹಸಿದ ಬಾಲಕ ರೇವಣಸಿದ್ಧನಿಗೆ ಜಟ್ಟೂರಿನ ಗ್ರಾಮದ ಧಣಿಗಳು ಅಂಬಲಿ ಕೊಡಲು ನಿರಾಕರಿಸಿದಾಗ, ಆಚೆಗೊಂಡನೆಂಬ ರೈತನಲ್ಲಿಗೆ ಬರುತ್ತಾನೆ. ಆಚೆಗೊಂಡ ಆತನ ಹೆಸರು ತಂದೆ ತಾಯಿಗಳ ಬಗೆಗೆ ಕೇಳಿದಾಗ ತನ್ನ ಹೆಸರು ಎಲ್ಲಗುಂಡಿಯ ಆದಿಗೊಂಡ ಎಂದು ತಿಳಿಸಿ ತನ್ನ ತಂದೆ ತಾಯಿಯ ಹೆಸರು ಗೊತ್ತಿಲ್ಲವೆಂದು ಹೇಳುತ್ತಾನೆ. ಮುಂದುವರೆದು ಕುಡುವಕ್ಕಲಿಗನ ಸಾಕು ಮಗನಾದ ತಾನು ಹರಗಬಲ್ಲೆ, ಬಿತ್ತಬಲ್ಲೆ ಎಂದು ಹೇಳಿಕೊಳ್ಳುತ್ತಾನೆ. ಇಲ್ಲಿ ಚಿತ್ರಿತವಾದ ರೇವಣಸಿದ್ಧ ಯೋನಿಜನಾದರು ಅವನ ಜನನ ಮೂಲವನ್ನು ಅಜ್ಞಾತಗೊಳಿಸಲಾಗಿದೆ.

> ತಂದೆ ತಾಯಿಗಳುಂಟೆ ಹೇಳು ಮಗನೆ
>
> ತಂದೆ ತಾಯಿಗಳರಿಯೆ ಲೋಗರ ಮನೇಲಿ ಬೆಳೆದೆ
>
> . . . .
>
> ಯಲ್ಲಗುಂಡಿಯ ಆದಿಗೊಂಡನು
>
> ತಲ್ಲಿ ಹೆಸರಲಿ ಕರೆದರೆನ್ನರು

ಎಂಬ ವಿವರಣೆಯನ್ನು ಗಮನಿಸಿದಾಗ ತಂದೆ ತಾಯಿಗಳರಿಯೆ ಎಂದು ಈ ಕಾವ್ಯದಲ್ಲಿ ಹೇಳಲಾಗಿದೆಯಾದರು ೧೧೮೭ರ ಸಿರಿವಾಳ ಶಾಸನದಲ್ಲಿ ಶಾಂತಮಯ್ಯ ದೇವಂಗಳ ಪುತ್ರ ಎಂದು ಹೇಳಿರುವುದರಿಂದ ಶಾಂತಮಯ್ಯ ಎಂಬುವವನು ರೇವಣಸಿದ್ಧನ ತಂದೆ ಅಥವಾ ಗುರು ಆಗಿರಬಹುದಾಗಿದೆ ಎಂಬುದರ ಬಗ್ಗೆ ಚರ್ಚೆಯು ನಡೆದಿರುವುದನ್ನು ಗಮನಿಸಬಹುದಾಗಿದೆ.

ನವನಾಥ ಚರಿತ್ರೆಯಲ್ಲೂ ರೇವಣಸಿದ್ಧ ಯೋನಿಜನಾಗಿ ಚಿತ್ರಿತವಾಗಿದ್ದರೂ ಅವನ ಜನನ ಮೂಲ ಅಜ್ಞಾತವಾಗಿದೆ. ಗೋರಕನಾಥ ಮೊದಲಾದವರು ಒಂದು ಸಾರಿ ಸಂಚಾರದಲ್ಲಿದ್ದಾಗ ರೇವಾ ನದಿಯ ದಂಡೆಯ ಮೇಲೆ ಅನಾಥ ಮಗುವಾಗಿ ಅವರಿಗೆ ದೊರೆಯುತ್ತಾನೆ. ಸಹನಸಾರಖನಾಥ ಎಂಬ ಕುಣುಬಿ ಆ ಮಗುವನ್ನು ತನ್ನ ಮನೆಗೆ ತಂದು ಸಾಕುತ್ತಾನೆ. ಸಾಕು ತಂದೆಯ ಮನೆ ಕಸುಬಾದ ವಕ್ಕಲುತನದಲ್ಲಿ ತೊಡಗಿಸಿಕೊಳ್ಳುತ್ತಾನೆ. ಹರಿಹರನ ರಗಳೆಯಲ್ಲಿ ರೇವಣಸಿದ್ಧ ಸರ್ವ ಸಿದ್ದಿಗಳನ್ನು ಸಾಧಿಸಿಕೊಂಡವನಂತೆ ಚಿತ್ರಿತವಾಗಿದ್ದರೆ ಜಾಲವಾದಿ ಮಲ್ಲಣ್ಣನ ಕೃತಿಯಲ್ಲಿ ಸಾಧಕನ ಹಾದಿಯಲ್ಲಿ ಇರುವವನ ಹಾಗೆ ಚಿತ್ರಿತವಾಗಿದ್ದಾನೆ. ಹರಿಹರನ ಮಾಧರಿಯಲ್ಲಿ ರೇವಣಸಿದ್ಧನದ್ದು ಸಿದ್ಧಗೊಂಡ ಸ್ಥಿರವ್ಯಕ್ತಿತ್ವವಾದರೆ ಜಾಲವಾದಿ ಮಲ್ಲಣ್ಣನ ಕೃತಿಯಲ್ಲಿ ರೇವಣಸಿದ್ಧನದ್ದು ರೂಪಗೊಳ್ಳುತ್ತ ಹೋಗುವ ಚರ ವ್ಯಕ್ತಿತ್ವವಾಗಿದೆ. ಕವಿ ಹರಿಹರನ ರೇವಣಸಿದ್ಧ ಪ್ರಶ್ನಾತೀತನಾಗಿದ್ದರೆ, ಜಾಲವಾದಿ ಮಲ್ಲಣ್ಣನ ರೇವಣಸಿದ್ಧ ಪ್ರಶ್ನೆಗೆ ತೆರೆದುಕೊಳ್ಳಬಲ್ಲವನಾಗಿದ್ದಾನೆ. ಹರಿಹರನ ರಗಳೆಯಲ್ಲಿನ ರೇವಣಸಿದ್ಧನಿಗೆ ನೀನು ಯಾರ ಮಗ? ಎಲ್ಲಿಂದ ಬಂದೆ? ಎಂದು ಯಾರೂ ಕೇಳಲಾರರೂ.

ರೇವಣಸಿದ್ಧನ ಕೊನೆ ದಿನಗಳನ್ನು ಗಮನಿಸುವುದಾದರೆ ಹರಿಹರನ ಕಥಾನಾಯಕ ರೇವಣಸಿದ್ಧ ಕೊಲ್ಲೀಪಾಕಿಯಲ್ಲಿ ಲಿಂಗೋದ್ಭವನಾಗಿ ಲಿಂಗದಲ್ಲಿಯೇ ಐಕ್ಯನಾಗುತ್ತಾನೆ. ಆದರೆ ಜಾಲವಾದಿ ಮಲ್ಲಣ್ಣ ಕವಿ ರೇವಣಸಿದ್ಧನ ಚರಿತೆಯನ್ನು ಕೊನೆಯ ದಿನಗಳವರೆಗೆ ಕೊಂಡೊಯ್ಯದೆ, ಮಾಸನೂರಿನ ಮಡುವಿನದಲ್ಲಿದ್ದ ಸುರಗಿಯನ್ನು ಬಿಜ್ಜಳನಿಗೆ ಮರುವಶ ಮಾಡಿಕೊಡುವುದರಲ್ಲಿಗೆ ಜಾಕೂರಿನ ಜಕ್ಕಲೆ ಎನ್ನುವ ಬಂಜೆಗೆ ತಾನು ಕರುಣಿಸಿದ್ದ ರೇವಣಸಿದ್ದವ್ವನನ್ನು ಬಿಜ್ಜಳನಿಗೆ ಮದುವೆ ಮಾಡಿಕೊಡುವುದರೊಂದಿಗೆ ಮುಕ್ತಾಯವಾಗುತ್ತದೆ ಹರಿಹರನು ತನ್ನ ರಗಳೆಯಲ್ಲಿ ರೇವಣಸಿದ್ಧನ ಪಾತ್ರ ಚಿತ್ರಣವನ್ನು ಅಚ್ಚುಕಟ್ಟಾಗಿ ಚಿತ್ರೀಕರಿಸಿದ್ದಾನೆ. ಇಲ್ಲಿಯ ಕಥಾನಾಯಕ ರೇವಣಸಿದ್ಧ ಎಲ್ಲಿ ಉದ್ಭವವಾಗಿದ್ದನೋ ಅಲ್ಲಿಯೇ ಐಕ್ಯವಾಗುತ್ತಾನೆ. ಆದರೆ ಮಲ್ಲಣ್ಣಕವಿ ತನ್ನ ಕೃತಿಯಲ್ಲಿ ರೇವಣಸಿದ್ಧನ ಪಾತ್ರ ಚಿತ್ರಣಕ್ಕೆ ಯಾವ ಚೌಕಟನ್ನೂ ವಿಧಿಸಿಕೊಂಡಿಲ್ಲ.

ರೇವಣಸಿದ್ಧನ ಯಾವುದೇ ಕಥನವಿದ್ದರೂ ಅಲ್ಲಿ ಎದ್ದು ಕಾಣುವ ಸಮಾನ ಅಂಶವೆಂದರೆ ರೇವಣಸಿದ್ಧನ ಪರ್ಯಟನ ಗುಣವುಳ್ಳನಾಗಿರುವುದು. ಒಂದು ಕಡೆ ನೆಲೆನಿಲ್ಲದೆ ಚಲಿಸುತ್ತಲೆ ಇರುವ ಸಿದ್ಧ/ನಾಥರ ಪ್ರಮುಖ ಲಕ್ಷಣವನ್ನು ರೇವಣಸಿದ್ಧನಲ್ಲಿ ಕಾಣಬಹುದಾಗಿದೆ. ಅವನದ್ದು ಚಾರಣ ವ್ಯಕ್ತಿತ್ವ. ಈತ ಸಂಚರಿಸಿದಷ್ಟು ವ್ಯಾಪಕವಾಗಿ ಅನ್ಯ ಸಿದ್ಧರು ಅಷ್ಟಾಗಿ ಸಂಚರಿಸಿಲ್ಲವೆಂದು ತೋರುತ್ತದೆ. ರೇವಣಸಿದ್ಧನ ಪರ್ಯಟನ ವ್ಯಾಪ್ತಿಯು ಲಂಕೆಯಿಂದ ಹಿಮಾಲಯ ದಾಟಿ ನೇಪಾಳದವರೆಗೆ ಹಬ್ಬಿದೆ. ಈ ಎರಡೂ ಕೃತಿಗಳಲ್ಲಿ ಬರುವ ಮಾಸನೂರು, ಮಂಗಳವೇಡ, ಕಲ್ಯಾಣ ಊರುಗಳು ಪ್ರಮುಖವಾದವುಗಳು. ಈ ಮೂರು ಸ್ಥಳಗಳಲ್ಲಿ ನಡೆಯುವ ಘಟನೆ/

ಪವಾಡಗಳು ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಒಂದೇ ತೆರನಾಗಿವೆ. ಮಾಸೂರಿನಲ್ಲಿ ನಡೆವ ಘಟನೆಗಳನ್ನು ಗಮನಿಸಿದಾಗ ಅಲ್ಲಿ ಗೋಚರಿಸುವ, ಮಾಸೂರಿನಲ್ಲಿ ಹೂತಿಟ್ಟ ಕಠಾರಿ/ಸುರಿಗೆಗಳ ಸುತ್ತ ನಡೆಯುವ, ರಾಕ್ಷಸ ತಿಗರಣೆಗಳನ್ನು ಲೋಹವಾಗಿಸಿ ಆ ಲೋಹದಿಂದ ಕಠಾರಿ ತಯಾರಿಸುವುದು ಹಾಗೂ ಬಿಜ್ಜಳನಿಗೆ ನೀಡುವುದು ಒಂದೇ ರೀತಿಯದಾಗಿದ್ದರೂ ಒಳ ವಿವರಗಳು ಸ್ವಲ್ಪಭಿನ್ನವಾಗಿವೆ. ರೇವಣಸಿದ್ಧನ ಸಂಚಾರದ ಇನ್ನೊಂದು ಪ್ರಮುಖ ಸ್ಥಳವೆಂದರೆ ಮಂಗಳವೇಡೆ. ಈ ಎರಡೂ ಸ್ಥಳಗಳಲ್ಲಿ ರೇವಣಸಿದ್ಧ ಇಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತಾನೆ. ಮಂಗಳವೇಡೆಯಲ್ಲಿ ನಡೆವ ಸುಡುವ ಹುಗ್ಗಿಯ ಪವಾಡ ಎರಡು ಕೃತಿಯಲ್ಲಿ ಸಮಾನ ಅಂಶಗಳಾದರೂ ಜಲವಾದಿ ಮಲ್ಲಣ್ಣನ ಕೃತಿಯಲ್ಲಿ ಈ ಪವಾಡವು ಇನ್ನೂ ವಿಸ್ತೃತರೂಪ ಪಡೆದುಕೊಂಡಿದೆ.

ಮಂಗಳವೇಡೆ ಕೆರೆಯನ್ನು ನಿರ್ಮಿಸುವ ಸಂದರ್ಭದಲ್ಲಿ ರೇವಣಸಿದ್ಧನ ಗರ್ಭಿಣಿ ಹೆಂಡತಿ (ಚೋಳರಾಜನ ಕುಮಾರಿ) ಸೌಂದರ್ಯದೇವಿಯ ಹೊಟ್ಟೆಯಲ್ಲಿರುವ ಮೂರು ತಿಂಗಳ ಪಿಂಡವನ್ನು ಹೊರತೆಗೆದು ಕೆರೆದಂಡೆಯಲ್ಲಿ ಹೂಳಿ ಆರು ತಿಂಗಳ ನಂತರ ರುದ್ರಮುನಿಯೆಂಬ ಕೂಸನ್ನು ಹೊರತೆಗೆಯುತ್ತಾನೆ. ಈ ಘಟನೆ ಮಲ್ಲಣ್ಣ ಕೃತಿಯಲ್ಲಿ ಬರುವುದಿಲ್ಲ. ಕಲ್ಯಾಣಪುರವು ರೇವಣಸಿದ್ಧ ಸಂಚರಿಸಿದ ಮತ್ತೊಂದು ಪ್ರಮುಖ ಸ್ಥಳವಾಗಿದೆ. ಇಲ್ಲಿ ತೆಲ್ಲಿಗರ ಕಲ್ಲಿಶೆಟ್ಟಿಯ ಮನೆಯಲ್ಲಿ ಆಳಾಗಿದುಡಿದು ಕುರುಡು ಎತ್ತುಗಳ ಸಹಾಯದಿಂದ ಎಣ್ಣೆಯ ಗಾಣ ನಡೆಸಿ; ಆದಾಯವನ್ನು ಹೆಚ್ಚಿಸುತ್ತಾನೆ. ಈ ಕುರಿತು ಇಬ್ಬರೂ ಕವಿಗಳು ಸಮಾನವಾದ ಕತೆಯನ್ನು ಹೇಳಿದ್ದಾರೆ. ಆದರೆ ಬಡವೇಶ್ಯೆಯನ್ನು ಉದ್ದಾರ ಮಾಡಿದ ಕಥೆಯಲ್ಲಿ ಇವರಿಬ್ಬರಿಗೂ ಭಿನ್ನತೆಯಿದೆ. ಮೇಲೆ ಚರ್ಚಿಸಿದ ಸಾಮಾನ್ಯ ಸಂಗತಿಗಳನ್ನು ದಾಟಿ ಇಬ್ಬರೂ ಲೇಖಕರು ವಿಶಿಷ್ಟವಾದ ಕೆಲಸ್ಥಳಗಳನ್ನು ಮತ್ತು ವಿಶಿಷ್ಟ ಘಟನೆಗಳನ್ನು ವಿವರಿಸಿದ್ದಾರೆ. ಹರಿಹರನ ಶೈವ ಪಂಥಿಯನಾದ ರೇವಣಸಿದ್ಧ ದಕ್ಷಿಣ ಭಾರತದ ಪ್ರಮುಖ ಶೈವ ಕೇಂದ್ರಗಳಿಗೆ ದರ್ಶನಾರ್ಥಿಯಾಗಿ ಭೇಟಿ ನೀಡುತ್ತಾನೆ. ಆ ಪೈಕಿ ಕಾಂಚೀಪುರಕ್ಕೆ ತೆರಳಿದ್ದಾಗ ಅಲ್ಲಿ ಚೋಳರಾಜನು ಸ್ಥಾಪಿಸಿದ ವಿಷ್ಣು ಪ್ರತಿಮೆ ಅಲ್ಲಾಡುತ್ತಿರಲು, ಕಂಪನಗೊಳ್ಳುತ್ತಿದ್ದ ಮೂರ್ತಿಗೆ ತನ್ನ ವೀರ್ಯಲೇಪನಮಾಡಿ ಕಂಪನವನ್ನು ನಿಲ್ಲಿಸುವುದನ್ನು ಗಮನಿಸಿದಾಗ, ಹರಿಹರನ ರೇವಣಸಿದ್ಧ ಶೈವಪಂಥದ ಉಗ್ರಪಂಥೀಯನಂತೆ ಕಾಣುತ್ತಾನೆ. ನಂತರ ಲಂಕೆಗೆ ತೆರಳಿ ಅಲ್ಲಿ ವಿಭೀಷಣ ಇಚ್ಛೆಯಂತೆ ಮೂರುಕೋಟಿ ಲಿಂಗಗಳನ್ನು ಸ್ಥಾಪಿಸುತ್ತಾನೆ. ಮುಂದುವರೆದು ಇಂಡಿ ತಾಲ್ಲೂಕಿನ ಹಾವಿನಾಳ ಕಲ್ಲಯ್ಯನಿಗೆ ತನ್ನ ಮಗನಾದ ರುದ್ರಮುನಿಯಿಂದ ಶೈವದೀಕ್ಷೆ ಕೊಡಿಸುತ್ತಾನೆ. ಈ ಎಲ್ಲ ಘಟನೆಗಳನ್ನು ಗಮನಿಸಿದಾಗ ಹರಿಹರನ ರೇವಣಸಿದ್ಧ ಧಾರ್ಮಿಕ ಹಾಗೂ ರಾಜಕೀಯ ದಿಗ್ವಿಜಯಕ್ಕೆ ಹೊರಟವನ ಹಾಗೆ ತೋರುತ್ತಾನೆ.

ಹರಿಹರನ ರಗಳೆಯಲ್ಲಿ ಕಾಣಿಸಿಕೊಳ್ಳಲಾರದ ಹಲವಾರು ಸ್ಥಳ ಸನ್ನಿವೇಶಗಳು ಜಾಲವಾದಿ ಮಲ್ಲಣ್ಣ ಕೃತಿಯಲ್ಲಿ ಕಾಣಸಿಗುತ್ತವೆ. ಬಾಲಕ ಮೊದಲು ಜಟ್ಟೂರು ಗ್ರಾಮದಲ್ಲಿ ಕಾಣಸಿಗುವುದು, ಆಚೆಗೊಂಡ ಬನದೇವಿಯರ ಆಶ್ರಮದಲ್ಲಿ ಬೆಳೆಯುವುದು ಹಾಗೂ ಈ ಊರನ್ನು ಬಿಡುವಾಗಲೇ ಆತ ಸಿದ್ಧನಾಗಿರುವುದನ್ನು ಗಮನಿಸಬಹುದಾಗಿದೆ.

ಸಗರ ಪಟ್ಟಣದಲ್ಲಿ ಬೀಯುಳ್ಳಿ ಸಿದ್ಧನ ಗರ್ವಭಂಗಮಾಡಿ ಆತನನ್ನು ಬೆಳ್ಳಿಗುಂಡುಗಳನ್ನಾಗಿಸುವ ಏಳನೂರಿನ ನರಭಕ್ಷಕನ ಮನ ಪರಿವರ್ತನೆ ಮಾಡುವ, ಮತ್ತೊಂದು ಸಂದರ್ಭದಲ್ಲಿ ಜಕ್ಕೂರಿಗೆ ಬಂದಾಗ ಮಹಾಬಲೆ ಜಕ್ಕಲೆಯರಿಗೆ ಸಂತಾನ ಭಾಗ್ಯ ಕರುಣಿಸುವ ಪವಾಡಗಳನ್ನು ವಿವರಿಸುವ ಮಲ್ಲಣ್ಣನನ್ನು ಗಮನಿಸಿದಾಗ ಸ್ಪಷ್ಟವಾಗುವ ಅಂಶವೆಂದರೆ ಮಲ್ಲಣ್ಣನ ರೇವಣಸಿದ್ಧ ಹರಿಹರನ ರೇವಣಸಿದ್ಧನಂತೆ ಉಗ್ರತೆಯನ್ನು ಹೊಂದಿಲ್ಲ. ಅವನು ಹಂತ-ಹಂತವಾಗಿ ಸಾಧನೆಯ ಮೆಟ್ಟಿಲುಗಳನ್ನು ಏರಿದವನಾಗಿ ಕಾಣುತ್ತಾನೆ.[೧]

ಇತ್ತೀಚೆಗೆ ೨೦೦೪ರಲ್ಲಿ ಪ್ರಕಟವಾದ ತಗರು ಪವಾಡ ಮತ್ತು ಸಿದ್ಧಮಂಕ ಚರಿತೆ ಕೃತಿಗಳು ಸ್ಥಳೀಯ ಚರಿತ್ರೆಯ ಅಧ್ಯಯನಕ್ಕೆ ಪೂರಕ ಆಕರವೆನಿಸುತ್ತವೆ. ಸಿದ್ಧಮಂಕ ಚರಿತೆ ಮತ್ತು ತಗರಪವಾಡ ಸಾಂಗತ್ಯ ಕೃತಿಗಳು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರುವ ಕೃತಿಗಳಾಗಿವೆ. ಈ ಕೃತಿಯಲ್ಲಿ ಕುರುಬರ ಗುರುಶಾಂತಮುತ್ತಯ್ಯನ ಚರಿತ್ರೆಯನ್ನು ಆ ಚರಿತ್ರೆಯಲ್ಲಿರುವ ಕುರುಬರ ಸಂಸ್ಕೃತಿಯನ್ನು ಅಭ್ಯಸಿಸುವುದೇ ಇಲ್ಲಿ ಮುಖ್ಯವೆನಿಸುತ್ತದೆ. ಕುರುಬರು ಕಲ್ಯಾಣದಲ್ಲಿ ಸತ್ತ ಕುರಿಯನ್ನು ಹಾಲಿನ ಕಂಬಿಯ ಮೇಲೆ ಹೊತ್ತು ತಂದ ವಿಷಯ ಈ ಎರಡೂ ಕೃತಿಯಲ್ಲಿ ಒಂದೇ ಆಗಿದ್ದರೂ, ಎರಡೂ ಭಿನ್ನ ಸಂಪ್ರದಾಯಗಳ ಚರಿತ್ರೆ ಇಲ್ಲಿ ಆಕಾರ ಪಡೆದಿವೆ. ತಗರ ಪವಾಡ ಶಾಂತಮುತ್ತಯ್ಯನ ಸಂಪ್ರದಾಯದ ಸುತ್ತ ಬೆಳೆದ ಕೃತಿಯಾದರೆ, ಸಿದ್ಧಮಂಕ ಚರಿತ್ರೆ ಕುರುಬ ಸಮಾಜವನ್ನು ಪ್ರತಿನಿಧಿಸುವ ರೇವಣಸಿದ್ಧ ಸಿದ್ಧರಾಮ, ಮಂಕಯ್ಯನ ತಂದೆ ಹೆಗ್ಗಗೌಡರು, ಲಿಂಗಾಯತ ಸಮಾಜವನ್ನು ಪ್ರತಿನಿಧಿಸುವ ಬಸವಾದಿ ಶರಣರ ಸಮಕ್ಷಮದಲ್ಲಿ ಏಕೀಕರಣಗೊಳ್ಳುವ ಕ್ರಿಯೆ ಕಥೆಯಾಗಿ ಬೆಳೆದಿದೆ. ತಗರ ಪವಾಡದಲ್ಲಿ ಪವಾಡ ಗೈದ ವ್ಯಕ್ತಿ ಶಾಂತಮುತ್ತಯ್ಯನಾದರೂ ರೇವಣಸಿದ್ಧನು ಕೇಂದ್ರವ್ಯಕ್ತಿಯಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಈ ಕೃತಿಯಲ್ಲಿ ರೇವಣಸಿದ್ಧನ ಇತಿವೃತ್ತ ವಿಚಾರವನ್ನು ತಿಳಿಯಬಹುದಾಗಿದೆ.

ತಗರಪವಾಡವು ಚರಿತ್ರೆಯ ಪುರಾಣೀಕೃತ ಕೃತಿಯಾಗಿದ್ದು, ಪುರಾಣದ ಒಡಲಲ್ಲಿ ಚರಿತ್ರೆ ಹೀಗೆ ತುಂಬಿಕೊಂಡಿದೆ. ಕೊಲ್ಲಾಪುರ, ತೊಗರಸೆ, ಕಲಸೆನಾಡು, ಸರೂರು, ಕಲ್ಯಾಣ ಈ ಪ್ರದೇಶದೊಳಗೆ ಈ ಕಥೆಯ ಘಟನೆಗಳು ನಡೆದಿವೆ. ಇಲ್ಲಿ ಪ್ರಸ್ತಾಪಿಸಲಾದ ರೇವಣಸಿದ್ಧನು ಕೊಲ್ಲಾಪುರದ ಮಾಯಿಯನ್ನು ಸೋಲಿಸಿದನೆಂಬ ಘಟನೆ ವೀರಶೈವ ಬೇರೆ ಕಾವ್ಯಗಳಲ್ಲಿ ಮತ್ತೆ

ಮತ್ತೆ ಬಂದಿದೆ. ಶಾಂತಯ್ಯನ ತಂದೆ ಪದುಮಣ್ಣ, ಅಜ್ಜ ಆದಿಗೊಂಡ ಇವರ ಊರು ತೊಗರಸೆಯೆಂದು ಈ ಕೃತಿ ಹೇಳುತ್ತದೆ. ಇದು ಶಿವಮೊಗ್ಗ ಜಿಲ್ಲೆಯ ತೊಗರಸಿ ಆಗಿರಬಹುದಾಗಿದೆ. ತಂದೆ ಪದುಮಣ್ಣನಿಂದ ಬೇರೆಯಾಗಿ ಹೆಂಡತಿಯೊಂದಿಗೆ ಕುರಿಹಿಂಡು ಸಹಿತ ಹೊರಟ ಶಾಂತಯ್ಯನಿಗೆ ಭಕ್ತಿ ಕಾಣಿಕೆಯಾಗಿ ಚಕೋರಿ ಹೊಳೆಯ ತೀರದಲ್ಲಿ ದೇವಾಲಯ ನಿರ್ಮಿತವಾದ, ಅಲ್ಲಿ ರೇವಣಸಿದ್ಧನಿಂದ ಶಾಂತಯ್ಯನಿಗೆ ದೀಕ್ಷೆ ಪ್ರಾಪ್ತವಾಯಿತೆಂದೂ ಆಗ ದೇವಲೋಕದಿಂದ ಸುರಿದ ಕರಿಯ ಮಲ್ಲಿಗೆಯಿಂದಾಗಿ ಸರೂರು ಗ್ರಾಮ ನಿರ್ಮಾಣವಾಯಿತೆಂದು ಹೇಳಲಾಗಿದೆ. ಇದು ಇಂದಿನ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮವೆಂದು ಖಚಿತವಾಗಿದೆ.

ಶಾಂತಯ್ಯನ ಅಜ್ಜ ಆದಿಗೊಂಡ, ಅಜ್ಜಿ ಮಲ್ಲಮ್ಮ ತಂದೆ ಪದುಮಗೊಂಡ ತಾಯಿ ಲಿಂಗಾಜಮ್ಮ, ಲಿಂಗಾಜಮ್ಮನ ತಂದೆ ಬಾದಾಮಿ ಬಪ್ಪನಿಗೌಡ, ಹೆಂಡತಿ ಪರವಿಗೊಂಡನ ಮೊಮ್ಮಗಳು ದೇವಮ್ಮ ಇತ್ಯಾದಿ ಹೆಸರುಗಳು ಇಲ್ಲಿ ಎಡೆಪಡೆದಿವೆ. ಶಾಂತಯ್ಯನ ಸಂಪರ್ಕಕ್ಕೆ ಬಂದ ಗೌಡರು ಮತ್ತು ಊರುಗಳನ್ನು ಗಮನಿಸುವುದಾದರೆ ದಡ್ಡೋಡಿನ ಹೆಗ್ಗೊಂಡಗೌಡ, ಉದುಗಿರಿಯ ಕೇತಗೌಡ, ಚೆನ್ನವಾಡದ ಹೆಗ್ಗೊಂಡಗೌಡ, ಸೊನ್ನಲಿಗೆ ಕೆಂಪೆಗೌಡ, ಕಾಮನಹಳ್ಳಿಯ ಕರಿಯ ತಿಮ್ಮೆಗೌಡ, ಅಂಕವಳ್ಳಿಯ ಆದಿಗೊಂಡ, ಬಂಕಾಪುರದ ಭದ್ರಗೌಡ, ಶಂಕರಪುರದ ರಾಮಣ್ಣ ಇವುಗಳಲ್ಲಿ ಕೆಲವಾದರೂ ಐತಿಹಾಸಿಕ ಹೆಸರುಗಳಾಗಿರಬಹುದು. ವ್ಯಕ್ತಿಗಳಲ್ಲಿ ಬಸವ, ಬಿಜ್ಜಳ, ಕಿನ್ನರಿ, ಬ್ರಹ್ಮಯ್ಯ ಮೊದಲಾದವರು ಪ್ರಸಿದ್ಧರೆ ಆಗಿದ್ದಾರೆ. ಆದರೆ ಕಿನ್ನರಿ ಬ್ರಹ್ಮಯ್ಯ ಮೊದಲು ಅಕ್ಕಸಾಲಿಯಾಗಿದ್ದು ನಂತರದಲ್ಲಿ ಕಿನ್ನರಿ ನುಡಿಸುವ ಕಾಯಕದವನಾದನೆಂದೂ ಅವನಿಗೆ ತ್ರಿಪುರಾಂತಕೇಶ್ವರ ದಿನವು ೧೧ ಹಣ ಕೊಡುತ್ತಿದ್ದನೆಂಬುವ ಹಾಗೂ ಲಿಂಗಮುದ್ರೆ ಒತ್ತಿದ ತಗರ ಸಾಕಿದ್ದನೆಂಬು ಸಂಗತಿಗಳು ಹೊಸ ಅಂಶಗಳಾಗಿವೆ. ತಂದೆಯಿಂದ ಬೇರ್ಪಟ್ಟು ಶಿವಪೂಜೆ, ಶಿವಧ್ಯಾನದಲ್ಲಿದ್ದ ಶಾಂತಯ್ಯ ಜಂಗಮವೇಷದಲ್ಲಿ ಬಂದ ಶಿವನಿಗೆ, ಹಸಿದ ಜಂಗಮ ಪರಿವಾರಕ್ಕೆ ಒಂದು ಕರಗ ಅಂಬಲಿಯಿಂದ ತೃಪ್ತಿಪಡಿಸುತ್ತಾನೆ ಮತ್ತು ಚಕೋರಿ ಹೊಳೆಯ ತೀರದ (ಸರೂರು)ಲ್ಲಿ ಶಿವ(ರೇವಣಸಿದ್ಧ)ನಿಗಾಗಿ ದೇವಾಲಯವಾಗಲು ಕಾರಣೀಭೂತನಾಗುತ್ತಾನೆ.

ಇದರಿಂದ ಸುಪ್ರೀತನಾದ ಜಂಗಮರೂಪಿ ಶಿವನಿಗೆ (ರೇವಣಸಿದ್ಧನಿಗೆ) ತನಗೆ ದೀಕ್ಷೆನೀಡಲು ಕೋರಿಕೊಳ್ಳುತ್ತಾನೆ. ಆಗ ರೇವಣಸಿದ್ಧನು ಐದು ಕಲಶಗಳನ್ನು ಹೂಡಿ ದೀಕ್ಷೆ ನೀಡುತ್ತಾನೆ. ಈ ಸಂದರ್ಭದಲ್ಲಿ ಸುರಿದ ಕರಿಯಮಲ್ಲಿಗೆಯಿಂದಾಗಿ ಆ ಸ್ಥಳಕ್ಕೆ ಸರವೂರು ಹೆಸರು ಪ್ರಾಪ್ತವಾಯಿತು. ಈ ಘಟನೆಯು ಶಾಂತಯ್ಯನ ಜೀವನದಲ್ಲಿ ಮೊದಲನೇಯದಾಗಿದೆ. ಶಾಂತಮುತ್ತಯ್ಯನ ಜೀವನದ ಇನ್ನೊಂದು ಘಟನೆಯೆಂದರೆ ತಗರ ಪವಾಡ, ಕಲ್ಯಾಣದಲ್ಲಿ ಕಿನ್ನರಿಬೊಮ್ಮಯ್ಯನ ಲಿಂಗಮುದ್ರೆ

ಒತ್ತಿದ ತಗರು ಮದವೇರಿ ಜನರಿಗೆ ತೊಂದರೆ ಕೊಡಲು ಪ್ರಾರಂಭ ಮಾಡಿದಾಗ ಆ ತಗರನ್ನು ಕಿನ್ನರಿ ಬೊಮ್ಮಯ್ಯನ ಸರೂರು ಶಾಂತಯ್ಯನ ಕುರಿಹಿಂಡಿನಲ್ಲಿ ಬಿಡುತ್ತಾನೆ. ಹಿಂದೊಮ್ಮೆ ಕಲ್ಯಾಣದ ಕುರುಬರು ಸತ್ತ ಕುರಿಯನ್ನು ತಂದ ತಪ್ಪಿಗಾಗಿ ರಾಜಧಾನಿಯಿಂದ ಹೊರಹಾಕಿಸಿಕೊಳ್ಳುತ್ತಾರೆ.

ಹನ್ನೆರೆಡು ವರ್ಷಗಳಿಂದ ಹೊರಗಿದ್ದ ಅವರು ತಮಗೆ ಕಲ್ಯಾಣ ಪ್ರವೇಶಿಸಲು ರಾಜನಿಂದ ಅನುಮತಿಸಬೇಕೆಂದು ಶಾಂತಯ್ಯನನ್ನು ಕೋರುವಷ್ಟರಲ್ಲಿ ಕಿನ್ನರಯ್ಯ ಬಿಟ್ಟು ಹೋದ ತಗರು ಸತ್ತಸುದ್ದಿ ಬರುವುದು. ಅದನ್ನು ಶಾಂತಯ್ಯ ತೆಗೆದುಕೊಂಡು ಕಲ್ಯಾಣ ಪ್ರವೇಶಿಸಲು ಪ್ರಜೆಗಳು ತಡೆದು ತಗರನ್ನು ಬದುಕಿಸುವ ಆಹ್ವಾನವನ್ನು ಒಡ್ಡುತ್ತಾರೆ. ಈ ಸುದ್ದಿ ತಿಳಿದ ಬಿಜ್ಜಳ, ಬಸವಣ್ಣ, ಶರಣರು, ಪ್ರಜೆಗಳು ನೆರೆಯುತ್ತಾರೆ. ಇಲ್ಲಿ ಬಸವಾದಿ ಪ್ರಮಥರು ಮತ್ತು ಶಾಂತಯ್ಯ ಪರಸ್ಪರ ತೋರುವ ಭಕ್ತಿ ದೃಶ್ಯವತ್ತಾಗಿ ನಿಂತಿದೆ. ಬಸವಣ್ಣ ಶಾಂತಯ್ಯನ ಹಣೆಗೆ ವಿಭೂತಿ ಲೇಪಿಸಿ ಮೇಷ ಪವಾಡ ಮೆರೆಸಬೇಕು ಎಂದು ನೈತಿಕ ಬಲವನ್ನು ನೀಡುತ್ತಾನೆ. ಶಾಂತಯ್ಯನು ತಗರ ಹಣೆಗೆ ಭಸಿತವಿಟ್ಟು ಪಾದೋದಕ ಸಿಂಪಡಿಸಲು ಅದು ಜೀವ ಪಡೆಯುತ್ತದೆ. ಶರಣರ ಉತ್ಸಾಹ ಉಕ್ಕೇರುತ್ತದೆ. ಬೇಕಾದುದನ್ನು ಬೇಡು ಎಂದು ಬಸವಣ್ಣ ಕೇಳಲು ನನಗೆ ಎಲ್ಲ ಭಾಗ್ಯವೂ ಇದೆ. ಈ ರಟ್ಟಕುಲದವರನ್ನು ಕಲ್ಯಾಣದೊಳಗೆ ಉದ್ಧರಿಸು ಎಂದು ಭಿನ್ನವಿಸಿಕೊಳ್ಳುತ್ತಾನೆ. ಬಸವಣ್ಣ ಉರ ಹೊರಗಿದ್ದ ಕುರುಬರನ್ನು ಕಲ್ಯಾಣದೊಳಗೆ ಬರಮಾಡಿಕೊಂಡು ಉಡುಗೊರೆ ನೀಡಿ ಭಸಿತವಿಟ್ಟು, ಸುಖದಿಂದ ಇರಿ ಹಾಲುಮತದವರೆನಿಸಿ ಎಂದು ಹರಸುತ್ತಾನೆ. ಮೂರೇಣಿನ ಕಂಥೆಯನ್ನು ಗುರುತನದ ಕುರುಹಾಗಿ ಶಾಂತಯ್ಯನಿಗೆ ನೀಡಿ, ಹಾಲುಮತದವರಿಗೆಲ್ಲ ಶಾಂತಯ್ಯನೇ ಗುರು ಎಂದು ಘೋಷಿಸುತ್ತಾನೆ. ಈ ಘಟನೆ ಕುರುಬ ಸಮಾಜದ ಸಂಕ್ರಮಣ ಸಂದರ್ಭದವನ್ನು ಸೂಚಿಸುತ್ತದೆ. ಇಲ್ಲಿಯ ದೀಕ್ಷಾಘಟನೆ ಕುರುಬ ವ್ಯಕ್ತಿಯ ವ್ಯಷ್ಟಿ ಕಲ್ಯಾಣವನ್ನು ಸೂಚಿಸಿದರೆ, ಪವಾಡ ಘಟನೆ ಕುರುಬ ಸಮಾಜದ ಸಮಷ್ಟಿ ಕಲ್ಯಾಣವನ್ನು ಧ್ವನಿಸುತ್ತದೆ. ಪವಾಡವನ್ನು ಬಿಟ್ಟು ನೋಡಿದರೆ ಕಾಡುವಾಸಿಯಾಗಿದ್ದ ಕುರುಬರು ಕಲ್ಯಾಣ ಪ್ರವೇಶದ ಮೂಲಕ ನಾಡ ಪ್ರಜೆಗಳಾದ ಘಟನೆ ಎನಿಸುತ್ತದೆ. ಒಟ್ಟಾರೆ ಕವಿತ್ವ ದೃಷ್ಟಿಯಿಂದ ಸಾಮಾನ್ಯವಾಗಿದ್ದರೂ ಸಾಮಾಜಿಕ ಏಕೀಕರಣ, ಸಂಸ್ಕೃತಿಯ ಪ್ರತಿಪಾದನೆ ದೃಷ್ಟಿಯಿಂದ ಇಂತಹಾ ಕೃತಿಗಳು ಮುಖ್ಯವೆನಿಸುತ್ತವೆ.

೪.೧.೧ ರೇವಣಸಿದ್ಧನ ಕಾಲನಿರ್ಣಯ:

ಸಾಹಿತ್ಯ ಕೃತಿಗಳು ತನ್ನ ಕಥಾನಾಯಕನನ್ನು ಎಷ್ಟೇ ಪ್ರಮಾಣದಲ್ಲಿ ಪುರಾಣೀಕರಿಸಿದರೂ ನೆಲದ ಮೇಲೆ ಕಾಲಿಟ್ಟವರೆಲ್ಲ ಮರ್ತ್ಯದವರಾಗಿ ಬದುಕುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆನಿಸುತ್ತದೆ. ರೇವಣಸಿದ್ಧ ಸಂಚರಿಸಿದ ಸ್ಥಳಗಳಾದ ಕಲ್ಯಾಣ, ಮಂಗಳವೇಡೆ, ಸಗರ, ಹಾವಿನಾಳ

ಇತ್ಯಾದಿ ಸ್ಥಳಗಳು ಹಾಗೂ ಆತ ಅಲ್ಲಿ ಭೇಟಿಯಾದ ವ್ಯಕ್ತಿಗಳಾದ ಬಿಜ್ಜಳ, ಸಿದ್ಧರಾಮನ ತಂದೆ-ತಾಯಿ ಇತ್ಯಾದಿ ಅವನ ಜೀವಿತ ಕಾಲವನ್ನು ಬಸವಯುಗದ ಸ್ವಲ್ಪ ಮುಂಚಿನ ಕಾಲಘಟ್ಟಕ್ಕೆ ತಂದು ನಿಲ್ಲಿಸುತ್ತದೆ. ಅದಕ್ಕೆ ಪೂರಕವೆನ್ನುವಂತೆ ಹಲವಾರು ವಚನಕಾರರು ರೇವಣಸಿದ್ಧನನ್ನು ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಅಂಗದಿಂದುದಿಸಿದಾತ ಮಡಿವಳಯ್ಯ, ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ ಎನ್ನುವ ನಾಗಲಾಂಬಿಕೆಯ ವಚನದ ಸಾಲುಗಳು; ಲಿಂಗದಿಂದುದನೆ ಅಂಗವಿಡದಪ್ಪ ಪುರಾತನನ್ನು ಉಲ್ಲೇಖಿಸುವ ಅಕ್ಕಮಹಾದೇವಿಯ ವಚನದ ಸಾಲುಗಳು; ಅಪ್ಪ ರೇವಣಸಿದ್ಧ ನೀರು ಹೊತ್ತನೆಂಬರು ಎನ್ನುವುದನ್ನು ಉಲ್ಲೇಖಿಸುವ ಸಿದ್ಧರಾಮ ಪೂರ್ವದವನು ಅಂದರೆ ಹನ್ನೆರೆಡನೆಯ ಶತಮಾನದ ಪೂರ್ವದವನು ಎನ್ನುವುದು ಸ್ಪಷ್ಟವಾಗುತ್ತದೆ. ಮರುಳಸಿದ್ದೇಶ್ವರನೆಂಬ ವಚನಕಾರ ರೇವಣ್ಣ ಪ್ರಭುವೆ ಎಂದು ತನ್ನ ವಚನಾಂಕಿತವಿಟ್ಟುಕೊಂಡಿದ್ದ ಎನ್ನುವ ಸಂಗತಿ ಈ ಮಾತನ್ನು ಇನ್ನು ಹೆಚ್ಚು ದೃಢಪಡಿಸುತ್ತದೆ. ಶಾಸನಗಳು ಆ ಪ್ರದೇಶದ ನಾಡಿನ, ರಾಜ್ಯದ, ದೇಶದ ಜೀವನ ವ್ಯಾಪಾರದ ದಾಖಲೆಗಳಾಗಿವೆ. ಇಲ್ಲಿಯ ವಿಷಯಗಳು ಸಾಹಿತ್ಯ ಕೃತಿಗಳಲ್ಲಿರುವ ವಿಷಯಗಳಿಗಿಂತ ಹೆಚ್ಚು ವಾಸ್ತವ. ಕಾವ್ಯ ಪುರಾಣಗಳಂತೆ ಕಲ್ಪನಾನಿಷ್ಠ ರಚನೆಗಳಾಗಿರದೆ, ಸ್ಥಳೀಯ ಪ್ರಮುಖರನ್ನು ಸಾಕ್ಷೀಕರಿಸಿ ಬರೆದ/ಬರೆಯಿಸಿದ, ಆಯಾ ದೈನಂದಿನ ನೈಜ ಘಟನೆಗಳ ದಾಖಲೆಗಳಾಗುತ್ತವೆ. ಪ್ರಾಚೀನ ಪರಂಪರೆ, ಸಂಸ್ಕೃತಿ, ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಜನ ಜೀವನವನ್ನು ಅರ್ಥೈಸಿಕೊಳ್ಳುವಲ್ಲಿ ನೆರವಾಗುತ್ತವೆ.

ರೇವಣಸಿದ್ಧನ ಜೀವಿತ ಕಾಲಾವಧಿಯನ್ನು ಸಾಧ್ಯವಾದಷ್ಟು ಖಚಿತಪಡಿಸುವ ಹಲವಾರು ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಯಾವ ಶಾಸನವೂ ಅವನದು ಹದಿನಾಲ್ಕುನೂರು ವರ್ಷದ ಜೀವಿತ ಕಾಲಾವಧಿ ಎಂಬ ಮಾತನ್ನು ಪುರಸ್ಕರಿಸುವುದಿಲ್ಲ. ಅವನನ್ನು ಕುರಿತು ಹದಿನೇಳು ಶಾಸನಗಳು ಲಭ್ಯವಿದೆ. ಅವುಗಳಲ್ಲಿ ಕೆಲವು ಅವನು ಜೀವಿಸಿರುವಾಗಲೇ ಬರೆಯಿಸಿದಂಥವುಗಳಾಗಿವೆ. ರೇವಣಸಿದ್ಧನ ಜೀವನದ ಕನಿಷ್ಠ ಮತ್ತು ಗರಿಷ್ಠ ಕಾಲಾವಧಿಗಳನ್ನು ತಿಳಿಸುವ ಶಾಸನಗಳನ್ನು ಇಲ್ಲಿ ಚರ್ಚಿಸಬಹುದಾಗಿದೆ.

೪.೧.೧.೧ ಕಕ್ಕೇರಿ ಶಾಸನ(ಕ್ರಿ.ಶ. ೧೧೨೭)

ಕಲಬುರ್ಗಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕಕ್ಕೇರಿ ಗ್ರಾಮದ ಕಕ್ಕೇಶ್ವರ ದೇವಾಲಯದ ಕಂಬವೊಂದರ ಮೇಲೆ ಈ ಶಾಸನವಿದೆ. ಕಲ್ಯಾಣ ಚಾಲುಕ್ಯ ಭೂಲೋಕ ಮಲ್ಲ ದೇವರ ಕಾಲದ ಶಾಸನ ಇದಾಗಿದೆ. ಶಾಸನದಲ್ಲಿಯ ಸ್ವಸ್ತಿ ಶ್ರೀಮತು ಪ್ಲವಂಗ ಸಂವತ್ಸರದ ಚೈತ್ರ ಸುದ್ಧ ಪಂಚಮಿ ಸೋಮವಾರದಂದು ಎನ್ನುವ ಕಾಲಮಿತಿಯು ಕ್ರಿ.ಶ. ೧೧೨೭ ನೇ ಮಾರ್ಚ್ ೨೧ಕ್ಕೆ ಸರಿಹೊಂದುತ್ತದೆ. ಹಗರಿಟಗೆ ನಾಡನ್ನಾಳಿದ ಹೈಹಯ ವಂಶದವರ ಸಕಲ ಪ್ರಶಸ್ತಿಗಳನ್ನು

ಒಳಗೊಂಡ ಈ ಶಾಸನ ಅದೇ ವಂಶಕ್ಕೆ ಸೇರಿದ ಮಹಾಮಂಡಳೇಶ್ವರ ಮಲ್ಲರೇವರಸರು ಆಳುವಾಗ ತಾವು ಕಟ್ಟಿಸಿದ ರೇವೇಶ್ವರ ದೇವರ ಅಂಗಭೋಗ, ಧೂಪಾರತಿ, ನೈವೇದ್ಯಗಳಿಗಾಗಿ ಹಗರಿಟ್ಟಗೆಯ ಶ್ರೀಸ್ವಯಂಭುಯುಗ್ರಭೀಮೇಶ್ವರದೇವರ ಮುದಿನೀರ ಕುಮಾರೇಶ್ವರ ದೇವರ ಕಕ್ಕೇಶ್ವರ ದೇವರ ಮಹಾಸ್ಥಾನಂಗಳಾಚಾರ್ಯರಾದ ಸಿದ್ಧರೇವಣದೇವನ ಶಿಷ್ಯ ಬ್ರಹ್ಮರಾಶಿಪಂಡಿತರ ಕಾಲ್ಕರ್ಚಿ ಬಿಟ್ಟ ಭೂದತ್ತಿಯನ್ನು ಮತ್ತು ಸುಂಕದತ್ತಿಯನ್ನು ವಿವರಿಸುತ್ತದೆ. ಬ್ರಹ್ಮರಾಸಿ ಪಂಡಿತ, ಕಾಳಾಮುಖ ಸಂಪ್ರದಾಯಗಳು ರೇವಣಸಿದ್ಧ ಸಂಪ್ರದಾಯದೊಳಗೆ ಇಲ್ಲವಾಗಿ, ಮೇಲುನೋಟಕ್ಕೆ ಇಲ್ಲಿಯ ಸಿದ್ಧರೇವಣದೇವನು ರೇವಣಸಿದ್ಧ ನಾಗಿರಲಾರ ಎನಿಸುತ್ತದೆ. ಆದರೆ ಹೋತಗಲ್ಲ(ಕ್ರಿ.ಶ.೧೨೦೮) ಶಾಸನ ನೋಡಿದರೆ, ಈ ಹೊತ್ತಿಗಾಗಲೇ ಇವೆರೆಡೂ ಸಂಪ್ರದಾಯಗಳು ಮಿಶ್ರವಾಗಲಾರಂಭಿಸಿದ್ದವೆ ನಿಸುವುದರಿಂದ, ಇದು ರೇವಣಸಿದ್ಧನ ಉಲ್ಲೇಖವೆಂದೇ ಒಪ್ಪಿಕೊಳ್ಳಬೇಕಾಗಿದೆ. ವಿಕ್ರಮಾಧಿತ್ಯನಷ್ಟು (ಕ್ರಿ.ಶ.೧೦೭೬–೧೧೨೬) ಪ್ರಾಚೀನಕಾಲದಿಂದ, ಬಿಜ್ಜಳನಷ್ಟು (ಕ್ರಿ.ಶ.೧೧೫೬–೧೧೬೭) ಉತ್ತರಕಾಲೀನ ಅವಧಿಯಲ್ಲಿ ರೇವಣಸಿದ್ಧನು ಬಾಳಿರುವುದರಿಂದಲು ಈ ಕಕ್ಕೇರಿ ಶಾಸನ (ಕ್ರಿ.ಶ.೧೧೨೭)ರ ಹೊತ್ತಿಗೆ ಅವನು ಬ್ರಹ್ಮರಾಸಿ ಪಂಡಿತನಂತಹಾ ಶಿಷ್ಯನನ್ನು ಪಡೆಯುವಷ್ಟು ಪ್ರಸಿದ್ಧಿಗೆ ಬಂದಿರಬಹುದಾಗಿದೆ.[೨]

೪.೧.೧.೨ ಸಿರಿವಾಳ ಶಾಸನ(ಕ್ರಿ.ಶ. ೧೧೭೦)

ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸಿರಿವಾಳ ಗ್ರಾಮವು ಹಿಂದೊಮ್ಮೆ ಶೈವ ಕೇಂದ್ರವಾಗಿತ್ತು ಎಂಬುದಕ್ಕೆ ಸಾಕ್ಷಿ ಎಂಬಂತೆ ೧೫ ವಿಭಿನ್ನ ಶೈವ ದೇವಾಲಯಗಳಿರುವುದನ್ನು ಗಮನಿಸಬಹುದಾಗಿದೆ. ಈ ಪೈಕಿ ಕೆಲವು ದೇವಾಲಯಗಳು ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವೆಂದು ಇತ್ತೀಚೆಗೆ ವಿದ್ವಾಂಶರು ಗುರುತಿಸಿದ್ದಾರೆ. ಈ ದೇವಾಲಯಗಳಲ್ಲಿ ಒಂದಾದ ಸಿದ್ದೇಶ್ವರ ಅಥವಾ ಸಿದ್ಧಲಿಂಗೇಶ್ವರ ದೇವಾಲಯ ಮುಖ್ಯವೆನಿಸುತ್ತದೆ.

ಈ ದೇವಾಲಯದಲ್ಲಿ ದೊರೆತ ತೃಟಿತ ಶಾಸನದಲ್ಲಿ ಶಕವರ್ಷ ೧೧೧೦ನೇ ಪ್ಲವಂಗ ಸಂವತ್ಸರದ ಭಾದ್ರಪದ ಬಹುಳದ ಅಮಾವಾಸ್ಯೆ ಶುಕ್ರವಾರ ಸೂರ್ಯಗ್ರಹಣ ಎಂದು ಬರೆಯಲಾಗಿದೆ. ಈ ಕಾಲಮಾನವು ೪ನೇ ಸೆಪ್ಟೆಂಬರ್ ೧೧೭೮ ಕ್ಕೆ ಸರಿಹೊಂದುವುದು ಎಂದು ಅಭಿಪ್ರಾಯಿಸ ಲಾಗಿದೆ. ಮುಂದುವರೆದು ಈ ಶಾಸನವು ರೇವಣಸಿದ್ಧನ ಗುರು/ತಂದೆ ಎಂದು ಭಾವಿಸಲಾದ ಶಾಂತಿಮಯ್ಯನ ದೇವಾಲಯದ ಪೂಜೆಗೆಂದು ರೇವಣಸಿದ್ಧನಿಗೆ ದಾನನೀಡಿದ ಮಾಹಿತಿ ಇದೆ.

೪.೧.೧.೩ ಹೋತಗಲ್ಲ ಶಾಸನ(ಕ್ರಿ.ಶ. ೧೧೭೫)

ಗುಲ್ಬರ್ಗ ಜಿಲ್ಲೆಯ ಶಹಪುರ ತಾಲ್ಲೂಕಿನ ಹೋತಗಲ್ಲಿ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಶಿವ್ವಶಿವಯೋಗಿ ಶಾಂತಿಮಯ್ಯಂಗಳ ಭೂಮುತಮಪ್ಪ ಸಿರಿವೊಳಲ ಶಾಂತೀಶ್ವರದೇವರ (ಸಿದ್ದೇ)ಶ್ವರ

ದೇವರ ಕಾರ್ಯಂ ನಡೆವನ್ತಾಗಿ ಸಿದ್ಧರೇವಣಯ್ಯಗಳ ಪಾದಪ್ರಕ್ಷಾಲನ ಮಾಡಿ ದತ್ತಿ ನೀಡಿದುದನ್ನು ಹೇಳಲಾಗಿದೆ. ಶಾಂತಿಮ್ಮಯ್ಯಗಳಿಂದಾಗಿ ಸಿರಿವೊಳಲ ಅಂದರೆ ಈಗಿನ ಸಿರಿವಾಳವು ಲೋಕ ಪ್ರಸಿದ್ಧಿವೆನಿಸಿತೆಂದು, ಈ ಶಾಂತಿಮಯ್ಯನ ನೆನಪಿಗೆ ನಿರ್ಮಿಸಲಾಗಿದ್ದ ಶಾಂತೀಶ್ವರ ದೇವಾಲಯ ಮತ್ತು ಸಿದ್ಧೇಶ್ವರ ದೇವಾಲಯಗಳಿಗಾಗಿ ಸಿದ್ಧರೇವಣ್ಣಯ್ಯಗಳಿಗೆ ದಾನ ನೀಡಲಾಯಿತೆಂದು ಈ ಶಾಸನ ತಿಳಿಸುತ್ತದೆ.[೩]

೪.೧.೧.೪ ಸಿರಿವಾಳ ಶಾಸನ(ಕ್ರಿ.ಶ. ೧೧೭೮)

ಈ ಸಿರಿವಾಳ ಶಾಸನವು ಗುರು ಶಾಂತಿಮಯ್ಯ ಪುತ್ರ ರೇವಣಸಿದ್ಧರ ದೃಷ್ಟಿಯಿಂದ ತುಂಬಾ ಮಹತ್ವದ್ದಾಗಿದೆ. ಇಲ್ಲಿ ಇವರಿಬ್ಬರ ಮಹಿಮೆ ವಿವರವಾಗಿ ಬಂದಿದೆ. ಶಾಂತಿಮ್ಮಯ್ಯನು ಅಣಿಮಾದ್ಯಷ್ಟಗುನ ಸಂಪನ್ನ, ಷಡಂಗಯೋಗ ಸಂಪದ, ಕಲಿವೀರ ಎಂದು ಮುಂತಾಗಿ ವರ್ಣಿತನಾಗಿದ್ದಾನೆ. ಈತನ ಪುತ್ರ ರೇವಣಸಿದ್ಧನ ಪವಾಡಗಳನ್ನು ಆರು ಕಂದಪದ್ಯಗಳಲ್ಲಿ ವಿವರಿಸಿ, ರೇವಣದೇವಯ್ಯಂಗಳ ಪಾದಪ್ರಕ್ಷಾಳನಂ ಮಾಡಿ ಗುರು ಶಾಂತಿಮ್ಮಯ್ಯನ ಸ್ಮಾರಕವಾಗಿ ಕಟ್ಟಿಸಿದ್ಧ ಸಿದ್ಧಸಾತೇಶ್ವರ ದೇವರಿಗಾಗಿ ದಾನ ನೀಡಿರುವುದನ್ನು ಈ ಶಾಸನ ವಿವರಿಸುತ್ತದೆ.[೪]

೪.೧.೧.೫ ಹೋತಗಲ್ಲ ಶಾಸನ(ಕ್ರಿ.ಶ. ೧೨೦೮)

ಹೋತಗಲ್ಲ ಗ್ರಾಮದಲ್ಲಿ ದೊರೆತ ಕ್ರಿ.ಶ. ೧೨೦೮ರ ಶಾಸನದಲ್ಲಿ ರೇವಣೇಶ್ವರ ದೇವರಿಗಾಗಿ, ಈ ದೇವರ ಆಚಾರ್ಯ ನಾಗರಾಸಿ ಪಂಡಿತರ ಕಾಲನ್ನು ತೊಳೆದು ದತ್ತಿ ನೀಡಲಾಯಿತೆಂದು ಹೇಳಲಾಗಿದೆ. ಆದರೆ ಇದೇ ಹೋತಗಲ್ಲಿನ ಕ್ರಿ.ಶ. ೧೧೭೫ರಲ್ಲಿ ಕಾಲು ತೊಳೆಯಿಸಿಕೊಂಡಿದ್ದವನು ರೇವಣಸಿದ್ಧ. ಕ್ರಿ.ಶ.೧೨೦೮ರ ಶಾಸನದಲ್ಲಿ ಕಾಲತೊಳೆಯಿಸಿ ಕೊಂಡಿದ್ದವನು ನಾಗರಾಸಿ ಪಂಡಿತ. ಅಲ್ಲದೆ ಇಲ್ಲಿ ರೇವಣೇಶ್ವರ ದೇವರು ಎಂಬ ಉಲ್ಲೇಖವು ಬರುವುದರಿಂದ, ಈ ಹೊತ್ತಿಗಾಗಲೇ ರೇವಣಸಿದ್ಧನು ಮರಣಹೊಂದಿ ದೇವರಾಗಿ ಪೂಜಿಸಿಕೊಳ್ಳುತ್ತಿದ್ದುದನ್ನು ಸೂಚಿಸುತ್ತದೆ.

ರೇವಣಸಿದ್ಧನು ಬದುಕಿ ಬಾಳಿದ ಕಾಲಮಾನದ ಬಗೆಗೆ ಬೆಳಕು ಚೆಲ್ಲುವ ಈ ಮೇಲಿನ ಶಾಸನದ ಪೈಕಿ ಸಿರಿವಾಳ ಶಾಸನ(ಕ್ರಿ.ಶ. ೧೧೭೦) ಹೋತಗಲ್ಲ ಶಾಸನ(ಕ್ರಿ.ಶ. ೧೧೭೫) ಮತ್ತು ಸಿರಿವಾಳ ಶಾಸನ(ಕ್ರಿ.ಶ. ೧೧೭೮)ಗಳನ್ನು ಅವಲೋಕಿಸಿದಾಗ ಕ್ರಿ.ಶ. ೧೧೭೦ ರಿಂದ ಕ್ರಿ.ಶ. ೧೧೭೮ರ ಕಾಲಸಂದರ್ಭದಲ್ಲಿ ರೇವಣಸಿದ್ಧ ಬದುಕಿದ್ದ ಎನ್ನುವುದು ಸ್ಪಷ್ಟವಾಗುತ್ತದೆ. ಈ ಮೂರು ಶಾಸನಗಳು ನೇರವಾಗಿ ರೇವಣಸಿದ್ಧ ಬದುಕಿರುವಾಗ ಅವನಿಗೆ ದಾನ /ದತ್ತಿ ನೀಡಿರುವ ವಿವರಗಳನ್ನು ತಿಳಿಸುವುದರ ಜೊತೆಗೆ ಈ ಕಾಲಘಟ್ಟದಲ್ಲಿಯ ಆತನ ವ್ಯಕ್ತಿತ್ವ ಮತ್ತು ಉಚ್ಛ್ರಾಯ ಸ್ಥಿತಿಗತಿಗಳನ್ನು ತಿಳಿಸುತ್ತದೆ.

ಕ್ರಿ.ಶ. ೧೧೨೭ರ ಕಕ್ಕೇರಿ ಶಾಸನದಲ್ಲಿ ರೇವಣಸಿದ್ಧ ದೇವರ ಶಿಷ್ಯ ಬ್ರಹ್ಮರಾಸಿ ಪಂಡಿತನ ಉಲ್ಲೇಖವಿರುವುದರಿಂದ, ಈ ಕಾಲಮಾನದಲ್ಲಿ ರೇವಣಸಿದ್ಧನು ಬದುಕಿದ್ದನೋ ಇಲ್ಲವೋ ಎಂಬುದು ಸ್ಪಷ್ಟವಾಗುವುದಿಲ್ಲ. ಆದರೆ ಒಂದು ಲೆಕ್ಕಾಚಾರದಂತೆ ಆ ಸಮಯಕ್ಕೆ ಶಿಷ್ಯನ ವಯಸ್ಸು ೩೦ ರಿಂದ ೪೦ ಇದ್ದಿರಬಹುದೆಂದು ಪರಿಗಣಿಸುವುದಾದರೆ, ಅವನ ಗುರು ರೇವಣಸಿದ್ಧ ಅವನಿಗಿಂತ ೩೦–೪೦ ವರ್ಷ ಹಿರಿಯನೆನ್ನುವುದಾದರೆ, ರೇವಣಸಿದ್ಧನ ಜನನದ ವರ್ಷವನ್ನು ಅಂದಾಜು ಕ್ರಿ.ಶ. ೧೦೬೦ ರಿಂದ ಕ್ರಿ.ಶ. ೧೦೭೦ ರ ಕಾಲಘಟ್ಟವೆಂದು ಹೇಳಬಹುದಾಗಿದೆ. ಮುಂದುವರೆದು ಕಕ್ಕೇರಿಯ ಈ ಶಾಸನವು ಕ್ರಿ.ಶ. ೧೧೨೭ರಲ್ಲಿ ಬರೆಯಿಸಲ್ಪಟ್ಟಿರುವುದರಿಂದ ಅದಕ್ಕಿಂತ ೬೦–೭೦ ವರ್ಷಗಳ ಹಿಂದಕ್ಕೆ ಸರಿದರೆ ಲೆಕ್ಕಾಚಾರದ ಕಾಲಮಾನವು ಕ್ರಿ.ಶ. ೧೦೬೦/೧೦೭೦ ನೇ ಇಸವಿಗೆ ಬಂದು ನಿಲ್ಲುತ್ತದೆ. ಕ್ರಿ.ಶ. ೧೨೦೮ರ ಹೋತಗಲ್ಲ ಶಾಸನವನ್ನು ಗಮನಿಸಿದರೆ ಇಲ್ಲಿ ರೇವಣಸಿದ್ಧನು ವೈಯಕ್ತಿಕ ನೆಲೆಯಿಂದ ದೈವತ್ವಕ್ಕೇರಿ ರೇವಣಸಿದ್ಧೇಶ್ವರನಾಗಿದ್ದಾನೆ. ಅಂದರೆ ಮರಣಾನಂತರ ದೇವರಾಗಿ ಪೂಜೆಗೊಳ್ಳುತ್ತಿದ್ದಾನೆ. ಮುಂದುವರೆದು ಆತನ ಸ್ಮರಣಾರ್ಥವಾಗಿ ನಿರ್ಮಿಸಿದ ದೇವಾಲಯಕ್ಕೆಂದು ಆಚಾರ್ಯ ನಾಗರಾಸಿ ಎಂಬುವವನಿಗೆ ಇಲ್ಲಿ ದತ್ತಿಯನ್ನು ನೀಡಲಾಗಿದೆ. ದೇವಾಲಯದ ನಿರ್ಮಾಣ ಹಾಗೂ ಅಭಿವೃದ್ಧಿಗಾಗಿ ತಗಲಿರಬಹುದಾದ ಸಮಯವನ್ನು ಗಣನೆಗೆ ತೆಗೆದುಕೊಂಡಾಗ ಕ್ರಿ.ಶ. ೧೨೦೮ ಕ್ಕಿಂತ ೧೫–೨೦ ವರ್ಷ ಮೊದಲು ರೇವಣಸಿದ್ಧ ಮರಣವಾಗಿದ್ದರೆ ಕ್ರಿ.ಶ. ೧೧೮೫ ರಿಂದ ಕ್ರಿ.ಶ. ೧೧೯೫ರ ಅವಧಿಯು ಅವನ ಕೊನೆಯ ದಿನಗಳಾಗಿರಬಹುದು.

ಮೇಲಿನ ಶಾಸನಗಳ ಅಧ್ಯಯನದಿಂದ ರೇವಣಸಿದ್ಧನ ಜೀವಿತ ಕಾಲಮಾನದ ಬಗ್ಗೆ ಒಂದು ನಿಖರ ಅಭಿಪ್ರಾಯಕ್ಕೆ ಬರಬಹುದಾಗಿದೆ. ಆತನಿಗೆ ಸಂಬಂಧಿಸಿದ ಕಾವ್ಯ ಪುರಾಣಗಳಲ್ಲಿ ಆತನ ೧೪೦೦ ವರ್ಷ ಬದುಕಿದ್ದನೆಂಬುದು ನಂಬಲಸಾಧ್ಯವಾದ ಕಲ್ಪನೆಯಾಗಿದೆ. ಹಾಗೂ ಈತನ ಜೀವಿತದ ಅವಧಿಗೆ ಸಂಬಂಧಿಸಿದಂತೆ ಇನ್ನೂ ನಿಖರವಾದ ಸಂಶೋಧನೆಯ ಅಗತ್ಯತೆಯನ್ನು ಪರಿಗಣಿಸಿ, ಸದ್ಯದ ಮಟ್ಟಿಗೆ ರೇವಣಸಿದ್ಧನ ಜೀವಿತಾವಧಿಯನ್ನು ಕ್ರಿ.ಶ. ೧೦೬೦/೧೦೭೦ ಹಾಗೂ ಕ್ರಿ.ಶ. ೧೧೮೫ /೧೧೯೫ ರ ಮಧ್ಯದ ಅವಧಿಯೆಂದು ಒಪ್ಪಿಕೊಳ್ಳಬಹುದಾಗಿದೆ. ಹಾಗೂ ಆತ ೧೧೫ ರಿಂದ ೧೩೫ ವರ್ಷಗಳ ಕಾಲ ಬದುಕಿರಬಹುದಾಗಿದೆ ಎಂದು ತೀರ್ಮಾನಿಸಬಹುದಾಗಿದೆ.

೪.೨. ಸಿದ್ಧ ಪರಂಪರೆ

ದೇಶದ ಉದ್ದಗಲವು ಅನೇಕ ಸಿದ್ಧಪುರುಷರ ಹಾಗೂ ಸಿದ್ಧಪರಂಪರೆಗಳ ನೆಲೆಯಾಗಿದೆ. ಇಲ್ಲಿ ಸಿದ್ಧ ಎಂದರೆ ಪರಿಪೂರ್ಣನಾದ, ಪಕ್ವವಾದ ಸಾಧನೆಯ ಗುರಿಮುಟ್ಟಿದವ ಎಂದು

ಅರ್ಥೈಸಿಕೊಳ್ಳಲಾಗಿದೆ. ಸಾಧನೆಯ ಸಾಧಕ ಎಂಬರ್ಥದಲ್ಲಿಯೇ ಸಿದ್ಧನ ಪರಿಚಯವಾಗುತ್ತದೆ. ಭಾರತೀಯ ಸಿದ್ಧ ಪರಂಪರೆಯನ್ನು ಅವಲೋಕಿಸಿದಾಗ ಬೌದ್ಧ, ನಾಥ, ಮಹೇಶ್ವರ, ಕಪಾಲಿ, ಶೈವ ಸಿದ್ಧರ ಅಸ್ಥಿತ್ವವನ್ನು ಗುರುತಿಸಬಹುದಾಗಿದೆ. ಕರ್ನಾಟಕದ ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನಲ್ಲಿ ನಾಥ, ಕಾಳಾಮುಖಿ, ಶಾಕ್ತ, ಸೂಫಿ, ವಜ್ರಯಾನ, ಕಾಪಾಲಿಕ ಮುಂತಾದ ಪಂಥಗಳು ತೀವ್ರವಾದ ಪ್ರಭಾವ ಬೀರಿವೆ. ನಾಥ ಪಂಥವು ಅಖಿಲ ಭಾರತ ವ್ಯಾಪ್ತಿಯನ್ನು ಹೊಂದಿದೆ. ಉತ್ತರದಿಂದ ದಕ್ಷಿಣದವರೆಗೂ ನೂರಾರು ಮಠಗಳಿವೆ. ಅವರು ಸಂಚರಿಸಿದ ಪಥಗಳಿವೆ. ಹಾಗೂ ನಾಥಪಂಥಿ ಸಮುದಾಯಗಳಿವೆ. ಈ ದೇಶವ್ಯಾಪಿ ನಾಥಪಂಥಕ್ಕೆ ಹೋಲಿಸಿದರೆ ದಕ್ಷಿಣದ ಕರ್ನಾಟಕವು ಅತಿ ಹೆಚ್ಚು ನೆಲೆಗಳನ್ನು ಒದಗಿಸಿದೆ. ಈ ಹಿನ್ನೆಲೆಯಲ್ಲಿ ದೇಶ ವ್ಯಾಪಿ ಪಂಥವೊಂದಕ್ಕೆ ತನ್ನಲ್ಲಿ ನೆಲೆಗೊಟ್ಟ ಕರ್ನಾಟಕ ಸಂಸ್ಕೃತಿಯು, ಅದರ ಜೊತೆ ಮಾಡಿದ ಅನುಸಂದಾನದ ಸ್ವರೂಪ ಯಾವುದು ಎಂಬುದು ಮುಖ್ಯವಾಗುತ್ತದೆ. ಈ ಅನುಸಂದಾನವನ್ನು ನಾಥಕ್ಕೆ ಲಗತ್ತಾಗಿರುವ ಜೀವಂತ ಮನುಷ್ಯ ಲೋಕವನ್ನು ಹಾಗೂ ಅದು ತನ್ನ ನಿತ್ಯ ಬದುಕಿನ ಲಯದಲ್ಲಿ ಕಟ್ಟಿಕೊಂಡಿರುವ ಸಂಸ್ಕೃತಿಯನ್ನು ತಿಳಿಯುವ ಮೂಲಕವೇ ಮಾಡಬೇಕಿದೆ.[೫]

ಈ ನಾಥರು ಶಾಕ್ತರ, ಕಪಾಲಿಕರ ಹಾಗೂ ವಜ್ರಾಯಾನಿಗಳ ಜತೆ ಮಾತ್ರವಲ್ಲದೆ ಅನೇಕ ಪಂಥ, ಜ್ಞಾನಾ ವ್ಯವಸ್ಥೆ, ಸಿದ್ಧರ ಜೊತೆಗೂ ಒಡನಾಟ ಇಟ್ಟುಕೊಂಡಿದ್ದರು ಎಂಬುದು ತಿಳಿದುಬರುತ್ತದೆ. ಅವರಲ್ಲಿ ರಸಸಿದ್ಧರು ಮುಖ್ಯರು. ರಸಸಿದ್ಧರಲ್ಲಿ ರಸ ಎಂದರೆ ಪಾದರಸ. ದ್ರವವೂ ಘನವೂ ಅಲ್ಲದ ಪಾದರಸವು ಭಾರವಾದ ಲೋಹ. ಈ ಪಾದರಸವು ಎರಡು ಬಗೆಯ ಸಿದ್ಧಿಗಳಿಗೆ ಸಂಬಂಧಿಸಿದ್ದಾಗಿದೆ. ಒಂದು ದೇಹ ಸಿದ್ಧಿ: ರೋಗ, ಮುಪ್ಪು, ಸಾವುಗಳನ್ನು ನಿವಾರಿಸುವ ಸಿದ್ಧಿಗಳು. ದೇಹವನ್ನು ವಜ್ರದಂತೆ ದೃಢವಾಗಿಸಿಕೊಳ್ಳುವ, ಕಾಯಿಲೆ ಗುಣಪಡಿಸಬಲ್ಲ ಔಷಧ ಜ್ಞಾನವಾಗುವ ಹಾಗೂ ದೀರ್ಘಕಾಲ ಉಳಿಯಬಲ್ಲ ಸಾಮರ್ಥ್ಯಕ್ಕೆ ಸಂಬಂಧಿಸಿದ್ದು. ಎರಡು ಲೋಹಸಿದ್ಧಿ: ಕೀಳು ಲೋಹಗಳನ್ನು ಚಿನ್ನವಾಗಿಸುವ ಒಂದು ತಿಳುವಳಿಕೆ ಈ ಸಿದ್ಧರಲ್ಲಿತ್ತು ಎಂಬ ನಂಬಿಕೆ. ರಸ ಸಿದ್ಧಿಯು ಚಿನ್ನದ ತಯಾರಿಕೆಗೆ ಲಗತ್ತಾಗಿರುವ ನೂರಾರು ಜನಪ್ರಿಯ ಕತೆಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ವಿಶೇಷವೆಂದರೆ ಕುರುಬರ ಸಾಂಸ್ಕೃತಿಕ ನಾಯಕರಾದ ರೇವಣಸಿದ್ಧೇಶ್ವರನ ಹೆಸರಿಗೆ ಕಬ್ಬಿಣ ಕರಗಿಸುವ ಎರಡು ಪ್ರಕರಣಗಳು ಲಗತ್ತಾಗಿರುವುದು. ಈ ಎರಡರಲ್ಲೂ ನಾಥರು ಬರುತ್ತಾರೆ. ಹರಿಹರನ ರೇವಣಸಿದ್ಧೇಶ್ವರ ರಗಳೆಯಲ್ಲಿ ಈ ಪ್ರಸಂಗಗಳು ಬರುತ್ತವೆ.

೧. ಒಮ್ಮೆ ರೇವಣನು ಮಾಸನೂರಿಗೆ ಬಂದು ಊರ ಹೊರಗಿನ ಪಾಳು ಶಿವಾಲಯದಲ್ಲಿ ಬಿಡಾರ ಮಾಡುತ್ತಾನೆ. ಅಲ್ಲಿ ತಂಗಿದವರನ್ನು ಮರದ ಮೇಲೆ ವಾಸವಾಗಿದ್ದ ಎರಡು

ತಿಗಣೆಗಳು ರಾತ್ರಿ ಬಂದು ಕೊಲ್ಲುತ್ತಿರುತ್ತವೆ. ರೇವಣನು ತಿಗಣೆಗಳನ್ನು ತನ್ನ ನೊಸಲು ಕಣ್ಣಿನ ಬೆಂಕಿಯಿಂದ ಸುಟ್ಟುಹಾಕುತ್ತಾನೆ. ಅವು ಕಾಹೇರಿ ಕರಗೀ ಕುದಿದುಕ್ಕಿ ತಕ್ಕಳಿಯ ಮುಕ್ಕುರಿಕ್ಕಿ ಕೆಡೆದುಕ್ಕಿನ ಗುಂಡುಗಳಾಗುತ್ತವೆ. ರೇವಣನು ಅವುಗಳನ್ನು ಬಳಸಿ, ಕಠಾರಿಯನ್ನು ಸುರಗಿಯನ್ನು ಮಾಡಿಸುತ್ತಾನೆ. ಒಂದು ಕಠಾರಿಯನ್ನು ಮಾಸನೂರಿನ ದೊರೆಗೆ ಬಳುವಳಿಯಾಗಿ ನೀಡುತ್ತಾನೆ. ಇನ್ನೊಂದು ಸುರಗಿಯನ್ನು ಮಾಸನೂರಿನ ನದಿಯಲ್ಲಿ ಬಚ್ಚಿಡುತ್ತಾನೆ. ಈ ಸುರಗಿಯನ್ನು ತೆಗೆಯಲು ಒಬ್ಬ ನಾಥಜೋಗಿ ಯತ್ನಿಸುತ್ತಾನೆ. ಇಲ್ಲಿರುವ ಉಕ್ಕಿನ ಗುಂಡು, ಸುರಗಿ, ಕಠಾರಿ ಎಲ್ಲವೂ ರಸವಿದ್ಯೆಗೆ ಸಂಬಂಧಪಟ್ಟವು.

೨. ರೇವಣನು ಕೊಲ್ಲಾಪುರದ ಗೋರಕ ನಿಳಯಕ್ಕೆ ಬಂದು ಭಿಕ್ಷೆ ಬೇಡುತ್ತಾನೆ. ಆಗ ಗೋರಕನು ತನ್ನ ಕಿರಿಯ ಮಡದಿ ಚಿಕ್ಕಲಕ್ಕಾದೇವಿಯಿಂದ ಹೊಸ ಕಠಾರಿಯ ಭಿಕ್ಷವನ್ನು ನೀಡಿಸುತ್ತಾನೆ. ರೇವಣನು ಅದನ್ನು ಬಿಸುಗಣ್ಣಿಂದ ದಿಟ್ಟಿಸಿ ಕರಗಿಸಿ ರಸವನ್ನಾಗಿ ಮಾಡಿ ಕುಡಿದುಬಿಡುತ್ತಾನೆ. ಕೂಡಲೆ ಮೂಡಿತ್ತು ತಾನೊಡನೆ ಗೋರಕನ ವಕ್ಷಮಂ ಕುಳ್ಳಿರ್ದನುದೊಳಗೆ ಮೂಡಿದ ಕಠಾರಿಯಂ, ಆಗ ಗೋರಕನ ಹಿರಿಮಡದಿ ಹಿರಿಯ ಲಕ್ಕಾದೇವಿ ಓಡಿಹೋಗಿ ಮಹಾಲಕ್ಷ್ಮಿಗೆ ವರದಿ ಮಾಡುತ್ತಾಳೆ. ಆಗ ಮಾಯೆ ಬಂದು ರೇವಣನೊಡನೆ ಬೇಡಿಕೊಳ್ಳಲು ರೇವಣನು ಮನಕರಗಿ ಲೋಹರಸವನ್ನು ಉಗುಳಿ ಗೋರಕನನ್ನು ಕಠಾರಿ ವೇದನೆಯಿಂದ ಪಾರು ಮಾಡುತ್ತಾನೆ. ರೇವಣನು ನೊಸಲಗಣ್ಣಿನ ಬೆಂಕಿಯಿಂದ ಲೋಹಕರಗಿಸಿ ರಸಮಾಡುವುದು ರಸಸಿದ್ಧಿಯ ರೂಪಕವಾಗಿದೆ. ಆದರೆ ಈ ಕತೆಯಲ್ಲಿ ಬರುವ ಗೋರಕನು ಯಾರೆಂದು ತಿಳಿಯುವುದಿಲ್ಲ. ಈಗಲೂ ಕೊಲ್ಲಾಪುರದಲ್ಲಿ ಗೋರಕನಾಥ ಮಠವಿದೆ. ಹೀಗೆ ರಸವಿದ್ಯೆಗೂ ಕರ್ನಾಟಕದ ಸಿದ್ಧರಿಗೂ ಬಳ್ಳಿಯಂತೆ ಎಲೆಗಳು ಸುತ್ತಿಕೊಂಡಿವೆ. ಅದರಲ್ಲೂ ಚಿನ್ನದ ವಿಷಯದಲ್ಲಿ ಜನರಿಗಿರುವ ಆಕರ್ಷಣೆಯು ವಿಚಿತ್ರ ಕತೆಗಳ ಹುಟ್ಟಿಗೆ ಕಾರಣವಾಗಿದೆ. ಈ ಕತೆಗಳ ಹಿಂದೆ ಇರುವ ರಸ ವಿಜ್ಞಾನದ ಸ್ವರೂಪವನ್ನು ಅರಿಯುವುದು ಒಂದು ಸವಾಲಾಗಿದೆ. ಈ ಕತೆಗಳಲ್ಲಿ ನಾಥರು ಹೇಗೋ ತಳಕು ಹಾಕಿಕೊಂಡಿರುವುದನ್ನು ಮಾತ್ರ ಸದ್ಯಕ್ಕೆ ಗಮನಿಸಬಹುದು.[೬] ಈ ಹಿನ್ನೆಲೆಗಳಲ್ಲಿ ರೇವಣಸಿದ್ಧನ ಮೇಲಾದ ನಾಥ ಪಂಥದ ಪ್ರಭಾವಗಳನ್ನು ಗುರುತಿಸಬಹುದಾಗಿದೆ.

೪.೩. ಪಂಥ ಪ್ರಭಾವ

ಕರ್ನಾಟಕದ ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನಲ್ಲಿ ನಾಥ, ಕಾಳಾಮುಖ, ಶಾಕ್ತ, ಸೂಫಿ, ವಜ್ರಾಯಾನ, ಕಪಾಲಿಕ ಮುಂತಾದ ಪಂಥಗಳು ಆಳವಾದ ಪ್ರಭಾವ ಬೀರಿವೆ. ಯೋಗಸಾಧನೆಯು ಪ್ರಧಾನ ಚಟುವಟಿಕೆಯಾಗಿರುವ ನಾಥವು ಮೂಲತಃ ಒಂದು ಗುರುಪಂಥ.

ಯೋಗ ಎಂದರೆ ಮಿಲನ ಎಂದರ್ಥ. ಗುರುಪಂಥಗಳಲ್ಲಿ ಗುರುಶಿಷ್ಯರು ಮಿಲನವಾಗುವಾಗ ಜಾತಿ ಚೌಕಟ್ಟು ಸಾಮಾನ್ಯವಾಗಿ ಇರುವುದಿಲ್ಲ. ನಾಥಪಂಥವು ಸಾಂಖ್ಯ, ಯೋಗ, ರಸೇಶ್ವರ ಮುಂತಾದ ದರ್ಶನಗಳ ಜತೆಯಲ್ಲೂ ವಜ್ರಾಯಾನ, ಕಪಾಲಿಕ, ಸೂಫಿ, ಕಾಳ, ಶಾಕ್ತ, ದತ್ತ, ವಾರಕರಿ, ಮಹಾನುಭಾವ ಪಂಥಗಳ ಜತೆಯಲ್ಲೂ ಅನುಸಂದಾನ ಮಾಡಿಕೊಂಡಿವೆ. ಈ ಕಾರಣಕ್ಕೆ ಭಾರತದ ಸಂಕರಶೀಲ ಪಂಥಗಳಲ್ಲಿ ನಾಥಪಂಥವೂ ಒಂದು. ಭಾರತದ ಅನುಭಾವಿ ಪಂಥಗಳು ಧಾರ್ಮಿಕ, ಪ್ರಾದೇಶಿಕ, ಸಾಮಾಜಿಕ ಹಾಗೂ ಭಾಷಿಕ ಗಡಿಗಳನ್ನು ದಾಟಿಕೊಂಡು ಯಾವುದೋ ಒಂದು ಸಮಾನ ಸಂಗತಿಗಾಗಿ ಬೆರೆಯುತ್ತಲೇ ಬಂದಿವೆ.

ಕರ್ನಾಟಕದ ನಾಥಪಂಥವನ್ನು ಕಪಾಲಿಕ, ಸೂಫಿ, ಶರಣ, ಶಾಕ್ತ, ಆರೂಢ, ವಜ್ರಯಾನಗಳ ನೆರವಿಲ್ಲದೆ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಇವುಗಳ ಒಳಗೆ ಒಂದು ದಾರ್ಶನಿಕ ನೆಂಟಸ್ತಿಕೆ ಇದೆ. ಸಾಮಾಜಿಕ ಶ್ರೇಣೀಕರಣದ ಹಿನ್ನೆಲೆಯಲ್ಲಿ ಹುಟ್ಟುವ ಕೆಲವು ಪಂಥಗಳು ಸಮಾನತೆಯ ಆಶಯವನ್ನು ಇಟ್ಟುಕೊಂಡಿರುತ್ತವೆ. ಹಾಗೂ ಅವು ರೂಪುಗೊಂಡ ಕಾಲಮಾನದ ಒತ್ತಡವನ್ನು ಬಿಂಬಿಸುತ್ತವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಆರೂಢ ಪಂಥಗಳಲ್ಲಿ ಸಮಾಜದ ಬಹುತೇಕ ಕೆಳಜಾತಿಗಳು ಹಾಗೂ ಕಸುಬುದಾರ ಸಮಾಜಗಳು ತಮ್ಮ ಅಸ್ಮಿತೆಯನ್ನು ಕಂಡುಕೊಂಡವು.

ಇದಕ್ಕೆ ಈ ಪಂಥಗಳು ಕೊಟ್ಟ ಆಧ್ಯಾತ್ಮಿಕ ಹಕ್ಕುದಾರಿಕೆಯೂ ಒಂದು ಕಾರಣ. ಆದರೆ ಈ ಪಂಥಗಳ ಆಕರ್ಷಣೆಗೆ ಇನ್ನೂ ಸಂಕೀರ್ಣವಾದ ಕಾರಣಗಳಿದ್ದವು. ಅವುಗಳನ್ನು ಹುಡುಕಿ ತೆಗೆಯಬೇಕಿದೆ. ವೈರುಧ್ಯವೆಂದರೆ ತಾತ್ವಿಕವಾಗಿ ಒಂದು ಬಗೆಯ ಸಮದರ್ಶನ ಎನ್ನಬಹುದಾದ ನೆಲೆಯಿಂದ ಶುರುವಾಗುವ ಈ ಪಂಥಗಳು ಚರಿತ್ರೆಯ ಒತ್ತಡಗಳಲ್ಲಿ ತಮ್ಮ ಈ ಗುಣವನ್ನು ಕಳೆದುಕೊಂಡು ತಾರತಮ್ಯವಾದವನ್ನು ಒಳಗೊಂಡಿದ್ದು ವೈದಿಕೀಕರಣದ ಸೆಳೆತಕ್ಕೆ ಒಳಗಾಗಿದ್ದು, ಅವುಗಳ ಒಳಗೆ ಆಸ್ತಿಕವಾದವು, ಆತ್ಮವಾದವು ನುಸುಳಿದ್ದು ಪಂಥಗಳ ಈ ಬಗೆಯ ದಾರ್ಶನಿಕ ಪಲ್ಲಟ ಅಥವ ಭ್ರಷ್ಟತೆಯು ಅವುಗಳಲ್ಲಿದ್ದ ಸಮದರ್ಶನವಾದಿ ಚಿಂತನೆ ಮತ್ತು ಆಚರಣೆಗಳನ್ನು ಸಂಕೇತಮಾತ್ರವಾಗಿ ಉಳಿಸಿದವು. ಸಂಪತ್ತು, ಪ್ರಭುತ್ವ, ಅಧಿಕಾರ, ಸಾಮಾಜಿಕ ಅಂತಸ್ತು, ಲಿಂಗಬೇಧ, ದೈಹಿಕ ದುಡಿಮೆ, ಊಳಿಗಮಾನ್ಯ ವ್ಯವಸ್ಥೆ ಕುರಿತ ನಿಲುವುಗಳು ಯಾವುದೇ ದರ್ಶನ ಅಥವಾ ಪಂಥದ ಅಂತಿಮ ಅಗ್ನಿಪರೀಕ್ಷೆ. ನಾಥವನ್ನು ಒಳಗೊಂಡಂತೆ ಅನೇಕ ಪಂಥಗಳಲ್ಲಿ ಈ ಬಗೆಯ ಚಾರಿತ್ರಿಕ ಸಂಕೋಚ ಹಾಗೂ ವಿಸ್ತರಣೆಗಳು ಯಾಕಾಗಿ ಸಂಭವಿಸಿದವು. ಇದರ ಪರಿಣಾಮ ಏನಾಯಿತು ಎಂಬುದು ಇನ್ನೂ ಒಗಟಿನಂತೆ ಉಳಿದಿವೆ.[೨]

ನಾಥರ ಯೋಗದರ್ಶನವು ದೇಹ ಮತ್ತು ಮನಸ್ಸುಗಳ ಸಮಸ್ಯೆಯ ಸಿದ್ಧಾಂತ. ಈ ದರ್ಶನವು ಒಂದು ಪ್ರಬಲ ದೃಷ್ಟಿಯಾಗಿ ದುಡಿವ ಕೆಳಸ್ತರದ ಜನಸಮುದಾಯದ ಜೀವನದ

ಜೊತೆ ಗಾಢ ಸಂಬಂಧ ಪಡೆದುಕೊಂಡಿತ್ತು. ದಾರ್ಶನಿಕ ಚಿಂತನೆಗಳು ಜನರ ಬದುಕಿಗೆ ಅನುವಾದಗೊಂಡು ಇಳಿಯುವಾಗ ಅನೇಕ ಮಾರ್ಪಾಟು ಪಡೆಯುತ್ತವೆ. ಉದಾಹರಣೆಯಾಗಿ ಕಪಾಲಿಕ, ಕಾಳ, ನಾಥ, ಶಾಕ್ತ ಮೊದಲಾದ ಪಂಥಗಳು ಜಾತಿ ಚೌಕಟ್ಟುಗಳಾಚೆ ಧೀಕ್ಷೆ ಕೊಡುತ್ತವೆ.[೮]

ಕರ್ನಾಟಕದ ಕುರುಬರು ಪ್ರಧಾನವಾಗಿ ಶೈವರು. ಹಾಲುಮತ ಪುರಾಣದಲ್ಲಿ ಕುರಿ ಕಾಯುವ ಕೆಲಸಕ್ಕಾಗಿ ಶಿವಪಾರ್ವತಿಯರು ಹೊಸ ಮಾನವರನ್ನು ಸೃಷ್ಟಿಸುತ್ತಾರೆ. ಅವರೇ ಕುರುಬರು. ಕುರುಬರಿಗೆ ಬೀರೇಶ್ವರನು ಕೈಲಾಸಕ್ಕೆ ತೆರಳಿದ ಭಾನುವಾರ ಪವಿತ್ರ. ಭೈರವಾರಾಧಕ ನಾಥರಿಗೂ ಈ ದಿನ ಪವಿತ್ರ. ಕುರುಬರಿಗೂ ಸಿದ್ಧಪಂಥಕ್ಕೂ ಬಿಡಿಸಲಾಗದ ತಂತುಗಳಿವೆ. ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧ, ಬೀರಪ್ಪ, ಮಾಳಿಂಗರಾಯ,ನಿರ್ವಾಣಸ್ವಾಮಿ ಇವರು ಕುರುಬರ ಸಾಂಸ್ಕೃತಿಕ ನಾಯಕರು. ಮಲ್ಲಣ್ಣ ಕವಿಯ ಪ್ರಕಾರ ಮೆಲುಪವನದಲ್ಲಿ ಅಂದರೆ ಯೋಗಸಿದ್ಧಿಯಲ್ಲಿ ಕುಳಿತಿರುತ್ತಿದ್ದ ರೇವಣನು ಒಬ್ಬ ದೊಡ್ಡ ಯೋಗಿ.[೯] ನಾಥರಿಗೂ ರೇವಣಸಿದ್ಧರಿಗೂ ಇರುವ ಸಂಬಂಧವನ್ನು ಕುರುಬರು ಮತ್ತು ನಾಥರು ಸಂಬಂಧದ ಹಿನ್ನೆಲೆಯಲ್ಲಿ ನೋಡಬೇಕಾಗುವುದು. ಕುರುಬರಿಗೆ ಹಾಗೂ ನಾಥರ ಸಂಬಂಧದ ಮೂರು ಕೊಂಡಿಗಳೆಂದರೆ ೧. ರೇವಣಸಿದ್ಧನು ನಾಥರ ಚೌರಾಸಿ ಸಿದ್ಧರಲ್ಲಿ ಒಬ್ಬನಾಗಿ ಬರುವುದು ೨. ಹಾಲುಮತ ಮಹಾಕಾವ್ಯದಲ್ಲಿ ಕುರುಬರ ಸಾಂಸ್ಕೃತಿಕ ನಾಯಕರಲ್ಲಿ ಬಿಲ್ಲಾಳ ಶಾಮರಾಯನು ಗೋರಕನಾಥನಿಂದ ಬಾವನ್ನ ವಿದ್ಯೆಗಳನ್ನು ಕಲಿಯುವ ಪ್ರಸಂಗ. ೩. ಭೈರವ ಹಾಗೂ ಬೀರಪ್ಪರ ನಡುವಣ ಸಾಮ್ಯಗಳು, ಕುರುಬರ ಕ್ಷೇತ್ರಗಳಾದ ಮೈಲಾರ, ದೇವರಗುಡ್ಡಗಳಲ್ಲಿ ಬೀರಪ್ಪನು ಭೈರವನಾಗಿ ಏಕೀರ್ಭವಿಸಿರುವುದನ್ನು ಈಗಲೂ ಕಾಣಬಹುದು.

ಈ ಚಾರಿತ್ರಿಕ ಸ್ಮೃತಿಗಳು ವಾಸ್ತವಕ್ಕೆ ಬಂದಂತೆ ಕದ್ರಿಯ ಜೋಗಿ ಮಠಕ್ಕೆ ಪ್ರಸ್ತುತ ಅರಸನಾಗಿ ಕುರುಬ ಸಮುದಾಯದಿಂದ ಒಬ್ಬ ನಾಥ ಬಂದಿರುವುದು. ಸಂಧ್ಯಾನಾಥರು ರಾಜಾಸ್ಥಾನದ ರೇಬಾರಿ ಎಂಬ ಪಶುಪಾಲಕ ಸಮುದಾಯದವರು. ಪಟ್ಟಾಭಿಷೇಕ ಮಾಡುವಾಗ ಅವರಿಗೆ ಕುರಿದಾರದಿಂದ ಕೂಡಿದ ತಲೆಯುಡಿಯನ್ನು ತೊಡಿಸಲಾಗಿತ್ತು. ನಾಥರು ಪೂಜಿಸುವ ಪಾತ್ರ ದೇವತೆಯ ಕಂಠಕ್ಕೂ ಕುರಿದಾರ ಸುತ್ತಲಾಗಿತ್ತು. ನಾಥಪಂಥದಲ್ಲಿ ಕುರಿಯ ಉಣ್ಣೆಗೆ ಬಹಳ ಮಹತ್ವವಿದೆ. ನಾಥರು ಧೀಕ್ಷೆಯಲ್ಲಿ ಹಾಕಿಕೊಳ್ಳುವ ಶೈಲಿಯು ಕುರುಬದಾರದಿಂದಲೆ ಮಾಡಬೇಕು. ಉಣ್ಣೆದಾರವು ಪಶುಪಾಲಕರ ಜೊತೆ ನಾಥರನ್ನು ಬಗೆ ಬಗೆಯಾಗಿ ಕಟ್ಟಿಹಾಕಿದೆ. ನಾಥರು ತಮ್ಮ ಬಿಡುವಿನ ವೇಳೆಯಲ್ಲಿ ತಕಲಿ ಹಿಡಿದು ಉಣ್ಣೆದಾರವನ್ನು ನೂಲುತ್ತಿದ್ದರು. ಹಾಗೂ ಕಾಲಾಕಂಬಳಿವಾಲ ಎಂಬ ಹೆಸರಿನ ನಾಥರು ಇರುವುದನ್ನು ಇಲ್ಲಿ ನೆನೆಯಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಚನ್ನಪ್ಪ ಕಟ್ಟಿ(ಲೇ), ಹಾಲುಮತ ವ್ಯಾಸಂಗ–೫, ಡಾ.ಎಫ್.ಟಿ.ಹಳ್ಳಿಕೇರಿ(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭೯–೯೧

೨. ಡಾ. ಎಂ.ಎಂ.ಕಲಬುರ್ಗಿ, ಪ್ರಬಂಧಗಳ ಸಂಕಲನ, ರೇವಣಸಿದ್ಧ ಮತ್ತು...., ಡಾ.ಕೆ.ರವೀಂದ್ರನಾಥ (ಸಂ), ಸಂಹವನ ಪ್ರಕಾಶನ, ಮೈಸೂರು, ಪು.೨

೩. ಅದೇ, ಪು.೩

೪. ಅದೇ, ಪು.೩

೫. ಡಾ.ರಹಮತ್ ತರೀಕೆರೆ, ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩

೬. ಅದೇ, ಪು.೯೫–೯೬

೭. ಅದೇ, ಪು.೭–೮

೮. ಅದೇ, ಪು.೯

೯. ಅದೇ, ಪು.೨೦೭

೧೦. ಅದೇ, ಪು.೨೦೮–೨೦೯

ಅಧ್ಯಾಯ : ಐದು

ರೇವಣಸಿದ್ಧ ಪರಂಪರೆ: ನೆಲೆಗಳು

೫.೧. ಕರ್ನಾಟಕ ನೆಲೆಗಳು

೫.೨. ಕರ್ನಾಟಕೇತರ ನೆಲೆಗಳು

ಅಧ್ಯಾಯ : ಐದು

ರೇವಣಸಿದ್ಧ ಪರಂಪರೆ: ನೆಲೆಗಳು

ಸಿದ್ಧರ ನೆಲೆಗಳ ಹುಡುಕಾಟಕ್ಕಿಂತ ಮುನ್ನ ಸಿದ್ಧರೆಂದರೆ ಯಾರು? ಹಾಗೂ ಸಿದ್ಧರ ಸೈದ್ಧಾಂತಿಕತೆ ಒಂದು ಪರಂಪರೆಯಾಗಿ ಬೆಳೆದು ಬಂದ ಬಗೆ ಹೇಗೆ? ಎಂಬುದು ಮುಖ್ಯವಾಗುತ್ತದೆ. ಸಿದ್ಧರು ಯಾರು? ಎಂಬ ಪ್ರಶ್ನೆಗೆ ಹಲವಾರು ಬಗೆಯ ಉತ್ತರ ದೊರೆಯಬಹುದು. ಸಾಮಾನ್ಯವಾಗಿ ಸಿದ್ಧ ಎಂದರೆ ಪರಿಪೂರ್ಣ ವಾದ, ಪಕ್ವವಾದ, ಸಾಧನೆಯ ಗುರಿಮುಟ್ಟಿದವ ಎಂದು ಅರ್ಥೈಸಬಹುದಾಗಿದೆ. ಒಂದರ್ಥದಲ್ಲಿ ಸಾಧನೆಯ ಸಾಧಕನೆಂದು ಅಭಿಪ್ರಾಯಿಸಬಹುದಾಗಿದೆ. ಒಟ್ಟಾರೆಯಾಗಿ ಸಾಧನೆಯಿಂದ ಸಿದ್ಧಿ ದೊರೆತ ಮೇಲೆ ಸಾಧಕನೆನಿಸಿಕೊಳ್ಳುತ್ತಾನೆ. ಮೇಲಿನ ಸಿದ್ಧರ ಅರ್ಥ ಮತ್ತು ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಭಾರತದ ಉದ್ದ-ಅಗಲಗಳಲ್ಲಿ; ಅನೇಕ ಸಿದ್ಧರನ್ನು ಹಾಗೂ ಸಿದ್ಧ ಪರಂಪರೆಗಳ ಅಸ್ತಿತ್ವವನ್ನು ಕಾಣಬಹುದಾಗಿದೆ. ಸಿದ್ಧರು ಹಾಗೂ ಆ ಪರಂಪರೆಗಳ ಸಾಹಿತ್ಯಗಳನ್ನು, ಸಂಪ್ರದಾಯಗಳನ್ನು ಗಮನಿಸಿದಾಗ, ಬೌದ್ಧಸಿದ್ಧರು, ನಾಥಸಿದ್ಧರು, ರಸಸಿದ್ಧರು, ಮಹೇಶ್ವರಸಿದ್ಧರು, ಕಪಾಲಿಸಿದ್ಧರು ಎಂಬಿತ್ಯಾದಿ ಬಗೆಯ ಪ್ರಮುಖ ಸಿದ್ಧರಿದ್ದರೆಂಬುದನ್ನು ಗುರುತಿಸಬಹುದಾಗಿದೆ.

ಬುದ್ಧನ ನಿರ್ವಾಣದ ನಂತರ, ಸಿದ್ಧ ಪರಂಪರೆಯು ಅನೇಕ ರೂಪಾಂತರಗಳಿಗೆ ಸಾಕ್ಷಿಯಾಗಿದೆ. ತದ ನಂತರದಲ್ಲಿ ಕಾಲಾನುಕ್ರಮೇಣ ಬೌದ್ಧಧರ್ಮವು ನಿರೀಶ್ವರವಾದ ಪ್ರತಿಪಾದನೆಯಿಂದ ತನ್ನ ಬಂಧುತ್ವವನ್ನು ಕಡಿದುಕೊಂಡು, ಈಶ್ವರವಾದದತ್ತ ಸಾಗಿದುದನ್ನು ಗಮನಿಸಬಹುದಾಗಿದೆ. ಹಿಂದೆ ಇದ್ದ ಸಿದ್ಧ ಪರಂಪರೆಯು ತನ್ನ ವಿಚಾರಧಾರೆಗಳಲ್ಲಿ ಮಹತ್ತರ ಬದಲಾವಣೆಗಳನ್ನು ಅಳವಡಿಸಿಕೊಂಡು ಬೆಳೆದು ಬಂದದ್ದನ್ನು ಕಾಣಬಹುದಾಗಿದೆ. ಬದುಕನ್ನು ಪ್ರಾಕೃತಿಕ ರೂಪದಲ್ಲಿ ಗೃಹಸ್ಥರಾಗಿದ್ದುಕೊಂಡೇ: ಅನುಭವಿಸುವ ಗುರುಪದೇಶವನ್ನು ಈ ಕಾಲಘಟ್ಟದ

ಸಿದ್ಧರು ಸಾರತೊಡಗಿದರು. ಭಾರತೀಯ ಸಿದ್ಧಸಾಹಿತ್ಯವನ್ನು ಅವಲೋಕಿಸಿದಾಗ ೧೪ನೆಯ ಶತಮಾನದ ಮಿಥಿಲೆಯ ಜ್ಯೋತಿಶ್ವರ ಠಾಕೂರನ ಸಿದ್ಧರ ಪಟ್ಟಿಯಲ್ಲಿ ೭೬ ಸಿದ್ಧರನ್ನು ಕಾಣಬಹುದಾಗಿದೆ. ನಂತರದಲ್ಲಿ ಮಹಾಪಂಡಿತ ರಾಹುಲ ಸಾಂಕೃತ್ಯಾಯನು ತಯಾರಿಸಿದ, ಸಿದ್ಧರ ಪಟ್ಟಿಯಲ್ಲಿ ಒಟ್ಟು ೮೪ ಸಿದ್ಧರ ಹೆಸರು, ಜಾತಿ, ಪ್ರಾಂತ್ಯ, ಆ ಕಾಲದ ಆಳ್ವಿಕೆ ಅವರುಗಳಿಗಿದ್ದ ರಾಜಾಶ್ರಯಗಳೆಡೆ ಬೆಳಕು ಚೆಲ್ಲಿದ್ದಾನೆ. ಈ ಪಟ್ಟಿಯಲ್ಲಿ ಸಮಾಜದ ಎಲ್ಲಾ ವರ್ಗಗಳು ಸಮುದಾಯದ ಪ್ರತಿನಿಧಿತ್ವಗಳಿರುವುದನ್ನು ಅದರಲ್ಲೂ ವಿಶೇಷವಾಗಿ ಗಣನೀಯವಾಗಿ ಶೂದ್ರರು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಕಾಣಬಹುದಾಗಿದೆ. ಸಮಾಜದ ವಿವಿಧ ಹಂತಗಳಿಂದ ಬಂದ ಈ ಸಾಧಕರು, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರಾಗಿದ್ದಾರೆ. ಅವರ ಧರ್ಮವೇ ಜನತೆಯ ಧರ್ಮವೂ ಆಗಿತ್ತು. ಈ ಧರ್ಮದ ಪೋಷಣೆಗೆ ಆಳರಸರ, ಪ್ರಭುತ್ವಗಳ ಸಹಕಾರವೂ ಇತ್ತೆಂಬುದು ತಿಳಿದು ಬರುತ್ತದೆ. ಭಾರತೀಯ ಸಿದ್ಧ ಪರಂಪರೆಯ ಪ್ರಭಾವಕ್ಕೆ ಕರ್ನಾಟಕದ ಪ್ರದೇಶವು ಒಳಗಾಗದೆ ಇರಲಿಲ್ಲ. ಕರ್ನಾಟಕದ ಚರಿತ್ರೆಯಲ್ಲೂ ಹಲವು ಸಿದ್ಧ ಪರಂಪರೆಗಳು ಜನ್ಮ ತಾಳಿವೆ. ಮುಖ್ಯವಾಗಿ ಈ ಪರಂಪರೆಗಳನ್ನು ಕಾಪಾಲಿಕ, ಕಾಳಾಮುಖ, ಬೌದ್ಧಸಿದ್ಧ ಮತ್ತು ಶೈವಸಿದ್ಧ ಪರಂಪರೆಗಳೆಂದು ವಿಂಗಡಣೆ ಮಾಡಬಹುದು. ಶೈವಸಿದ್ಧ ಪರಂಪರೆಯಲ್ಲಿ ರೇವಣಸಿದ್ಧ, ಮರುಳಸಿದ್ಧ, ಸಿದ್ಧರಾಮ ಪರಂಪರೆಗಳು ಮುಖ್ಯವಾದವುಗಳು. ಈ ಶೈವ ಪರಂಪರೆಗಳು ಮತ್ತು ನಾಥ ಪರಂಪರೆಗಳ ನಡುವೆ ಇದ್ದಿರಬಹುದಾದ ಸಂಬಂಧ ಹಾಗೂ ಶೈವಸಿದ್ಧರು ಈ ಹಿಂದೆ ನಾಥ ಸಿದ್ಧರೇ ಆಗಿದ್ದರೆಂಬುದರ ಬಗ್ಗೆ ಅನೇಕ ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಧಾರ್ಮಿಕ, ಸಾಮಾಜಿಕ ಇತಿಹಾಸದಲ್ಲಿ ರೇವಣಸಿದ್ಧನದು ಬಹುದೊಡ್ಡ ಹೆಸರು. ಜೀವಿತ ಕಾಲಾವಧಿಯಲ್ಲಿ ಧಾರ್ಮಿಕತೆಯನ್ನು ಮೀರಿ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿಯೂ ತನ್ನ ಪ್ರಭಾವ ಬೀರಿದವನಾಗಿದ್ದಾನೆ. ಕರ್ನಾಟಕದಲ್ಲಿ ಲಿಂಗಾಯತ ಹಾಗೂ ಕುರುಬ ಸಾಮಾಜಗಳ ಲಿಖಿತ ಮತ್ತು ಅಲಿಖಿತ ಸಾಹಿತ್ಯ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಹರಡಿಕೊಂಡಿದ್ದಾನೆ. ತನ್ನದೇ ಆದ ಗುರುಪರಂಪರೆಯ ಹುಟ್ಟಿಗೆ ಕಾರಣವಾಗಿದ್ದಾನೆ. ರೇವಣಸಿದ್ಧನು ಸಿದ್ಧರಲ್ಲಿ ಸಿದ್ಧನಾಗಲೇಬೇಕೆಂಬಂತೆ ನಾಡಿನಾದ್ಯಂತ ಸಂಚರಿಸಿ ಕರ್ನಾಟಕ ಸಿದ್ಧ ಪರಂಪರೆಯಲ್ಲಿ ಬಹುದೊಡ್ಡ ಹೆಸರನ್ನು ಪಡೆದವನು. ಚಾರಿತ್ರಿಕವಾಗಿ ಈತನು ೧೧ನೇ ಶತಮಾನದ ಕೊನೆಯ ದಶಕದಲ್ಲಿ ಹುಟ್ಟಿ ೧೨ನೇ ಶತಮಾನದಲ್ಲಿ ಕೊನೆಯ ದಶಕದಲ್ಲಿ ನಿಧನ ಹೊಂದಿರಬಹುದಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ೧೨ನೇ ಶತಮಾನದ ಶರಣರ ಚಳುವಳಿಯ ಕಾಲಘಟ್ಟದಲ್ಲಿ ರೇವಣಸಿದ್ಧ ಹಾಗೂ ಸಿದ್ಧರಾಮರ ನೇತೃತ್ವದಲ್ಲಿ ರೂಪುಗೊಂಡ ಗುರುಪರಂಪರೆಗಳು ಮುಖ್ಯವಾದವುಗಳು. ರೇವಣಸಿದ್ಧರು ಸಂಚರಿಸಿದ್ದರೆಂದು ಹೇಳಲಾಗುವ ಹಲವಾರು ಸ್ಥಳಗಳು ಈಗ ಪ್ರಸ್ತುತ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಮಹಾರಾಷ್ಟ್ರ, ಆಂಧ್ರಪ್ರದೇಶ

ಮತ್ತು ತಮಿಳುನಾಡು ರಾಜ್ಯಗಳ ವ್ಯಾಪ್ತಿಯಲ್ಲಿವೆ. ಸಾಮಾಜಿಕ ಕಳಕಳಿಯನ್ನು ಹೊಂದಿದ್ದ ರೇವಣಸಿದ್ಧ ಮಾನವ ಕಲ್ಯಾಣಕ್ಕಾಗಿ ಲೋಕಸಂಚಾರ ಮಾಡಿದುದನ್ನು ಗಮನಿಸಬಹುದಾಗಿದೆ. ಈತನ ಹೆಸರಿನ ಯಾವುದೇ ನೆಲೆಗೆ ಹೋದರು ಅಲ್ಲಿಯ ಜನರು ರೇವಣಸಿದ್ಧ ಇಲ್ಲಿ ಬಂದಿದ್ದ ಎಂದು ಹೇಳುತ್ತ ಒಂದು ಸಂದರ್ಭವನ್ನು ಕಥನಿಸುತ್ತಾರೆ. ಕುರುಬ ಜನಾಂಗದ ಸಾಂಸ್ಕೃತಿಕ ಚರಿತ್ರೆಯನ್ನು ನಿರೂಪಿಸಿರುವ ತಗರ ಪವಾಡ, ಸಿದ್ಧಮಂಕ ಚರಿತೆ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಬಸವಣ್ಣಪ್ಪ ನೀಲಪ್ಪ ಹಳವಳ್ಳಿಯವರ ಹಾಲುಮತ ಪುರಾಣ ಮುಂತಾದ ಕೃತಿಗಳು ರೇವಣಸಿದ್ಧನಿಗೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ರೇವಣಸಿದ್ಧರು ಸರವೂರಿನಲ್ಲಿ ಶಾಂತಮುತ್ತಯ್ಯನಿಗೆ ಲಿಂಗಧೀಕ್ಷೆಯನ್ನು ಕೊಟ್ಟು ಗುರುಕಂಕಣವನ್ನು ಕಟ್ಟಿ ಕುರುಬ ಕುಲಕ್ಕೆ ಒಡೆಯನನ್ನಾಗಿ ಮಾಡುತ್ತಾರೆ. ಹೀಗೆ ರೇವಣಸಿದ್ಧನಿಂದ ದೀಕ್ಷೆಗೊಂಡು ಕುರುಬಕುಲದ ಒಡೆಯನಾದ ಶಾಂತಮುತ್ತಯ್ಯನು ಮುಂದೆ ಕಲ್ಯಾಣ ಪಟ್ಟಣದಲ್ಲಿ ನೆರೆದ ಶರಣ ಸಮುದಾಯದ ಮುಂದೆ ಸತ್ತಿರುವ ತಗರನ್ನು ಬದುಕಿಸಿ ಪವಾಡ ಮೆರೆದು ಶರಣರಿಂದ ಮತ್ತು ಅರಸ ಬಿಜ್ಜಳನಿಂದ ಮೆಚ್ಚುಗೆಯನ್ನು ಪಡೆಯುತ್ತಾನೆ. ಕುರುಬ ಕುಲಕ್ಕೆ ಗುರುತನ ದೊರೆಕಿರುವುದರ ಕುರುಹಾಗಿ ಬಸವಣ್ಣನಿಂದ ಮೂರೇಣಿನ ಕಂತೆಯನ್ನು ಪಡೆಯುತ್ತಾನೆ.

ಶಾಂತಮುತ್ತಯ್ಯನ ತರುವಾಯ ಅವನ ಸಂತತಿಯವರು ಕುರುಬ ಕುಲದ ಗುರುಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದು ಸ್ಪಷ್ಟವಾಗುತ್ತದೆ. ಕರ್ನಾಟಕದಾದ್ಯಂತ ವ್ಯಾಪಿಸಿರುವ ಅಪಾರ ಸಂಖ್ಯೆಯ ಕುರುಬ ಜನಾಂಗದವರಿಗೆ ಮಾರ್ಗದರ್ಶನ ಮಾಡುವುದು ಈ ಮೂಲ ಪೀಠ ಒಂದರಿಂದಲೆ ಸಾಧ್ಯವಿಲ್ಲವೆಂದು ಮನಗಂಡ ಇಲ್ಲಿಯ ಗುರುವರ್ಗದವರು ಮುಂದಿನ ಕಾಲಘಟ್ಟಗಳಲ್ಲಿ ನಾಡಿನ ಬೇರೆ ಬೇರೆ ಸ್ಥಳದಲ್ಲಿ ಅನೇಕ ಶಾಖಾಮಠಗಳನ್ನು ಸ್ಥಾಪಿಸಿದರಲ್ಲದೆ ಆ ಮಠಗಳಿಗೆ ತಮ್ಮ ವಂಶದವರನ್ನೆ ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಆ ಮೂಲಕ ಆ ಭಾಗದ ಕುರುಬ ಜನಾಂಗದವರ ಧಾರ್ಮಿಕ, ಸಾಮಾಜಿಕ ಕಾರ್ಯಗಳು ಗುರುವರ್ಗದವರ ಮುಖಾಂತರ ನಡೆಯುವುದಕ್ಕೆ ಅನುಕೂಲತೆಯನ್ನು ಮಾಡಿಕೊಟ್ಟರು. ಹೀಗೆ ಅಸ್ಥಿತ್ವಕ್ಕೆ ಬಂದ ರೇವಣಸಿದ್ಧೇಶ್ವರ ಮಠಗಳು ನಾಡಿನ ಯಾವುದೇ ಭಾಗದಲ್ಲಿದ್ದರು ಅವೆಲ್ಲ ಸರವೂರ ಶಾಖೆಗೆ ಸೇರಿದವುಗಳಾಗಿವೆ ಎಂಬುದು ಆ ಮಠದ ಬಿರುದಾವಳಿಗಳಿಂದ ಗೊತ್ತಾಗುತ್ತದೆ.

ರೇವಣಸಿದ್ಧನ ನೆಲೆಗಳನ್ನು ಕರ್ನಾಟಕ ರಾಜ್ಯವಲ್ಲದೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಗುರುತಿಸಬಹುದಾಗಿದೆ. ಬಹು ವಿಸ್ತೃತ ಭೌಗೋಳಿಕ ವಿಸ್ತಾರದಲ್ಲಿರುವ ರೇವಣಸಿದ್ಧನ ನೆಲೆಗಳನ್ನು ಒಂದು ಚೌಕಟ್ಟಿನಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಕಷ್ಟಕರವಾದುದು. ಅಧ್ಯಯನ ದೃಷ್ಟಿಯಿಂದ ಆಯಾ ಭೌಗೋಳಿಕ ಹಿನ್ನೆಲೆಯಲ್ಲಿ ಅಧ್ಯಯನಕಾರ ಕೆಳಗಿನಂತೆ ರೇವಣಸಿದ್ಧನ ನೆಲೆಗಳನ್ನು ವರ್ಗೀಕರಿಸಿಕೊಂಡಿದ್ದಾನೆ.

೫.೧ ಕರ್ನಾಟಕದ ನೆಲೆಗಳು

೫.೧.೧ ಉತ್ತರ ಕರ್ನಾಟಕದ ನೆಲೆಗಳು

ಕ್ರಸಂ. ಜಿಲ್ಲೆ	ಜಿಲ್ಲೆ	ತಾಲ್ಲೂಕು	ಗ್ರಾಮ/ಪಟ್ಟಣ	ಜಿಲ್ಲಾವಾರು ನೆಲೆಗಳು
೧		ಮುದ್ದೇಬಿಹಾಳ	ಸರೂರು	
೨		ಮುದ್ದೇಬಿಹಾಳ	ತೂಗುಡ್ಡ	
೩		ಇಂಡಿ	ಹೊರ್ತಿ	
೪		ವಿಜಯಪುರ	ಶಿವಣಗಿ	
೫	ವಿಜಯಪುರ	ಬಾಗೇವಾಡಿ	ರೋಣಿಹಾಳ	೧೦
೬		ಬಾಗೇವಾಡಿ	ಮನಗೂಳಿ	
೭		ಬಾಗೇವಾಡಿ	ಇಂಗಳೇಶ್ವರ	
೮		ಬಾಗೇವಾಡಿ	ಬಳ್ಳಾವೂರು	
೯		ಇಂಡಿ	ಸಾತಲಗಾವ	
೧೦		ವಿಜಯಪುರ	ಉಮ್ರಜ್	
೧೧		ಬಾಗಲಕೋಟೆ	ಕೆಳಗಿನಹಾಳ	
೧೨		ಬದಾಮಿ	ಹೀರೇನಸಬಿ	
೧೩	ಬಾಗಲಕೋಟೆ	ಹುನಗುಂದ	ಕೆಲೂರು	೫
೧೪		ಹುನಗುಂದ	ಸೂಳೀಬಾವಿ	
೧೫		ಬೀಳಗಿ	ಬೀಳಗಿ	
೧೬		ಸವದತ್ತಿ	ಸಂಗ್ರೇಶಕೊಪ್ಪ	
೧೭		ಸವದತ್ತಿ	ಹಿರೇಕುಂಬಿ	
೧೮		ಗೋಕಾಕ	ಕೌಜಲಗಿ	
೧೯		ಗೋಕಾಕ	ಉದಗಟ್ಟಿ	
೨೦		ಗೋಕಾಕ	ದಂಡಾಪುರ	
೨೧		ರಾಯಬಾಗ	ಪಬರಟ್ಟಿ	

೨೨		ಗೋಕಾಕ	ವಡ್ರಟ್ಟಿ	
೨೩		ಗೋಕಾಕ	ಮಮದಾಪುರ	
೨೪	ಬೆಳಗಾವಿ	ಗೋಕಾಕ	ದಂಡಾಪುರ	೧೨
೨೫		ರಾಯಭಾಗ	ನಾಗನೂರು	
೨೬		ಬೈಲಹೊಂಗಲ	ಗೋವನಕೊಪ್ಪ	
೨೭		ರಾಯಭಾಗ	ಭೇಂಡವಾಡ	
೨೮		ಶಹಪುರ	ಕಾಡಮ್ಮಗೇರಿ	
೨೯		ಸುರಪುರ	ಬೆಳ್ಳಳ್ಳಿ	
೩೦		ಜೇವರ್ಗಿ	ಭಾಸಗಿ	
೩೧		ಗುಲಬರ್ಗ	ಗುಲಬರ್ಗ	
೩೨		ಗುಲಬರ್ಗ	ಮಹಾಗಾಂವ	
೩೩		ಗುಲಬರ್ಗ	ಹೊನ್ನಾಳಿ	
೩೪	ಗುಲಬರ್ಗ	ಗುಲಬರ್ಗ	ಶ್ರೀನಿವಾಸ ಸರಡಗಿ	೨೧
೩೫		ಗುಲಬರ್ಗ	ಸೊಂತ	
೩೬		ಚಿತ್ತಾಪುರ	ರೇವಗಿ	
೩೭		ಚಿತ್ತಾಪುರ	ಅಣಕಲ್ಲು	
೩೮		ಚಿತ್ತಾಪುರ	ಕೊಲ್ಲೂರು	
೩೯		ಜೇವರ್ಗಿ	ಜೇರಟಗಿ	
೪೦		ಜೇವರ್ಗಿ	ಕಟ್ಟಿಸಂಗಾವಿ	
೪೧		ಜೇವರ್ಗಿ	ಬಳ್ಳುಂಡಗಿ	
೪೨		ಜೇವರ್ಗಿ	ಅಣಜಗಿ	
೪೩		ಸೇಡಂ	ಸೇಡಂ ನಗರ	
೪೪		ಆಳಂದ	ಕುಡುಕಿ	
೪೫		ಆಳಂದ	ಸರಸಂಬ	
೪೬		ಅಪಜಲ್‌ಪುರ್	ಕಾರ್‌ಬೋಸ್ಗ	

೪೭		ಅಫಜಲ್‌ಪುರ್	ಆವಳಗ	
೪೮		ಚಿಂಚೋಳಿ	ಚಂದನಕೇರ	
೪೯		ಹುಮನಾಬಾದ್	ಹುಮನಾಬಾದ್	
೫೦		ಹುಮನಾಬಾದ್	ಉಡುವನಹಳ್ಳಿ	
೫೧		ಬಾಲ್ಕಿ	ನಾವದಗಿ	
೫೨		ಬಸವಕಲ್ಯಾಣ	ಧನ್ನೂರ	
೫೩	ಬೀದರ	ಬಸವಕಲ್ಯಾಣ	ಸಸ್ತಾಪುರ	೯
೫೪		ಬಸವಕಲ್ಯಾಣ	ಚಂಡಕಾಪುರ/ಅಮೃತಕುಂಡ	
೫೫		ಬಸವಕಲ್ಯಾಣ	ಬಸವಕಲ್ಯಾಣನಗರ/ರೇಣ್ಯಾಗವಿ	
೫೬		ಬಸವಕಲ್ಯಾಣ	ಹುಲಿಕಂತಿಮಠ	
೫೭		ಬಸವಕಲ್ಯಾಣ	ರುದ್ರಮುನಿಗವಿ	
೫೮		ಧಾರವಾಡ	ಕೊಟಬಾಗಿ	
೫೯	ಧಾರವಾಡ	ಧಾರವಾಡ	ಅಮ್ಮಿನಬಾವಿ	೩
೬೦		ಧಾರವಾಡ	ಮನಸೂರು	
೬೧	ಗದಗ	ಗದಗ	ಗದಗ ನಗರ	೩
೬೨		ಗದಗ	ಡಂಬಳ	
೬೩		ನರಗುಂದ	ಚಿಕ್ಕನರಗುಂದ	
೬೪	ಹಾವೇರಿ	ಶಿಗ್ಗಾವಿ	ಬಂಕಾಪುರ	೨
೬೫		ರಾಣೆಬೆನ್ನೂರು	ಚೌಡಯ್ಯದಾನಪುರ	
೬೬		ಶಹಾಪುರ	ಕಾಡಮ್ಮಗೇರಿ	
೬೭		ಶಹಾಪುರ	ಸಿರಿವಾಳ	
೬೮		ಸುರಪುರ	ಕೆಂಬಾವಿ	
೬೯	ಯಾದಗಿರಿ	ಸುರಪುರ	ಚಿಂಚೋಳಿ	೮
೭೦		ಸುರಪುರ	ಹುಣಸಿಹೊಳೆ	
೭೧		ಯಾದಗೀರ್	ಮುನೀರಬೊಮ್ಮನಹಳ್ಳಿ	

೨೨		ಯಾದಗಿರಿ	ಅಗಸತೀರ್ಥ	
೨೩		ಯಾದಗಿರಿ	ಲಿಂಗೇರಿಕೋಲೂರು	
೨೪		ದೇವದುರ್ಗ	ಗಬ್ಬೂರು	
೨೫	ರಾಯಚೂರು	ರಾಯಚೂರು	ಸಿಂಧನೂರು	೩
೨೬		ಲಿಂಗಸ್ಗೂರು	ಹೂವಿನಬಾವಿ	
		ಒಟ್ಟು ನೆಲೆಗಳ ಸಂಖ್ಯೆ		೨೬

೫.೨.೧.೨ ಮಧ್ಯ ಕರ್ನಾಟಕದ ನೆಲೆಗಳು

ಕ್ರಸಂ.	ಜಿಲ್ಲೆ	ತಾಲ್ಲೂಕು	ಗ್ರಾಮ / ಪಟ್ಟಣ	ಜಿಲ್ಲಾವಾರು ನೆಲೆಗಳು
೧		ಕೊಪ್ಪಳ	ಕೊಪ್ಪಳ ನಗರ	
೨		ಕೊಪ್ಪಳ	ಹಿರೇಸಿಂದಗಿ	
೩	ಕೊಪ್ಪಳ	ಕೊಪ್ಪಳ	ಚಿಕ್ಕಸಿಂಧೋಗಿ	೬
೪		ಗಂಗಾವತಿ	ಬಸವಾಪಟ್ಟಣ	
೫		ಕೊಪ್ಪಳ	ಮೊರನಾಳ	
೬		ಗಂಗಾವತಿ	ಮತ್ತೂರು	
೭		ಕೂಡ್ಲಿಗಿ	ಉಜ್ಜನಿ	
೮		ಕೂಡ್ಲಿಗಿ	ಓಬಳಾಪುರ	
೯		ಹೂವಿನಹಡಗಲಿ	ಮಕರಬ್ಬಿ	
೧೦	ಬಳ್ಳಾರಿ	ಹೂವಿನಹಡಗಲಿ	ಹೂವಿನಹಡಗಲಿ	೧೦
೧೧		ಹೊಸಪೇಟೆ	ಮಲಪ್ಪನಗುಡಿ	
೧೨		ಹೊಸಪೇಟೆ	ದೇವಲಾಪುರ	
೧೩		ಬಳ್ಳಾರಿ	ಬಳ್ಳಾರಿ ನಗರ	
೧೪		ಹೊಸಪೇಟೆ	ಗಾದಿಗನೂರು	
೧೫		ಹೊಸಪೇಟೆ	ಹೊಸಪೇಟೆ ನಗರ	
೧೬		ಸಂಡೂರು	ವಿಠಲಾಪುರ	

೧೭		ಚಿತ್ರದುರ್ಗ	ಸೊಲ್ಲಾಪುರ	
೧೮		ಜಗಳೂರು	ಬಿಳಿಚೋಡು	
೧೯		ಚಳ್ಳಕೆರೆ	ದೊಡ್ಡೇರಿ	
೨೦		ಚಳ್ಳಕೆರೆ	ರಂಗವ್ವನಹಳ್ಳಿ	
೨೧		ಚಳ್ಳಕೆರೆ	ಕಡದರಹಳ್ಳಿ	
೨೨		ಹಿರಿಯೂರು	ಹರ್ತಿಕೋಟೆ	
೨೩		ಹೊಸದುರ್ಗ	ಬಾಗೂರು	
೨೪		ಹೊಸದುರ್ಗ	ಕಾರೇಹಳ್ಳಿ	
೨೫	ಚಿತ್ರದುರ್ಗ	ಹೊಸದುರ್ಗ	ಶ್ರೀರಾಂಪುರ	೧೮
೨೬		ಹೊಸದುರ್ಗ	ನಗರಗೆರೆ	
೨೭		ಹೊಸದುರ್ಗ	ಗೂಳಿಹಳ್ಳಿ	
೨೮		ಹೊಸದುರ್ಗ	ಕಡ್ಲೆಕಂಸಾಗರ	
೨೯		ಹೊಳಲ್ಕೆರೆ	ತಾಳಿಕಟ್ಟೆ	
೩೦		ಚಿತ್ರದುರ್ಗ	ಹುಲ್ಲೂರು	
೩೧		ಚಿತ್ರದುರ್ಗ	ಬೂದಿಹಾಳ	
೩೨		ಚಿತ್ರದುರ್ಗ	ತುರುವನೂರು	
೩೩		ಹಿರಿಯೂರು	ಹಿರಿಯೂರು ನಗರ	
೩೪		ಹಿರಿಯೂರು	ಕನಜನಹಳ್ಳಿ	
೩೫		ಹರಿಹರ	ನಾಗೇನಹಳ್ಳಿ	
೩೬		ಹರಿಹರ	ಹರಿಹರ	
೩೭		ದಾವಣಗೆರೆ	ಆಲೂರು	
೩೮	ದಾವಣಗೆರೆ	ದಾವಣಗೆರೆ	ಅಣಜಿ	೬
೩೯		ದಾವಣಗೆರೆ	ಅಲ್ಲೀಪುರ	
೪೦		ದಾವಣಗೆರೆ	ಇಟ್ಟೀಗುಡಿ	
ಒಟ್ಟು ನೆಲೆಗಳ ಸಂಖ್ಯೆ				೪೦

೫.೧.೨. ದಕ್ಷಿಣ ಕರ್ನಾಟಕದ ನೆಲೆಗಳು

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಗ್ರಾಮ / ಪಟ್ಟಣ	ಜಿಲ್ಲಾವಾರು ನೆಲೆಗಳು
೧		ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ	
೨		ಚಿಕ್ಕನಾಯಕನಹಳ್ಳಿ	ಕಂದಿಕೆರೆ	
೩		ಚಿಕ್ಕನಾಯಕನಹಳ್ಳಿ	ಹಂದನಕೆರೆ	
೪		ಚಿಕ್ಕನಾಯಕನಹಳ್ಳಿ	ಯಳನಡು	
೫		ಚಿಕ್ಕನಾಯಕನಹಳ್ಳಿ	ಹುಳಿಯಾರು	
೬		ಶಿರಾ	ಶಿರಾ	
೭		ಶಿರಾ	ಪಟ್ಟನಾಯಕನಹಳ್ಳಿ	
೮	ತುಮಕೂರು	ತುರುವೇಕೆರೆ	ತುರುವೇಕೆರೆ	೧೭
೯		ತುಮಕೂರು(ಗ್ರಾ)	ಹೊನ್ನುಡಿಕೆ	
೧೦		ಕೊರಟಗೆರೆ	ಅಕ್ಕಿರಾಂಪುರ	
೧೧		ಪಾವಗಡ	ಜಾಲೋಟ	
೧೨		ತುಮಕೂರು	ಬೆಳ್ಳಾವಿ	
೧೩		ತುಮಕೂರು	ದಾಸಮುದ್ದನಹಳ್ಳಿ	
೧೪		ಕುಣಿಗಲ್	ಆದಿಶೆಟ್ಟಿಹಳ್ಳಿ	
೧೫		ತಿಪಟೂರು	ಹೊನ್ನವಳ್ಳಿ	
೧೬		ಗುಬ್ಬಿ	ಹಾಗಲವಾಡಿ	
೧೭		ಗುಬ್ಬಿ	ಮೂಗನಾಯಕನಕೋಟೆ	
೧೮		ತರೀಕೆರೆ	ತರೀಕೆರೆ ನಗರ	
೧೯		ತರೀಕೆರೆ	ಶಿವನಿ	
೨೦		ಕಡೂರು	ಆಸಂದಿ	
೨೧	ಚಿಕ್ಕಮಗಳೂರು	ಕಡೂರು	ಕಡೂರು	೮
೨೨		ಕಡೂರು	ಚೌಳಹಿರಿಯೂರು	

೨೩		ಕಡೂರು	ಸಖರಾಯಪಟ್ಟಣ	
೨೪		ಕಡೂರು	ದೇವನೂರು	
೨೫		ಕಡೂರು	ಮತಿಘಟ್ಟ	
೨೬		ಅರಸೀಕೆರೆ	ಬಾಣಾವರ	
೨೭		ಅರಸೀಕೆರೆ	ಜಾವಗಲ್	
೨೮		ಅರಸೀಕೆರೆ	ಕೆಂಕೆರೆ	
೨೯		ಅರಸೀಕೆರೆ	ಸಂತೆಶಿವರ	
೩೦		ಚನ್ನರಾಯಪಟ್ಟಣ	ಅಣತಿ	
೩೧	ಹಾಸನ	ಚನ್ನರಾಯಪಟ್ಟಣ	ಪುರದಕೋಡಿಹಳ್ಳಿ	೧೦
೩೨		ಚನ್ನರಾಯಪಟ್ಟಣ	ಸಖರಾಯಪಟ್ಟಣ	
೩೩		ಬೇಲೂರು	ಕಳಸಾಪುರ	
೩೪		ಬೇಲೂರು	ಅರಕಲಗೂಡು	
೩೫		ಬೇಲೂರು	ಬೆಳವಾಡಿ	
೩೬	ಮೈಸೂರು	ನಂಜನಗೂಡು	ಕಳಲೆ	೧
೩೭	ಕೋಲಾರ	ಗೌರಿಬಿದನೂರು	ಗಂಗಸಮುದ್ರ	೨
೩೮		ಗೌರಿಬಿದನೂರು	ಇಗಡೂರು	
೩೯	ಬೆಂಗಳೂರು ಗ್ರಾಮಾಂತರ	ಬೆಂಗಳೂರು(ಗ್ರಾ)	ಹೊಸೂರು ದೊಡ್ಡಿ	೨
೪೦		ಬೆಂಗಳೂರು(ಗ್ರಾ)	ಶಿವಗಂಗೆ ಮೇಗಳ ಗವಿಮಠ	
೪೧	ರಾಮನಗರ	ರಾಮನಗರ	ಅವ್ವೇರಹಳ್ಳಿ	೧
		ಒಟ್ಟು ನೆಲೆಗಳ ಸಂಖ್ಯೆ		೪೧

೫.೩. ಕರ್ನಾಟಕೇತರ ನೆಲೆಗಳು

೫.೩.೧ ಮಹಾರಾಷ್ಟ್ರದ ನೆಲೆಗಳು

ಕ್ರಸಂ.	ಜಿಲ್ಲೆ	ತಾಲ್ಲೂಕು	ಗ್ರಾಮ / ಪಟ್ಟಣ	ಜಿಲ್ಲಾವಾರು ನೆಲೆಗಳು
೦೧		ಸೊಲ್ಲಾಪುರ	ಸೊಲ್ಲಾಪುರ ನಗರ	
೦೨	ಸೊಲ್ಲಾಪುರ	ಪಂಡರಾಪುರ	ಮಾ(ಸ)ಚನೂರು	೪
೦೩		ಮಂಗಳವಾಡ	ಮಂಗಳವಾಡ	
೦೪		ಮಂಗಳವಾಡ	ಸಿದ್ಧನಕೆರೆ	
		ಒಟ್ಟು ನೆಲೆಗಳ ಸಂಖ್ಯೆ		೪

೫.೧.೩ ಆಂಧ್ರಪ್ರದೇಶ(ಸೀಮಾಂಧ್ರ)ದ ನೆಲೆಗಳು

ಕ್ರಸಂ.	ಜಿಲ್ಲೆ	ತಾಲ್ಲೂಕು	ಗ್ರಾಮ / ಪಟ್ಟಣ	ಜಿಲ್ಲಾವಾರು ನೆಲೆಗಳು
೦೧		ಅನಂತಪುರ	ಮುಡುಕನಾಳ	
೦೨		ಕಲ್ಯಾಣದುರ್ಗ	ಕರ್ತನಪರ್ತಿ	
೦೩	ಅನಂತಪುರ	ರಾಯದುರ್ಗ	ತೆನಗಲ್ಲು	೧೪
೦೪		ರಾಯದುರ್ಗ	ಯಾಪಲಪರ್ತಿ(ಬೇವಿನಹಳ್ಳಿ)	
೦೫		ರಾಯದುರ್ಗ	ಓಬಳಾಪುರ	
೦೬		ರಾಯದುರ್ಗ	ಗೋವಿಂದವಾಡ	
೦೭		ರಾಯದುರ್ಗ	ರೇಕಲುಕುಂಟೆ	
೦೮		ಮಡಕಶಿರ	ತಿರುಮಲದೇವರಹಳ್ಳಿ	
೦೯		ಮಡಕಶಿರ	ಗೌಡನಹಳ್ಳಿ	
೧೦		ಹಿಂದುಪುರ	ಕಾಪಲ್ಲಿ	
೧೧		ಪೆನಗೊಂಡ	ನಾಯಕನಹಳ್ಳಿ	
೧೨		ಪೆನಗೊಂಡ	ಮೇಪುಲಿಪಲ್ಲಿ	
೧೩		ಮಡಕಶಿರ	ಅರೇಸಮುದ್ರಂ	
೧೪			ಲಕ್ಷಂಪಲ್ಲಿ	

೧೫	ಕಲ್ಯಾಣದುರ್ಗ	ಕಲ್ಯಾಣದುರ್ಗ	ಸೀರ್ಪಿಕೊಟ್ಟಾಲು	೧
		ಒಟ್ಟು ನೆಲೆಗಳ ಸಂಖ್ಯೆ		೧೫

೫.೩.೩ ತಮಿಳುನಾಡು ನೆಲೆಗಳು

ಕ್ರಸಂ.	ಜಿಲ್ಲೆ	ತಾಲ್ಲೂಕು	ಗ್ರಾಮ / ಪಟ್ಟಣ	ಜಿಲ್ಲಾವಾರು ನೆಲೆಗಳು
೦೧	ಕೃಷ್ಣಗಿರಿ	ಕೃಷ್ಣಗಿರಿ	ಪೆದ್ದನಹಳ್ಳಿ	೧

ಮೇಲೆ ವರ್ಗೀಕರಿಸಿದ ಬಹುತೇಕ ನೆಲೆಗಳ (ರಾಜ್ಯ /ಹೊರರಾಜ್ಯ ಸೇರಿದಂತೆ) ಕ್ಷೇತ್ರಕಾರ್ಯ ಮಾಡಿ ಮತ್ತು ಕೆಲ ನೆಲೆಗಳನ್ನು ಅಧ್ಯಯನ ಆಕರಗಳಿಂದ ಪಡೆದು ಪಟ್ಟೀಕರಿಸಲಾಗಿದೆ. ಕರ್ನಾಟಕ ರಾಜ್ಯದ ೨೨ ಜಿಲ್ಲೆಗಳಲ್ಲಿ ೬೯ ತಾಲ್ಲೂಕುಗಳಲ್ಲಿ ರೇವಣಸಿದ್ಧನ ನೆಲೆಗಳ ಇರುವಿಕೆಯನ್ನು ಇಂದಿಗೂ ಕಾಣಬಹುದಾಗಿದೆ. ಕರ್ನಾಟಕವನ್ನೂ ಮೀರಿ ಪ್ರಸ್ತುತ ಮಹಾರಾಷ್ಟ್ರ, ಆಂಧ್ರಪ್ರದೇಶ (ಅಖಂಡ) ಹಾಗೂ ತಮಿಳುನಾಡು ರಾಜ್ಯಗಳಲ್ಲಿ ರೇವಣಸಿದ್ಧನ ನೆಲೆಗಳು ವಿಸ್ತರಿಸಿಕೊಂಡು ಆತನ ಪರಂಪರೆ, ಕಾಲದ ಆಕ್ರಮಣದ ನಡುವೆಯೂ ಜೀವಂತವಾಗಿದೆ. ಈ ಅಧ್ಯಯನದ ಅವಧಿಯಲ್ಲಿ ಬಹುವಿಸ್ತೃತವಾಗಿ ರಾಜ್ಯ ಹಾಗೂ ಹೊರರಾಜ್ಯಗಳ ರೇವಣಸಿದ್ಧನ ನೆಲೆಗಳನ್ನು ಕ್ಷೇತ್ರಕಾರ್ಯ ಮಾಡಲಾಗಿದೆ. ಫಲಿತವಾದ ರೇವಣಸಿದ್ಧನ ಮತಮಾನ್ಯಗಳ ಕಾರ್ಯವ್ಯಾಪ್ತಿ, ವೈಖರಿ, ಜಾತ್ರೆ ಉತ್ಸವ, ಆಚರಣೆ, ನಂಬಿಕೆ, ಸಂಪ್ರದಾಯ, ರೂಢಿಪದ್ಧತಿ ಇತ್ಯಾದಿಗಳ ಜೊತೆಗೆ ಒಡೆಯರುಗಳ ವಂಶವೃಕ್ಷ, ವಯಕ್ತಿಕ ಜೀವನವಿಧಾನ ಹಾಗೂ ಸ್ಥಿತಿಗತಿಗಳನ್ನು ಸಂಗ್ರಹಿಸಿ ಶಿಸ್ತುಬದ್ಧವಾದ, ಕ್ರಮಬದ್ಧವಾದ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನೆಲೆಗಳ ಕ್ಷೇತ್ರಕಾರ್ಯ

೧. ಸರೂರು, ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ

ತಾಲ್ಲೂಕು ಕೇಂದ್ರ ಮುದ್ದೇಬಿಹಾಳದಿಂದ ೧೦.೦೦ ಕಿ.ಮೀ. ದೂರದಲ್ಲಿ ಸರೂರು ಗ್ರಾಮವಿದೆ. ರೇವಣಸಿದ್ಧ ಸಂಪ್ರದಾಯದಲ್ಲಿ ಈ ನೆಲೆಯು ಪ್ರಮುಖವಾಗಿದೆ. ಹಾಲುಮತ ರೇವಣಸಿದ್ಧೇಶ್ವರ ಮೂಲ ಗುರುಪೀಠವು ಇರುವುದು ಈ ಊರಿನಲ್ಲಿಯೆ. ರೇವಣಸಿದ್ಧರು ಶಿವಭಕ್ತನಾದ ಕುರುಬ ಶಾಂತಮುತ್ತಯ್ಯನಿಗೆ ಧೀಕ್ಷೆಯನ್ನು ನೀಡಿ ಗುರುಕಂಕಣವನ್ನು ಕಟ್ಟಿ ಕುರುಬ ಕುಲಕ್ಕೆ ಒಡೆಯನನ್ನಾಗಿ ಮಾಡಿರುವುದು ರೇವಣಸಿದ್ಧ ಸಾಹಿತ್ಯದಿಂದ ತಿಳಿದುಬರುತ್ತದೆ. ರೇವಣಸಿದ್ಧರು ಶಾಂತಮುತ್ತಯ್ಯನಿಗೆ ಧೀಕ್ಷೆ ನೀಡುವ ಸಂದರ್ಭದಲ್ಲಿ ಕರಿಯಮಲ್ಲಿಗೆ ಸುರಿದ

ಪರಿಣಾಮವಾಗಿ ಈ ಊರಿಗೆ ಸರವೂರು ಬಂದಿತೆಂಬುದನ್ನು ಇಲ್ಲಿಯ ಸ್ಥಳಪುರಾಣಗಳು ಹೇಳುತ್ತವೆ. ಈ ಚಾರಿತ್ರಿಕ ಘಟನೆಗಳಿಗೆ ಪೂರಕವೆಂಬಂತೆ ಊರಿನ ಹೊರಬಯಲಲ್ಲಿ ಪ್ರಾಚೀನ ಪಂಚಕೂಟ ರೇವಣಸಿದ್ಧೇಶ್ವರ(ಮಲ್ಲಿಕಾರ್ಜುನ) ದೇವಾಲಯವಿದೆ. ಈ ದೇವಾಲಯಕ್ಕೆ ಏಳು ಗೋಪುರಗಳು (ಕಳಸಗಳು) ಇರುವುದರಿಂದ ಈ ದೇವಾಲಯವನ್ನು ಸ್ಥಳೀಯರು ಏಳುಗುಡಿ ಎಂತಲೂ ಕರೆಯುತ್ತಾರೆ. ದೇವಾಲಯದ ಆವರಣದಲ್ಲಿ ಕ್ರಿ.ಶ. ೧೨೦೮ ಮತ್ತು ಕ್ರಿ.ಶ. ೧೨೧೦ರ ಕಾಲದ ಶಾಸನಗಳಿವೆ. ಆ ಪೈಕಿ ಒಂದನೆಯ ಶಾಸನದಲ್ಲಿರುವ ಮಂಕಯಂಗಳಿಗೆ ಮಲ್ಲಿನಾಥರಾಮ ಎಂಬುವನು ಸಂನಿಧಾನದಲು ಎಂಬ ವಾಕ್ಯ ಹಾಗೂ ಎರಡನೆಯ ಶಾಸನದಲ್ಲಿರುವ ಅರಸನಹಳ್ಳಿಯ ವೀರನಗೌಡರ ಕೈಯಲು ಮಂಕೆಯನು ಹೊಲನ ಕೊಟ್ಟು ಆ ಹೊಲದಲು ಮತ್ತು ಹೊನಗುಂದದ ಬೀಚಗೂರು ತಂನಮಗೆ ಮಂಕೇಯನ ಕಾಲದ ಗುರುವಿಗೆ ಮಂಕಯ್ಯನು ಮಲ್ಲಿನಾಥ ದೇವರ ಸ್ಥಾನದ ದಾರಾಪೂರ್ವಕ ಮಾಡಿಕೊಟ್ಟರು ಎಂಬ ವಾಕ್ಯಗಳು ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಮಂಕಯ್ಯನೆ ಎಂದು ಬಲಪಡಿಸುತ್ತವೆ.

ದೇವಾಲಯದ ಪಕ್ಕದಲ್ಲಿ ಬಂಡೆಗಳಿಂದ ಕೂಡಿದ ಗುಡ್ಡದಲ್ಲಿ ಶಾಂತಮುತ್ತಯ್ಯ ಗದ್ದುಗೆ ಇರುವುದು. ಇನ್ನೊಂದು ಪಕ್ಕದಲ್ಲಿ ಸರೂರು ಒಡೆಯರ ವಂಶಸ್ಥರ ಸಮಾಧಿಗಳಿವೆ. ಇತ್ತೀಚೆಗೆ ಸ್ಥಳೀಯರು ಆಧುನಿಕ ಶೈಲಿಯಲ್ಲಿ ರೇವಣಸಿದ್ಧನ ದೇವಸ್ಥಾನವನ್ನು ಊರಲ್ಲಿ ನಿರ್ಮಿಸಿಕೊಂಡಿದ್ದಾರೆ. ಈ ಸ್ಥಳದಲ್ಲಿಯೆ ಬಹುಪುರಾತನ ದೇವಾಲಯವೊಂದು ಇತ್ತೆಂದು ಸ್ಥಳೀಯರು ಹೇಳುತ್ತಾರೆ. ಶಾಂತಮುತ್ತಯ್ಯನ ವಂಶಜರೆಂದು ಹೇಳಿಕೊಳ್ಳುವ ಅನೇಕ ಮನೆತನಗಳು ಈಗಲೂ ಊರಿನಲ್ಲಿವೆ. ಸರೂರಿನ ಗುರುವರ್ಗದಲ್ಲಿ ಎರಡು ಪಂಗಡಗಳಿರುವುದನ್ನು ಗಮನಿಸಲಾಯಿತು. ಈ ಎರಡೂ ಪಂಗಡಗಳ ನಡುವೆ ರೇವಣಸಿದ್ಧನ ಪೂಜೆಯ ಅಧಿಕಾರ ಮತ್ತು ಆಸ್ತಿಯ ಹಕ್ಕಿಗಾಗಿ ಬಹುಕಾಲ ವ್ಯಾಜ್ಯ ನಡೆದು ನ್ಯಾಯಾಲಯದ ಮೆಟ್ಟಿಲೇರಿರುವುದು ಕಂಡುಬರುತ್ತದೆ.

ಸನ್ ೧೯೫೧ನೇ ಇಸವಿಯ ಪೊಲೀಸ್ ಆಕ್ಟ್ ೪೦(೧)ನೇ ಪ್ರಕಾರ ಮೆ॥ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಾಹೇಬ ವಿಜಯಪುರ ಜಿಲ್ಲೆ ಇವರ ಆದೇಶದಂತೆ ಒಂದು ಸಂತತಿಯವರು (ಪಂಗಡದವರು) ಊರೊಳಗಿನ ರೇವಣಸಿದ್ಧೇಶ್ವರ ಪೂಜೆ, ಉತ್ಸವ, ಜಾತ್ರೆ ಇತ್ಯಾದಿಗಳನ್ನು ನೆರವೇರಿಸುವ ಹಾಗೂ ಇನ್ನೊಂದು ಸಂತತಿಯವರು (ಪಂಗಡದವರು) ತೂಗುಗುಡ್ಡದಲ್ಲಿರುವ ರೇವಣಸಿದ್ಧೇಶ್ವರನ ಪೂಜೆ, ಉತ್ಸವ, ಜಾತ್ರೆ ಇತ್ಯಾದಿಗಳನ್ನು ನೆರವೇರಿಸುವ ಹಕ್ಕನ್ನು ಪಡೆದಿರುತ್ತಾರೆ. ಇಂದಿಗೂ ಈ ಆಜ್ಞೆಯನ್ನು ಇಲ್ಲಿ ಪಾಲಿಸಲಾಗುತ್ತಿದೆ. ಈ ಪ್ರಕಾರ ಮೊದಲ ಪಂಗಡದ ಸಂತತಿಯವರಿಂದ ಮಹಾಶಿವರಾತ್ರಿಯ ಸಂದರ್ಭದಲ್ಲಿ ಏಳುಗುಡಿ ರೇವಣಸಿದ್ಧೇಶ್ವರ ಜಾತ್ರೆ

ನಡೆಯುತ್ತದೆ. ಆ ಸಂದರ್ಭದಲ್ಲಿ ಶಾಂತಮುತ್ತಯ್ಯನ ಗದ್ದಿಗೆಯ ಗುಡ್ಡದಲ್ಲಿ ಈ ಗುರುವಿನ ಒಡೆಯರುಗಳು ಹೇಳಿಕೆಯನ್ನು ಮಾಡುವರು. ಅದೇ ಪ್ರಕಾರ ಎರಡನೆಯ ಗುಂಪಿನ ವಂಶಸ್ಥರು ಶ್ರಾವಣಮಾಸದ ಕೊನೆಯ ಸೋಮವಾರದಂದು ಊರಿನಲ್ಲಿರುವ ರೇವಣಸಿದ್ದೇಶ್ವರ ಜಾತ್ರೆಯನ್ನು ಮತ್ತು ತೂಗುಗುಡ್ಡದಲ್ಲಿ ಹೇಳಿಕೆಯನ್ನು ಮಾಡುವರು. ಕುರುಬರ ಗುರುಪರಂಪರೆಯ ಈ ಮೂಲಪೀಠದಲ್ಲಿ ವರ್ಷಕ್ಕೆರೆಡು ಬಾರಿ ರೇವಣಸಿದ್ಧೇಶ್ವರನ ಜಾತ್ರೆ, ಹೇಳಿಕೆಗಳು ನಡೆಯುವುದು ವಿಶೇಷವಾಗಿದೆ. ಪ್ರತಿಯೊಂದು ಜನಾಂಗವು ತಾನು ಬಾಳುವ ಪರಿಸರ ಆಯ್ದುಕೊಂಡ ಉದ್ಯೋಗ ಒಡನಾಡಿ ಜನರೊಂದಿಗೆ ವ್ಯವಹರಿಸುವ ರೀತಿಗಳಿಗೆ ತಕ್ಕಂತೆ ಆಹಾರ, ಪದ್ಧತಿ, ಉಡುಗೆ ತೊಡುಗೆ, ಆಚಾರ ವಿಚಾರ, ನಂಬಿಕೆ ಸಂಪ್ರದಾಯಗಳನ್ನು ಅಳವಡಿಸಿಕೊಂಡು ಬಂದಿರುತ್ತದೆ. ಅಂತೆಯೇ ೧. ಸರೂರು ಸಂಪ್ರದಾಯದ ಒಡೆಯರ ಮನೆಗೆ ಸೊಸೆಯಾಗಿ ಬರುವವರಿಗೆ ಬೆಳ್ಳಿಕಾಲುಂಗರ ತೊಡಿಸುವ ಬದಲಾಗಿ; ಕೈ ಬೆರಳಿಗೆ ಬೆಳ್ಳಿಉಂಗುರ ಹಾಕುವ ಹಾಗೂ ಗಂಡು ಮಕ್ಕಳು ಬೆಳ್ಳಿ ಉಡದಾರ ಧರಿಸುವಂತಿಲ್ಲ ಎಂಬ ಕಟ್ಟಳೆಯಿದೆ; ಈ ಬಗ್ಗೆ ಒಡೆಯರನ್ನು ವಿಚಾರಿಸಿದಾಗ; ರೇವಣಸಿದ್ಧನಿಗೆ ಬೆಳ್ಳಿ ಮುಖವಾಡ ತೊಡಿಸುವುದರಿಂದ ಈ ಕಟ್ಟಳೆ ಇದೆ ಎಂದು ಹೇಳುತ್ತಾರೆ. ೨. ಒಡೆಯರ ಗಂಡಿನ ಜೊತೆ ಮದುವೆಯಾದ ಹೆಣ್ಣುಮಗಳು ಗಂಡನ ಮನೆಗೆ ಬರುವಾಗ ಕಟ್ಟಿಗೆ ತೊಟ್ಟಿಲು ತರುವಂತಿಲ್ಲ ಹಾಗೂ ಗಾದೆಯ ಮೇಲೆ ಮಲಗುವಂತಿಲ್ಲ. ಕಾರಣ ರೇವಣಸಿದ್ಧನನ್ನು ಹೊತ್ತು ತರುವ ಪಲ್ಲಕ್ಕಿ ಕಟ್ಟಿಗೆಯದ್ದು ಹಾಗೂ ಅದರ ಮೇಲೆ ಗಾದಿ ಹಾಸಿ ರೇವಣಸಿದ್ಧನನ್ನು ಸ್ಥಾಪಿಸುವುದರಿಂದ ಈ ನಿಷೇಧಗಳಿರುತ್ತವೆ ಎಂದು ಒಡೆಯರುಗಳು ಹೇಳುತ್ತಾರೆ. ಒಡೆಯರ ವ್ಯಕ್ತಿ ಆಚರಣೆಗಳು ಹಾಗೂ ಸಮುದಾಯದ ನೇತೃತ್ವಗಳು ಶಾಂತಮುತ್ತಯ್ಯ ಸಂಪ್ರದಾಯದಂತಿವೆ.


ಶಾಂತಮುತ್ತಯ್ಯ ಗುರುಪರಂಪರೆಯ ಮುಂದುವರಿಕೆ ಭಾಗವಾಗಿರುವ ಸರೂರಿನ ಒಂದು ಪಂಗಡದ ಒಡೆಯರ (ಗುರುವಿನವರ) ವಂಶವೃಕ್ಷವನ್ನು ಇಲ್ಲಿ ಗಮನಿಸಬಹುದಾಗಿದೆ.

ಪ್ರಸ್ತುತ ಶ್ರೀ ಕರಿಸಿದ್ಧಯ್ಯ ಶಾಂತಯ್ಯ ಗುರುವಿನವರು ಸರೂರು ಶ್ರೀ ರೇವಣಸಿದ್ಧೇಶ್ವರ ಮಠದ ಒಡೆಯರುಗಳಾಗಿದ್ದಾರೆ.

೨. ಚಿಕ್ಕನಾಯಕನಹಳ್ಳಿ : ಚಿಕ್ಕನಾಯಕನಹಳ್ಳಿ ತಾಲ್ಲೂಕು ತುಮಕೂರು ಜಿಲ್ಲೆ

ಚಿಕ್ಕನಾಯನಹಳ್ಳಿಯು ಜಿಲ್ಲಾ ಕೇಂದ್ರದಿಂದ ೬೭ ಕಿ.ಮೀ.ದೂರದಲ್ಲಿದ್ದು, ತಾಲ್ಲೂಕು ಕೇಂದ್ರವಾಗಿದೆ. ತುಮಕೂರು ಜಿಲ್ಲೆಯಲ್ಲಿ ೧೫ ರೇವಣಸಿದ್ಧನ ನೆಲೆಗಳಿವೆ(ನೆಲೆಗಳ ಪಟ್ಟಿಯಲ್ಲಿ

ವಿವರ ನೀಡಲಾಗಿದೆ). ಈ ಎಲ್ಲಾ ನೆಲೆಗಳಲ್ಲಿ ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಒಡೆಯರುಗಳು ವಂಶಪಾರಂಪರಿಕವಾಗಿ ಪೀಠಾಧಿಪತಿಗಳಾಗಿದ್ದಾರೆ. ಚಿಕ್ಕನಾಯಕನಹಳ್ಳಿ ಯಲ್ಲಿಯೇ ಹಾಲುಮತ ಪರಂಪರೆಗೆ ಸಂಬಂಧಿಸಿದ ಮೂರು ಮಠಗಳಿವೆ. ೧. ರೇವಣಸಿದ್ಧೇಶ್ವರ ಮಠ ೨. ಸಿದ್ದೇಶ್ವರಮಠ ೩. ಸಿದ್ಧರಾಮೇಶ್ವರಮಠ. ಇವುಗಳಲ್ಲಿ ಮೊದಲೆರಡು ಮಠಗಳು ರೇವಣಸಿದ್ಧ



ಪರಂಪರೆಯ ಮಠಗಳಾದರೆ; ಮೂರನೇಯದ್ದು ಸಿದ್ಧರಾಮ ಪರಂಪರೆಯ ಮಠವಾಗಿದೆ. ಮೊದಲಿನ ಎರಡು ಮಠಗಳ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿರುವವರು ಶಾಂತಮುತ್ತಯ್ಯ ಸಂಪ್ರದಾಯದ ಒಡೆಯರುಗಳಾದರೆ; ಮೂರನೇಯ ಮಠದ ಅರ್ಚಕರಾಗಿ ಮಂಕೊಡೆಯರು ಕಾರ್ಯನಿರ್ವಹಿಸುತ್ತಿದ್ದಾರೆ.

ರೇವಣಸಿದ್ಧರ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿರುವ ಒಡೆಯರ ಒಟ್ಟು ನಾಲ್ಕು ಮನೆತನಗಳಿವೆ. ರೇವಣಸಿದ್ಧೇಶ್ವರ ಮಠದ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿರುವವರು ಕೆಂಡದಪ್ಪ ಒಡೆಯರ್ ಮಗ ಶರಣಪ್ಪ ಒಡೆಯರ್‌ರವರು ಮತ್ತು ಸಿದ್ದೇಶ್ವರ ಮಠದ ಅರ್ಚಕರಾಗಿ ಶ್ರೀ ಕರಿಸಿದ್ಧಯ್ಯ ಒಡೆಯರ್ ಸಂತತಿಯವರು. ರೇವಣಸಿದ್ಧ ಪರಂಪರೆಗೆ ಸೇರಿದ ಈ ಎರಡೂ ಮಠಗಳು ತುಂಬಾ ಪ್ರಾಚೀನವಗಿದ್ದು; ವಿಶಿಷ್ಟವೂ ಆಗಿದೆ. ರೇವಣಸಿದ್ಧೇಶ್ವರ ಮಠಕ್ಕೆ ಹುಳಿಯಾರು, ಕುಪ್ಪರಚಿಕ್ಕುಂಪಳ್ಯಾ, ಗೌರಸಾಗರ, ಸಾದರಹಳ್ಳಿ, ಓಟಿಕೆರೆ, ಪವನಕೋಣ, ಮಾಳಿಗೆಹಳ್ಳಿ, ಬೇಲಕೆರೆ, ರಾಯಪ್ಪನಪಾಳ್ಯ, ಕುರುಬರಹಳ್ಳಿ, ಮಾರಸಂದ್ರ ದಾಸಗೆರೆ, ಕಂಟಲಗೆರೆ, ಮಲಗೊಂಡನಹಳ್ಳಿ, ಬಿಳಿಗೆರೆ, ಕಿಬ್ಬನಹಳ್ಳಿ, ನಡುವಿನಹಳ್ಳಿ, ಬಗ್ಗನಹಳ್ಳಿ, ಹೊನ್ನೆಬಾಗಿ, ಬುಳ್ಳೇನಹಳ್ಳಿ, ಹೊಸಹಳ್ಳಿ, ಅಪ್ಪನಹಳ್ಳಿ ಮುಂತಾದ ಊರಿನ ಕುರುಬರು ಈ ಮಠದ ಒಕ್ಕಲಾಗಿದ್ದಾರೆ. ಈ ಭಾಗದ ಒಕ್ಕಲು ಮನೆತನದವರು ತಮ್ಮ ಮನೆಯಲ್ಲಿ ನಡೆಯುವ ಯಾವುದೇ ಕಾರ್ಯಗಳಿರಲಿ; ಒಡೆಯರುಗಳ ನೇತೃತ್ವದಲ್ಲಿಯೇ ಮಾಡುತ್ತಾರೆ. ಈ ನೆಲೆಯಲ್ಲಿ ೧. ಪ್ರತಿನಿತ್ಯ ಎರಡು ಬಾರಿ ಪೂಜೆ ನಡೆಯುತ್ತದೆ. ೨. ಪ್ರತಿವರ್ಷ ಮಹಾ ಶಿವರಾತ್ರಿಯಂದು ರೇವಣಸಿದ್ಧೇಶ್ವರ, ಬೀರಲಿಂಗೇಶ್ವರ ಪಲ್ಲಕ್ಕಿ ಉತ್ಸವವು ಅತ್ಯಂತ ವೈಭವದಿಂದ ನಡೆಯುತ್ತದೆ. ೩. ಕಂಥಾಧಾರಣೆ ಸೇವೆ ಪ್ರಚಲಿತದಲ್ಲಿದೆ. ಇತ್ತೀಚೆಗೆ _______ ರಂದು ವೈಭವದಿಂದ ಕಂಥಾಧಾರಣೆ ಸೇವೆಯನ್ನು ಮಾಡಲಾಗಿದೆ. ಈ ಸಂದರ್ಭದ ಛಾಯಾಚಿತ್ರಗಳನ್ನು ಹಾಗೂ ವೀಡಿಯೋ ಮಾಡಲಾಗಿದೆ.

ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ೪ ರಾಜಬೀದಿಗಳಿವೆ. ಬಹಳ ಹಿಂದಿನಿಂದಲೂ ಈ ರಾಜಬೀದಿಗಳಲ್ಲಿ ರೇವಣಸಿದ್ಧ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿಯ ಪಲ್ಲಕ್ಕಿ ಉತ್ಸವವು ಹಾದು ಹೋಗುವ ಮೂಲಕ ಸಂಪನ್ನವಾಗುವುದು. ಹಾಗೂ ಈ ರಾಜಬೀದಿಯಲ್ಲಿ ಅನ್ಯ ದೇವರ ಪಲ್ಲಕ್ಕಿ ಉತ್ಸವವನ್ನು ಕೊಂಡೊಯ್ಯಬಾರದೆಂಬ ಕಟ್ಟಳೆ ಇದೆ. ಈ ಕಟ್ಟಳೆಯನ್ನು ಇಲ್ಲಿಯವರೆಗೆ ಅನುಸರಿಸುತ್ತಾ ಬಂದಿದ್ದರು; ಅನ್ಯಕೋಮಿನ ದೇವರ ಪಲ್ಲಕ್ಕಿ ಉತ್ಸವವನ್ನು ಕೊಂಡೊಯ್ದಾಗ; ಆದ ಪ್ರತಿಭಟನೆ ಹಾಗೂ ಗಲಾಟೆಗಳನ್ನು ಮಾಧ್ಯಮಗಳು ಬಿತ್ತರಿಸಿದುದನ್ನು ಇಲ್ಲಿ ಗಮನಿಸಬಹುದಾಗಿದೆ. ಈ ಘಟನೆಯ ನಂತರ ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ಎಲ್ಲ ಸಮುದಾಯದವರು ಸೇರಿ ಸರ್ವಧರ್ಮ ಸಮ್ಮೇಳನ ನಡೆಸಿ; ಹಿಂದಿನ ಕಟ್ಟಳೆಗಳನ್ನು ತೆಗೆದು ಇನ್ನು ಮುಂದೆ ಈ ನಾಲ್ಕು ರಾಜಬೀದಿಗಳು ಎಲ್ಲ ಧರ್ಮದವರ ಆಚರಣೆಗಳಿಗೆ ಮುಕ್ತ ಎಂಬ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ.

ಸರೂರು ಗ್ರಾಮವನ್ನು ಬಿಟ್ಟರೆ ಮತ್ತೆ ಮಂಕೊಡೆಯರು ಕಂಡುಬರುವುದು ಚಿಕ್ಕನಾಯಕನಹಳ್ಳಿಯಲ್ಲಿಯೇ. ಇಲ್ಲಿ ಮಂಕೊಡೆಯರ ಎರಡು ಮನೆತನಗಳಿವೆ. ಇವರು ಇಲ್ಲಿಯ ಸಿದ್ಧರಾಮೇಶ್ವರ ಮಠದ ಅರ್ಚಕರಾಗಿ ಈ ಭಾಗದ ಸಾದುಕುರುಬರಿಗೆ ಕುಲಗುರುಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಈ ಸಿದ್ಧಮಂಕನ ಸಂಪ್ರದಾಯದ ಮಂಕೊಡೆಯರು ಕುರುಬರೊಂದಿಗೆ ರಕ್ತಸಂಬಂಧವನ್ನು ಮಾಡುತ್ತಿರಲಿಲ್ಲ. ಇತ್ತೀಚೆಗೆ ಸಂಬಂಧ ಬೆಳೆಸುತ್ತಿದ್ದಾರೆ.

೫.೪.೩ ಮತ್ತಿಘಟ್ಟ: ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ

ಶ್ರೀಗುರು ರೇವಣಸಿದ್ಧೇಶ್ವರ ಮಹಾಸಂಸ್ಥಾನ ಮತ್ತಿಘಟ್ಟ ಈ ಭಾಗದ ಒಂದು ಪ್ರಮುಖ ರೇವಣಸಿದ್ಧನ ನೆಲೆಯಾಗಿದೆ. ಮತ್ತಿಘಟ್ಟ ಗ್ರಾಮವು ತಾಲ್ಲೂಕು ಕೇಂದ್ರ ಕಡೂರಿನಿಂದ ೮.೦೦ ಕಿ.ಮೀ. ದೂರದಲ್ಲಿದೆ. ಈ ಮಹಾಸಂಸ್ಥಾನದ ಗೋಡೆಗಳು, ಕಂಬಗಳು, ಛಾವಣಿ ಮತ್ತು ನೆಲಹಾಸು ಕಲ್ಲು ಹಾಗೂ ಕಲ್ಲುಚಪ್ಪಡಿಗಳಿಂದ ನಿರ್ಮಾಣವಾಗಿವೆ. ಸುಮಾರು ೩ ರಿಂದ ೪ ಶತಮಾನಗಳಷ್ಟು ಹಳೆಯದಾದ ಈ ನೆಲೆಯ ಗರ್ಭಗುಡಿ, ಅಂಗಳ, ಪಡಸಾಲೆ ಮತ್ತು ಗೋಪುರಗಳನ್ನು ಒಳಗೊಂಡಿದೆ. ಇಲ್ಲಿನ ರೇವಣಸಿದ್ಧ ದೈವ ೧. ಎಳ್ಳಂಬೆಳಸೆ ೨. ವೈಮಲ್ಲಾಪುರ ೩. ಶಿಂಗಟಗೆರೆ ೪. ಮಾದಾಪುರ ೫. ಅಂಕೆರೆ ೬. ಬಾಣಾವರ ೭. ದೇವನೂರು ೮. ಚಿಕ್ಕಾರಳ್ಳಿ ೯. ಕಡೂರು ೧೦. ಬೀರೂರು ೧೧. ಕುರುಬಗೆರೆಯ ಒಟ್ಟು ೧೨ ಗುಡಿಕಟ್ಟುಗಳಿವೆ (ಜೀರದೇವರು. ಹಾಗೂ ಕಡೂರು ೪ ಸಂಖ್ಯೆ, ೧. ಶಾನಗೆರೆ ೨. ಮನಕತ್ತೂರು ೩. ನಂಜಪ್ಪನಹಳ್ಳಿ ೪. ಸಂತೆಕೆರೆಹಳ್ಳಿ ೫. ಜೈರಾಪುರ ೬. ವೆಂಕಟಾಪುರ ೭. ಲಿಂಗ್ಲಾಪುರ ೮. ಬೇವಿನಹಳ್ಳಿ(ಹಾಸನ ಜಿಲ್ಲೆ. ೯. ಸುಭಾಷನಗರ ೧೦. ಬೆಕ್ಕಾರಹಳ್ಳಿ ೧೧. ಮನಕತ್ತೂರು ೧೨. ಶ್ಯಾನಿಗೇರಿ ೧೩. ತೊಡೇನಹಳ್ಳಿ(ಹಾಸನಜಿಲ್ಲೆ) ಇತ್ಯಾದಿ ೧೮ ಹರಿವಾಣ(ಗ್ರಾಮದೇವತೆ)ಗಳಿವೆ. ರೇವಣಸಿದ್ಧನಿಗೆ ಸೇರಿದ ಮೇಲಿನ ೧೨ ಗುಡಿಕಟ್ಟಿನ ಜೀರದೇವರುಗಳು ಸರದಿಯ ಪ್ರಕಾರ ಪ್ರತಿ ವರ್ಷ ನಡೆಯುವ

ಜಾತ್ರೆಯ ಉತ್ಸವದಲ್ಲಿ ಭಾಗವಹಿಸುವವು. ಹೀಗೆ ಎಲ್ಲ ಗುಡಿಕಟ್ಟಿನ ದೇವರುಗಳ ಜಾತ್ರೆ ಮುಗಿಯಲು ೧೨ ವರ್ಷವಾಗುವುದು. ಈ ಎಲ್ಲ ೧೨ ಗುಕಟ್ಟಿನ ಬೀರದೇವರ ಪಲ್ಲಕ್ಕಿಗಳು ಹಾಗೂ ಮತ್ತಿಘಟ್ಟದ ರೇವಣಸಿದ್ದೇಶ್ವರನ ಪಲ್ಲಕ್ಕಿಯೂ ಸೇರಿದಂತೆ ೧೩ನೇ ವರ್ಷದಲ್ಲಿ ಮತ್ತಿಘಟ್ಟದ ಬೀರದೇವರ ಜಾತ್ರೆ ನಡೆಯುವುದು. ಈ ಜಾತ್ರೆ ನಡೆಯುವ ಸಂದರ್ಭದಲ್ಲಿ ಗೂಡೆ ಹೊರುವ (ಅಧ್ಯಾಯ –೪ ರಲ್ಲಿ ವಿವರವಾಗಿ ಚರ್ಚಿಸಲಾಗಿದೆ) ಸಂಪ್ರದಾಯ ಹಾಗೂ ಹಲಮರಿ ಸೇವೆಯಂತಹ ಆಚರಣೆಗಳು ರೂಢಿಯಲ್ಲಿವೆ. ಈ ನೆಲೆಯಲ್ಲಿ ಸಾವಂತ ಕುಲಕ್ಕೆ ಸೇರಿದ ಒಡೆಯರುಗಳು ಧಾರ್ಮಿಕ ನೇತೃತ್ವವನ್ನು ವಹಿಸಿಕೊಂಡಿದ್ದಾರೆ. ಪ್ರಸ್ತುತ ಶ್ರೀಕಂಠ ಒಡೆಯರ್ ಮತ್ತು ಶ್ರೀ ಪ್ರಭು ಒಡೆಯರ್‌ಗಳು ಶ್ರೀಮಠದ ಒಡೆಯರುಗಳಾಗಿದ್ಧಾರೆ.

೩ ಆಸಂದಿ: ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ

ಆಸಂದಿ ಗ್ರಾಮವು ತಾಲ್ಲೂಕು ಕೇಂದ್ರ ಕಡೂರಿನಿಂದ ೨೨.೦೦ ಕಿ.ಮೀ.ದೂರದಲ್ಲಿದೆ. ಗ್ರಾಮದಲ್ಲಿ ಸುಮಾರು ೬ ಶತಮಾನಗಳಷ್ಟು ಶ್ರೀ ಗುರು ಪುರಾತನ ರೇವಣಸಿದ್ದೇಶ್ವರ ಮಹಾಸ್ವಾಮಿ ಮಠವಿದೆ. ಇತ್ತೀಚೆಗೆ ೧೯೯೧ ರಲ್ಲಿ ನವೀಕರಿಸಲಾಗಿದೆ. ಪೂರ್ವಾಭಿಮುಖವಾಗಿರುವ ಗರ್ಭಗುಡಿಯ ಮೇಲೆ ಎತ್ತರವಾದ ಶಿಖರವಿದ್ದು, ಪಂಚಕಳಸಗಳನ್ನು ಹೊಂದಿದೆ. ಗರ್ಭಗುಡಿಯ ಪೀಠದ ಮೇಲೆ ಲಿಂಗೋದ್ಭವ ರೇವಣಸಿದ್ಧೇಶ್ವರ ಶಿಲಾಮೂರ್ತಿ, ಅದರ ಮುಂದೆ ರೇವಣಸಿದ್ಧೇಶ್ವರ ಬೆಳ್ಳಿಯ ಉತ್ಸವಮೂರ್ತಿ ಇದೆ. ಇಲ್ಲಿ ತ್ರಿಕಾಲ ಪೂಜೆ ನಡೆಯುತ್ತದೆ.

ಶ್ರೀ ರೇವಣಸಿದ್ದೇಶ್ವರ ದೈವಕ್ಕೆ ೧. ಹಿರೇನಲ್ಲೂರು ೨. ಚೌಳಹಿರಿಯೂರು ೩. ಬೋರೆಕೆರೆ ೪. ಮರದಕೆರೆ ೫. ಹೋಚಿಹಳ್ಳಿ ೬. ಮರವಂಜಿ ೭. ಮಗಟಿ ೮. ಮುಗಳಿಕಟ್ಟೆ ೯. ಕೋಡಿಹಳ್ಳಿ ೧೦. ಗಜ್ಜೆ ೧೧. ಬೀರೂರು ೧೨. ಕಡೂರು(೨ ಸಂಖ್ಯೆ. ೧೩.ಆಸಂದಿ ೧೪. ಚಿಕ್ಕಬಾಸೂರಿನ–೧೫ ಗುಡಿಕಟ್ಟು, ೧. ಮುದಿಗೆರೆ ೨. ಚಿಕ್ಕನಲ್ಲೂರು ೩. ಕರೀಗೆರೆ ೪. ಚನ್ನಾಪುರ ೫. ಕುರುಬರಹಳ್ಳಿ ೬. ಅಜ್ಜಂಪುರ ೭. ಗೊಲ್ಲರಹಳ್ಳಿ ೮. ಸೀಗೆಹಡ್ಲು ೯. ಕಂಡುಗದಹಳ್ಳಿ ೧೦. ಬಿಳಿವಾಲ ೧೧. ಕೆದಾಸರಹಳ್ಳಿ ೧೨. ಕಾಮನಗೆರೆ ೧೩. ಮಲ್ಲೇಶ್ವರ ೧೪. ಒಕ್ಕಲಗೆರೆ ೧೫. ಶಿವನಗೆರೆ ೧೬. ಕಡೂರಹಳ್ಳಿ ೧೭. ಕಡೂರು(೨ ಸಂಖ್ಯೆ)– ೧೮ ಬಾಳೆ ಹರಿವಾಣ ಮತ್ತು ೧. ಉಡುಗೆರೆ ಮೇಲುಕಟ್ಟೆ ಅಡುಗರ ಅಮವಾಸ್ಯೆ ಮನೆಯ ಹನುಮನಹಳ್ಳಿಯ–೨ ಕಟ್ಟೆಮನೆ(ಉಣ್ಣೆಕಂಕಣ) ಗಳಿವೆ. ಇಲ್ಲಿಯ ರೇವಣಸಿದ್ಧನಿಗೆ ನಡೆದುಕೊಳ್ಳುವ ಭಕ್ತಾದಿಗಳಲ್ಲಿ ಕುರುಬ ಜನಾಂಗದ ಹತ್ತಿಕಂಕಣದವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ; ಉಣ್ಣೆಕಂಕಣದ ಕುರುಬರಿಗೆ ಕಟ್ಟೆಮನೆ ಪಟ್ಟ ನೀಡಿರುವುದು ವಿಶೇಷವಾಗಿದೆ. ಇಲ್ಲಿನ ದೈವ ರೇವಣಸಿದ್ಧನಿಗೆ ಸಂಬಂಧಿಸಿದಂತೆ ಸ್ಥಳ ಪುರಾಣವಿದೆ. ಅದರಂತೆ ಒಂದಾನೊಂದು ಕಾಲದಲ್ಲಿ ಕಳ್ಳರು, ರೇವಣಸಿದ್ಧನ ಮೂರ್ತಿಯನ್ನು ಕದ್ದೊಯ್ದು; ನಂತರದಲ್ಲಿ ಆಸಂದಿ ಗ್ರಾಮದ ಪಕ್ಕದಲ್ಲಿರುವ ಗೋಂದಿಹೊಸಹಳ್ಳಿಯ

ಭಾಗವಹಿಸುವವು. ಹೀಗೆ ಎಲ್ಲ ಗುಡಿಕಟ್ಟಿನ ದೇವರುಗಳ ಜಾತ್ರೆ ಮುಗಿಯಲು ೧೨ ವರ್ಷವಾಗುವುದು. ಈ ಎಲ್ಲ ೧೨ ಗುಕಟ್ಟಿನ ಬೀರದೇವರ ಪಲ್ಲಕ್ಕಿಗಳು ಹಾಗೂ ಮತ್ತಿಘಟ್ಟದ ರೇವಣಸಿದ್ದೇಶ್ವರನ ಪಲ್ಲಕ್ಕಿಯೂ ಸೇರಿದಂತೆ ೧೩ನೇ ವರ್ಷದಲ್ಲಿ ಮತ್ತಿಘಟ್ಟದ ಬೀರದೇವರ ಜಾತ್ರೆ ನಡೆಯುವುದು. ಈ ಜಾತ್ರೆ ನಡೆಯುವ ಸಂದರ್ಭದಲ್ಲಿ ಗೂಡೆ ಹೊರುವ (ಅಧ್ಯಾಯ -೪ ರಲ್ಲಿ ವಿವರವಾಗಿ ಚರ್ಚಿಸಲಾಗಿದೆ) ಸಂಪ್ರದಾಯ ಹಾಗೂ ಹಲಮರಿ ಸೇವೆಯಂತಹ ಆಚರಣೆಗಳು ರೂಢಿಯಲ್ಲಿವೆ. ಈ ನೆಲೆಯಲ್ಲಿ ಸಾವಂತ ಕುಲಕ್ಕೆ ಸೇರಿದ ಒಡೆಯರುಗಳು ಧಾರ್ಮಿಕ ನೇತೃತ್ವವನ್ನು ವಹಿಸಿಕೊಂಡಿದ್ದಾರೆ. ಪ್ರಸ್ತುತ ಶ್ರೀಕಂಠ ಒಡೆಯರ್ ಮತ್ತು ಶ್ರೀ ಪ್ರಭು ಒಡೆಯರ್‌ಗಳು ಶ್ರೀಮತದ ಒಡೆಯರುಗಳಾಗಿದ್ಧಾರೆ.

೩. ಆಸಂದಿ: ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ

ಆಸಂದಿ ಗ್ರಾಮವು ತಾಲ್ಲೂಕು ಕೇಂದ್ರ ಕಡೂರಿನಿಂದ ೨೨.೦೦ ಕಿ.ಮೀ.ದೂರದಲ್ಲಿದೆ. ಗ್ರಾಮದಲ್ಲಿ ಸುಮಾರು ೬ ಶತಮಾನಗಳಷ್ಟು ಶ್ರೀ ಗುರು ಪುರಾತನ ರೇವಣಸಿದ್ದೇಶ್ವರ ಮಹಾಸ್ವಾಮಿ ಮಠವಿದೆ. ಇತ್ತೀಚೆಗೆ ೧೯೯೧ ರಲ್ಲಿ ನವೀಕರಿಸಲಾಗಿದೆ. ಪೂರ್ವಾಭಿಮುಖವಾಗಿರುವ ಗರ್ಭಗುಡಿಯ ಮೇಲೆ ಎತ್ತರವಾದ ಶಿಖರವಿದ್ದು, ಪಂಚಕಳಸಗಳನ್ನು ಹೊಂದಿದೆ. ಗರ್ಭಗುಡಿಯ ಪೀಠದ ಮೇಲೆ ಲಿಂಗೋದ್ಭವ ರೇವಣಸಿದ್ಧೇಶ್ವರ ಶಿಲಾಮೂರ್ತಿ, ಅದರ ಮುಂದೆ ರೇವಣಸಿದ್ಧೇಶ್ವರ ಬೆಳ್ಳಿಯ ಉತ್ಸವಮೂರ್ತಿ ಇದೆ. ಇಲ್ಲಿ ತ್ರಿಕಾಲ ಪೂಜೆ ನಡೆಯುತ್ತದೆ.

ಶ್ರೀ ರೇವಣಸಿದ್ಧೇಶ್ವರ ದೈವಕ್ಕೆ ೧. ಹಿರೇನಲ್ಲೂರು ೨. ಚೌಳಹಿರಿಯೂರು ೩. ಬೋರೆಕೆರೆ ೪. ಮರದಕೆರೆ ೫. ಹೋಚಿಹಳ್ಳಿ ೬. ಮರವಂಜಿ ೭. ಮಗಟಿ ೮. ಮುಗಳಿಕಟ್ಟೆ ೯. ಕೋಡಿಹಳ್ಳಿ ೧೦. ಗಜ್ಜೆ ೧೧. ಬೀರೂರು ೧೨. ಕಡೂರು(೨ ಸಂಖ್ಯೆ. ೧೩.ಆಸಂದಿ ೧೪. ಚಿಕ್ಕಬಾಸೂರಿನ-೧೫ ಗುಡಿಕಟ್ಟು, ೧. ಮುದಿಗೆರೆ ೨. ಚಿಕ್ಕನಲ್ಲೂರು ೩. ಕರೀಗೆರೆ ೪. ಚನ್ನಾಪುರ ೫. ಕುರುಬರಹಳ್ಳಿ ೬. ಅಜ್ಜಂಪುರ ೭. ಗೊಲ್ಲರಹಳ್ಳಿ ೮. ಸೀಗೆಹಡ್ಲು ೯. ಕಂಡುಗದಹಳ್ಳಿ ೧೦. ಬಿಳಿವಾಲ ೧೧. ಕೆದಾಸರಹಳ್ಳಿ ೧೨. ಕಾಮನಗೆರೆ ೧೩. ಮಲ್ಲೇಶ್ವರ ೧೪. ಒಕ್ಕಲಗೆರೆ ೧೫. ಶಿವನಗೆರೆ ೧೬. ಕಡೂರಹಳ್ಳಿ ೧೭. ಕಡೂರು(೨ ಸಂಖ್ಯೆ)- ೧೮ ಬಾಳೆ ಹರಿವಾಣ ಮತ್ತು ೧. ಉಡುಗೆರೆ ಮೇಲುಕಟ್ಟೆ ಅಡುಗರ ಅಮವಾಸ್ಯೆ ಮನೆಯ ಹನುಮನಹಳ್ಳಿಯ-೨ ಕಟ್ಟೆಮನೆ(ಉಣ್ಣೆಕಂಕಣ) ಗಳಿವೆ. ಇಲ್ಲಿಯ ರೇವಣಸಿದ್ಧನಿಗೆ ನಡೆದುಕೊಳ್ಳುವ ಭಕ್ತಾದಿಗಳಲ್ಲಿ ಕುರುಬ ಜನಾಂಗದ ಹತ್ತಿಕಂಕಣದವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ; ಉಣ್ಣೆಕಂಕಣದ ಕುರುಬರಿಗೆ ಕಟ್ಟೆಮನೆ ಪಟ್ಟ ನೀಡಿರುವುದು ವಿಶೇಷವಾಗಿದೆ. ಇಲ್ಲಿನ ದೈವ ರೇವಣಸಿದ್ಧನಿಗೆ ಸಂಬಂಧಿಸಿದಂತೆ ಸ್ಥಳ ಪುರಾಣವಿದೆ. ಅದರಂತೆ ಒಂದಾನೊಂದು ಕಾಲದಲ್ಲಿ ಕಳ್ಳರು, ರೇವಣಸಿದ್ಧನ ಮೂರ್ತಿಯನ್ನು ಕದ್ದೊಯ್ದು; ನಂತರದಲ್ಲಿ ಆಸಂದಿ ಗ್ರಾಮದ ಪಕ್ಕದಲ್ಲಿರುವ ಗೋಂದಿಹೊಸಹಳ್ಳಿಯ

ಭಾವಿಯೊಂದರಲ್ಲಿ ಎಸೆದುದಾಗಿಯೂ, ಕಾಲಾನಂತರದಲ್ಲಿ ಆ ಮೂರ್ತಿಗಾಗಿ ಭಾವಿಯನ್ನು ಶೋಧಿಸಿದಾಗ, ಇಡಿಯಾದ ರೇವಣಸಿದ್ಧನ ಮೂರ್ತಿ ದೊರೆಯದೆ ಕೇವಲ ಬ್ರಹ್ಮಕಮಲ ಮಾತ್ರ ದೊರೆತುದಾಗಿಯೂ, ಹಾಗೆ ದೊರೆತ ಬ್ರಹ್ಮಕಮಲವನ್ನ ಪ್ರಸ್ತುತ ಆಸಂದಿ ಸಿಂಹಾಸನದಲ್ಲಿ ಸ್ಥಾಪಿಸಲಾಗಿದೆ ಎಂದು ಸ್ಥಳೀಯರು ಹೇಳುವರು. ಇದರ ಕುರುಹಾಗಿ ಸ್ಥಳೀಯರು ಗೋಂದಿಹೊಸಳ್ಳಿ ಗ್ರಾಮದಲ್ಲಿರುವ ಭಾವಿ ಹಾಗೂ ಪಕ್ಕದ ಬಿಲ್ವಪತ್ರೆ ಮರವನ್ನು ತೋರಿಸುವರು. ಇತ್ತೀಚಿನ ದಿನಗಳಲ್ಲಿ ಆ ಸ್ಥಳದಲ್ಲಿ ಸಿದ್ಧೇಶ್ವರಸ್ವಾಮಿಯ ದೇವಸ್ಥಾನ ನಿರ್ಮಿಸಿ, ಆ ದೈವವನ್ನು ಸಿದ್ದೇಶ್ವರಸ್ವಾಮಿ ಎಂದು ಕರೆಯುತ್ತಿರುವರು. ಈ ದೇವಾಲಯದಲ್ಲಿ ಇಂದಿಗೂ ಒಡೆಯರುಗಳು ತಮ್ಮ ವೈಯಕ್ತಿಕ ಆಚರಣೆಗಳಾದ ಲಿಂಗಧಾರಣೆ ಇತ್ಯಾದಿ ಧಾರ್ಮಿಕ ಆಚರಣೆಗಳನ್ನು ಇಲ್ಲಿಯೇ ನೆರವೇರಿಸುತ್ತಾರೆ.

ಈ ನೆಲೆಯಲ್ಲಿ ರೇವಣಸಿದ್ಧನಿಗೂ, ಬೀರೇಶನಿಗೂ ಶ್ರಾವಣಮಾಸದಲ್ಲಿ ಪ್ರತಿದಿನ ವಿಶೇಷ ಹೂವಿನ ಅಲಂಕಾರ ಮಾಡುತ್ತಾರೆ. ರೇವಣಸಿದ್ಧನ ಇತರ ನೆಲೆಗಳಲ್ಲಿರುವ ಕಂಥಾಧಾರಣ ಸೇವೆ ಇಲ್ಲಿಯೂ ಆಚರಣೆಯಲ್ಲಿತ್ತಾದರೂ; ಇತ್ತೀಚಿನ ದಿನಗಳಲ್ಲಿ ಆಚರಣೆಯಲ್ಲಿ ಇರುವುದಿಲ್ಲ. ಈ ನೆಲೆಯಲ್ಲಿ ಅಂದಿನಿಂದ ಇಂದಿನವರೆಗೂ ಸಾವಂತಕುಲದ ಒಡೆಯರುಗಳೇ ಪೂಜಾರಿಗಳಾಗಿದ್ದಾರೆ. ಪ್ರಸ್ತುತ ಶ್ರೀ ಎಂ.ಎಂ.ರೇವಣಸಿದ್ಧಯ್ಯ ಒಡೆಯರವರು ರೇವಣಸಿದ್ಧನ ಪೂಜಾರಿಗಳಾಗಿದ್ದಾರೆ. ಕುರುಬರ ಎಲ್ಲ ಧಾರ್ಮಿಕ ಮತ್ತು ಮಂಗಳ ಕಾರ್ಯಗಳು ಇವರ ನೇತೃತ್ವದಲ್ಲಿ ನಡೆಯುತ್ತಲಿವೆ.

೪. ಸಖರಾಯಪಟ್ಟಣ: ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ

ಸಖರಾಯಪಟ್ಟಣವು ತಾಲ್ಲೂಕು ಕೇಂದ್ರ ಕಡೂರಿನಿಂದ ೧೮.೦೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ಈ ಹಿಂದೆ ಇದ್ದ ರೇವಣಸಿದ್ಧನ ದೇವಾಲಯದ ಸ್ಥಳದಲ್ಲಿಯೇ ಹೊಸದಾಗಿ ದೇವಾಲಯವನ್ನು ನಿರ್ಮಿಸಿದ್ದಾರೆ. ಗರ್ಭಗುಡಿಯಲ್ಲಿ ಲಿಂಗೋದ್ಭವ ರೇವಣಸಿದ್ಧನ ಮೂರ್ತಿ ಮತ್ತು ಈ ಹಿಂದಿನಿಂದಲೂ ಪೂಜೆಗೊಳ್ಳುತ್ತಿದ್ದ ಲಿಂಗುವನ್ನು ಸ್ಥಾಪಿಸಲಾಗಿದೆ. ದೇವಾಲಯದ ಆವರಣದಲ್ಲಿ; ಮುಂಭಾಗದಲ್ಲಿ ಮೈಲಾರಲಿಂಗೇಶ್ವರ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ, ಮೈಲಾರದಲ್ಲಿ ಕಾರಣಿಕ ನುಡಿವ ಸಂದರ್ಭದಲ್ಲಿ ಗೊರವರು ಹಡೆಯೆರುವ ಜಿಲ್ಲಿನ ಮಾದರಿಯ ೨೫ ಅಡಿ ಉದ್ದದ ಮರದ ಜಿಲ್ಲನ್ನು ದೈವವಾಗಿ ಸ್ಥಾಪಿಸಿದ್ದಾರೆ. ಈ ದೈವವನ್ನು ಬಾಣದದೇವರು ಎಂದು ಕರೆಯುತ್ತಾರೆ. ಅಕ್ಕಪಕ್ಕದಲ್ಲಿ ಸೋಮೇಶ್ವರ ಹಾಗೂ ಬೀರಲಿಂಗೇಶ್ವರ ದೇವಾಲಯಗಳನ್ನೂ ನಿರ್ಮಿಸಿದ್ದಾರೆ. ಇಲ್ಲಿನ ರೇವಣಸಿದ್ಧೇಶ್ವರ ಸ್ವಾಮಿಗೆ ೮ ಗುಡಿಕಟ್ಟು ಮತ್ತು ೪ ಹರಿವಾಣಗಳಿವೆ. ಸ್ಥಳೀಯ ಲಭ್ಯಮಾಹಿತಿಯಂತೆ ಈ ನೆಲೆಯ ೪-೫ ಶತಮಾನಕ್ಕೂ ಪುರಾತನವಾಗಿದೆ. ಇಲ್ಲಿ ಹುಣ್ಣಿಮೆ, ಹಬ್ಬ ಹರಿದಿನಗಳಲ್ಲಿ ವಿಶೇಷ ಅಲಂಕಾರದೊಡನೆ

ಪೂಜೆ ಪುನಸ್ಕಾರಗಳು ಹಾಗೂ ಊರಿನ ಪ್ರಮುಖ ಬೀದಿಗಳಲ್ಲಿ ರೇವಣಸಿದ್ಧನ ಮೆರವಣಿಗೆ ಮಾಡುವರು. ರೇವಣಸಿದ್ಧನ ಪ್ರತಿಯೊಂದು ಧಾರ್ಮಿಕ ಕಾರ್ಯಗಳಲ್ಲಿ ಬೀರದೇವರು, ಮೈಲಾರಲಿಂಗ ದೇವರು ಭಾಗವಹಿಸುವುದು ಕಡ್ಡಾಯವಾಗಿದೆ. ಇಲ್ಲಿ ರೇವಣಸಿದ್ಧನ ಧಾರ್ಮಿಕ ಉತ್ಸವಗಳ ಆಚರಣೆಯ ಉತ್ಸವ ಸಂದರ್ಭದಲ್ಲಿ, ಸಂಬಂಧಿಸಿದ ಗೌಡರು, ಭಂಡಾರಿಯವರು, ಕೋಲ್ಕಾರರು, ಗುಡಿಕಟ್ಟಿನವರು, ಹರಿವಾಣದವರನ್ನು ಒಳಗೊಂಡ ಕಾರ್ಯಕಾರಿ ಮಂಡಳಿಯನ್ನು ರಚಿಸುತ್ತಾರೆ. ಈ ಸಮಿತಿಯು ತೆಗೆದುಕೊಂಡ ನಿರ್ಣಯವೇ ಅಂತಿಮವಾಗುತ್ತದೆ. ಹಾಗೂ ಈ ಸಮಿತಿಯಿಂದ ಆಹ್ವಾನವಿತ್ತರೆ ಮಾತ್ರ ಪಂಚಪೀಠದ ಗುರುಗಳು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವರು.


ಸಾವಂತಕುಲಕ್ಕೆ ಸೇರಿದ ಒಡೆಯರುಗಳು ರೇವಣಸಿದ್ಧನ ಪೂಜೆಯ ಹಕ್ಕನ್ನು ಹೊಂದಿರುವರು. ಪ್ರಸ್ತುತ ಶ್ರೀರೇವಣ್ಣಒಡೆಯರ್, ಶ್ರೀಪ್ರಭುಲಿಂಗ ಒಡೆಯರ್ ಮತ್ತು ಶ್ರೀ ಗಂಗಾಧರ ಒಡೆಯರರವರು, ಪೂಜಾರಿಗಳಾಗಿದ್ದಾರೆ. ಈ ನೆಲೆಯಲ್ಲಿ ಜಾತ್ರೆ ಮತ್ತು ಕಂಥಾಧಾರಣೆ ಸೇವೆಯಂತಹಾ ಆಚರಣೆಗಳು ರೂಢಿಯಲ್ಲಿರುವುದಿಲ್ಲ. ಇಲ್ಲಿಯ ಧಾರ್ಮಿಕ ಆಚರಣೆಗಳು ಹಾಗೂ ಒಡೆಯರ ವೈಯಕ್ತಿಕ ಆಚರಣೆಗಳು ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಮುಂದುವರಿಕೆಗಳಾಗಿವೆ.


೫. ಹರ್ತಿಕೋಟೆ: ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

ಹರ್ತಿಕೋಟೆ ಗ್ರಾಮವು ತಾಲ್ಲೂಕು ಕೇಂದ್ರ ಹಿರಿಯೂರಿನಿಂದ ೧೧.೦೦ ಕಿ.ಮೀ. ದೂರದಲ್ಲಿದೆ. ಈ ನೆಲೆಯು ಕುರುಬರ ಗುರು ಒಡೆಯರ ಒಂದು ಪ್ರಮುಖ ನೆಲೆಯಾಗಿದೆ. ಹಿಂದೆ ಈ ಗ್ರಾಮದಲ್ಲಿ ೧೦೧ ದೇವಾಲಯಗಳು ಇದ್ದುದಾಗಿ ಸ್ಥಳೀಯರು ಹೇಳುತ್ತಾರೆ. ಪ್ರಸ್ತುತ ೩೦ ದೇವಾಲಯಗಳು ಮಾತ್ರ ಉಳಿದಿವೆ. ಈ ಎಲ್ಲ ದೇವಾಲಯಗಳಲ್ಲಿ ಇಂದಿಗೂ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಗ್ರಾಮದಲ್ಲಿ ೧೯೩೨ರಲ್ಲಿ ನಿರ್ಮಿಸಲಾದ ರೇವಣಸಿದ್ಧನ ದೇವಾಲಯವಿದೆ. ಈ ದೇವಾಲಯವನ್ನು ಜೇನು ಮುದ್ರೆ ಕಲ್ಲು ಹಾಗೂ ಗಾರೆಯಿಂದ ನಿರ್ಮಿಸಲಾಗಿದೆ. ಇಲ್ಲಿ ಬಳಸಲಾದ ಮರಮುಟ್ಟುಗಳನ್ನು ಕಮರದ ಮರದಿಂದ ತಯಾರಿಸಲಾಗಿದೆ. ದೇವಾಲಯದ ಗರ್ಭಗುಡಿಯ ಮೇಲೆ ಗೋಪುರವಿದ್ದು, ನಂದಿ, ಟಗರು, ಕೋತಿ, ಅಳಿಲು, ಗಂಡಬೇರುಂಡ, ಹಾವಾಡಿಗ, ಆಂಜನೇಯ, ನಾಗರಹಾವು ಹಾಗೂ ನಾಟ್ಯಭಂಗಿಯ ಸ್ತ್ರೀಯರ ಆಕೃತಿಗಳನ್ನು ಅಳವಡಿಸಲಾಗಿದೆ. ಶ್ರೀಮಠವು ಗರ್ಭಗುಡಿ, ಪ್ರಾಂಗಣ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಶ್ರೀಮಠದ ಪೂರ್ವಭಾಗದಲ್ಲಿ ಒಳಪ್ರವೇಶಿಸಲು ಕಮಾನು ಇತ್ತೆಂದೂ ಹಾಗೂ ಒಡೆಯರುಗಳು, ಗುಡಿಗೌಡರು ಮಾತ್ರ ಈ ದ್ವಾರದಿಂದ ಪ್ರವೇಶ ಮಾಡುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ.


ಶ್ರೀಮಠದ ಗರ್ಭಗುಡಿಯ ಸರಪಳಿ ಸಿಂಹಾಸನದ ಗದ್ದುಗೆಯ ಮೇಲೆ ರೇವಣಸಿದ್ಧನನ್ನೂ ಹಾಗೂ ಈ ಹಿಂದೆ ಪೂಜಿಸಲ್ಪಡುತ್ತಿದ್ದ ರೇವಣಸಿದ್ಧನ ಮೂರ್ತಿಯನ್ನು ಕೆಳಭಾಗದಲ್ಲಿ ಸ್ಥಾಪಿಸಲಾಗಿದೆ. ಇಲ್ಲಿಯ ರೇವಣಸಿದ್ಧನಿಗೆ ೧. ಜಾರಗಲ್ಲು ಬೀರಪ್ಪ (ಆರ್ಯ ಬೆಡಗು ಕುರುಬರು) ೨. ಕೆಂಚಲಿಂಗೇಶ್ವರ ದೇವರು (ಹುಲಿಮನ್ ಕುರುಬರು) ೩. ಲಕ್ಕಮ್ಮದೇವಿ (ಬಿಲ್ಲಿನ ಕುರುಬರು) ೪. ಮೈಲಾರಲಿಂಗೇಶ್ವರ ದೇವರು (ಅರಸನ ಕುಲ ಕುರುಬರು) ೫. ಮೈಲಾರಲಿಂಗೇಶ್ವರ (ಪಾವಿನ ಕುರುಬರು) ೬. ಬೀರಲಿಂಗೇಶ್ವರ ಮತ್ತು ಹುಲಿಗೆ ಹೊಸೂರಮ್ಮ ದೇವರು (ಹೆಬ್ಬುಲಿ ಕುರುಬರು) ೭. ಬೀರಲಿಂಗೇಶ್ವರ ದೇವರು (ಬ್ಯಾಲನ ಕುರುಬರು, ನುಂಗಲಾರದಮ್ಮ) ೮. ಹೊಸಳ್ಳಿ ಬಾಗನ ಬೀರಲಿಂಗ (ಬಾಗನ ಕುರುಬರು) ೯. ಹೊಸೂರಮ್ಮ ಬೀರಲಿಂಗ (ಕಣಜನಹಳ್ಳಿ ಬಾಗನ ಕುರುಬರು) ೧೦. ಮೈಲಾರಲಿಂಗೇಶ್ವರ ದೇವರು (ಸಾವಂತ ಕುರುಬರು) ೧೧. ಬೀರಲಿಂಗೇಶ್ವರ (ಬಸಲೇನ ಕುರುಬರು) ೧೨. ಮಾವೂರಮ್ಮ ಬೀರಲಿಂಗೇಶ್ವರ (ಸತ್ಯನ್ ಕುರುಬರು) ಗಳೆಂಬ ೧೨ ಗುಡಿಕಟ್ಟುಗಳನ್ನೂ ೧. ಆರ್ಯಕುರುಬರು (ಶ್ರೀ ಕರಿತಿಪ್ಪೇಶ್ವರಸ್ವಾಮಿ ಮತ್ತು ತಿಪ್ಪೇಸ್ವಾಮಿ ವಂಶಸ್ಥರು) ೨. ಹುಲಿಮನ್ ಕುರುಬರು (ಚಳ್ಳಕೇಶಪ್ಪ ವಂಶಸ್ಥರು) ೩. ಮಲ್ಲಿಗೆ ಕುರುಬರು (ಕೊಲ್ಲಾಪೂರ ಲಿಂಗಪ್ಪ ವಂಶಸ್ಥರು) ೪. ಹೊನ್ನುಂಗರ ಕುರುಬರು (ಭೀಮಯ್ಯ ವಂಶಸ್ಥರು) ೫. ಅರಸನ್ ಕುರುಬರು (ಗೋರಪ್ಪ ಶಿವಣ್ಣನ ವಂಶಸ್ಥರು) ಗಳೆಂಬ ೫ ಹರಿವಾಣಗಳನ್ನು ಹೊಂದಿದೆ.

ಈ ನೆಲೆಯಲ್ಲಿ ಪ್ರತಿನಿತ್ಯ ಎರಡುಬಾರಿ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಜಾತ್ರೆ ಮಾಡುವುದಿಲ್ಲ. ಪ್ರತಿವರ್ಷ ದಸರಾ ಹಬ್ಬದಲ್ಲಿ ರೇವಣಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಶ್ರೀಮಠದ ರೇವಣಸಿದ್ಧನ ಪೂಜಾರಿಕೆಯನ್ನು ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಒಡೆಯರುಗಳು ಹೊಂದಿದ್ದಾರೆ. ಇತ್ತೀಚೆಗೆ ಈ ಒಡೆಯರುಗಳಲ್ಲಿ ೩ ಗುಂಪುಗಳಾಗಿರುವುದನ್ನು ಇಲ್ಲಿ ಗಮನಿಸ ಬಹುದಾಗಿದೆ. ಆ ಗುಂಪುಗಳ ವಂಶವೃಕ್ಷ ಕೆಳಗಿನಂತಿವೆ. ಮೇಲಿನ ಗುಂಪಿನ ವಂಶವೃಕ್ಷದಲ್ಲಿರುವ ಶ್ರೀ ನಿರಂಜನ್ ಒಡೆಯರ್‌ರವರು ಪ್ರಸ್ತುತ ಕಾಗಿನೆಲೆ ಕನಕಗುರುಪೀಠದ, ಅದ್ಯಕ್ಷರಾಗಿರುವುದನ್ನು ಗಮನಿಸಬಹುದಾಗಿದೆ.


ವಂಶವಕ್ಷ(ಒಂದನೇ ಗುಂಪು)
ಭಿಕ್ಷಾವರ್ತಿ ಶಾಂತಪ್ಪಯ್ಯ
ರೇವಪ್ಪಯ್ಯ ಒಡೆಯರ್
ಸಿದ್ದಲಿಂಗಯ್ಯ ಒಡೆಯರ್
ಎಸ್.ರೇವಪ್ಪಯ್ಯ ಒಡೆಯರ್
ಗುರುಸಿದ್ದಯ್ಯ ಒಡೆಯರ್
ರೇವಯ್ಯ ಒಡೆಯರ್
ಪರಮೇಶ್ವರ್ ಒಡೆಯರ್
ನಾಗಯ್ಯ ಒಡೆಯರ್
ನಿರಂಜನ್ ಒಡೆಯರ್
ತಿಪ್ಪಯ್ಯ ಒಡೆಯರ್
ರಾಜರಾಜೇಶ್ ಒಡೆಯರ್
ಮೃತ್ಯುಂಜಯ್ಯ ಒಡೆಯರ್
ಅರುಣೋದಯ್ಯ ಒಡೆಯರ್
ದತ್ತಕೇಶ ಒಡೆಯರ್


ವಂಶವೃಕ್ಷ (ಎರಡನೇ ಗುಂಪು)
ಓದಪ್ಪಯ್ಯ ಒಡೆಯರ್
ರುದ್ರಮುನಿ ಒಡೆಯರ್
ಚಂದ್ರಮೌಳಿ ಒಡೆಯರ್
ನಂಜುಂಡಯ್ಯ ಒಡೆಯರ್
ಉದಯಶಂಕರ್ ಒಡೆಯರ್
ಶಾಂತಮುತ್ತಯ್ಯ ಒಡೆಯರ್
ರುದ್ರಮುನಿ ಒಡೆಯರ್
ತ್ರಿಲೋಕ್ ಒಡೆಯರ್

ವಂಶವಕ್ಷ(ಮೂರನೇ ಗುಂಪು)




ಪ್ರಸ್ತುತ ೧ನೇ ಗುಂಪಗೆ ಸೇರಿದ ಶ್ರೀನಾಗಯ್ಯ ಒಡೆಯರು, ರೇವಣಸಿದ್ಧನ ಪೂಜೆ ಧಾರ್ಮಿಕ ಕಾರ್ಯಗಳ ನೇತೃತ್ವವನ್ನು ವಹಿಸಿಕೊಂಡಿದ್ದಾರೆ. ಈ ನೆಲೆಯಲ್ಲಿ ವಿಜಯದಶಮಿ, ಕಾರ್ತಿಕಮಾಸ, ಭರತಹುಣ್ಣಿಮೆ, ಶಿವರಾತ್ರಿ ಮತ್ತು ಯುಗಾದಿ ಸಂದರ್ಭಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ವಿಜಯದಶಮಿಯ ೯ನೇ ದಿನದಂದು ಬನ್ನಿಮುಡಿಯುವ, ಕಾರ್ತಿಕ ಮಾಸದ ಪೂರ್ತಿ ದೀಪೋತ್ಸವ, ಭರತ ಹುಣ್ಣಿಮೆಯಂದು ಬೇಯಿಸಿದ ನವಧಾನ್ಯಗಳ ಪ್ರಸಾದ ವಿತರಣೆ, ಶಿವರಾತ್ರಿಯಂದು ಇಡೀ ರಾತ್ರಿ ಜಾಗರಣೆ ಮಾಡಿದ ನಂತರ ಮಠದ ಒಡೆಯರುಗಳ ಎಲ್ಲ ಮನೆತನದವರಿಗೂ ಪ್ರಸಾದ ವಿತರಿಸುವ ಹಾಗೂ ಯುಗಾದಿಯಂದು ಕುರುಬರೆಲ್ಲಾ ಶ್ರೀಮಠದಲ್ಲಿ ಸೇರಿ ಬೇವುಬೆಲ್ಲ ವಿನಿಮಯ ಮಾಡಿಕೊಳ್ಳುವ ಆಚರಣೆಗಳು ಸಂಪ್ರದಾಯಗಳಾಗಿ ಮುಂದುವರಿದಿವೆ. ಇಲ್ಲಿಯ ನೆಲೆಯಲ್ಲಿ ಕೆಲ ಒಡೆಯರ ಕಟ್ಟಳೆಗಳನ್ನು ಕಾಣಬಹುದು. ೧. ರೇವಣಸಿದ್ಧನಿಗೆ ಸಂಬಂಧಿಸಿದ ಎಲ್ಲ ಧಾರ್ಮಿಕ ಆಚರಣೆಗಳಿಗೆ ಒಡೆಯರ ಅಪ್ಪಣೆಯು ಕಡ್ಡಾಯವಾಗಿದೆ. ೨. ಒಡೆಯರ ಅಪ್ಪಣೆಯಿಲ್ಲದೆ ಇಲ್ಲಿಯ ದೈವವನ್ನು ಯಾವುದೇ ಧಾರ್ಮಿಕ ಕಾರ್ಯಗಳಿಗೆ ಹೊರತೆಗೆದುಕೊಂಡು ಹೋಗುವಂತಿಲ್ಲ ೩. ರೇವಣಸಿದ್ಧನಿಗೆ ಅರ್ಪಿಸಿದ ಕರಡಿಗೆಗಳನ್ನು, ಒಡೆಯರನ್ನು ಹೊರತುಪಡಿಸಿ ಯಾರೂ ಮುಟ್ಟುವಂತಿಲ್ಲ. ೪. ಈ ಭಾಗದ ಪೂಜಾರಿಗಳ, ಗಣಾಚಾರಿಗಳ, ಭಂಡಾರಿಗಳ, ಈರಗಾರರ ಪಟ್ಟಗಳನ್ನು, ಒಡೆಯರ ವಂಶಸ್ಥರೇ ಮಾಡುವುದು ಕಡ್ಡಾಯವಾಗಿದೆ. ಒಡೆಯರ ಸಾಮಾಜಿಕ ಮತ್ತು ವೈಯಕ್ತಿಕ ಆಚರಣೆಗಳು ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಮುಂದುವರಿಕೆಗಳಾಗಿವೆ.

೬. ಶಿವನಿ : ತರೀಕೆರೆ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ

ತರೀಕೆರೆ ತಾಲ್ಲೂಕು ಶಿವನಿ ಗ್ರಾಮವು ರೇವಣಸಿದ್ಧನ ಪುರಾತನ ನೆಲೆಯಾಗಿದೆ. ಈ ಗ್ರಾಮದಲ್ಲಿ ಸುಮಾರು ೫೦೦–೬೦೦ ವರುಷಗಳಷ್ಟು ಹಳೆಯದಾದ ಕಲ್ಲುಮಣ್ಣಿನಿಂದ ನಿರ್ಮಿತವಾದ ಗೋಡೆ ಹಾಗೂ ಕರಿ ಹೆಂಚಿನ ಛಾವಣಿಯ ಶ್ರೀ ರೇವಣಸಿದ್ಧೇಶ್ವರ ಸಿಂಹಾಸನವಿದೆ. ದೇವಾಲಯವು ಗರ್ಭಗುಡಿ, ಪ್ರಾಂಗಣ ಮತ್ತು ಪಡಸಾಲೆಗಳನ್ನು ಒಳಗೊಂಡಿದೆ. ಗರ್ಭಗುಡಿಯ ರೇವಣಸಿದ್ಧನ ಪೀಠದಲ್ಲಿ ಕಪಾಲ, ಸಾಲಿಗ್ರಾಮ, ಲಿಂಗು, ಶಿವಪಾರ್ವತಿ ಪಾದುಕೆ, ಬಸವಣ್ಣ, ಬೆತ್ತ ಹಾಗೂ ರುದ್ರಾಕ್ಷಿಗಳನ್ನು ಸ್ಥಾಪಿಸಲಾಗಿದೆ. ಈ ಪೀಠದ ಬಲಭಾಗದಲ್ಲಿ ಹಳೇಪೀಠವಿದ್ದು, ಅಲ್ಲಿ ಲಿಂಗು ಮತ್ತು ಶಂಖವನ್ನು ಇಡಲಾಗಿದೆ. ಪೀಠದಲ್ಲಿ ಸ್ಥಾಪಿಸಲಾದ ಕಪಾಲ, ಸಾಲಿಗ್ರಾಮ, ಬೆತ್ತ ಇತ್ಯಾದಿಗಳನ್ನು ಗಮನಿಸಿದಾಗ ಈ ಸಿಂಹಾಸನವು ರೇವಣಸಿದ್ಧ ಸಂಪ್ರದಾಯದ ಬಹುಪುರಾತನ ನೆಲೆಯಾಗಿದೆ.

ಶ್ರೀ ಸಿಂಹಾಸನಕ್ಕೆ ೧. ತಾಳೆಕಟ್ಟೆ ಹಿರಿಯಯ್ಯ ೨. ಮುಗಳಿ ಹುಚ್ಚೀರ ದೀಮಣ್ಣ ೩. ಶಿವನಿ ದಳವಾಯಿ ಸಂಗಣ್ಣ ೪. ಸೊಲ್ಲಾಪುರ ಬೀರಲಿಂಗೇಶ್ವರ ೫. ಗಡಿಹಳ್ಳಿ ಬಸವಣ್ಣ ಬೀರಲಿಂಗೇಶ್ವರ ೬. ಹನುಮನಹಳ್ಳಿ ಬೀರಲಿಂಗೇಶ್ವರ ೭. ಹೊಸೂರು ಬೀರಲಿಂಗೇಶ್ವರ– ಒಟ್ಟು ೭ ಬುಡಕಟ್ಟುಗಳು ಹಾಗೂ ಶಿವನಿ ಹರಿವಾಣವು ಇರುವುದು. ಈ ನೆಲೆಯಲ್ಲಿ ನಡೆಯುವ ಧಾರ್ಮಿಕ ಆಚರಣೆಗಳು ಇಂದಿಗೂ ತಮ್ಮ ಮೂಲರೂಪದಲ್ಲಿ ಆಚರಿಸಲ್ಪಡುವುದು ವಿಶೇಷವಾಗಿದೆ.

ಈ ನೆಲೆಯಲ್ಲಿ ೧) ೧೦೧ ಎಡೆ ಬಿಲ್ಲುಗೂಡಿನ ಸೇವೆ ೨) ಅಂಬು ಹೊಡೆಯುವ ಸೇವೆ ೩)ಹರಿವಾಣ ದೀಕ್ಷೆ ೪) ದಳವಾಯಿ ದೀಕ್ಷೆ(ಅಧ್ಯಾಯ –೪ರಲ್ಲಿ ಚರ್ಚಿಸಲಾಗಿದೆ) ಯಂತಹ ವಿಶೇಷ ಆಚರಣೆಗಳು ಹಾಗೂ ಪ್ರತಿ ೧೨ ವರ್ಷಕ್ಕೊಮ್ಮೆ ಬಹಳ ವಿಶೇಷವಾಗಿ ರೇವಣಸಿದ್ಧನ ಜಾತ್ರೆ ನಡೆಯುವುದು (ಅಧ್ಯಾಯ ೪ರಲ್ಲಿ ಚರ್ಚಿಸಲಾಗಿದೆ). ಈ ನೆಲೆಯ ಪ್ರಾರಂಭದಿಂದಲೂ ಕುರುಬ ಜನಾಂಗದ ಸಾವಂತ ಕುಲದ ಒಡೆಯರುಗಳೆ ರೇವಣಸಿದ್ಧನ ಪೂಜೆಯ ಹಕ್ಕುಳ್ಳವರಾಗಿದ್ದಾರೆ ಮತ್ತು ಸಮಾಜದ ಧಾರ್ಮಿಕ ಕಾರ್ಯಗಳ ನೇತೃತ್ವ ವಹಿಸಿಕೊಳ್ಳುವರು. ಶ್ರೀ ರೇವಪ್ಪಯ್ಯ ಒಡೆಯರ ಸಂತತಿಯವರ ಮೂರು ಒಡೆಯರ ಕುಟುಂಬಗಳಿವೆ. ಇವರೆ ಸರದಿಯಂತೆ ಇಲ್ಲಿಯ ರೇವಣಸಿದ್ಧನ ಪೂಜಾರಿಗಳಾಗಿ, ಕುರುಬ ಜನಾಂಗದ ಧಾರ್ಮಿಕ ಆಚರಣೆಗಳ ಪೌರೋಹಿತ್ಯವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಪ್ರಸ್ತುತ ಶ್ರೀ ಅಜ್ಜಪ್ಪ ಒಡೆಯರ ವಂಶಸ್ಥರಾದ ಶ್ರೀ ರೇವಣ್ಣ ಒಡೆಯರರವರು ಪ್ರಸ್ತುತ ರೇವಣಸಿದ್ಧನ ಈ ನೆಲೆಯ ಒಡೆಯರುಗಳಾಗಿದ್ದಾರೆ. ಒಡೆಯರುಗಳಿಗೆ ಸಂಬಂಧಿಸಿದ ವೈಯಕ್ತಿಕ ಆಚಾರ ವಿಚಾರಗಳೂ ಸರೂರು ಶಾಂತಮುತ್ತಯ್ಯ ಸಂಪ್ರದಾಯದಂತಿವೆ. ಒಡೆಯರ ವಂಶವೃಕ್ಷ ಕೆಳಗಿನಂತಿದೆ.




೭. ಹುಲ್ಲೂರು : ಚಿತ್ರದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರ ಚಿತ್ರುದುರ್ಗದಿಂದ ೧೫ ಕಿ.ಮೀ. ದೂರದಲ್ಲಿ ಹುಲ್ಲೂರು ಗ್ರಾಮವಿರುವುದು. ಈ ಗ್ರಾಮದಿಂದ ೧.೦೦ ಕಿ.ಮೀ. ದೂರದ ಹೊರವಲಯದಲ್ಲಿ ರೇವಣಸಿದ್ಧೇಶ್ವರ(ಸಿದ್ಧೇಶ್ವರ) ದೇವಾಲಯವಿದೆ. ನಿರ್ಮಿತ ಶೈಲಿ,ವಿನ್ಯಾಸ ಬಳಸಲಾದ ಸಾಮಗ್ರಿಗಳು, ಗೋಪುರಗಳನ್ನು ಗಮನಿಸಿದಾಗ ದೇವಾಲಯವು ಐದು ಶತಮಾನಗಳಷ್ಟು ಪುರಾತನವೆಂದು ಅಭಿಪ್ರಾಯಿಸಬಹುದಾಗಿದೆ. ದೇವಾಲಯವು ೫ ಪ್ರಾಂಗಣಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ರೇವಣಸಿದ್ಧೇಶ್ವರ ಗೌರಮ್ಮ ಮತ್ತು ಉದ್ಭವ ಲಿಂಗಗಳಿವೆ, ೨ನೇ ಪ್ರಾಂಗಣದಲ್ಲಿ ಬಸವ, ಮೂರನೇ ಪ್ರಾಂಗಣದಲ್ಲಿ ನಾಗರಕಲ್ಲು, ನಾಲ್ಕನೇ ಪ್ರಾಂಗಣದ (ಹೋಮಕುಂಡ ಪ್ರಾಂಗಣ) ಕಲ್ಲುಕಂಬಗಳ ಮೇಲೆ ಬೀರಪ್ಪ, ಟಗರು, ಶಿವ ಮತ್ತು ಆಂಜನೇಯ ದೇವರುಗಳನ್ನು ಕೆತ್ತಲಾಗಿದೆ. ಐದನೇಯ ಪ್ರಾಂಗಣದ ಎಡ ಮತ್ತು ಬಲ ಬದಿಯಲ್ಲಿ ಭಕ್ತಾದಿಗಳು ಕುಳಿತುಕೊಳ್ಳಲು ಅನುವಾಗುವಂತೆ ಎತ್ತರದ ವೇದಿಕೆಗಳಿವೆ.

ಈ ದೇವಾಲಯದ ಕಂಬಗಳ ಮೇಲೆ ಕೆತ್ತಲಾಗಿರುವ ಬೀರಪ್ಪ, ಟಗರು ಇತ್ಯಾದಿ ವಿಗ್ರಹಗಳನ್ನು ಗಮನಿಸಿದಾಗ, ದೇವಾಲಯುವು ಈ ವೊದಲು ಬೀರದೇವರ ದೇವಾಲಯವಾಗಿರಬಹುದಾಗಿದೆ. ಗರ್ಭಗುಡಿಯಲ್ಲಿ ಇಂಗಳೇಶ್ವರ ತಪೋನಂದಿ ಬೆಟ್ಟದಲ್ಲಿರುವ ರೇವಣಸಿದ್ಧನ ನೆಲೆಯಲ್ಲಿ ಸ್ಥಾಪಿಸಲಾಗಿರುವ ರೇವಣಸಿದ್ಧನಂತೆ, ಇಲ್ಲಿಯೂ ಅದೇ ಮಾಧರಿಯ ರೇವಣಸಿದ್ಧನನ್ನು ಸ್ಥಾಪಿಸಲಾಗಿದೆ. ದೇವಾಲಯದ ಎದುರುಗಡೆ ಅತಿ ದೊಡ್ಡದಾದ ತೂಗುಯ್ಯಾಲೆಯಕಂಬ ಹಾಗೂ ದೀಪಕಂಬಗಳು ಇರುವುದು ಇಲ್ಲಿಯ ವಿಶೇಷತೆಯಾಗಿದೆ. ಹುಲ್ಲೂರು ರೇವಣಸಿದ್ಧನಿಗೆ ೧)ರಾಮಾಗನಹಳ್ಳಿ ಬೀರದೇವರು ೨)ಬಾಡಾಬೀರದೇವರು ೩)ಲಿಂಬೇರು ಬೀರದೇವರು ೪)ಮಾಯಕೊಂಡ ಬೀರದೇವರು ೫)ಜಟಿಲದೋಣಿ ಬೀರದೇವರು

೬)ಹಿಂಡುಗನಹಳ್ಳಿ ಬೀರದೇವರು ೭)ನಲಗುಂದ ಬೀರದೇವರು ೮) ಹುಂಡಿಮಡ ಬೀರದೇವರು ೯)ಎಮ್ಮೆನೂರು ಬೀರದೇವರು ೧೦)ಕುರುಬರಹಳ್ಳಿ ಬೀರದೇವರು ೧೧)ಮಠದಹಟ್ಟಿ ಬೀರದೇವರು ೧೨)ಮಾಳಪ್ಪನಹಟ್ಟಿ ಬೀರದೇವರು ೧೩)ಹದಡಿ ಬೀರದೇವರು ೧೪)ಬಟ್ಲಿಕಟ್ಟೆ ಬೀರದೇವರು ೧೫)ಮಿಟ್ಲಕಟ್ಟೆ ಬೀರದೇವರು ೧೬)ಹಂದನೂರು ಬೀರದೇವರುಗಳ ಒಟ್ಟು ೧೬ ಗುಡಿಕಟ್ಟುಗಳಿವೆ. ಶ್ರಾವಣಮಾಸದಲ್ಲಿ ೧೦ ಬಿಲ್ವಪತ್ರೆ ಅಭಿಷೇಕ ಪೂಜೆ; ಕಾರ್ತಿಕ ಮಾಸದಲ್ಲಿ ತಿಂಗಳುದ್ದಕ್ಕೂ ದೀಪೋತ್ಸವ, ರುದ್ರಾಭಿಷೇಕ, ಭಜನೆಗಳು ಶಿವರಾತ್ರಿಯಂದು ೧೦೧ ಬಿಲ್ವಪತ್ರೆ ಪೂಜೆ ರಾತಿಯಿಡೀ ಭಜನೆ ಜಾಗರಣೆಗಳು ಈ ನೆಲೆಯಲ್ಲಿ ಇಂದಿಗೂ ನಡೆಯುತ್ತಲಿವೆ. ಪ್ರಸ್ತುತ ಶಾಂತರಾಜ್ ಒಡೆಯರ್ ಮತ್ತು ಶ್ರೀ ಚಂದ್ರಶೇಖರ್ ಒಡೆಯರ್ ಸಹೋದರರು ಶ್ರೀಮಠದ ಒಡೆಯರುಗಳಾಗಿದ್ದಾರೆ. ಒಡೆಯರ ವಂಶವೃಕ್ಷ ಕೆಳಗಿನಂತಿದೆ.




ಒಡೆಯರ ವೈಯಕ್ತಿಕ ಆಚಾರ ವಿಚಾರಗಳು ಸರೂರು ಶಾಂತಮುತ್ತಯ್ಯನ ಸಂಪ್ರದಾಯದ ಅನುಕರಣೆಗಳಾಗಿವೆ. ಇಲ್ಲಿನ ಒಡೆಯರುಗಳು ರೇವಣಸಿದ್ಧನ ಪೂಜೆಯಲ್ಲದೆ, ಬೀರದೇವರ ಹೊಳೆ ಪೂಜೆಯನ್ನೂ ಇಲ್ಲಿಯ ಒಡೆಯರುಗಳೇ ಮಾಡುವರು.

೮. ಗೋವನಕೊಪ್ಪ : ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ

ಗೋವನಕೊಪ್ಪ ಗ್ರಾಮವು ಧಾರವಾಡದಿಂದ ೩೦.೦೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ರೇವಣಸಿದ್ಧನ ಗುಡಿಗಳಿವೆ. ಒಂದು ಮಣ್ಣಿನ ಮನೆಯಲ್ಲಿದ್ದರೆ; ಇನ್ನೊಂದು ಗಿಡಮುದಿ ಮನೆತನದವರ ಮನೆಯಲ್ಲಿದೆ. ಗ್ರಾಮದಲ್ಲಿ ರೇವಣಸಿದ್ಧ ಸಂಪ್ರದಾಯದ ಒಡೆಯರ ೪೦ ಮನೆತನಗಳಿವೆ. ಈ ಎರಡೂ ಗುಡಿಗಳಲ್ಲಿ ರೇವಣಸಿದ್ಧನನ್ನು ಗದ್ದುಗೆಯ ಮೇಲೆ ಡೊಳ್ಳುಪಾಲಿಕೆ, ಸತ್ತಿಗೆ, ಗುಂಡಗೊಪ್ಪಿ, ಶಂಖ, ಜಾಗಟೆ, ಗಂಟೆ ಬೆತ್ತ ಹಾಗೂ ಮುಂಬಲಿಗಳ (ಗೆಜ್ಜೆಗಳ) ಸಮೇತ ಸ್ಥಾಪಿಸಲಾಗಿದೆ. ಸ್ಥಳೀಯರ ಮಾಹಿತಿಯ ಮೇರೆಗೆ ಈ ಗುಡಿಗಳು ४-೫ ಶತಮಾನಗಳಷ್ಟು ಪುರಾತನವಾಗಿದೆ. ಅಂದಿನಿಂದ ಇಂದಿನವರೆಗೂ ಈ ಎರಡೂ ಗುಡಿಗಳಲ್ಲಿ ರೇವಣಸಿದ್ಧನ ಪೂಜೆ ಪುನಸ್ಕಾರಗಳು ನಿರಂತರವಾಗಿ ನಡೆಯುತ್ತಲಿವೆ.

ದಸರಾ ಹಬ್ಬದ ಸಂದರ್ಭದಲ್ಲಿ ರೇವಣಸಿದ್ಧರ ಪಲ್ಲಕ್ಕಿ ಉತ್ಸವ ಇಲ್ಲಿ ನಡೆಯುತ್ತದೆ. ಈ ಸಂದರ್ಭದಲ್ಲಿ ಊರಿನ ಪೂರ್ವ ದಿಕ್ಕಿನಲ್ಲಿ ಅನತಿದೂರದಲ್ಲಿ ಇರುವ ಬನ್ನಿ ಮರದವರೆಗೆಗೆ; ರೇವಣಸಿದ್ಧೇಶ್ವರ ಪಲ್ಲಕ್ಕಿಯನ್ನು ತೆಗೆದುಕೊಂಡು ಹೋಗಿ ಶಮಿಗೆ ಪೂಜೆಯನ್ನು ಸಲ್ಲಿಸಿ, ಬನ್ನಿಯನ್ನು ಮುಡಿಯುವುದು ಇಲ್ಲಿಯ ಪದ್ಧತಿಯಾಗಿದೆ. ಈ ಸಂದರ್ಭದಲ್ಲಿ ಮೈಲಾರಲಿಂಗ, ಗ್ರಾಮದೇವತೆ ಧ್ಯಾಮವ್ವ, ಕರಿಯಮ್ಮ, ಬಸವಣ್ಣ, ಈಶ್ವರ ಮತ್ತು ಇಟ್ಟೋಬ ದೈವಗಳು ಬಿರುದು ಬಾವಲಿಗಳೊಂದಿಗೆ ಬನ್ನಿ ಮರದಡಿ ಸೇರುವ ಮೂಲಕ ಬನ್ನಿ ಮುಡಿಯುವ ಸಂಪ್ರದಾಯವು ಜರುಗುವುದು. ಗಿಡಮುದಿ ವಂಶಸ್ಥರ ಮನೆಯಲ್ಲಿರುವ ರೇವಣಸಿದ್ಧನಿಗೆ, ಅವರ ವಂಶಸ್ಥರೇ ಅಂದಿನಿಂದ ಇಂದಿನವರೆಗೂ ಪೂಜಾರಿಗಳಾಗಿದ್ದಾರೆ. ಗಿಡಮುದಿ ವಂಶಸ್ಥರ ವಂಶವೃಕ್ಷ ಕೆಳಗಿನಂತಿದೆ.



ಇತ್ತೀಚಿನ ದಿನಗಳಲ್ಲಿ ಈ ಒಡೆಯರುಗಳು ಪ್ರತಿವರ್ಷ ಶಿವರಾತ್ರಿಯಂದು ಸರೂರಿಗೆ ಕಡ್ಡಾಯವಾಗಿ ಹೋಗಿಬರುವ ವಾಡಿಕೆಯನ್ನು ಬೆಳಸಿಕೊಂಡಿದ್ದಾರೆ. ಗ್ರಾಮದಲ್ಲಿ ಕೋಟೆನ್ನವರ ಬೆಡಗಿಗೆ ಸೇರಿದ ಅಮೋಘಸಿದ್ಧ ಪರಂಪರೆಯ ಒಡೆಯರುಗಳು ಹಾಗೂ ಸಾವಂತಕುಲ ಬೆಡಗಿಗೆ ಸೇರಿದ ಒಡೆಯರುಗಳು ವಾಸಿಸುವವರು.

ಹಾಲುಮತ ಸಮಾಜದ ಮದುವೆ ಹಾಗೂ ಇತರೆ ಮಂಗಳ ಕಾರ್ಯಗಳಲ್ಲಿ ಒಡೆಯರುಗಳ ನೇತೃತ್ವ ಪ್ರಧಾನವಾಗಿದೆ. ಇಲ್ಲಿಯ ಒಡೆಯರುಗಳು ಲಿಂಗಧಾರಣೆ ಮಾಡಿಕೊಂಡವರಾಗಿದ್ದಾರೆ. ಮತ್ತು ಹಾಲುಮತ ಜನಾಂಗದವರ ಜೊತೆ ವೈವಾಹಿಕ ಸಂಬಂಧವುಳ್ಳವರಾಗಿದ್ದಾರೆ. ಈ ಸಂದರ್ಭದಲ್ಲಿ ಒಡೆಯರ ಹೆಣ್ಣನ್ನು ಹಾಲುಮತಸ್ಥ ವರನಿಗೆ ಕೊಟ್ಟು ಮದುವೆಯಾದ ಸಂದರ್ಭದಲ್ಲಿ; ವರನ ಮನೆಯವರು ಕಡ್ಡಾಯವಾಗಿ ಸಸ್ಯಾಹಾರಿಗಳಾಗಬೇಕೆಂಬ ಕಟ್ಟಳೆ ಪ್ರಚಲಿತದಲ್ಲಿದೆ. ಇಲ್ಲಿಯ ರೇವಣಸಿದ್ಧನ ದೇವಾಲಯದೊಳಗೆ ಒಡೆಯರನ್ನು ಹೊರತುಪಡಿಸಿ ಹಾಲುಮತಸ್ಥರಿಗೂ ಪ್ರವೇಶ ನಿಷೇಧವಿದೆ.

೯. ಕೊಟಬಾಗಿ : ಧಾರವಾಡ ತಾಲ್ಲೂಕು ಧಾರವಾಡ ಜಿಲ್ಲೆ

ಕೊಟಬಾಗಿ ಗ್ರಾಮವು ತಾಲ್ಲೂಕು ಕೇಂದ್ರ ಧಾರವಾಡದಿಂದ ೩೦.೦೦ ಕಿ.ಮಿ. ದೂರದಲ್ಲಿದೆ. ಗ್ರಾಮದಲ್ಲಿ ೪-೫ ಶತಮಾನಗಳಷ್ಟು ಪುರಾತನವಾದ ಪ್ರಸ್ತುತ ಒಡೆಯರು ವಾಸಿಸುತ್ತಿರುವ


ಮನೆಯಲ್ಲಿಯೇ ರೇವಣಸಿದ್ಧನನ್ನು ಸ್ಥಾಪಿಸಿದ ಗುರುಮಠವಿದೆ. ಪಾಲಿಕೆಯ ಗದ್ದುಗೆಯಲ್ಲಿ ರೇವಣಸಿದ್ಧ, ಕರಿಸಿದ್ಧರ, ಪಡೆಸಿದ್ಧ ದೈವಗಳನ್ನು ಸ್ಥಾಪಿಸಿದ್ದಾರೆ. ಈ ಪೈಕಿ ವಿಶೇಷವಾಗಿ ರೇವಣಸಿದ್ಧನ ಮುಖವಾಡದ ಮೇಲೆ ಪೇಟವನ್ನು ತೊಡಿಸಿರುವುದು, ನೆಲೆಯ ವಿಶೇಷವಾಗಿದೆ. ಗದ್ದುಗೆಯ ಎದುರುಬದಿಯ್ಲಲಿ ಎರಡು ನಂದಾದೀಪವನ್ನು ಬೆಳಗಿಸಲಾಗಿದೆ. ಮೂರು ಅಂಕಣದ ಗುರುಮಠದಲ್ಲಿ ಪ್ರತಿದಿನ ೨ ಬಾರಿ ಪೂಜೆ ನಡೆಯುತ್ತದೆ. ಹಾಲುಮತಸ್ಥರ ಧಾರ್ಮಿಕ ಆಚರಣೆಗಳು ಒಡೆಯರುಗಳ ನೇತೃತ್ವದಲ್ಲಿಯೇ ನಡೆಯುತ್ತವೆ. ಇಲ್ಲಿಯ ಒಡೆಯರುಗಳು ಅಮೋಘಿಸಿದ್ಧ ಪರಂಪರೆಯ ಒಡೆಯರೊಂದಿಗೆ ಮತ್ತು ಹಾಲುಮತಸ್ಥರೊಂದಿಗೆ ವೈವಾಹಿಕ ಸಂಬಂಧವುಳ್ಳವರಾಗಿದ್ದಾರೆ. ಪ್ರಸ್ತುತ ಶಿವಯ್ಯ ಅಯ್ಯಪ್ಪ ಒಡೆಯರ್‌ರವರು ಗುರುಮಠದ ಒಡೆಯರುಗಳಾಗಿದ್ದಾರೆ.

೧೦. ಭೆಂಡವಾಡ: ರಾಯಭಾಗ ತಾಲ್ಲೂಕು ಬೆಳಗಾವಿ ಜಿಲ್ಲೆ

ಭೆಂಡವಾಡ ಗ್ರಾಮವು ಗೋಕಾಕನಿಂದ ೩೫.೦೦ ಕಿ.ಮೀ ದೂರದಲ್ಲಿದೆ. ಗ್ರಾಮದಲ್ಲಿ ಪುರಾತನ ರೇವಣಸಿದ್ಧೇಶ್ವರ ದೇವಾಲಯವಿದೆ. ದೇವಾಲಯದ ಪ್ರವೇಶದ್ವಾರ ಹಾಗೂ ಸುತ್ತಲೂ ನಿರ್ಮಿಸಿರುವ ಆವರಣದಗೋಡೆಗಳು ವಿಶೇಷವಾಗಿದೆ. ಈ ಆವರಣದ ಮಧ್ಯದಲ್ಲಿ ದೇವಾಲಯವೂ, ಸುತ್ತಲೂ ತೆರೆದ ಪ್ರಾಂಗಣವಿದೆ. ಲಗತ್ತಾಗಿ ವಿರಕ್ತಮಠವಿದೆ. ರೇವಣಸಿದ್ಧೇಶ್ವರ ದೇವಾಲಯ ವಿರಕ್ತಮಠಗಳಿಗೆ ತಮ್ಮದೇ ಆದ ಸ್ವತಂತ್ರ ಆಡಳಿತ ಮಂಡಳಿಗಳಿವೆ. ಇಲ್ಲಿನ ರೇವಣಸಿದ್ಧೇಶ್ವರ ದೇವಾಲಯವು ಎಲ್ಲ ಸಮುದಾಯದ ಭಕ್ತರನ್ನು ಹೊಂದಿದ್ದು, ಭಾವೈಕ್ಯತೆಯ ನೆಲೆಯಾಗಿದೆ. ರೇವಣಸಿದ್ಧನ ಪೂಜೆಯ ಹಕ್ಕು ಲಿಂಗಾಯತ ಸಮಾಜದವರಿಗೆ ಸೇರಿದುದಾಗಿದೆ. ಗ್ರಾಮದಲ್ಲಿ ಪೂಜಾರರ ೭ ಮನೆತನಗಳಿವೆ. ಈ ಮನೆತನದವರ ಜೀವನೋಪಾಯಕ್ಕಾಗಿ, ೧೦೦ ಎಕರೆ ಭೂಮಿಯನ್ನು ಮೀಸಲಿರಿಸಿದ್ದಾರೆ. ಪ್ರತಿವರ್ಷ ದೇವಾಲಯದ ಭೂಮಿಯನ್ನು ಬೆಳೆ ಬೆಳೆಯಲು ರೈತರಿಗೆ ಬಹಿರಂಗ ಹರಾಜಿನ ಮೂಲಕ ನೀಡುತ್ತಾರೆ. ಬಂದ ಆದಾಯವನ್ನು ಈ ೭ ಮನೆತನಗಳಿಗೆ ಆಡಳಿತ ಮಂಡಳಿಯವರು ಹಂಚುವರು. ಸರದಿಯ ಮೇಲೆ ಹಂಚಲ್ಪಡುವ ಪೂಜಾರಿಕೆಯ ಹಕ್ಕನ್ನು ಪ್ರಸ್ತುತ ಶ್ರೀಮಲ್ಲಿಕಾರ್ಜುನ ಮಹದೇವ ಪೂಜಾರಿಯವರು ಪಡೆದಿರುತ್ತಾರೆ. ಈ ನೆಲೆಯಲ್ಲಿ ಪ್ರತಿವರ್ಷ ದವನದ ಹುಣ್ಣಿಮೆಯಂದು ಮೂರು ದಿನಗಳ ಕಾಲ ನಡೆಯುವ ರೇವಣಸಿದ್ಧನ ಜಾತ್ರೆಯು ಬಹುವಿಶೇಷವಾಗಿದೆ. (ವಿವರಗಳನ್ನು ಅಧ್ಯಾಯ-೪ರಲ್ಲಿ ಚರ್ಚಿಸಲಾಗಿದೆ). ಶ್ರಾವಣಮಾಸದಲ್ಲಿ ಇತರ ನೆಲೆಗಳಲ್ಲಿರುವಂತೆ ವಿಶೇಷ ಆಚರಣೆಗಳು ನಡೆಯುತ್ತವಾದರೂ; ಕೂಸು ಹಾರಿಸುವಿಕೆಯಂತಹ ಆಚರಣೆಗಳು ಜರುಗುವುದು (ವಿವರ ಅಧ್ಯಾಯ-೪ರಲ್ಲಿ ವಿವರಿಸಲಾಗಿದೆ) ವಿಶೇಷವಾಗಿದೆ.

೧೧. ಹುಣಸಿಹೊಳೆ: ಸುರಪುರ ತಾಲ್ಲೂಕು ಯಾದಗಿರಿ ಜಿಲ್ಲೆ

ಹುಣಸಿಹೊಳೆ ಗ್ರಾಮವು ತಾಲ್ಲೂಕು ಕೇಂದ್ರ ಸುರಪುರದಿಂದ ೨೫.೦೦ ಕಿ.ಮೀ.ಗಳ ದೂರದಲ್ಲಿದೆ. ಎತ್ತರದ ಪ್ರದೇಶದಲ್ಲಿ ನಿರ್ಮಾಣವಾಗಿರುವುದು ಗ್ರಾಮದ ವಿಶೇಷತೆಯಾಗಿದೆ. ಗ್ರಾಮದಲ್ಲಿ ಶ್ರೀರೇವಣಸಿದ್ಧೇಶ್ವರ ಗುರುಮಠವಿದ್ದು, ಗರ್ಭಗುಡಿ, ಪ್ರಾಂಗಣವನ್ನು ಹೊಂದಿದೆ. ಗರ್ಭಗುಡಿಯ ಜಗುಲಿಯ ಮೇಲೆ ರೇವಣಸಿದ್ಧ, ಬೀರಪ್ಪ, ಮಲ್ಲಯ್ಯ ದೇವರುಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ಒಂದು ತ್ರಿಶೂಲ, ಎರಡು ಶಂಖು, ಎರಡು ಬೆತ್ತ, ಗುಂಡುಗೊಪ್ಪ, ತಾಮ್ರದ ಬಿಂದಿಗೆ ಮತ್ತು ಜಾಗಟೆಗಳನ್ನು ಇರಿಸಲಾಗಿದೆ. ಶ್ರೀಗುರುಮಠಕ್ಕೆ ೧)ಕಾಮನಗಟಗಿ ೨)ಬೆಸ್ತಹಾಳ ೩)ಯಾದಲುಬಾವಿ ೪)ತ್ವಾಳಗನ್ನಿ ೫)ಓಂಬಾಳಕಲ್ಲು ೬)ಶಿನೇಶ್ವರ ೭)ಲಿಂಗಾಪುರ ೮)ನಿಂಜಲಾಪುರ ೯) ಕಕ್ಕೇರಿ ೧೦)ಬಂದೊಡ್ಡಿ ೧೧)ಗುಡುಗುಂಪೆದಡ್ಡಿ ೧೨)ಮಲವಂತರೆಡ್ಡಿ ೧೩)ವೇರಗಾರದಡ್ಡಿ ೧೪)ಜಂಪರದಡ್ಡಿ ೧೫)ಯಲಗರದಡ್ಡಿ ೧೬)ಹುಣಸಿಹೊಳೆ ೧೭)ತಿಂತಣಿ ೧೮)ಹಾಲ್ಬಾಯಿ ೧೯)ದೇವರಕಲ್ಲು ೨೦)ದೇವೂರು ೨೧)ಹಳ್ಳಳ್ಳಿ ೨೨)ಕಡಿವೇಮಟ್ಟಿ ೨೩)ಕುಂಬಾರಪೇಟೆ ೨೪)ಮಲ್ಲಿಬಾವಿ ೨೫)ಯಮ್ಮಿಡಗಿ ೨೬)ಬೇವಿನಾಳ ೨೭)ಚಂದ್ರಲಾವು ೨೮)ದೇವರಗುಡ್ಡ ೨೯)ದೇವೇಕೆರೆ ೩೦)ಯಮನೂರು ೩೧)ಹಾಲಗೇರಿ ೩೨)ಹುಂಡೇಕಲ್ಲು ಮುಂತಾದ ಹಳ್ಳಿಗಳ ಒಕ್ಕಲುಗಳು ಸೇರುತ್ತವೆ. ಅಂದಿನಿಂದ ಇಂದಿನವರೆಗೂ ಹಾಲುಮತದ ಒಡೆಯರುಗಳೇ ಗುರುಮಠದ ಪೂಜೆಯ ಹಕ್ಕನ್ನು ಪಡೆದವರಾಗಿದ್ದಾರೆ. ಪ್ರಸ್ತುತ ಲಿಂಗಯ್ಯ ಗುರುವಿನವರು ಒಡೆಯರಾಗಿದ್ದಾರೆ. ಗುರುಮಠದ ವಂಶವೃಕ್ಷ ಈ ಕೆಳಗಿನಂತಿವೆ.




೧೨. ಬಸವಾಪಟ್ಟಣ : ಗಂಗಾವತಿ ತಾಲ್ಲೂಕು ಕೊಪ್ಪಳ ಜಿಲ್ಲೆ

ಕೊಪ್ಪಳ ಜಿಲ್ಲೆಯ ಗಂಗಾವತಿ ಪಟ್ಟಣದ ಒಂದು ಭಾಗವಾಗಿರುವ ಬಸವಾಪಟ್ಟಣವು ರೇವಣಸಿದ್ಧ ಪರಂಪರೆಯ ಗುರುವರ್ಗದವರ ಪ್ರಮುಖ ನೆಲೆಯಾಗಿದೆ. ಇಲ್ಲಿನ ನಂಜುಂಡೇಶ್ವರ ಮಠವು ತುಂಬಾ ಪ್ರಸಿದ್ಧಿಯಾಗಿದೆ. ಹೊಸಪೇಟೆಯು ಈ ಮಠದ ಮೂಲನೆಲೆಯಾಗಿದೆ. ನಂಜುಂಡಯ್ಯ ಮುತ್ತ್ಯ ಎಂಬುವವರು ಇಲ್ಲಿ ಬಂದು ನೆಲೆಸಿ ಈ ಭಾಗದ ಕುರುಬ ಸಮಾಜದ ಒಳಿತಿಗಾಗಿ ದುಡಿಯುತ್ತ ಅನೇಕ ಪವಾಡಗಳನ್ನು ಮಾಡಿದರು. ಹಾಗೂ ಭಕ್ತರ ಸಹಾಯಕದಿಂದ ಒಂದು ಮಠವನ್ನು ಇಲ್ಲಿ ಸ್ಥಾಪಿಸಿದರು ಎಂದು ಸ್ಥಳೀಯರು ಹೇಳುತ್ತಾರೆ.

ಈ ಮಠವು ರೇವಣಸಿದ್ಧ ಪರಂಪರೆಯ ಮಠವಾಗಿದ್ದರೂ ನಂಜುಂಡಯ್ಯ ಮುತ್ತ್ಯಾನ ಪ್ರಭಾವದಿಂದ ಶ್ರೀಮಠಕ್ಕೆ ನಂಜುಂಡೇಶ್ವರ ಮಠವೆಂದು ಕರೆಯುವುದು ವಾಡಿಕೆಯಾಗಿದೆ. ಬಸವಾಪಟ್ಟಣದಿಂದ ೩.೦೦ ಕಿ.ಮೀ. ದೂರದಲ್ಲಿ ಈ ನಂಜುಂಡೇಶ್ವರ ದೇವಾಲಯದ ಮೂಲ ಪುರಾತನ ದೇವಾಲಯವಿದೆ. ಈ ದೇವಾಲಯವು ಬಹು ಪುರಾತನವಾಗಿದ್ದು; ಶಿಥಿಲಾವಸ್ಥೆಯಲ್ಲಿದೆ. ಭತ್ತದ ಗದ್ದೆಗಳ ನಡುವೆ ಈ ದೇವಾಲಯ ಇದ್ದು ಜಲಾವೃತವಾಗಿದೆ. ಇತ್ತೀಚೆಗೆ ಹೊಸ ರೈಲು ಮಾರ್ಗವು ಇದರ ಪಕ್ಕದಲ್ಲಿಯೇ ಹಾದುಹೋಗುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಇದರ ಅಸ್ತಿತ್ವವೇ ಇಲ್ಲದಂತಾಗುವುದು. ಪ್ರಸ್ತುತ ನವೀಕರಣಗೊಂಡಿರುವ ನಂಜುಂಡೇಶ್ವರ ದೇವಾಲಯದ ಗದ್ದುಗೆಯ ಮೇಲೆ ಲಿಂಗು, ಪಾದುಕೆ, ಶಂಖವನ್ನು ಇರಿಸಲಾಗಿದೆ. ಮುಖ್ಯವಾಗಿ ಗರ್ಭಗುಡಿಯ ಎದುರು ಬದಿಯ ಗೋಡೆಯ ಗೂಡಿನಲ್ಲಿ ಬೆಳ್ಳಿಯ ರೇವಣಸಿದ್ಧನ ಮುಖವಾಡ ಇರಿಸಲಾಗಿದೆ.

ಈ ಎಲ್ಲ ಅಂಶಗಳು ಈ ದೇವಾಲಯವು ರೇವಣಸಿದ್ಧ ಪರಂಪರೆಗೆ ಸೇರಿದುದಾಗಿದೆ ಎಂದು ದೃಢಪಡಿಸುತ್ತದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಕಲ್ಯಾಣಮಂಟಪ ಮತ್ತು ಶಾಲೆಗಳನ್ನು ನಿರ್ಮಿಸಿದ್ದಾರೆ. ಈ ನೆಲೆಯಲ್ಲಿ ಪ್ರತಿ ಸೋಮವಾರ, ಶ್ರಾವಣಮಾಸ, ಕಾರ್ತಿಕಮಾಸ, ಶಿವರಾತ್ರಿಗಳಂದು ರೇವಣಸಿದ್ಧನಿಗೆ ವಿಶೇಷ ಪೂಜೆಗಳು ಮತ್ತು ಸಾಂದರ್ಭಿಕ ಆಚರಣೆಗಳು ನಡೆಯುತ್ತವೆ. ಶಿವರಾತ್ರಿಯಂದು ಪಲ್ಲಕ್ಕಿ ಉತ್ಸವ, ಕಾರ್ತಿಕ ಮಾಸದುದ್ದಕ್ಕೂ ದೀಪಾಲಂಕಾರ ಮಾಡುವ ಪದ್ಧತಿಗಳು ಜಾರಿಯಲ್ಲಿವೆ. ಈ ನೆಲೆಯ ರೇವಣಸಿದ್ಧ ಪರಂಪರೆಯ ಒಡೆಯರು ಹಾಗೂ ಅಮೋಘಸಿದ್ಧ ಪರಂಪರೆ ಒಡೆಯರ ನಡುವೆ ವೈವಾಹಿಕ ಸಂಬಂಧಗಳಿವೆ. ಒಡೆಯರ ವೈಯಕ್ತಿಕ ಆಚರಣೆಗಳು ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಮುಂದುವರಿಕೆಗಳಾಗಿವೆ. ಗ್ರಾಮದಲ್ಲಿ ಒಡೆಯರ ವಂಶಸ್ಥರಿಗೆಂದೇ ಶವಸಂಸ್ಕಾರಕ್ಕೆ ಬೇರೆಯಾಗಿಯೆ ಸ್ಮಶಾಣವನ್ನು ಮೀಸಲಿರಿಸಲಾಗಿದೆ. ಶ್ರೀದೈವದ ಒಡೆಯರುಗಳಿಗೆ ಸೇರಿದ ೩೬೦ ಹಳ್ಳಿಗಳಿದ್ದು ಭಕ್ತಾದಿಗಳು

ನೀಡುವ ದಾನಧರ್ಮಗಳು ಇಲ್ಲಿಯ ಒಡೆಯರುಗಳ ಬದುಕಿನ ವರಮಾನಗಳಾಗಿದೆ. ಪ್ರಸ್ತುತ ಸಿದ್ಧರಾಮಯ್ಯ, ನಂಜುಂಡಯ್ಯ ಗುರುವಿನರವರು ಶ್ರೀಮಠದ ಒಡೆಯರಾಗಿದ್ದಾರೆ.





೧೩. ಕಾರೇಹಳ್ಳಿ : ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ


ದೊಡ್ಡಮಠ: ಕಾರೇಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರ ಹೊಸದುರ್ಗದಿಂದ ೧೫.೦೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ರೇವಣಸಿದ್ಧನ ಚಿಕ್ಕಮಠ ಹಾಗೂ ದೊಡ್ಡಮಠಗಳೆಂಬ ಎರಡು ಮಠಗಳಿವೆ. ಈ ಪೈಕಿ ದೊಡ್ಡಮಠವನ್ನು ಹಾಲುಮತ ಗುರು ಶ್ರೀ ದೊಡ್ಡಮಠದ ರೇವಣ್ಣಸಿದ್ಧೇಶ್ವರ ಸ್ವಾಮಿ ಸಿಂಹಾಸನ ಎಂದು ಕರೆಯುತ್ತಾರೆ. ಈ ದೊಡ್ಡ ಮಠವು ಇತ್ತೀಚೆಗೆ ನವೀಕರಣಗೊಂಡಿದ್ದು ಗರ್ಭಗುಡಿಯ ಮೇಲೆ ಎತ್ತರವಾದ ಶಿಖರ ಮುಂಭಾಗದಲ್ಲಿ ಎಂಟು ಕಲ್ಲಿನ ಕಂಬಗಳನ್ನು ಹೊಂದಿರುವ ವಿಸ್ತಾರವನ್ನು ಮಂಟಪವನ್ನು ಒಳಗೊಂಡಿದೆ. ಉತ್ತರ, ಪೂರ್ವ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಮೂರು ಪ್ರವೇಶ ದ್ವಾರಗಳಿವೆ. ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಿತವಾದ ದೇವಾಲಯದ ವಾಸ್ತುವಿನ್ಯಾಸವು ಆಕರ್ಷಣೀಯವಾಗಿದೆ. ಈ ದೊಡ್ಡಮಠದ ರೇವಣಸಿದ್ಧೇಶ್ವರ ಸ್ವಾಮಿಗೆ ೧)ಕಂಸಾಗರ ೨)ಮೆಣಸಿನಹಾರ ೩)ಹಾಗಲಗೆರೆ ೪)ಕೆಲ್ಲೂರು ೫)ಹತ್ತಿಘಟ್ಟ ೬)ಹೊಸದುರ್ಗ ೭)ಹೊಸಹಳ್ಳಿ ೮)ಹುಣುಪಿನಾಳು ೯)ಬೊಜ್ಜಪ್ಪನಹಟ್ಟಿ ೧೦)ಗೊರವಿನಕಲ್ಲು ೧೧)ಎಂ.ಜಿ.ದಿಬ್ಬ ೧೨)ಕುಂಟಕೆಂಚಯ್ಯನಹಟ್ಟಿ ೧೩)ಮಾಚೇನಹಳ್ಳಿ ೧೪)ಅರಳಿಹಳ್ಳಿಗಳ ಗುಡಿಕಟ್ಟುಗಳಿವೆ ಮತ್ತು ೧)ಕಾರೇಹಳ್ಳಿಯ ಹುಲ್ಲೂರು ಬೀರಲಿಂಗೇಶ್ವರ ೨)ಕಂಸಾಗರದ

ಬೀರಲಿಂಗೇಶ್ವರ ೩)ಕೆಲ್ಲೋಡು ಕರಿಸಿದ್ಧೇಶ್ವರಸ್ವಾಮಿ ೪)ಅರಳಿಹಳ್ಳಿಯ ಶ್ರೀಬೀರಲಿಂಗೇಶ್ವರ ದೈವಗಳ ನಾಲ್ಕು ಹರಿವಾಣಗಳಿವೆ.

ಕಾರೇಹಳ್ಳಿಯ ದೊಡ್ಡಮಠದಲ್ಲಿ ದಿನಂಪ್ರತಿ ಪೂಜೆಗಳು, ಶಿವರಾತ್ರಿ, ಕಾರ್ತಿಕಮಾಸ, ಗೌರಿಹಬ್ಬ ಹಾಗೂ ಕಾರೇಹಬ್ಬಗಳ ಸಂದರ್ಭದಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಕಂಥಾಧಾರಣ ಸೇವೆಯು ಈ ನೆಲೆಯಲ್ಲಿ ಪ್ರಚಲಿತದಲ್ಲಿತ್ತಾದರೂ ಇತ್ತೀಚಿನ ೨೪ ವರ್ಷಗಳಲ್ಲಿ ನಡೆದಿರುವುದಿಲ್ಲ. ಸಾವಂತಕುಲದ ಒಡೆಯರುಗಳು ಅಲ್ಲಿನಿಂದ ಕುರುಬ ಸಮುದಾಯದ ಧಾರ್ಮಿಕ ಆಚರಣೆಗಳ ನೇತೃತ್ವ ವಹಿಸಿಕೊಂಡು ಪ್ರಸ್ತುತ ಒಡೆಯರುಗಳಾಗಿದ್ದಾರೆ. ಗ್ರಾಮದಲ್ಲಿ ಮೂರು ಒಡೆಯರ ಗುಂಪುಗಳನ್ನು ಗುರುತಿಸಬಹುದಾಗಿದೆ. ಅವುಗಳ ವಂಶವೃಕ್ಷ ಕೆಳಗಿನಂತಿದೆ.








ಪ್ರಸ್ತುತ ಸೋಮಶೇಖರಯ್ಯ ಒಡೆಯರ್, ಚಂದ್ರಶೇಖರ್ ಒಡೆಯರ್ ಮತ್ತು ಶಿವಕುಮಾರ್ ಒಡೆಯರ್ ಸಹೋದರರು ರೇವಣಸಿದ್ಧನ ಒಡೆಯರುಗಳಾಗಿದ್ದಾರೆ.


ಚಿಕ್ಕಮಠ: ಮಠದ ಗರ್ಭಗುಡಿಯ ಗದ್ದುಗೆಯ ಮೇಲೆ ಲಿಂಗರೂಪದ ರೇವಣಸಿದ್ಧ, ಕಪಾಲ, ತ್ರಿಶೂಲ ಮತ್ತು ರುದ್ರಾಕ್ಷಿಗಳನ್ನು ಸ್ಥಾಪಿಸಲಾಗಿದೆ. ಚಿಕ್ಕಮಠಕ್ಕೆ ೧)ಮುಗಳಿ ಮರಡಿ ಬೀರಲಿಂಗೇಶ್ವರ ೨)ಹುಚ್ಚೀರ ದಿಮ್ಮಣ್ಣ ಬೀರಲಿಂಗೇಶ್ವರ ೩)ಗಡಿಹಳ್ಳಿ ದೋಣಗೋಡು ಬಸವಣ್ಣ ೪)ಹೊಸೂರು ದೋಣಗೋಡು ಬಸವಣ್ಣ ೫)ಸೊಲ್ಲಾಪುರ ಹುಟ್ಟೀರ ದೀಮಣ್ಣ ಬೀರಲಿಂಗೇಶ್ವರ ೬)ಅನುಗನಹಳ್ಳಿ ಗೋ.ಸಿ.ಬೀರಲಿಂಗೇಶ್ವರ ೭)ಶಿವನಿ ದಳವಾಯಿ ಲಿಂಗಣ್ಣ ೮)ತಾಳೀಕಟ್ಟೆ ಹಿರಿಯಯ್ಯ ಬೀರಲಿಂಗೇಶ್ವರರುಗಳ ಎಂಟು ಗುಡಿಕಟ್ಟುಗಳಿವೆ.

ರೇವಣಸಿದ್ಧನಿಗೆ ದಿನಂಪ್ರತಿ ಎರಡು ಬಾರಿ ಪೂಜೆ ಶಿವರಾತ್ರಿಯಂದು ಜಾಗರಣೆ, ದೀಪಾವಳಿ, ಯುಗಾದಿ ಹಾಗೂ ರೇಣುಕಾಜಯಂತಿಯಂದು ವಿಶೇಷ ಪೂಜೆಗಳು ನೆರವೇರುತ್ತವೆ. ಈ ಸಂದರ್ಭಗಳಲ್ಲಿ ರೇವಣಸಿದ್ಧನಿಗೆ ತಳಿಗೆ ಪ್ರಸಾದ ಹಾಗೂ ಹಸಿ ತರಕಾರಿಗಳ ನೈವೇದ್ಯವಾಗುವುದು. ಪ್ರತೀ ಹನ್ನೆರೆಡು ವರ್ಷಗಳಿಗೊಮ್ಮೆ ರೇವಣಸಿದ್ಧೇಶ್ವರ ತೋಪುಜಾತ್ರೆ ನಡೆಯುವುದು. ಈ ಸಂದರ್ಭದಲ್ಲಿ ಗಡಿಹಳ್ಳಿ, ಮೊಗಳ್ಳಿ, ಹೊಸೂರು ಮತ್ತು ಸೊಲ್ಲಾಪುರದ ಬೀರಲಿಂಗೇಶ್ವರ ಬಸವಣ್ಣ ದೈವಗಳು ಸೇರುತ್ತವೆ. ಈ ಸಂದರ್ಭದಲ್ಲಿ ಇಲ್ಲಿನ ಭಕ್ತಾದಿಗಳು ಸೊಲ್ಲಾಪುರಕ್ಕೆ ಹೋದಲ್ಲಿ ಸಿದ್ಧರಾಮ ರೇವಣಸಿದ್ಧನಿಗೆ ಏಳೂಕಾಲು ರೂಪಾಯಿಗಳನ್ನು ನೀಡುವನೆಂಬುದು ಸ್ಥಳೀಯರ ನಂಬಿಕೆ. ಒಡೆಯರುಗಳು, ಕೋಲ್ಕಾರರು, ದಳವಾಯಿಗಳು, ಭಂಡಾರಿಗಳು ಶ್ರೀಮಠದ ಜವಾಬ್ದಾರಿಯುತ ವ್ಯಕ್ತಿಗಳಾಗಿದ್ದಾರೆ. ಪ್ರಸ್ತುತ ಬಸವರಾಜು ಒಡೆಯರ್ ಹಾಗೂ ಯತೀಶ್ ಒಡೆಯರ್‌ರವರು ಶ್ರೀಮಠದ ಒಡೆಯರುಗಳಾಗಿದ್ದಾರೆ. ಶ್ರೀಮಠಕ್ಕೆ ಸಂಬಂಧಿಸಿದ ಒಡೆಯರುಗಳ ವಂಶವೃಕ್ಷ ಕೆಳಗಿನಂತಿದೆ.



೧೪. ಬಾಗೂರು: ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

ಹೊಸದುರ್ಗ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ಮಣ್ಣು ಕಲ್ಲುಗಳಿಂದ ನಿರ್ಮಿತವಾದ ಗೋಡೆ ಹಾಗೂ ಹಂಚಿನ ಛಾವಣಿಯನ್ನು ಹೊಂದಿದ ರೇವಣಸಿದ್ಧೇಶ್ವರ ಮಠವಿದೆ. ಶ್ರೀಮಠವು ಪ್ರಾಂಗಣ ಮತ್ತು ಗರ್ಭಗುಡಿಗಳನ್ನು ಹೊಂದಿದೆ. ಗದ್ದುಗೆಯ ಮೇಲೆ ರೇವಣಸಿದ್ಧೇಶ್ವರ, ಮರುಳಸಿದ್ಧೇಶ್ವರ ಹಾಗೂ ಸರೂರು ಶಾಂತಮುತ್ತಯ್ಯನನ್ನು ಸ್ಥಾಪಿಸಲಾಗಿದೆ. ಈ ದೈವಗಳ ಅಕ್ಕಪಕ್ಕದಲ್ಲಿ ಎರಡು ಅಕ್ಷಯ ಪಾತ್ರೆ, ಮೂರು ತ್ರಿಶೂಲ ಹಾಗೂ ಒಂದು ಹಾಲು ಅಡ್ಡೆಯನ್ನು ಇಡಲಾಗಿದೆ. ಶ್ರೀಮಠಕ್ಕೆ ೧)ಬಾಗೂರಿನ ಚಿತ್ರಹಳ್ಳಿ ಬೀರಲಿಂಗೇಶ್ವರ ೨)ಬೋಕಿಕೆರೆಯ ಬೀರಲಿಂಗೇಶ್ವರ ದೈವಗಳು ಗುಡಿಕಟ್ಟುಗಳಾದರೆ: ೧)ಬಾಗೂರು ೨)ನಾಗೇನಹಳ್ಳಿ ೩)ಹೊನ್ನೇಕರೆ ೪)ಅರಳೀಹಳ್ಳಿ ೫)ಎಂ.ಜಿ.ದಿಬ್ಬ ೬)ಬೋಕಿಕೆರೆ ೭)ಕೋಡಿಹಳ್ಳಿ ೮)ಕಂಗುವಳ್ಳಿ ೯)ಹೊಸಮಡಲಿ ೧೦)ಹಳೆಮಡದಿ ೧೧)ಭಾಗಶೆಟ್ಟಿಹಳ್ಳಿ ೧೨)ಗೊರವಿನಕಾಲು ೧೩)ಹೊಸದುರ್ಗ ಪಟ್ಟಣ ೧೪)ಬೊಮ್ಮನಹಳ್ಳಿ ೧೫)ಚನ್ನಸಮುದ್ರ ೧೬)ಯಾಲಕ್ಕಿಅಪ್ಪನಹಟ್ಟಿ ೧೭)ಕಬ್ಬಳ ೧೮)ಮಾವಿನಕಟ್ಟೆ ೧೯) ಗುಡ್ಡದನಾಯಕನಹಳ್ಳಿ ೨೦)ಹೊಸಕುದೂರುಗಳ ಹರಿವಾಣಗಳನ್ನು ಹೊಂದಿದೆ. ಈ ನೆಲೆಯಲ್ಲಿ ದಿನಂಪ್ರತಿ ಎರಡು ಸಾರಿ ಪೂಜೆ ಶ್ರಾವಣಮಾಸ, ಗೌರಿಹಬ್ಬ, ದಸರಾ, ಶಿವರಾತ್ರಿ ಮತ್ತು ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಈ ನೆಲೆಯಲ್ಲಿ ಕಂಥಾಧಾರಣೆ ಸೇವೆ ಆಚರಣೆ ಇರುವುದಿಲ್ಲ. ಪ್ರಸ್ತುತ ಹೊಸದುರ್ಗದ ಒಂದು ಭಾಗವಾಗಿರುವ ಗ್ರಾಮದಲ್ಲಿ ಒಡೆಯರಿಗೆ ಸಂಬಂಧಿಸಿದ ಒಂದು ಮನೆತನವಿದೆ. ಶಾಂತಯ್ಯ ಒಡೆಯರ್‌ರವರು ಗ್ರಾಮದ ಒಡೆಯರುಗಳಾಗಿದ್ದಾರೆ. ಒಡೆಯರ ವಂಶವೃಕ್ಷ ಕೆಳಗಿನಂತಿದೆ.



೧೫. ಕಡ್ಲೆಕಂಸಾಗರ : ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

ಕಡ್ಲೆಕಂಸಾಗರ ಗ್ರಾಮವು ಹೊಸದುರ್ಗ ತಾಲ್ಲೂಕಿನ ಮತ್ತೋಡು ಹೋಬಳಿಯ ಚಿಕ್ಕತೇಕಲವಟ್ಟಿ ಗ್ರಾಮದಿಂದ, ಪಶ್ಚಿಮಕ್ಕೆ ಸಾಗುವ ಕಾಲುದಾರಿಯಲ್ಲಿ ೧.೫೦ ಕಿ.ಮೀ. ದೂರದಲ್ಲಿದೆ. ಪ್ರಸ್ತುತ ಕಡ್ಲೆಕಂಸಾಗರದಲ್ಲಿ ಯಾವ ಜನವಸತಿಯು ಇಲ್ಲದೆ, ಪಾಳು ಗ್ರಾಮವಾಗಿದೆ. ಇಲ್ಲಿ ಕಲ್ಲುಚಪ್ಪಡಿಗಳಿಂದ ನಿರ್ಮಿತವಾದ ಗೋಡೆ; ಛಾವಣಿಗಳನ್ನು ಒಳಗೊಂಡ ರೇವಣಸಿದ್ಧನ ಮಠವಿದೆ. ಮಠದ ಸುತ್ತಲೂ ಕಲ್ಲಿನ ಪೌಳಿಯು ಇದೆ. ಪೌಳಿ ಮತ್ತು ಮಠದ ಮಧ್ಯದಲಿ ವಿಶಾಲವಾದ ಆವರಣವಿದೆ. ಮಠವು ಗರ್ಭಗುಡಿ ಮತ್ತು ಪ್ರಾಂಗಣವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಮೂರು ಮೆಟ್ಟಿಲುಗಳ ಗದ್ದುಗೆಯಿದೆ. ಗದ್ದುಗೆಯ ಮೇಲೆ ಎಡಭಾಗದಲಿ ಎರಡು ಬೆತ್ತಗಳು, ಏಕಮುಖ ರುದ್ರಾಕ್ಷಿ, ಬಲಭಾಗದಲ್ಲಿ ತ್ರಿಶೂಲ, ಶಂಖವನ್ನು ಇಡಲಾಗಿದೆ. ಗದ್ದುಗೆಯ ಮೇಲೆ ರೇವಣಸಿದ್ಧನ ಮೂರ್ತಿ ಸ್ಥಾಪಿತವಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಮಠದ ಹೊರ ಆವರಣದಲ್ಲಿ ರೇವಣಸಿದ್ಧನಿಗೆ ಅರ್ಪಿಸುವ ತಳಿಗೆ ಪ್ರಸಾದವನ್ನು ತಯಾರಿಸಲು ಬೇಕಾಗುವ ಒಲೆ, ಇನ್ನೊಂದೆಡೆ ನಾಗರಕಲ್ಲುಗಳಿವೆ. ಮಠದ ಮುಂಭಾಗದ ಅನತಿದೂರದಲ್ಲಿಯೇ ಪೂರ್ವಾಭಿಮುಖವಾದ ಕಂಸಾರ ಬೀರಲಿಂಗೇಶ್ವರ ದೇವಸ್ಥಾನ ಹಾಗೂ ಮಜ್ಜನಭಾವಿ ಇದೆ ದೇವಾಲಯದಲ್ಲಿ ಬೀರದೇವರ ಗದ್ದುಗೆ ಇದೆ.

ಇಲ್ಲಿಯ ರೇವಣಸಿದ್ಧನಿಗೂ, ಬೀರೇಶನಿಗೂ ಸಂಬಂಧಿಸಿದಂತೆ ಸ್ಥಳೀಯ ಐತಿಹ್ಯವಿದೆ. ಅದರಂತೆ ರೇವಣಸಿದ್ಧರು ಈ ನೆಲೆಯಲ್ಲಿ ತಪಸ್ಸಿಗೆ ಕುಳಿತಾಗ; ರಕ್ಷಣೆಗಾಗಿ ಬೀರೇಶ್ವರನು ಕಾವಲು ಕಾಯುತ್ತಿದ್ದನು. ಹೀಗೆ ತಪಸ್ಸಿಗೆ ಕುಳಿತ ರೇವಣಸಿದ್ಧ ಬಹಳಕಾಲವಾದರೂ, ಮೇಲೇಳದೆ ಹೋದಾಗ; ಬೀರೇಶ್ವರನೂ ಅಲ್ಲಿಯೇ ಕಾವಲು ಕಾಯುತ್ತ ನೆಲೆಸಿದನೆಂದು ಮತ್ತು ಅಂದಿನಿಂದ ಬೀರೇಶ್ವರನು ಕಂಸಾಳೆ ಬೀರಲಿಂಗೇಶನೆಂದು ಖ್ಯಾತನಾದನೆಂಬುದಾಗಿದೆ. ಇದರ ಕುರುಹಾಗಿ ಅಲ್ಲಿಯೇ ಶ್ರೀ ಬೀರೇಶ್ವರನ ದೇವಾಲಯ ನಿರ್ಮಾಣವಾಯಿತೆಂದು ಸ್ಥಳೀಯರು ಹೇಳುತ್ತಾರೆ.


ಕಡ್ಲೆ ಕಂಸಾಗರ ರೇವಣಸಿದ್ಧ ದೈವಕ್ಕೆ ೧)ದೊಡ್ಡ ತೇಕಲವಟ್ಟಿ ಕಂಸಾಗರ ಬೀರಲಿಂಗೇಶ್ವರ ೨) ಬೆಲಗೂರು ಬೀರಲಿಂಗೇಶ್ವರ ೩) ಪಂಚನಹಳ್ಳಿ ಕಲ್ಲುಕುಂಟೆ ಬೀರಲಿಂಗೇಶ್ವರ ೪)ನಿಡುವಳ್ಳಿ ದೊಡ್ಡಯ್ಯ ಬೀರಲಿಂಗೇಶ್ವರ ೫)ಕುರುವಂತ ಚಿಕ್ಕಯ್ಯ ಬೀರಲಿಂಗೇಶ್ವರ ೬)ಆಣಿಗೆರೆ ಗುಡ್ಡದ ಬೀರಲಿಂಗೇಶ ೭)ಚೌಡಿಪಾಳ್ಯದ ಬೀರಲಿಂಗೇಶ್ವರ ೮)ಬೆಲಗೂರು ಮಾದಿಹಳ್ಳಿ ಬೀರಲಿಂಗೇಶ್ವರ ೯)ಕುರುಬರಹಳ್ಳಿ ಮಾದಾಳ ಬೀರಲಿಂಗೇಶ್ವರ ೧೦) ಹೆಗ್ಗೇರಿ ಬೀರಲಿಂಗೇಶ್ವರ ೧೧) ಶ್ರೀರಾಮಪುರ, ದೇವಿಕೆರೆ, ನಗರಕರೆ, ಮಾದಾಳಬೀರಲಿಂಗೇಶ್ವರ ದೈವಗಳ ಒಟ್ಟು ೧೧ ಗುಡಿಕಟ್ಟುಗಳಿವೆ. ೧)ದೊಡ್ಡತೇಕಲವಟ್ಟಿ- ಕಡೂರು, ಬಸಲೆರೆ, ಹರವನಹಳ್ಳಿ, ಹೆಗ್ಗೆರೆ, ಓಬಳಾಪುರ, ಸಿರಿಗೊಂಡನಹಳ್ಳಿ,

೨)ಶ್ರೀರಾಂಪುರ– ಬೆಂಗಲಾಪುರ, ಕಾಚಾಪುರ, ಕಾಡಬಿಗೆರೆ, ತೋಟದಮನೆ, ಶ್ರೀರಾಂಪುರ, ಬರಮಯ್ಯನಪಾಳ್ಯ, ಗೂಳೀಹಳ್ಳಿ, ದಳವಾಯಿಕಟ್ಟೆ, ಗವಿರಂಗಾಪುರ, ನಡುವಿನಹಳ್ಳಿ, ಮಲ್ಲಿಹಳ್ಳಿ, ಕುರುಬರಹಳ್ಳಿ, ಸೂಜಿಗಲ್ಲು, ಕೈಗೋಡು, ಕಾವಲರಮನೆ, ೩)ನಿಡುವಳ್ಳಿ– ಪಂಚಮನಹಳ್ಳಿ, ಉಪ್ಪಿನಹಳ್ಳಿ, ಹೆಚ್.ಅಣೆಗೆರೆ, ಚೌಡಿಪಾಳ್ಯ, ದೋಣನಕಟ್ಟೆ, ತಿಮ್ಮಲಾಪುರ, ದಿಬ್ಬೂರು, ಮಾಡಾಳು, ನಿಡುವಳ್ಳಿ, ಹೊಸಹಳ್ಳಿ, ಕುರುವಂಕ ೪)ಬೆಲಗೂರು– ಕಬ್ಬಳ, ಮತ್ತೂರು, ಮರವಂಜಿ, ಗರಗ, ತಂಡಗ ಇತ್ಯಾದಿ ನಾಲ್ಕು ಹರಿವಾಣಗಳಿವೆ.

ಮಠದಲ್ಲಿ ಸೋಮವಾರದಂದು ಶ್ರಾವಣಮಾಸದ ಉದ್ದಕ್ಕೂ ಅದರಲ್ಲೂ ವಿಶೇಷವಾಗಿ ಶ್ರಾವಣ ಸೋಮವಾರಗಳಂದು ರೇವಣಸಿದ್ಧನಿಗೆ ವಿಶೇಷ ಪೂಜೆಗಳು ನಡೆಯುತ್ತವೆ. ಶ್ರಾವಣ ಮಾಸದ ಸೋಮವಾರಗಳಲ್ಲಿ,

ಇಲ್ಲಿನ ಸ್ಥಳೀಯ ಕುರಿಗಾರರು ತಮ್ಮ ಕುರಿಗಳನ್ನು ಮಠಕ್ಕೆ ಕರೆತಂದು; ಮಠದ ಸುತ್ತ ಪ್ರದಕ್ಷಿಣೆ ಮಾಡಿಸಿ; ತಮ್ಮೊಡನೆ ತಂದ ಕುರಿ ಉಣ್ಣೆಯ ಕರಿನೂಲನ್ನು ರೇವಣಸಿದ್ಧನ ಗದ್ದುಗೆಯ ಮೇಲಿರಿಸಿ ಪೂಜಿಸಿಕೊಂಡು ಕಟ್ಟಿಸಿಕೊಳ್ಳುವುದು ಈ ಭಾಗದ ಸಂಪ್ರದಾಯವಾಗಿದೆ. ಇಲ್ಲಿಯ ರೇವಣಸಿದ್ಧನಿಗೆ ತಳಿಗೆ ನೈವೇದ್ಯ ಮಾಡುವರು. ಜಾತ್ರೆ ನಡೆಯುವುದಿಲ್ಲ; ಕಂಥಾಧಾರಣೆ ಸೇವೆಯನ್ನು ೧೯೭೦ ರಲ್ಲಿ ಮಾಡಲಾಗಿದ್ದು; ನಂತರದಲ್ಲಿ ಮುಂದುವರೆಸಿಲ್ಲ.

ನಗರಗೆರೆ ಒಡೆಯರ ವಂಶವೃಕ್ಷ(ಕಡ್ಲೆಕಂಸಾಗರ ಮೂಲಮಠ)



ಮೂರು-ನಾಲ್ಕು ಶತಮಾನಗಳಿಂದ ಸರೂರು ಶಾಂತಮುತ್ತಯ್ಯ ಸಮುದಾಯದ ಒಡೆಯರುಗಳು ರೇವಣಸಿದ್ಧನ ಪೂಜಾರಿಗಳಾಗಿದ್ದಾರೆ. ಒಡೆಯರು ಆ ಕಾಲದಲ್ಲಿ ಕಡೂರಿನಿಂದ ಕುದುರೆ ಸವಾರಿಯಲ್ಲಿ ಬಂದು, ಇಲ್ಲಿಯ ರೇವಣಸಿದ್ಧನ ಪೂಜಿಸುತ್ತಿದ್ದರೆಂದೂ, ನಂತರದಲ್ಲಿ ಒಡೆಯರುಗಳು ದೊಡ್ಡತೇಕಲವಟ್ಟಿ ಮತ್ತು ನಗರಗೆರೆ ಗ್ರಾಮಗಳಲ್ಲಿ ನೆಲೆಸಿದರು ಎಂಬುದಾಗಿ ಒಡೆಯರುಗಳ ಮತ್ತು ಕಾರಣವಾಗಿ ನಗರಗೆರೆ ಒಡೆಯರುಗಳಿಗೆ ದೊಡ್ಡತೇಕಲವಟ್ಟಿ, ನಿಡುವಳ್ಳಿ ಮತ್ತು ಮೂಲಮಠದ ಪೂಜೆಯ ಹಕ್ಕನ್ನು ಹಾಗೂ ಗೂಳಿಹಳ್ಳಿ ಒಡೆಯರುಗಳಿಗೆ ಬೆಲಗೂರು ಮತ್ತು ಶ್ರೀರಾಂಪುರ ಸಿಂಹಾಸನದ ಪೂಜೆಯ ಹಕ್ಕನ್ನು ನೀಡಲಾಗಿದೆ ಎಂದು ಇಲ್ಲಿಯ ಒಡೆಯರು ಹೇಳುತ್ತಾರೆ.

ಒಡೆಯರ ಧಾರ್ಮಿಕ ಹಾಗೂ ವೈಯಕ್ತಿಕ ಆಚಾರ ವಿಚಾರ ಸಂಪ್ರದಾಯಗಳು ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಮುಂದುವರಿಕೆಗಳಾಗಿವೆ. ಇಲ್ಲಿನ ಹೋರಿಕುರುಬ ಬೆಡಗಿನ ಕುರುಬರು ಮರಣಹೊಂದಿದಾಗ, ಸ್ಥಳೀಯ ಒಡೆಯರುಗಳು, ಶವಕ್ಕೆ ಲಿಂಗಧಾರಣೆ ಮಾಡಿಸಿದ ನಂತರ ಶವಸಂಸ್ಕಾರದ ವಿಧಿವಿಧಾನಗಳನ್ನು ನೆರವೇರಿಸುವರು. ಹಾಗೆಯೇ ಒಡೆಯರುಗಳು ಮರಣ ಹೊಂದಿದಾಗ, ಹೋರಿಕುಲದ ಕುರುಬರ ನೇತೃತ್ವದಲ್ಲಿ ಸಾಂಪ್ರದಾಯಿಕ ವಿಧಿವಿಧಾನಗಳೊಡನೆ ಶವಸಂಸ್ಕಾರವಾಗುವುದು. ಪ್ರಸ್ತುತ ನಗರಗೆರೆ ಗುಂಪಿಗೆ ಸೇರಿದ ಶ್ರೀ ಓಂಕಾರಸ್ವಾಮಿ ಒಡೆಯರ್‌ರವರು ಶ್ರೀಮಠದ ಒಡೆಯರುಗಳಾಗಿದ್ದಾರೆ. ಇಲ್ಲಿನ ನಗರಗೆರೆ ಒಡೆಯರ ವಂಶವೃಕ್ಷ ಕೆಳಗಿನಂತಿದೆ.

೧೬. ಡಂಬಳ: ಮುಂಡರಗಿ ತಾಲ್ಲೂಕು ಗದಗ ಜಿಲ್ಲೆ

(ಅಕ್ಷಾಂಶ: ೧೫೦ ೧೭'೪೩" ರೇಖಾಂಶ: ೭೫೦ ೪೬'೨೨")

ಗ್ರಾಮದಲ್ಲಿ ಪುರಾತನ ರೇವಣಸಿದ್ಧನ ಗುರುಮನೆ ಇದೆ. ಇತ್ತೀಚೆಗೆ ಈ ಮೂಲ ಗುರುಮನೆಯನ್ನು ತೆಗೆದು, ಅದೇ ಸ್ಥಳದಲ್ಲಿಯೇ ನೂತನವಾಗಿ ನಿರ್ಮಿಸಲಾಗುತ್ತಿದೆ. ಗುರುಮನೆಗೆ ಕತ್ತಲಗೆರೆ, ಹಳ್ಳಿಗುಡಿ, ಅಡವಿಸೋಮಾಪೂರ, ಪಾಪನಾಸಿ, ಚಿಕ್ಕಕೊಪ್ಪ, ಹಿರೇಕೊಪ್ಪ, ಲಿಂಗದಹಾಳ, ಕಂಬಗೇರಿ, ಹೊಂಬಳ, ನರೇಗಲ್ಲು, ಉಮಚಗಿ, ಚಿಕ್ಕಹಂದಿಗೊಳ್ಳ ಮತ್ತು ಬಿಂಕನಕಟ್ಟಿ ಮುಂತಾದ ಹಳ್ಳಿಗಳು ಸೇರುತ್ತವೆ. ರೇವಣಸಿದ್ಧನ ಗುರುಮನೆಯ ಅನತಿ ದೂರದಲ್ಲಿಯೇ ಪುರಾತನ ಮರುಳಸಿದ್ಧನ ಗುಡಿಯಿದೆ. ಇವೆರಡೂ ಸ್ವತಂತ್ರವಾಗಿ ತಮ್ಮ ತಮ್ಮ ಧಾರ್ಮಿಕ ಆಚರಣೆಗಳನ್ನು ನಡೆಸುತ್ತವೆಯಾದರೂ ಈ ಗುರುಮನೆ ಮತ್ತು ಗುಡಿಯ ಆಡಳಿತ ಮತ್ತು ಧಾರ್ಮಿಕ ಆಚರಣೆಗಳ ನೇತೃತ್ವವನ್ನು ಕುರುಬ ಸಮಾಜದವರು ವಹಿಸಿಕೊಂಡಿದ್ದಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರಸ್ತುತ ಒಡೆಯರಾದ ಶ್ರೀ ಶಿವಕುಮಾರ ಚನ್ನವೀರಯ್ಯ ಗುರುವಿನವರು; ತಲೆಮಾರುಗಳಿಂದ ತಮ್ಮ ಬಳಿ ಇದ್ದ ಪುರಾತನ ಕೆಲ ದಾಖಲೆಗಳನ್ನು

(ಪತ್ರಗಳು) ನೀಡಿದರು. ಅವುಗಳು ವಚನಪತ್ರ, ನ್ಯಾಯ ತೀರ್ಮಾನಕ್ಕೆ ಒಡೆಯರುಗಳನ್ನು ಉದ್ದೇಶಿಸಿ ಭಿನ್ನವಿಸಿದ ಪತ್ರ, ಶುದ್ಧ ಚಾರಿತ್ರ್ಯ ಪತ್ರ ಹಾಗೂ ಕಟ್ಟೆಮನೆ ಉತ್ತರದಾಯತ್ವಕ್ಕೆ ಸಂಬಂಧಿಸಿದಂತೆ ನಡೆದ ಪತ್ರವ್ಯವಹಾರಗಳಾಗಿವೆ. (Annexure 1 to IV) ಹಾಗೂ ಡಂಬಳ ಸಂಸ್ಥಾನಕ್ಕೆ ಸಂಬಂಧಿಸಿದ ಗುರುಪರಂಪರೆಯ ಧಾರ್ಮಿಕ ಕಾಗದ ಪತ್ರಗಳಾಗಿವೆ. (Annexure V to XVI) ಈ ಎಲ್ಲ ದಾಖಲೆಗಳು ಸರೂರು ಮಹಾಸಂಸ್ಥಾನದ ಮೊಹರನ್ನು ಹಾಗೂ ಕೆಲವು ದಾಖಲೆಗಳು ಆ ಕಾಲದ ಛಾಪಾಕಾಗದದ ಮೇಲೆ ಬರೆಯಿಸಲ್ಪಟ್ಟಿವೆ. ಈ ಕಾಗದ ಪತ್ರಗಳಲ್ಲಿಯ ವಿಷಯಗಳನ್ನು ಪ್ರಬಂಧದಲ್ಲಿ ಬೇರೆಯಾಗಿಯೇ ಚರ್ಚಿಸಲಾಗಿದೆ. ಈ ಎಲ್ಲ ದಾಖಲೆಗಳು ಗುರುಮನೆ, ಒಡೆಯರು ಹಾಗೂ ಕುರುಬ ಸಮಾಜದ ಜೊತೆಗಿನ ಸಂಬಂಧ ಹಾಗೂ ಸಾಂಸ್ಕೃತಿಕ ಆಯಾಮಗಳೆಡೆ ಬೆಳಕು ಚೆಲ್ಲುತ್ತವೆ.

ಗುರುಮನೆಯು ವರ್ಷದುದ್ದಕ್ಕೂ ಆಚರಿಸುವ ಆಚರಣೆಗಳಲ್ಲಿ ಶ್ರಾವಣಮಾಸ ಹಾಗೂ ಮಹಾನವಮಿ ಸಂದರ್ಭದಲ್ಲಿ ಆಚರಿಸುವ ಆಚರಣೆಗಳು ಮುಖ್ಯವಾದವುಗಳಾಗಿವೆ. ಶ್ರಾವಣ ಮಾಸದಲ್ಲಿ ಇತರೆ ನೆಲೆಗಳಲ್ಲಿ ಆಚರಿಸಲ್ಪಡುವ ಆಚರಣೆಗಳ ಜೊತೆಗೆ, ವಿಶೇಷವಗಿ ಗುರುವಿನವರು ಹಿರೇಮಠಕ್ಕೆ ಸಂಬಂಧಿಸಿದ ೫೦ ಗುರುವಿನವರನ್ನು ಆಮಂತ್ರಿಸಿ, ಅನ್ನಸಂತರ್ಪಣೆ ಮಾಡುವ ಪದ್ಧತಿ ಇರುವುದು. ಮಹಾನವಮಿ ಹಬ್ಬದಲ್ಲಿ ೯ ದಿನಗಳ ಕಾಲ ವಿಶೇಷ ಪೂಜಾ ಕಾರ್ಯಗಳು ನಡೆವುದರ ಜೊತೆಗೆ, ಶಕ್ತಿ ದೇವತೆಗಳ ಪುರಾಣ ಪಠಣ ನಡೆಯುವುದು ಮತ್ತು ಮುಖ್ಯವಾಗಿ ೯ನೇಯ ದಿನದಂದು, ಗುರುಮನೆಯ ಮುಂದೆ, ಕರಿ ಕಂಬಳಿಯ ಗದ್ದುಗೆಯನ್ನು ಮಾಡಿ; ಅದರ ಮೇಲೆ ಗೋದಿಹಿಟ್ಟಿನ ಕಣಕದಲ್ಲಿ ಐದು ಹಣತೆಯನ್ನು ತಯಾರಿಸುತ್ತಾರೆ. ಆ ಹಣತೆಗಳಲ್ಲಿ ತುಪ್ಪದ ದೀಪವನ್ನು ಬೆಳಗಿಸಿ ಪೂಜಿಸುತ್ತಾರೆ. ನಂತರದಲ್ಲಿ ಐದು ದೀಪಗಳ ಪೈಕಿ ಒಂದನ್ನು ರೇವಣಸಿದ್ಧನ ಜಗುಲಿಯ ಮೇಲಿಟ್ಟು, ಉಳಿದ ನಾಲ್ಕು ದೀಪಗಳನ್ನು ಗುರುಮಠದ ಬಾಗಿಲ ಮುಂದೆ ಬೆಳಗಿಸುವರು. ಈ ಪದ್ಧತಿ ಮೊದಲಿಂದಲೂ ಜಾರಿಯಲ್ಲಿದೆ.

ಇಲ್ಲಿನ ಗುರುವಿನವರು ಕುರುಬ ಸಮಾಜದವರಾಗಿದ್ದು, ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಒಡೆಯರ ಮುಂದುವರಿಕೆಯಾಗಿದ್ದಾರೆ; ಸಾಮಾಜಿಕ/ವೈಯಕ್ತಿಕ; ಜವಾಬ್ದಾರಿ ಹಾಗೂ ಆಚರಣೆಗಳು ಇತರ ನೆಲೆಗಳಲ್ಲಿರುವಂತೆ ಇಲ್ಲಿಯೂ ಮುಂದುವರೆದಿವೆ.

೧೭. ಚಿಕ್ಕನರಗುಂದ: ನರಗುಂದ ತಾಲ್ಲೂಕು ಗದಗ ಜಿಲ್ಲೆ:

(ಅಕ್ಷಾಂಶ: ೧೫೦ ೪೬'೫೪" ರೇಖಾಂಶ: ೭೫೦ ೨೦'೧೮")

ಚಿಕ್ಕನರಗುಂದ ಗ್ರಾಮವು, ತಾಲ್ಲೂಕು ಕೇಂದ್ರ ನರಗುಂದದಿಂದ ೧೪.೦೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ಈ ಹಿಂದೆ ರೇವಣಸಿದ್ಧನ ಗದ್ದುಗೆ ಇದ್ದುದಾಗಿಯೂ, ಗದ್ದುಗೆಯನ್ನು

ಒಳಗೊಂಡಂತೆ ಅದೇ ಸ್ಥಳದಲ್ಲಿ ೮೦ ವರ್ಷಗಳ ಹಿಂದೆ, ನವೀಕರಿಸಿ ಈಗಿರುವ ಮಠವನ್ನು ನಿರ್ಮಿಸಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಮಠವು ಗರ್ಭಗುಡಿ ಮತ್ತು ಪ್ರಾಂಗಣವನ್ನು ಹೊಂದಿದೆ. ಗರ್ಭಗುಡಿಯ ಜಗುಲಿಯ ಮೇಲೆ ರೇವಣಸಿದ್ಧನ ಮುಖವಾಡ, ಗುಂಡಗೊಪ್ಪಿ, ಕೋವಿ, ಕಾಳೆ, ಶಂಖ ಮತ್ತು ಬೆತ್ತಗಳನ್ನು ಸ್ಥಾಪಿಸಲಾಗಿದೆ. ಇತ್ತೀಚೆಗೆ ಈ ನೆಲೆಯಲ್ಲಿದ್ದು, ಐಕ್ಯವಾದ ಅವಧೂತ ಪರಂಪರೆಯ ಸ್ವಾಮಿಗಳ ಕಂಚಿನ ಮೂರ್ತಿ, ಕಮಂಡಲ, ತ್ರಿಶೂಲ, ಚಿಲುಮೆ, ಜೋಳಿಗೆ, ಜತ್ತಿಗೆ, ಬಾರಕೋಲು ಮುಂತಾದ ಸಂಬಂಧಿಸಿದ ಪರಿಕರಗಳನ್ನು ಇರಿಸಿದ್ದಾರೆ. ಈ ಮೂಲ ಮಠದ ಪಕ್ಕದಲ್ಲಿಯೇ, ಅವಧೂತ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳ ಗದ್ದುಗೆಯಿದ್ದು; ೧೯೮೮ ರಲ್ಲಿ ಕಲ್ಲಿನ ಗುಡಿಯನ್ನು ಕಟ್ಟಲಾಗಿದೆ. ಶ್ರಾವಣ ಮಾಸದುದ್ದಕ್ಕೂ ಶ್ರೀಮಠದಲ್ಲಿ ವಿಶೇಷವಾಗಿ ರಾತ್ರಿಯಿಡೀ ಜಾಗರಣೆ, ಭಜನೆ ಹಾಗೂ ಪುರಾಣ ಪಠಣಗಳನ್ನು ಆಯೋಜಿಸುವರು. ಈ ನೆಲೆಯಲ್ಲಿ ವಿಶೇಷವಾಗಿ ೧) ಇಟಗಿ ಭೀಮವ್ವದೇವಿ ಪುರಾಣ ೨)ಗುಡ್ಡಾಪೂರ ದಾನವ್ವ ಪುರಾಣ ೩) ಸಿದ್ಧಾರೂಢ ಪುರಾಣ ೪) ರೇವಣಸಿದ್ಧ ಪುರಾಣ ೫) ಗರಗದ ಮಡಿವಾಳಜ್ಜ ಪುರಾಣ ೬) ಶಿಶುವಾಳ ಷರೀಫಜ್ಜ ಪುರಾಣ ೭) ಹುಲಿಜಂತಿ ಮಾಳಿಂಗರಾಯ ಪುರಾಣ ೮) ಯಡೆಯೂರು ಸಿದ್ಧಲಿಂಗೇಶ್ವರ ಪುರಾಣ ೯)ನವಲಗುಂದ ನಾಗಲಿಂಗಜ್ಜ ಪುರಾಣ ೧೦) ಹೇಮರೆಡ್ಡಿ ಮಲ್ಲಮ್ಮನ ಪುರಾಣ ೧೧)ಬಸವಣ್ಣ ಪುರಾಣ ೧೨) ಕಲಬುರ್ಗಿ ಶರಣ ಬಸಪ್ಪ ಪುರಾಣ ೧೩) ಅಥಣಿ ಶಿವಯೋಗಿಗಳ ಪುರಾಣ ೧೪) ಬನಹಟ್ಟಿ ರುದ್ರಸ್ವಾಮಿ ಪುರಾಣ ೧೫) ಸಿರಹಟ್ಟಿ ಪಕ್ಕೀರಪ್ಪ ಪುರಾಣ ೧೬) ಗದುಗಿನ ಶಿವಾನಂದ ಚರಿತ್ರೆ ೧೭) ಗುತ್ತಿಗೆ ಬಾಗಮ್ಮ ಪುರಾಣ ೧೮) ಗೊಡಚೇರಿ ವೀರಭದ್ರೇಶ್ವರ ಪುರಾಣ ಪಠಣಗಳನ್ನು ಪ್ರತಿವರ್ಷ ಒಂದೊಂದರಂತೆ ಓದಿಸುವ ವಾಡಿಕೆಯಿದೆ. ಹಾಗೂ ಆಯಾ ವರ್ಷಗಳಲ್ಲಿ ಪಠಿಸಲಾದ ಪುರಾಣಕ್ಕೆ ಸಂಬಂಧಿಸಿದ ಮಹಾಪುರುಷರ ಕರ್ಮಭೂಮಿಗೆ ಊರಿನ ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಲ್ಲಿಯೆ ತೆರಳಿ ಭಕ್ತಿ ಸಮರ್ಪಿಸುವುದು ಸಂಪ್ರದಾಯವಾಗಿದೆ. ಈ ನೆಲೆಯಲ್ಲಿನ ಆಚರಣೆಗಳು, ಸಂಪ್ರದಾಯಗಳನ್ನು ಅವಲೋಕಿಸಿದಾಗ ಇಲ್ಲಿಯ ರೇವಣಸಿದ್ಧನು ಯಾವುದೇ ಜಾತಿ–ಮತ–ಪಂಥ ಧರ್ಮಕ್ಕೆ ವಾಲದೆ; ಸಮಾಜದ ಎಲ್ಲ ವರ್ಗ–ವರ್ಣದ ಮಹಾಪುರುಷರ ಜೊತೆಗೆ ಲೀನವಾಗಿರುವುದು ಗೋಚರವಾಗುವುದು.

ಪ್ರತಿ ಹುಣ್ಣಿಮೆ ಅಮವಾಸ್ಯೆಗಳೆಂದು ರಾತ್ರಿಯಿಡೀ ಭಜನೆ ಹಾಗೂ ಮಹಾಮಹಿಮರ ತತ್ವ ಪದಗಳನ್ನು ಹಾಡುವರು. ಪ್ರತಿವರುಷ ಜನವರಿ ತಿಂಗಳಲ್ಲಿ ಬರುವ ಬನದ ಹುಣ್ಣಿಮೆಗೆ ಮುಂಚಿನ ತ್ರಯೋದಶ ತಿಥಿಯಂದು ಪ್ರಾರಂಭವಾಗುವ ರೇವಣಸಿದ್ಧನ ಜಾತ್ರೆಯು ಮೂರು ದಿನಗಳ ಕಾಲ ಜರುಗುವುದು (ಅಧ್ಯಾಯ –೬ರಲ್ಲಿ ವಿವರ ನೀಡಲಾಗಿದೆ). ಈ ಜಾತ್ರೆಯು ಪ್ರಾರಂಭವಾಗುವ ೭ ದಿನಗಳ ಮುಂಚೆಯಿಂದ, ಭಕ್ತರು ರೇವಣಸಿದ್ಧನ ಮಠದಲ್ಲಿ ಹಗಲು

ರಾತ್ರಿ ಪಾಳೆಯಂತೆ; ನಿಂತುಕೊಂಡು ಏಕತಾರೆ ನುಡಿಸುತ ಭಜನೆಮಾಡುವ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಉಪಯೋಗಿಸುವ ಏಕತಾರೆಯನ್ನು ರೇವಣಸಿದ್ಧ ಗದ್ದುಗೆಯ ಮೇಲೆ ಇಟ್ಟಿರುವುದನ್ನು ಗಮನಿಸಬಹುದಾಗಿದೆ.

ಪ್ರಸ್ತುತ ಶ್ರೀಮಠಕ್ಕೆ ಹುಣಸಿಕಟ್ಟೆ ಗ್ರಾಮದ ಶ್ರೀ ಸೋಮಯ್ಯ ಒಡೆಯರರವರು ಗುರುವಿನವರಾಗಿದ್ದಾರೆ. ಗ್ರಾಮದಲ್ಲಿ ಬೀರಪ್ಪ, ಭರಮಪ್ಪ, ಮೈಲಾರಲಿಂಗೇಶ್ವರ, ಚಿಂಚಲಿ ಮಾಯವ್ವ ದೈವಗಳ ಗುಡಿಗಳಿದ್ದು; ಒಡೆಯರುಗಳು ಮತ್ತು ಹಾಲುಮತ ಸಮಾಜದೊಂದಿಗಿನ ಸಂಬಂಧ ಅನ್ಯೋನ್ಯವಾಗಿರುವುದನ್ನು ಗಮನಿಸಬಹುದಾಗಿದೆ.

೧೮. ಹಿರೇನಸಬಿ: ಬದಾಮಿ ತಾಲ್ಲೂಕು ಬಾಗಲಕೋಟೆ ಜಿಲ್ಲೆ:
(ಅಕ್ಷಾಂಶ: ೧೫೦ ೫೨'೨೮" ರೇಖಾಂಶ: ೭೫೦ ೪೩'೪೩")

ಹಿರೇನಸಬಿ ಗ್ರಾಮವು ತಾಲ್ಲೂಕು ಕೇಂದ್ರ ಬದಾಮಿಯಿಂದ ೭.೦೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ದೆಹಲಿ ಸುಲ್ತಾನರ ಆಳ್ವಿಕೆಯ ಕಾಲದ, ಇಂಡೋ-ಅರಬಿಕ್ ವಾಸ್ತುಶಿಲ್ಪ ಮಾದರಿಯಲ್ಲಿ ನಿರ್ಮಾಣವಾಗಿರುವ ರೇವಣಸಿದ್ಧನ ಗುಡಿ ಇರುವುದು ವಿಶೇಷವಾಗಿದೆ. ಗುಡಿಯು ಗರ್ಭಗುಡಿ, ಪ್ರಾಂಗಣ (ಹಜಾರ) ಹಾಗೂ ಹೆಬ್ಬಾಗಿಲನ್ನು ಹೊಂದಿದೆ. ಗುಡಿಯ ಹೊರ ಆವರಣದಲ್ಲಿ ಮಾಲಗಂಬ, ತಳಿಗೆಮನೆ, ನಾಗರಕಟ್ಟೆ ಹಾಗೂ ಶಿವಯ್ಯ ಅಜ್ಜನ ಗದ್ದುಗೆಯು ಇದ್ದು, ಸುತ್ತಲೂ ಆವರಣಗೋಡೆಯನ್ನು ಹೊಂದಿದೆ. ಗರ್ಭಗುಡಿಯ ಮೇಲೆ ಏಕಕಳಸದ ಗೋಪುರವಿದೆ. ಗರ್ಭಗುಡಿಯಲ್ಲಿನ ರೇವಣಸಿದ್ಧನು ಲಿಂಗರೂಪಿಯಾಗಿದ್ದು; ಮುಖವಾಡವನ್ನು ಹಾಕಲಾಗಿದೆ. ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತೆ ಇತ್ತೀಚೆಗೆ ದೇವಾಲಯ ವನ್ನು ನವೀಕರಿಸಲಾಗಿದೆ. ಈ ನೆಲೆಯಲ್ಲಿ ಶ್ರಾವಣಮಾಸದ ದಿನಗಳಂದು ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಪ್ರತಿದಿನ ರಾತ್ರಿ ರೇವಣಸಿದ್ಧ ಪುರಾಣ, ಶರಣ ಬಸಪ್ಪ ಕಲಬುರ್ಗಿ ಪುರಾಣ ಪಠಣಗಳ ಜೊತೆ ಭಜನಾ ಕಾರ್ಯಕ್ರಮಗಳು ನಡೆಯುತ್ತವೆ. ನಂತರದಲ್ಲಿ ಸಜ್ಜಕದ ಪ್ರಸಾದ ವಿನಿಯೋಗವಾಗುವುದು. ಶ್ರಾವಣ ಮಾಸದ ಕೊನೆಯದಿನದಂದು ರೇವಣಸಿದ್ಧನ ಜಾತ್ರೆಯು ನಡೆಯುವುದು. ಶ್ರಾವಣಮಾಸದ ದಿನಗಳಲ್ಲಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವರು. ಕಾರ್ತಿಕ ಮಾಸದಲ್ಲಿ ದೀಪೋತ್ಸವ ಹಾಗೂ ಶಿವರಾತ್ರಿಯಂದು ಜಾಗರಣೆ, ವಿಶೇಷ ಅಭಿಷೇಕಗಳು ಆಯೋಜನೆಗೊಂಡಿರುತ್ತವೆ.

ಶ್ರೀ ಸಿದ್ಧಯ್ಯ ಗುರಯ್ಯ ಕಾಡಯ್ಯನವರು ಪ್ರಸ್ತುತ ರೇವಣಸಿದ್ಧನ ಒಡೆಯರುಗಳಾಗಿದ್ದಾರೆ. ಹಾಗೂ ಸುಮಾರು ೭-೮ ತಲೆಮಾರುಗಳಿಂದ ಇವರ ವಂಶಸ್ಥರೇ ಇಲ್ಲಿನ ಒಡೆಯರುಗಳಾಗಿದ್ದಾರೆ. ಮೂಲತಃ ಈ ಮನೆತನದವರು ಸರೂರು ಗ್ರಾಮದಿಂದ ವಲಸೆಬಂದವರಾಗಿದ್ದು; ಗ್ರಾಮದಲ್ಲಿ ಪ್ರಸ್ತುತ ೭ ಒಡೆಯರ ಮನೆತನಗಳಿವೆ. ಸರದಿಯಂತೆ ಈ ಮನೆತನದವರು ರೇವಣಸಿದ್ಧನ

ಪೂಜೆಯ ಹಕ್ಕನ್ನು ಹೊಂದಿದ್ದಾರೆ. ಇಂದಿಗೂ ಇಲ್ಲಿಯ ಒಡೆಯರುಗಳು ಸರೂರು ಗ್ರಾಮದೊಡನೆ ಸಂಪರ್ಕ ಹೊಂದಿರುತ್ತಾರೆ. ಹಾಗೂ ಇಲ್ಲಿನ ಒಡೆಯರ ಸಾರ್ವತ್ರಿಕ ಹಾಗೂ ವೈಯಕ್ತಿಕ ಆಚರಣೆಗಳು , ಸರೂರು ಸಂಪ್ರದಾಯದ ಮುಂದುವರಿಕೆಗಳಾಗಿವೆ.

೧೯. ಸೂಳೀಭಾವಿ, ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ:

(ಅಕ್ಷಾಂಶ: ೧೬೦ ೨'೩೨" ರೇಖಾಂಶ: ೭೫೦ ೫೬'೧೮")

ಸೂಳೀಭಾವಿ ಗ್ರಾಮವು ತಾಲ್ಲೂಕು ಕೇಂದ್ರ ಹುನಗುಂದದಿಂದ ೧೫.೦೦ ಕಿ.ಮೀ. ದೂರದಲ್ಲಿದೆ. ಇಲ್ಲಿನ ನೆಲೆಯು ಸುಮಾರು ೬೦೦ ವರುಷಗಳ ಇತಿಹಾಸ ಹೊಂದಿದೆ. ೧೯೪೫ ನೇ ಇಸವಿಯಲ್ಲಿ ನೆಲೆಯು ಜೀರ್ಣೋದ್ಧಾರಗೊಂಡಿದೆ. ಕಲ್ಲಿನಿಂದ ನಿರ್ಮಾಣವಾದ ಗುಡಿಯಾಗಿದ್ದು, ಗರ್ಭಗುಡಿ, ಪ್ರಾಂಗಣಗಳನ್ನು ಹೊಂದಿದ್ದು, ಮುಂಭಾಗದಲ್ಲಿ ಮಲ್ಲಗಂಬವಿದೆ. ಗರ್ಭಗುಡಿಯಲ್ಲಿ ಪಂಚಲೋಹದ ರೇವಣಸಿದ್ಧನ ಮುಖವಾಡದ ಮೂರ್ತಿ, ಪ್ರಭಾವಳಿ, ಶಂಖ, ಗುಂಡಗೊಪ್ಪ, ಭರಮಪ್ಪ ದೈವ ಹಾಗೂ ಇತರೆ ಪರಿಕರಗಳನ್ನು ಸ್ಥಾಪಿಸಲಾಗಿದೆ. ಇಲ್ಲಿನ ರೇವಣಸಿದ್ಧನ ಮೂಲನೆಲೆಯು ಆಂಧ್ರಪ್ರದೇಶ ಕೊಲ್ಲಿಪಾಕಿಯಾಗಿದ್ದು, ನಂತರದಲ್ಲಿ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ರಟ್ಟಗಲ್ಲು ಗ್ರಾಮದಲ್ಲಿ ಕೆಲಕಾಲ ನೆಲಸಿ ನಂತರ ಸೂಳಿಭಾವಿಯಲ್ಲಿ ನೆಲೆ ನಿಂತುದಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಶ್ರಾವಣಮಾಸದಲ್ಲಿ ದಿನಂಪ್ರತಿ ಬೆಳಗಿನ ೬.೦೦ ಗಂಟೆಗೆ ಪೂಜೆ, ಸಂಜೆ ೯ ದಿನಗಳ ಕಾಲ ರೇವಣಸಿದ್ಧನ ಪುರಾಣ ಪಠಣವಿರುವುದು. ಈ ಸಂದರ್ಭದಲ್ಲಿ ಪುರಾಣದ ೯ನೇ ಅಧ್ಯಾಯ ಮುಗಿದ ನಂತರ ರುದ್ರಮುನಿ ತೊಟ್ಟಿಲು ಸೇವೆ ಕಾರ್ಯಕ್ರಮವು ನಡೆಯುವುದು ವಿಶೇಷವಾಗಿದೆ. ತೊಟ್ಟಿಲು ಸೇವೆಯಲ್ಲಿ ಭಾಗವಹಿಸಿದ ೯ ಮಹಿಳೆಯರಿಗೆ ಮಠದ ವತಿಯಿಂದ ಉಡಿತುಂಬುವ ಕಾರ್ಯಕ್ರಮವು ಜರುಗುವುದು. ನಾಮಕರಣದ ಶಾಸ್ತ್ರದ ಭಾಗವಾಗಿ ಕಿವಿಊದಿ ರುದ್ರಮುನಿ ಎಂದು ಹೆಸರಿಟ್ಟು, ತೊಟ್ಟಿಲು ತೂಗಿ ಜೋಗುಳ ಹಾಡುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನಂತರ ಭಕ್ತಾಧಿಗಳಿಗೆ ಮಾದಲಿ ಪ್ರಸಾದವಿರುತ್ತದೆ. ಶ್ರಾವಣಮಾಸದ ಕಡೆದಿನದಂದು ರೇವಣಸಿದ್ಧನ ಉತ್ಸವ ಮೂರ್ತಿಯನ್ನು ಹೊತ್ತ ಪಾಲಕಿಯು ಊರ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯು ನೆರವೇರುವ ಮುಖಾಂತರ ಶ್ರಾವಣಮಾಸದ ಆಚರಣೆಗಳು ಮುಕ್ತಾಯವಾಗುತ್ತವೆ.

ಈ ನೆಲೆಯ ರೇವಣಸಿದ್ಧನಿಗೆ ಬೇಡ ಜನಾಂಗದವರೆ ಹೆಚ್ಚಿನ ಭಕ್ತರಾಗಿದ್ದು; ಈ ಜನಾಂಗದವರೇ ಪ್ರಸ್ತುತ ನೆಲೆಯಲ್ಲಿ ರೇವಣಸಿದ್ಧನ ಗುಡಿ ನಿರ್ಮಿಸಿ, ಕುರುಬ ಜನಾಂಗದ

ಒಡೆಯರುಗಳನ್ನು ಪೂಜಾ ಪುನಸ್ಕಾರಗಳಿಗೆ ನಿಯುಕ್ತಿಗೊಳಿಸಿದ್ದಾರೆ. ಪ್ರಸ್ತುತ ಶ್ರೀ ಸಂಗಯ್ಯ ರುದ್ರಯ್ಯ ಪೂಜಾರಿ ಮನೆತನದವರು ಪೂಜಾರಿಗಳಾಗಿದ್ದಾರೆ. ಈ ಕುರುಬ ಪೂಜಾರಿಗಳು ಲಿಂಗಾಯತ ಧರ್ಮಕ್ಕೆ ಪರಿವರ್ತನೆಯಾಗಿರು-ವುದನ್ನು ಗಮನಿಸಬಹುದಾಗಿದೆ.

೨೦. ತರೀಕೆರೆ: ಚಿಕ್ಕಮಗಳೂರು ಜಿಲ್ಲೆ


ಚಿಕ್ಕಮಗಳೂರು ತಾಲ್ಲೂಕು ಕೇಂದ್ರ ತರೀಕೆರೆ ಪಟ್ಟಣದಲ್ಲಿ ಸುಮಾರು ೫-೬ ತಲೆಮಾರಿನಷ್ಟು ಹಳೆಯದಾದ ಕರಿಹೆಂಚಿನ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಯ ದೇವಾಲಯವಿದ್ದುದಾಗಿ ಗ್ರಾಮಸ್ಥರು ಹೇಳುತ್ತಾರೆ. ಈ ಸ್ಥಳದಲ್ಲಿಯೆ ೧೯೮೨ ರಲ್ಲಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ಪೂರ್ವದೆಡೆ ಪ್ರವೇಶದ್ವಾರವನ್ನು ಹೊಂದಿರುವ ದೇವಾಲಯವು ಗರ್ಭಗುಡಿ ಮತ್ತು ಪ್ರಾಂಗಣವನ್ನು ಹೊಂದಿದ್ದು, ಮುಂಭಾಗದಲ್ಲಿ ದೀಪಕಂಬವಿದೆ.

ಈ ದೇವಾಲಯದಲ್ಲಿ ಪೂರ್ವಾಭಿಮುಖವಾಗಿ ಮೂರು ಗರ್ಭಗೃಹವಿರುವುದು ವಿಶೇಷವಾಗಿದೆ. ಈ ಪೈಕಿ ಮಧ್ಯದ ಮುಖ್ಯ ಗರ್ಭಗುಡಿಯಲ್ಲಿ ರೇವಣಸಿದ್ಧೇಶ್ವರ ಲಿಂಗೋದ್ಭವ ವಿಗ್ರಹವಿದ್ದರೆ, ಬಲಗಡೆಯ ಗರ್ಭಗುಡಿಯಲ್ಲಿ ಸೀತಾರಾಮಾಂಜನೇಯ ವಿಗ್ರಹವಿರುವುದು ಹಾಗೂ ಎಡಗಡೆಯ ಗರ್ಭಗೃಹದಲ್ಲಿ ಅಕ್ಕಿಬಾಜಿ ನಿಂಗಪ್ಪೊಡೆಯರ ಗದ್ದುಗೆ ಇದೆ. ದೇವಸ್ಥಾನದ ಮುಂಭಾಗದ ಎಡಭಾಗದಲ್ಲಿ ಒಡೆಯರ ಆಪ್ತಶಿಷ್ಯನಾದ ತಿರುಕಪ್ಪನ ಗದ್ದುಗೆ ಇದೆ. ದೇವಾಲಯದ ಆವರಣದಲ್ಲಿ ಈ ಹಿಂದೆ ನಾಗರಕಲ್ಲು ಇತ್ತೆಂದು, ಜೀರ್ಣೋದ್ಧಾರದ ಸಂದರ್ಭದಲ್ಲಿ ಸದರಿ ಕಲ್ಲನ್ನು ಈಶ್ವರ ದೇವಾಲಯಕ್ಕೆ ಸ್ಥಳಾಂತರಿಸಲಾಗಿದೆ ಎಂದು ಸ್ಥಳೀಯರು ಹೇಳುವರು. ದೇವಾಲಯದ ಆಸುಪಾಸಿನಲ್ಲಿ ಗುಳ್ಳಮ್ಮ, ಮೈಲಾರಲಿಂಗೇಶ್ವರ ಮತ್ತು ಬೀರದೇವರ ದೇವಾಲಯಗಳಿವೆ.

ತರೀಕೆರೆಯ ರೇವಣಸಿದ್ಧನಿಗೆ, ೧) ದಾರೆಕುಲ ೨) ಸಾಂಗ್ಯೆಕುಲ ೩) ಉಳ್ಳೆಕುಲ ೪)ತೋಪಿನಕುಲ ೫)ಸಾವಂತಕುಲ ೬) ದಂಡೆಕುಲ ೭) ಹಾಲುಕುಲ ಬುಡಕಟ್ಟುಗಳ ಏಳು ಗುಡಿಕಟ್ಟುಗಳು ಹಾಗೂ ೧)ಶಿವನಿ ಮಲೆಯಮ್ಮ ೨) ಹಳ್ಳಳ್ಳಿ ಮರಿಯಮ್ಮ ೩) ಮತ್ತಿಘಟ್ಟ ಬನದಮ್ಮ ೪) ಉಚ್ಚಂಗಿ ಯಲ್ಲಮ್ಮ ದೈವಗಳ ನಾಲ್ಕು ಹರಿವಾಣಗಳಿವೆ. ಈ ನೆಲೆಯಲ್ಲಿ ಧನುರ್ ಮಾಸದಲ್ಲಿ ೨೧ ದಿನಗಳ ಕಾಲ ನಿರಂತರವಾಗಿ ರೇವಣಸಿದ್ಧನಿಗೆ ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳು ಬೆಳಗಿನ ಜಾವ ೪.೩೦ ರಿಂದ ಪ್ರಾರಂಭವಾಗಿ, ಊರಿನ ಪ್ರಮುಖ ಬೀದಿಗಳಲ್ಲಿ ಭಜನೆ, ಶಿವಸ್ಮರಣೆ ಮಾಡುತ್ತ ೬.೦೦ ಗಂಟೆಯ ವೇಳೆಗಾಗಲೇ ದೇವಸ್ಥಾನವನ್ನು ಪ್ರವೇಶಿಸುತ್ತವೆ. ಧನುರ್‌ಮಾಸದ

ಕೊನೆಯ ದಿನವಾದ ಮಕರಸಂಕ್ರಾಂತಿಯಂದು ಸಕಲಮಂಗಳವಾದ್ಯಗಳೊಂದಿಗೆ ರೇವಣಸಿದ್ಧನ ಉತ್ಸವ ಮೂರ್ತಿಯ ಮೆರವಣಿಗೆಯು ಕುರುಬರ ಓಣಿಯಲ್ಲಿ ಹೊರಡುವುದು. ಮಧ್ಯಾಹ್ನ ೩.೦೦ ಗಂಟೆಯ ವೇಳೆಗೆ ಮೆರವಣಿಗೆಯು ದೇವಸ್ಥಾನ ತಲುಪಿ ಸಂಪನ್ನವಾಗುವುದು. ನಂತರದಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆದು, ಭಕ್ತರೆಲ್ಲರೂ ಪರಸ್ಪರ ಎಳ್ಳು ಬೆಲ್ಲ ವಿನಿಮಯ ಮಾಡಿಕೊಳ್ಳುವರು. ಸಂಜೆಯ ವೇಳೆ ಭಕ್ತಾದಿಗಳ ಹರಕೆಯನುಸಾರ ದವಸಧಾನ್ಯಗಳ, ತರಕಾರಿಗಳ, ಹಣ್ಣು ಹಂಪಲ, ಅಡಿಕೆ ಇತ್ಯಾದಿಗಳಿಂದ ತುಲಾಭಾರ ಸೇವೆ ನಡೆಯುವುದು. ಸಂಜೆಯಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವರು. ಶಿವರಾತ್ರಿ, ಅಮಾವಾಸ್ಯೆ, ಕಾರ್ತಿಕಮಾಸ ಮತ್ತು ಯುಗಾದಿ ಹಬ್ಬಗಳಲ್ಲಿ ಇತರೆ ನೆಲೆಗಳಂತೆ ಇಲ್ಲಿಯೂ ರೇವಣಸಿದ್ಧನಿಗೆ ಸಂಬಂಧಿಸಿದ ವಿಶೇಷ ಆಚರಣೆಗಳು, ಪೂಜೆ ಪುನಸ್ಕಾರಗಳು ಇಲ್ಲಿಯೂ ಆಚರಿಸಲ್ಪಡುತ್ತವೆ. ಜಾತ್ರಾಮಹೋತ್ಸವ ಹಾಗೂ ಪುಣ್ಯ ಮಾಡುವ ಸಂದರ್ಭಗಳಲ್ಲಿ ರೇವಣಸಿದ್ಧನ ಪಲ್ಲಕ್ಕಿಯನ್ನು ಹೊರಡಿಸುವರು. ಕಂಥಾಧಾರಣೆ ಸೇವೆಯು ಈ ನೆಲೆಯಲ್ಲಿ ಪ್ರಚಲಿತದಲ್ಲಿ ಇರುವುದಿಲ್ಲ.

ಈ ಊರಿನಲ್ಲಿ ಸಾವಂತಕುಲದ ಒಡೆಯರ ಒಂದೇ ಮನೆತನವಿರುವುದು ತುಂಬಾ ವರುಷಗಳಿಂದ ಈ ಮನೆತನದವರೇ ರೇವಣಸಿದ್ದೇಶ್ವರ ದೇವಸ್ಥಾನದ ಪೂಜೆ ಇತ್ಯಾದಿ ಧಾರ್ಮಿಕ ಕಾರ್ಯಗಳನ್ನು ಮಾಡುತ್ತ ಬಂದಿರುವರು. ಇತ್ತೀಚಿನವರೆಗೂ ಶ್ರೀ ನಿಂಗಪ್ಪ ಒಡೆಯರವರು ಈ ನೆಲೆಯ ಒಡೆಯರಾಗಿ ಧಾರ್ಮಿಕ ಕಾರ್ಯಕ್ರಮಗಳ ನೇತೃತ್ವವಹಿಸಿಕೊಂಡಿದ್ದರು. ಪ್ರಸ್ತುತ ಒಡೆಯರು ವಯೋವೃದ್ಧ-ರಾಗಿದ್ದರಿಂದಲೂ ಹಾಗೂ ಅವರ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸಮಾಡಿ ಸರ್ಕಾರದ ಉನ್ನತ ಹುದ್ದೆಯಲ್ಲಿರುವುದರಿಂದ; ರೇವಣಸಿದ್ಧನ ಸೇವಾಕಾರ್ಯ ಕಷ್ಟಸಾಧ್ಯವಾದ ಕಾರಣ, ಪಂಚಮಸಾಲಿ ಕುಲಕ್ಕೆ ಸೇರಿದ ಶ್ರೀ ಟಿ.ಆರ್.ಓಂಕಾರಸ್ವಾಮಿಯವರನ್ನು ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು ನಿಯುಕ್ತಿಗೊಳಿಸಲಾಗಿದೆ. ಮುಂದುವರೆದು ರೇವಣಸಿದ್ಧೇಶ್ವರ ದೇವಾಲಯ ಆಡಳಿತ ಮಂಡಳಿಯನ್ನೂ ಸ್ಥಾಪಿಸಲಾಗಿದೆ. ಶ್ರೀ ಡಿ.ಸಿ.ಪದ್ಮರಾಜುರವರು ಪ್ರಸ್ತುತ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ಆಡಳಿತ ಮಂಡಳಿಯ ನಿರ್ದೇಶನದಲ್ಲಿ ರೇವಣಸಿದ್ಧನ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತವೆ. ಮಂಡಳಿಯು ೨೦೧೪ ರಲ್ಲಿ ರೇವಣಸಿದ್ಧ ಮಾಂಗಲ್ಯ ಮಂದಿರವನ್ನು ನಿರ್ಮಿಸಿ ಸಾರ್ವಜನಿಕ ಸೇವೆಗೆ ಮುಕ್ತವಾಗಿಸಿದ್ದಾರೆ.



೨೧. ಕೋಡಮಗ್ಗಿ : ಹಿರೇಕೆರೂರ ತಾಲ್ಲೂಕು: ಹಾವೇರಿ ಜಿಲ್ಲೆ:

ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕು ಕೊಡಮಗ್ಗಿ ಗ್ರಾಮದ ಕೆರೆಯ ದಂಡೆಯ ಬದಿಯಲ್ಲಿ ಪುರಾತನ ರೇವಣಸಿದ್ಧನ ದೇವಾಲಯವಿದೆ. ಸ್ಥಳೀಯರು ಈ ದೇವಸ್ಥಾನವನ್ನು ಬಪ್ಪೇಶ್ವರ ದೇವಾಲಯವೆಂದು ಕರೆಯುವರು. ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಶಾಸನ ಸೂಚಿಯ ಪುಟ ಸಂಖ್ಯೆ ೭೨, ಗ್ರಾಮ ಸಂಖ್ಯೆ–೧೭, ಶಾಸನ ಸಂಖ್ಯೆ ೭೭–೭೮ರಲ್ಲಿ ರೇವಣಸಿದ್ಧನ ದೇವಾಲಯದ ಬಗ್ಗೆ ಉಲ್ಲೇಖವಿದೆ. ಈ ದೇವಾಲಯದ ಸಮುಚ್ಚಯದಲ್ಲಿ ಪುರಾತನ ಶಾಸನಗಳಿವೆ. ಈ ಶಾಸನಗಳು ಕ್ರಿ.ಶ. ೧೧೭೮ ಕಾಲಮಾನಕ್ಕೆ ಸೇರಿದವುಗಳಾಗಿವೆ. ಶಾಸನಗಳಲ್ಲಿ ತ್ರುವತ, ಮಹಾಪ್ರಧಾನ ಮಹಾಸಾಮಂತಾಧಿಪತಿಯೊಬ್ಬನು ಸೋಮನಾಥ ದೇವಾಲಂಯಕ್ಕೆ ನೀಡಿದ ದಾನಗಳ ಹಾಗೂ ಕೊಡವೊಗ್ಗೆಂಯ ಅಳಿವಿನಲ್ಲಿ ಸಾವಂತಕಾಳೆಯನೆಂಬುವನ ವೀರಮರಣ ಬಗೆಗಿನ ಉಲ್ಲೇಖಗಳಿವೆ. ಈ ಎಲ್ಲ ಆಧಾರಗಳಿಂದ ಈ ದೇವಾಲಯವು ೧೧–೧೨ನೇ ಶತಮಾನದ ಸುಮಾರಿನಲ್ಲಿ ನಿರ್ಮಿತವಾಗಿರಬಹುದೆಂದು ಅಭಿಪ್ರಾಯಿಸಬಹುದಾಗಿದೆ. ದೇವಾಲಯವು ಗರ್ಭಗುಡಿ ಮತ್ತು ಪ್ರಾಂಗಣವನ್ನು ಹಾಗೂ ಗೋಪುರವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಲಿಂಗವನ್ನೂ, ಪ್ರಾಂಗಣದಲ್ಲಿ ನಾಗರಕಟ್ಟೆಯನ್ನು ಸ್ಥಾಪಿಸಲಾಗಿದೆ. ದೇವಸ್ಥಾನದ ಬಗೆಗೆ ಅನೇಕ ಸ್ಥಳ ಪುರಾಣಗಳು ಹಾಗೂ ಐತಿಹ್ಯಗಳಿವೆ. ಆ ಪ್ರಕಾರ ರೇವಣಸಿದ್ಧರು ಕಲ್ಯಾಣಕ್ಕೆ ಹೋಗುವಾಗ ಈ ದೇವಾಲಯದಲ್ಲಿ ತಂಗಲು ನಿರ್ಧರಿಸಿದಾಗ ಪೂಜಾರಿಯು, ದೇವಾಲಯದ ಮುಂಭಾಗದಲ್ಲಿರುವ ಆಲದಮರದಲ್ಲಿ ಮನುಷ್ಯರನ್ನು ತಿನ್ನುವ ರಾಕ್ಷಸ ದಂಪತಿಗಳಿರುವುದಾಗಿಯೂ ಕಾರಣ ಇಲ್ಲಿ ತಂಗುವುದು ಬೇಡ ಎಂದು ಪೂಜಾರಿಯು ಹೇಳಿದನೆಂದೂ ಈತನ ಮಾತನ್ನು ಲೆಕ್ಕಿಸದೆ ರೇವಣಸಿದ್ಧರು ಅಲ್ಲಿಯೇ ಎರಡು ದಿನಗಳ ಕಾಲ ತಂಗಿ ಮರುದಿನ ಬೆಳಿಗ್ಗೆ ಬಿಟ್ಟದೆಡೆ ಪ್ರಯಾಣ ಬೆಳೆಸಿದ ರೇವಣಸಿದ್ಧರು ದನಕಾಯುವ ಬಾಲಕರನ್ನು

ತಿನ್ನಲು ಬಂದ ರಾಕ್ಷಸ ದಂಪತಿಗಳನ್ನು ತ್ರಿಶೂಲದಿಂದ ತಿವಿದು ಕೆಳಕೆಡವಿದರೆಂದು; ಆಗ ರಾಕ್ಷಸನು ಜೀವನಮುಕ್ತಿಯನ್ನು ಕೇಳಿದಾಗ; ನೀವು ಮಾಡಿದ ಪಾಪಕಾರ್ಯಗಳಿಂದಾಗಿ ಮದಗದ ಕೆರೆಯಲ್ಲಿ ನೀರಿಲ್ಲದಾಗಿದೆ, ಕಾರಣ ನೀನು ಮಾಸೂರಿನ ಮಲ್ಲನಗೌಡನ ಮಗ ಬಸವನಗೌಡನಾಗಿ; ನಿನ್ನ ಹೆಂಡತಿ ಬಸವಾಪಟ್ಟಣದ ಪುಟ್ಟನಗೌಡನ ಮಗಳು ಕೆಂಚಮ್ಮಳಾಗಿ ಮರುಹುಟ್ಟಿ ಮತ್ತೆ ಸತಿಪತಿಯರಾಗಿ; ಮುಂದಿನ ಕಾಲಸಂದರ್ಭದಲ್ಲಿ ನಿನ್ನ ಹೆಂಡತಿ ಕೆಂಚಮ್ಮಳಿಂದ ಈ ಕೆರೆ ಜಲಮಯವಾಗಲೆಂದು ರೇವಣಸಿದ್ಧರು ಹರಸಿದರೆಂದೂ; ನಂತರದಲ್ಲಿ ರಾಕ್ಷಸ ದಂಪತಿಗಳ ದೇಹಗಳು ಎರಡು ಕಬ್ಬಿಣದ ಗುಂಡುಗಳಾದವೆಂದೂ ಹೇಳುವರು. ಈ ಎರಡು ಕಬ್ಬಿಣದ ಗುಂಡುಗಳನ್ನು ಬೆಂಕಿಯಲ್ಲಿ ಕಾಯಿಸಿ, ಬಡಿದರು ಹೀಚಲಿಲ್ಲವೆಂದೂ ನಂತರದಲ್ಲಿ ಅವುಗಳನ್ನು ಸುರಗಿ ಹಳ್ಳಿಯ ಹತ್ತಿರ ತಂದು ಬಡಿದಾಗ, ಮೊಲವೊಂದು ಹೊರಬಂದು ನಾಲಿಗೆ ಚಾಚಿತೆಂದೂ, ಆ ನಾಲಿಗೆಯಿಂದ ಎರಡು ಖಡ್ಗಗಳನ್ನು ರೇವಣಸಿದ್ಧರು ತಯಾರಿಸಿದರೆಂದೂ ಗುಂಡು ಕಾಯಿಸಿದ ಸ್ಥಳ ಬವಾಸಪುರವೆಂದು, ಗುಂಡು ಕಾಯಿಸುವಾಗ ಕಿಟ್ಟಸಿಡಿದ ಸ್ಥಳ ಕಿಟ್ಟದಹಳ್ಳಿಯೆಂದು ಹಾಗೂ ಸುರಗಿಯನ್ನು ತಯಾರಿಸಿದ ಸ್ಥಳ ಸುರಗಿಹಳ್ಳಿಯೆಂದೂ ಪ್ರಸಿದ್ಧವಾಯಿತು ಎಂಬುದು ಸ್ಥಳೀಯರ ನಂಬಿಕೆ.

ಈಗಲೂ ಪರಿಸರದಲ್ಲಿ ಹೆಸರಿನ ಹಳ್ಳಿಗಳಿರುವುದನ್ನು ಗಮನಿಸಬಹುದಾಗಿದೆ. ರೇವಣಸಿದ್ಧರು ಇಲ್ಲಿ ತಯಾರಿಸಲಾದ ಎರಡೂ ಖಡ್ಗಗಳ ಪೈಕಿ ಒಂದನ್ನು ಸುರಗಿಹಳ್ಳಿ ಕೆರೆಯಲ್ಲಿ ಹುದುಗಿಸಿಟ್ಟರೆಂದು, ಇನ್ನೊಂದನ್ನು ವೀರವಿಕ್ರಮಾದಿತ್ಯನಿಗೆ ಕೊಟ್ಟರೆಂಬುದು ಸ್ಥಳೀಯ ಐತಿಹ್ಯ. ಕೊಡಮಗ್ಗಿಗೆ ಹೊಂದಿಕೊಂಡಂತೆ, ಮದಗದಕರೆ ಇರುವುದು. ಈ ಕೆರೆಯನ್ನು ವಿಜಯನಗರದ ರಾಜನಾದ ವೀರನರಪತಿ ಕೃಷ್ಣದೇವರಾಯನ ಅಧೀನರಾಜನಾದ ಕೆಳದಿರಾಜ ಸದಾಶಿವನಾಯಕನು ಕಟ್ಟಿಸಿದುದಾಗಿದೆ. ಕೆರೆ ಪೂರ್ಣಪ್ರಮಾಣದಲ್ಲಿ ನಿರ್ಮಾಣವಾದರೂ ನೀರು ತುಂಬಿದ ಕಾರಣ; ಹೊಳೆಯ(ದೇವತೆ) ಕೋರಿಕೆಯಂತೆ ೧೦೧ ಕನ್ನಿಕೆಯರನ್ನು ಬಲಿಕೊಡಲು ರಾಜನು ನಿರ್ಧರಿಸಿದಾಗ; ಕೆಳದಿರಾಜನ ಕನಸಿನಲ್ಲಿ ರೇವಣಸಿದ್ಧ ಬಂದು; ಬಸವಾಪಟ್ಟಣದ ಪುಟ್ಟಗೌಡನ ಮಗಳು ಕೆಂಚಮ್ಮನಿಂದ ಕೆರೆ ತುಂಬುವುದು; ನೀನು ವಿನಾಕಾರಣ ೧೦೧ ಕನ್ನಿಕೆಯರನ್ನು ಬಲಿಕೊಡಬೇಡ; ಕೆರೆತುಂಬಿಸುವ ಕಾರ್ಯವನ್ನು ನಾನು ಸ್ವಂತ : ಕೋಡಮಗ್ಗಿಯಲ್ಲಿದ್ದುಕೊಂಡೆ ಮಾಡುವೆನು ಎಂದು ಹೇಳಿದನೆಂದು ಆಗ ರಾಜನು ೧೦೧ ಕನ್ನಿಕೆಯರನ್ನು ಬಲಿಕೊಡುವುದನ್ನು ಬಿಟ್ಟನೆಂಬುದು ಸ್ಥಳೀಯರ ನಂಬಿಕೆಯಾಗಿದೆ. ಕೋಡಮಗ್ಗಿಯಲ್ಲಿಯ ರೇವಣಸಿದ್ಧರನ್ನು ಕುರಿತಾದ ಐತಿಹ್ಯ, ಪುರಾಣಗಳು ನಂಬಿಕೆಗಳು, ಮಹಾರಾಷ್ಟ್ರದ ಮಾಚನೂರಿನ ನೆಲೆಯ ರೇವಣಸಿದ್ಧರ

ಬಗೆಗಿನ ಐತಿಹ್ಯ ಪುರಾಣಗಳು ನಂಬಿಕೆಗಳಲ್ಲಿ ಬಹು ಸಾಮ್ಯತೆಗಳಿರುವುದನ್ನು ಗಮನಿಸಬಹುದಾಗಿದೆ. ಪುರಾತನ ರೇವಣಸಿದ್ಧನ ನೆಲೆಗಳಲ್ಲಿ ಒಂದಾದ ಈ ನೆಲೆಯಲ್ಲಿ ಇಂದಿಗೂ ದಿನನಿತ್ಯ ಪೂಜೆ-ಪುನಸ್ಕಾರಗಳು ನಡೆಯುತ್ತಲಿವೆ. ಜಂಗಮರು ರೇವಣಸಿದ್ಧನ ಪುಜಾ ಕೈಂಕರ್ಯಗಳನ್ನು ಮಾಡುತ್ತಿರುವರು.

೨೨. ಚೌಡಯ್ಯದಾನಪುರ: ರಾಣಿಬೆನ್ನೂರು ತಾಲ್ಲೂಕು: ಹಾವೇರಿ ಜಿಲ್ಲೆ

ಹತ್ತು-ಹನ್ನೆರಡನೇಯ ಶತಮಾನದ ಸಂದರ್ಭದಲ್ಲಿ ತುಂಗಭದ್ರೆಯ ತಟ ಅನೇಕ ಧಾರ್ಮಿಕ ನೆಲೆಗಳಿಗೆ ಭದ್ರ ಬುನಾದಿಯನ್ನು ಹಾಕಿಕೊಟ್ಟಂತೆ; ಚೌಡಯ್ಯದಾನಪುರಕ್ಕೂ ಹಾಕಿಕೊಟ್ಟಿದೆ. ಶಿವದೇವರು ಅವತರಿಸಿದ ಸ್ಥಳ ಚೌಡಯ್ಯದಾನಪುರ. ಇದು ಈಗಿನ ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕಿಗೆ ಸೇರಿದೆ. ತುಂಗಭದ್ರಾ ನದಿಯ ದಂಡೆಯ ಮೇಲಿದೆ. ಅಂಬಿಗರ ಚೌಡಯ್ಯನು ಈ ಗ್ರಾಮವನ್ನು ದಾನವಾಗಿ ಪಡೆದುದರಿಂದಲೊ ಅಥವಾ ಆತನು ದಾನವಾಗಿ ನೀಡಿದುದರಿಂದಲೊ ಈ ಗ್ರಾಮಕ್ಕೆ ಚೌಡಯ್ಯದಾನಪುರವೆಂದು ಹೆಸರು ಬಂದಿರಬಹುದಾಗಿದೆ. ನದಿಯ ತಟದಿಂದ ನೂರು ಸೋಪಾನಗಳ ಮೇಲೆ ಶ್ರೀಮುಕ್ತಿನಾಥ ದೇವಾಲಯವಿದೆ.


ಮುಕ್ತೀಶ್ವರಲಿಂಗವು ಪ್ರಾಚೀನವಾದುದು ಕ್ರಿ.ಶ. ೮೯ ರಲ್ಲಿಯೇ ಮುಕ್ತೇಶ್ವರ ದೇವಾಲಯವು ಇತ್ತೆಂಬುದರ ಬಗ್ಗೆ ಶಾಸನ ಇರುವುದಾಗಿ ರಾಯೆಲ್ ಏಷ್ಯಾಟಿಕ್ ಸೊಸೈಟಿ (ಬೊಂಬಾಯಿ ಶಾಖೆ) ಸಂ. ೧ x ೧೮೬೭-೬೮ ಪುಟ ೩೨೬ರಲ್ಲಿ ನಮೂದಾಗಿದೆ. ಮುಂದುವರೆದು ವಿಕ್ರಮಾಧಿತ್ಯ ಪ್ರಧಾನ ನಾಯಕನು ಈ ದೇವರಿಗೆ ಮುಕ್ತಜಿಯವರ ಕಾಲಂಕರ್ಚಿದತ್ತಿ ಬಿಟ್ಟಂತೆ ಉಲ್ಲೇಖವಿದೆ. ಆ ಕಾಲದಲ್ಲಿ ಅಲ್ಲಿಯ ಗುರುಗಳು ಕಾಳಾಮುಖರಾದ ಮುಕ್ತಜಿಯವರೆಂದು ಕಂಡುಬರುತ್ತದೆ. (ಶಿವಾನುಭವ ಮೇ ೧೯೨೯ ಪುಟ ೮೦) (ಅನುಬಂಧ-೧, ನಂ VII ಪುಟ ೩೧). "ಕಾಳಾಮುಖರೆಂದರೆ ವಿಶೇಷ ಶಿವದೀಕ್ಷೆ ಹೊಂದಿದವರೆಂದು ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ. ಹಾಗೂ ಕೆಲವು ಶಾಸನಗಳಲ್ಲಿ ಕಾಳಾಮುಖಿ ಯತೀಶ್ವರರನ್ನು ವರ್ಣಿಸುವಾಗ ಅವರ ತತ್ವಜ್ಞಾನವೇನಿತ್ತೆಂಬುದು ಕೂಡಾ ತಿಳಿದು ಬರುವುದು." (ಶರಣಸಾಹಿತ್ಯ ಸಂ.೧೨. ಸಂ. ೧ ಪುಟ ೧೯-೨೨. ಕಪಟರಾಳ ಕೃಷ್ಣರಾಯರ ಲೇಖನ).

ಶರೀಫ ಕವಿ ವಿರಚಿತ "ಶಿವದೇವ ವಿಜಯಂ" ಕಾವ್ಯವು; ಈ ಕ್ಷೇತ್ರದ ಬಗ್ಗೆ ಬೆಳಕು ಚೆಲ್ಲುವ ಕೃತಿಯಾಗಿದೆ. ಈ ಕಾವ್ಯದ ಕರ್ತೃವಾದ ಶರೀಫ ಕವಿಯ ವಿಷಯದಲ್ಲಿ ವಿಶೇಷಾಂಶಗಳು ತಿಳಿದುಬರುವುದಿಲ್ಲ. ೯ನೇಯ ಶತಮಾನಗಳಷ್ಟು ಹಿಂದೆಯೇ ತನ್ನನ್ನು ಗುರುತಿಸಿಕೊಂಡಿದ್ದ

ಚೌಡಯ್ಯದಾನಪುರ: ೧೨-೧೩ನೇಯ ಶತಮಾನದ ವೇಳೆಗೆ ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿಯಾಗಿತ್ತು. ಈ ನೆಲೆಯ ಮುಖ್ಯ ಆಕರ್ಷಣೆಯಾದ "ಮುಕ್ತೇಶ್ವರ ದೇವಾಲಯ" ವನ್ನು ಗುಪ್ತರಸರ ಮಾಂಡಲೀಕನಾದ, ಜಟಚೋಳಾ ವಂಶಸ್ಥ ಅತ್ತಿರಾಜನು; ಚಾಲುಕ್ಯ ಚಕ್ರವರ್ತಿ ವಿಕ್ರಮಾಧಿತ್ಯ-VI ನ ಆಳ್ವಿಕೆಯ ಕಾಲದಲ್ಲಿ ಕಟ್ಟಿದನೆಂದು, ನಂತರದಲ್ಲಿ ಸಂತ ಶಿವದೇವನು ಇದರ ಜೀರ್ಣೋದ್ಧಾರ ಮಾಡಿದನೆಂದು ತಿಳಿದುಬರುತ್ತದೆ.

ಚಾಲುಕ್ಯ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯವು, ಸಭಾ-ಮಂಟಪ, ಮುಖ್ಯ ಮಂಟಪ, ಅಂತರಾಳ ಹಾಗೂ ಗರ್ಭಗುಡಿಯನ್ನು ಹೊಂದಿದೆ. ಚೌಡಯ್ಯದಾನಪುರದ ಇತಿಹಾಸವು ಶಿವದೇವ ಹಾಗೂ ಆತನ ಒಡೆಯರ್ ವಂಶಸ್ಥರು , ಅಂಬಿಗರ ಚೌಡಯ್ಯನ ಹಾಗೂ ಶಿವದೇವರ ಕಾಲದ ರಾಜಮನೆತನಗಳ ಸಂಬಂಧವನ್ನು ಒಳಗೊಂಡಿದೆ. ದೇವಗಿರಿಯ ಯಾದವರಂತೆ; ಶಿವದೇವ ಒಡೆಯರ ಕೃಪೆಗೆ ಪಾತ್ರರಾಗಿದ್ದವರಲ್ಲಿ ಗುತ್ತರಸರು ಎರಡನೇಯವರು. ಈಗಿನ ಹಾವೇರಿ ತಾಲ್ಲೂಕಿನಲ್ಲಿರುವ ಗುತ್ತಲ ಎಂಬುದು ಇವರ ರಾಜಧಾನಿಯಾಗಿತ್ತು ಎಂದು ತಿಳಿಯುವುದು. ಚಂದ್ರಗುಪ್ತನ ವಂಶಸ್ಥರೇ ಗುತ್ತರಸರಿರಬಹುದಾಗಿದೆ. (ಶಿವದೇವ ವಿಜಯಂ). ಜೈನ ಧರ್ಮೀಯರಾಗಿದ್ದ ಇವರು; ನಂತರದಲ್ಲಿ ವೀರಶೈವ ಧರ್ಮ ಸ್ವೀಕರಿರಬಹುದಾಗಿದೆ. 'ಗುಪ್ತ' ಎಂಬುದರ ತದ್ಭವವೇ "ಗುತ್ತ" ಆಗಿರಬಹುದು.

ಈ ಗುಪ್ತರಸರ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ; ವೀರಕನ್ನಾ ದೇವಿಯು ಶಿವದೇವರ ಪರಮ ಶಿಷ್ಯಳಾಗಿದ್ದಳು. ಈಕೆಯ ಪತಿ ಕಲ್ಲರಸ (ಕಲಿದೇವರಸ) ರಾಜಮನೆತನಕ್ಕೆ ಸೇರಿದವನಾಗಿದ್ದನು. ಪತಿಯು ತೀರಿಕೊಂಡ ನಂತರ ಕನ್ನಾದೇವಿಗೆ ವಿರಕ್ತಿ ಹುಟ್ಟಿತು. ಹಾಗೂ ಈ ವೀರ ವಿರಕ್ತಿ ರಾಜಮಾನ್ಯವೂ ಆಗಿದ್ದರಿಂದ ಶ್ರೀಗುರುರೇವಣಸಿದ್ಧೇಶ್ವರರ ಆಜ್ಞೆಯಂತೆ ಮುಕ್ತಿ ಕ್ಷೇತ್ರವಾದ ಶಿವಪುರಕ್ಕೆ ಕಾಲ್ನಡಿಗೆಯಿಂದ ಬಂದು ಶಿವಸೇವಾ ಸಕ್ತಳಾದಳೆಂದು, ಇದು ಶಿವದೇವರಿಗೆ ದಿವ್ಯ ಯೋಗದೃಷ್ಟಿಯಿಂದ ಅರಿವಾಯಿತೆಂದು, ಆಗ ಶಿವದೇವರು ಆಕೆಯನ್ನು 'ಶಿವಚಿತ್ಕಳೆ' ಎಂದು ಮನ್ನಿಸಿ, ಮುಕ್ತಿಲಿಂಗದೀಕ್ಷೆಯನ್ನು ನೀಡಿದರೆಂದು ಹಾಗೂ ಅಲ್ಲಿ ಆಕೆ ತನ್ನ ಪತಿಯ ಹೆಸರಿನಿಂದ "ಕಲಿದೇವರನ್ನು" ಸ್ಥಾಪಿಸಿದಳು ಎಂಬುದು ಸ್ಥಳ ಇತಿಹಾಸದಿಂದ ತಿಳಿದುಬರುವುದು. ಅವರ ವಂಶವೃಕ್ಷ ಕೆಳಗಿನಂತಿದೆ.



ಚೌಡಯ್ಯದಾನಪುರದ ಮುಕ್ತೇಶ್ವರ ದೇವಸ್ಥಾನದ ಆವರಣದಲ್ಲಿ ಅನೇಕ ಶಾಸನಗಳು ಇಂದಿಗೂ ದೊರೆಯುತ್ತವೆ. ಆ ಶಾಸನಗಳ ಪೈಕಿ ಒಂದರಲ್ಲಿ ರೇವಣಸಿದ್ಧನ ಆಜ್ಞೆಯಂತೆ ಕನ್ನಾದೇವಿಯು ಮುಕ್ತೇಶ್ವರ ದೇವಸ್ಥಾನಕ್ಕೆ ಬಂದುದು. ಕ್ರಿ.ಶ. ೧೯೬೧ ರ ಈ ಶಾಸನದಲ್ಲಿ ಉಲ್ಲೇಖವಿರುವುದರಿಂದ ಹಾಗೂ ಅದೇ ಕಾಲಮಾನದ ಸಿರಿವಾಳದಲ್ಲಿ ದೊರೆತ ಕ್ರಿ.ಶ. ೧೧೮೭ರ ಶಾಸನದಲ್ಲಿ ಉಲ್ಲೇಖಿತ ರೇವಣಸಿದ್ಧನೂ ; ಒಬ್ಬನೇ ಆಗಿರಬಹುದೆಂಬುದು ಪಂಡಿತರ ಅಭಿಪ್ರಾಯ. ಕಾರಣ ಈ ನೆಲೆಯ ಕ್ಷೇತ್ರಕಾರ್ಯವು ರೇವಣಸಿದ್ಧನು ಜೀವಿಸಿರಬಹುದಾದ ಕಾಲಮಾನದೆಡೆ ಬೆಳಕು ಚೆಲ್ಲುವುದಾಗಿದೆ.

ಈ ಶಿವದೇವರ ನೆಲೆಯು ಅಂಬಿಗರ ಚೌಡಯ್ಯನ ದೀಕ್ಷಾನೆಲೆಯಾಗಿ ವೀರಕನ್ನಾದೇವಿಯ ಮುಕ್ತಿಯ ನೆಲೆಯಾಗಿ ನಿಲ್ಲುವುದೇ ಹೊರತು ರೇವಣಸಿದ್ಧನ ನೆಲೆ ಎನ್ನಲಾಗದು. ಆದರೆ ರೇವಣಸಿದ್ಧನ ಕಾಲಮಾನ ಕುರಿತಾದ ಶಾಸನ, ಈ ನೆಲೆಯಲ್ಲಿ ದೊರೆಯುವ ಕಾರಣ ಕ್ಷೇತ್ರಕಾರ್ಯ ಮಾಡಲಾಗಿದೆ. ರೇವಣಸಿದ್ಧನಿಗೆ ಸಂಬಂಧಿಸಿದಂತೆ ಇತರೆ ನೆಲೆಗಳಲ್ಲಿ ಆಚರಣೆಯಲ್ಲಿರುವ ರೇವಣಸಿದ್ಧನಿಗೆ ಸಂಬಂಧಿಸಿದ ಜಾತ್ರೆ, ಉತ್ಸವ, ಸಂಪ್ರದಾಯ, ಆಚಾರ, ವಿಚಾರ ನಂಬಿಕೆಗಳು ಇಲ್ಲಿ ಇರುವುದಿಲ್ಲ.

೨೩. ಕಂದಿಕೆರೆ: ಚಿಕ್ಕನಾಯಕನಹಳ್ಳಿ ತಾಲ್ಲೂಕು: ತುಮಕೂರು ಜಿಲ್ಲೆ

ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಿಂದ ಸುಮಾರು ೧೨.೦೦ ಕಿ.ಮೀ. ದೂರದಲ್ಲಿ ಕಂದಿಕೆರೆ ಗ್ರಾಮವಿದ್ದು, ಪುರಾತನ ರೇವಣಸಿದ್ಧೇಶ್ವರ ದೇವಸ್ಥಾನವಿದೆ. ಈ ನೆಲೆಯು ರೇಖಾಂಶ ೧೩೦ ೩೧' ೩೫.೫" ಅಕ್ಷಾಂಶ ೭೭೦ ೩೭' ೫.೧೯" ಇದ್ದು, ಸಮುದ್ರ ಮಟ್ಟದಿಂದ ೬೨೧.೭೦ ಮೀಟರ್ ಎತ್ತರದಲ್ಲಿದೆ. ಮೂಲ ದೇವಸ್ಥಾನವು ಎರಡು ಅಂಕಣಗಳನ್ನು ಹೊಂದಿದ್ದು, ಮೊದಲ ಅಂಕಣದಲ್ಲಿ ಗರ್ಭಗುಡಿ ಹಾಗೂ ಅದರ ಮುಂದಿನ ಅಂಕಣವು ಪೂಜಾ ವಿಧಿ ವಿಧಾನಗಳಿಗೆ ಸಂಬಂಧಿಸಿದ್ದಾಗಿದೆ. ಗರ್ಭಗುಡಿ ಮತ್ತು ಮೊದಲ ಅಂಕಣಕ್ಕೆ ಒಡೆಯರು ಮಾತ್ರ ಪ್ರವೇಶಿಸಬಹುದಾಗಿದೆ. ಛಾವಣಿಗಳಿಗೆ ಕಲ್ಲುಚಪ್ಪಡಿಯನ್ನು ಅಳವಡಿಸಲಾಗಿದ್ದು, ಗರ್ಭಗುಡಿಯ ಮೇಲೆ ಗಾರೆಯಿಂದ ಗೋಪುರವನ್ನು ನಿರ್ಮಿಸಲಾಗಿದೆ. ದೇವಾಲಯದ ಎರಡನೇ ಅಂಕಣಕ್ಕೆ ಹೊಂದಿಕೊಂಡಂತೆ ಇತ್ತೀಚೆಗೆ ಕೆಂಪು ಹೆಂಚು ಛಾವಣಿಯ ಮೂರನೇ ಅಂಕಣವನ್ನು ನಿರ್ಮಿಸಲಾಗಿದೆ. ಈ ಮೂರನೆಯ ಅಂಕಣವನ್ನು ನ್ಯಾಯದ ಕಟ್ಟೆ ಎಂದು ಕರೆಯುವರು. ಈ ನ್ಯಾಯಕಟ್ಟೆಯು ನ್ಯಾಯ ಇತ್ಯರ್ಥ ಮಾಡುವ ಸಂದರ್ಭಗಳಲ್ಲಿ ಹಾಗೂ ಭಕ್ತಾದಿಗಳು ಸಾರ್ವಜನಿಕರ ಧಾರ್ಮಿಕ ಉಪಯೋಗಕ್ಕಾಗಿ ಮೀಸಲಾಗಿರುವುದು. ಗೋಪುರದ ವಿನ್ಯಾಸವನ್ನು ಗಮನಿಸಿದಾಗ ೫–೬ ತಲೆಮಾರಿನ ಹಿಂದಿನ ಕಾಲದಲ್ಲಿ ನಿರ್ಮಿತವಾಗಿರಬಹುದೆಂದು ಅಂದಾಜಿಸಬಹುದಾಗಿದೆ.

ಇಲ್ಲಿನ ರೇವಣಸಿದ್ಧ ದೈವಕ್ಕೆ ೧) ಹೊಸಪಾಳ್ಯ ಮಲ್ಲೇಗೌಡ(ಹುಳಿಯಾರು ಹೋಬಳಿ) ೨) ನಂದಿಹಳ್ಳಿ ಬಸಲಿಂಗೇಗೌಡ (ಹುಳಿಯಾರು ಹೋಬಳಿ) ೩) ಓಟಿಕೆರೆ ಲಕ್ಷ್ಮೀಗೌಡ (ಹಂದನಕೆರೆ ಹೋಬಳಿ) ೪) ಲಕ್ಷ್ಮೀಪುರ ರಂಗೇಗೌಡ (ಹಂದನಕೆರೆ ಹೋಬಳಿ) ೫) ಗೋಪಾಲಪುರ ರಂಗೇಗೌಡ್ರು (ಹಂದನಕೆರೆ ಹೋಬಳಿ) ೬) ಸಾದರಹಳ್ಳಿ ಕರಿಯಪ್ಪ (ಕಂದಿಕೆರೆ ಹೋಬಳಿ) ೭) ಗೌಡಸಾಗರ ಬೆಟ್ಟೆಗೌಡ (ಕಂದಿಕೆರೆ ಹೋಬಳಿ) – ಒಟ್ಟು ೭ ಹರಿವಾಣಗಳು ಹಾಗೂ ೧) ಕಂದಿಕೆರೆ ಮಹೇಶಗೌಡ್ರು ೨)ಕಂದಿಕೆರೆ ಲಕ್ಷ್ಮೀಗೌಡ್ರು ೩) ಕಂದಿಕೆರೆ ಮಂಜುನಾಥಗೌಡ್ರು ೪)

ಕಂದಿಕೆರೆ ಮಾಸ್ತೆಗೌಡರುಗಳ ಒಟ್ಟು ೪ ಕಟ್ಟೆಮನೆಗಳಿವೆ. ಇಲ್ಲಿ ಕಟ್ಟೆಮನೆಯವರನ್ನು ವಂಶೀಯ ಪದ್ಧತಿಯಲ್ಲಿ ನೇಮಕಮಾಡುವ ಪದ್ದತಿ ಇರುವುದು.

ಗರ್ಭಗುಡಿಯಲ್ಲಿ ಮೂರು ಮೆಟ್ಟಿಲುಗಳ ಗದ್ದುಗೆಯಿದ್ದು, ಲಿಂಗವನ್ನು ಸ್ಥಾಪಿಸಲಾಗಿದ್ದು, ಜೊತೆಗೆ ತ್ರಿಶೂಲ, ಬ್ರಹ್ಮಕಪಾಲ, ಅಲಗು ಇಡಲಾಗಿದೆ. ದೇವರ ಬಲಭಾಗದಲ್ಲಿ ಕಂಥಾಧಾರಣೆ ಸಮಯದಲ್ಲಿ ಬಳಸುವ ಬಿದಿರಿನ ಬುಟ್ಟಿ ಹಾಗೂ ದಿನನಿತ್ಯದ ಪೂಜೆಗೆ ಬಳಸುವ ಪರಿಕರಗಳನ್ನು ಇಡಲಾಗಿದೆ. ದೇವಾಲಯದಲ್ಲಿ ನಿತ್ಯವೂ ಪೂಜೆ ಪುನಸ್ಕಾರಗಳು, ಕಾರ್ತಿಕ ಮಾಸ, ಶಿವರಾತ್ರಿ, ರೇಣುಕಾ ಜಯಂತಿಗಳಂದು ವಿಶೇಷ ಪೂಜೆಗಳು ನಡೆಯುತ್ತಲಿವೆ.

ಕಾರ್ತಿಕ ಮಾಸದ ಪ್ರಾರಂಭದಿಂದ ಕೊನೆಯ ದಿನದವರೆಗೂ ವಿಶೇಷ ಪೂಜೆ ಹಾಗೂ ಸಂಜೆ ದೀಪೋತ್ಸವ ನಡೆಯುವುದು. ಮಾಸದ ಕೊನೆಯ ದಿನದಂದು ಕದಲಿ ಪೂಜೆಯಂತಹಾ ವಿಶೇಷ ಆಚರಣೆಗಳು ಜಾರಿಯಲ್ಲಿವೆ. ಕೊನೆ ದಿನದಂದು ರೇವಣಸಿದ್ಧನ ದೇವಾಲಯದ ಮೂರನೇ ಪ್ರಾಂಗಣದಲ್ಲಿ ಕದಲಿ ಪೂಜೆಯನ್ನು ಮಾಡುವರು. ಈ ಸಂದರ್ಭದಲ್ಲಿ ಬಾಳೆ ದಿಂಡುಗಳನ್ನು, ವೀಳ್ಯೆದೆಲೆ, ಹೂವಿನ ಅಲಂಕಾರ, ದೀಪಾಲಂಕಾರಗಳನ್ನು ೯ ಅಂಕಣದಷ್ಟು ಉದ್ದದ ಭಾಗದಲ್ಲಿಟ್ಟು ಕದಲೀ ಪೂಜೆಯನ್ನು ಮಾಡುವರು. ಅಂಕಣದ ಬಲಭಾಗದಲ್ಲಿ ಕರಿಯ ಕಂಬಳಿಯ ಗದ್ದುಗೆಯ ಮೇಲೆ ಹಸಿ ಕಾಳುಗಳ ನೈವೇದ್ಯವನ್ನು ತೆಗೆದಿಡುವುದರ ಮುಖಾಂತರ ಪೂಜೆ ಸಲ್ಲಿಸುವರು. ರೇವಣಸಿದ್ಧನ ಪೂಜೆಯ ನಂತರ ಈರಗಾರರು ಅಲಗು ಸೇವೆಯನ್ನು ಗೈಯ್ಯುವರು. ನಂತರದಲ್ಲಿ ಸರ್ವರಿಗೂ ಪ್ರಸಾದ ವಿನಿಯೋಗವಾಗುವುದು. ಮರುದಿನ ಬೆಳಿಗ್ಗೆ ಆಯಾ ಹರಿವಾಣಕ್ಕೆ ಸಂಬಂಧಿಸಿದ ಭಂಡಾರಿಗಳು ಅವರವರ ನಿಗದಿತ ಊರುಗಳಿಗೆ ರೇವಣಸಿದ್ಧನ ಪ್ರಸಾದದ ಹರಿವೆಯನ್ನು ಕೊಂಡೊಯ್ದು ಭಕ್ತಾದಿಗಳಿಗೆಲ್ಲಾ ವಿತರಿಸುವರು. ಅಲ್ಲಿಗೆ ಕಾರ್ತಿಕ ಮಾಸದ ವಿಶೇಷ ಪೂಜೆ ಆಚರಣೆಗಳು ಸಂಪನ್ನವಾಗುವವು.


ಶಿವರಾತ್ರಿಯ ದಿನದಂದು ರೇವಣಸಿದ್ಧನಿಗೆ ಬೆಳ್ಳಿಕೊಳಗ, ಬಂಗಾರದ ಛತ್ರಿ, ೫ ಬೆಳ್ಳಿಛತ್ರಿ, ಬೆಳ್ಳಿ ಪ್ರಭಾವಳಿ, ಬೆಳ್ಳಿ ಚಾಮರ, ಕೋಲುಗಳನ್ನು ಧರಿಸುವರು. ಇದಾದ ನಂತರ ಪೂಜೆ ನಡೆಯುವುದು. ಶಿವರಾತ್ರಿಯಂದು ಬೆಳಗಿನಿಂದಲೇ ಪೂಜೆಯು ಪ್ರಾರಂಭವಾಗಿ; ಸಾಯಂಕಾಲ ೧೦೧ ಬಿಲ್ವಪತ್ರೆ ಪೂಜೆ ನಡೆಯುವುದು ಹಾಗೂ ರಾತ್ರಿ ಇಡೀ ಭಜನೆ ನಡೆಯುವುದು. ಕಾರ್ತಿಕ ಮಾಸದ ಪ್ರಾರಂಭದಿಂದ ಶಿವರಾತ್ರಿಯ ದಿನದವರೆಗೆ ರೇವಣಸಿದ್ಧನಿಗೆ ಹಸಿ ಅಕ್ಕಿ ಉಂಡೆ, ಕಡಲೆಬೇಳೆ ನೈವೇದ್ಯವಾಗುವುದು. ಪೂಜೆಯನಂತರ ಎಲ್ಲ ಹರಿವಾಣದವರಿಗೂ ಆಯಾ ಭಂಡಾರಿಯವರು ಸಂಬಂಧಿಸಿದ ಊರಿಗೆ ಪ್ರಸಾದವನ್ನು ಕೊಂಡೊಯ್ದು ಭಕ್ತಾದಿಗಳಿಗೆ ವಿತರಿಸುವ ಪದ್ಧತಿ ಜಾರಿಯಲ್ಲಿದೆ. ಶ್ರೀಮಠದಲ್ಲಿ ರೇಣುಕಾ ಜಯಂತಿ ಆಚರಣೆಯಲ್ಲಿದೆ. ಅಂದು

ರೇವಣಸಿದ್ಧನನ್ನು ಊರಿನ ಮಜ್ಜನಬಾವಿಗೆ ಕರೆದೊಯ್ಯುವರು. ಅಲ್ಲಿ ಗಂಗಾಸ್ನಾನ ಪೂಜೆಯ ನಂತರ, ಬೀರದೇವರು, ಕರಿಯಮ್ಮ, ಮೈಲಾರಲಿಂಗ ಮತ್ತು ಚೌಡಮ್ಮ ದೇವಿಯರನ್ನು ಒಳಗೊಂಡಂತೆ ಊರಿನ ನಾಲ್ಕು ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ನಂತರ ಶ್ರೀಮಠಕ್ಕೆ ತೆರಳುವ ಮುಖಾಂತರ ರೇಣುಕಾ ಜಯಂತಿ ಕಾರ್ಯಕ್ರಮವು ಸಂಪನ್ನವಾಗುವುದು. ಅಂದು ವಿಶೇಷವಾಗಿ ಮೊಸರು-ಅನ್ನ ಪ್ರಸಾದವನ್ನು ವಿತರಿಸುವರು.

ಅಂದಿನಿಂದ ರೇವಣಸಿದ್ಧನ ಪೂಜಾ ಕೈಂಕರ್ಯಗಳಿಗೆ ಮೀಸಲಾದ ಮಜ್ಜನ ಬಾವಿಯು ಮಠದ ಅನತಿ ದೂರದಲ್ಲಿ ಇರುವುದು. ಮಜ್ಜನ ಬಾವಿಯು ತೀರ ಆಳವಾಗಿರದೆ; ಗುಂಡಿಯಾಗಿದೆ. ಗುಂಡಿಯ ಒಳಪದರನ್ನು ಸ್ಥಳೀಯವಾಗಿ ಲಭ್ಯವಾಗುವ ಕಾಡುಕಲ್ಲುಗಳಿಂದ ನಿರ್ಮಿಸಲಾಗಿದೆ. ಈ ಮಜ್ಜನ ಬಾವಿಯಿಂದ ಸದಾ ಕಾಲವೂ ನೀರು ತುಂಬಿ ಹರಿಯುತ್ತಿರುವುದು ವಿಶೇಷವಾಗಿದೆ. ಮಜ್ಜನಗುಂಡಿಯ ನೀರನ್ನು ಕುಡಿಯಲು ಹಾಗೂ ಪೂಜಾ ವಿಧಿವಿಧಾನಗಳ ಆಚರಣೆಯ ಸಂದರ್ಭದಲ್ಲಿ ಉಪಯೋಗಿಸುವರು. ಮಜ್ಜನಬಾವಿಯ ಪಕ್ಕದಲ್ಲಿಯೇ ಪುರಾತನವಾದ ಪಾಳುಬಿದ್ದ ಚಿಕ್ಕಮ್ಮ ದೇವಿಯ ದೇವಸ್ಥಾನವಿದೆ.

ಈ ಹಿಂದೆ ಈ ಸ್ಥಳದಲ್ಲಿಯೇ ಹಿಪ್ಪೆಮರವಿದ್ದುದಾಗಿಯೂ ಹಾಗೂ ಮರದಡಿಯಲ್ಲಿಯೇ ಊರಿನ ಯಾವುದೇ ತಂಟೆ-ತಕರಾರುಗಳಿದ್ದರೆ; ಅಲ್ಲಿ ಸಂಬಂಧಿಸಿದ ಎಲ್ಲರೂ ಒಡೆಯರ ನೇತೃತ್ವದಲ್ಲಿ ಸೇರಿ ನ್ಯಾಯ ತೀರ್ಮಾನ ಮಾಡುತ್ತಿದ್ದರೆಂದು ಗ್ರಾಮಸ್ಥರು ಹೇಳುವರು. ಪ್ರಸ್ತುತದಲ್ಲಿಯೂ ನ್ಯಾಯ ತೀರ್ಮಾನವನ್ನು ಮಾಡುವ ಪದ್ಧತಿ ಇದ್ದು; ಈ ಕಾರ್ಯ ರೇವಣಸಿದ್ಧನ ದೇವಾಲಯದಲ್ಲಿರುವ ನ್ಯಾಯಕಟ್ಟೆ ಪ್ರಾಂಗಣಕ್ಕೆ ವರ್ಗಾಯಿಸಲ್ಪಟ್ಟಿದೆ. ಮಜ್ಜನಬಾವಿಯನ್ನು ಒಳಗೊಂಡಂತೆ, ೧೬ ಗುಂಟೆ ಜಮೀನು ರೇವಣಸಿದ್ಧ ಮಠಕ್ಕೆ ಸಂಬಂಧಿಸಿದುದಾಗಿದೆ. ಈ ನೆಲೆಯಲ್ಲಿ ಕಂಥಾಧಾರಣೆ ಸೇವೆಯು ಆಚರಣೆಯಲ್ಲಿದೆ. ೧೧ ಅಥವಾ ೧೩ ವರ್ಷಗಳಿಗೊಮ್ಮೆ ಸಾಮಾನ್ಯವಾಗಿ ಕಂಥಾಧಾರಣ ಸೇವೆಯನ್ನು ಮಾಡುವರು. ೨೦೧೩ ರಲ್ಲಿ ಕಂಥಾಧರಣ ಸೇವೆಯನ್ನು ಮಾಡಲಾಗಿದೆ. ಕಂಥಾಧಾರಣೆ ಸೇವೆಯ ಪ್ರಮುಖ ರೀತಿ ರಿವಾಜುಗಳು ಚಿಕ್ಕನಾಯಕನಹಳ್ಳಿ ರೇವಣಸಿದ್ಧ ಮಠದಲ್ಲಿ ಆಚರಿಸುವಂತಹುಗಳೇ ಆಗಿವೆ. ಕಂಥಾಧಾರಣ ಮಹೋತ್ಸವದಲ್ಲಿ ಭಾಗವಹಿಸಲು ಓಟಿಕೆರೆ ಬೀರಪ್ಪನು ಮುಳ್ಳಿನ ಪಲ್ಲಕ್ಕಿಯಲ್ಲಿ ಬರುವುದು ವಿಶೇಷವಾಗಿದೆ. ಈ ಸಂದರ್ಭದಲ್ಲಿ ಬೀರದೇವರ ಪಲ್ಲಕ್ಕಿಯಲ್ಲಿ ಮುಳ್ಳುಹಾಸಿಗೆಯ ಮೇಲೆ ಈರಗಾರರು ಮಲಗಿ ಭಾಗವಹಿಸುವರು. ಕಂಥಾಧಾರಣ ಸೇವೆಯ ಸಮಯವು ಗ್ರಾಮದಲ್ಲಿ ಹಬ್ಬದ ವಾತಾವರಣವನ್ನು ಮೂಡಿಸುವುದು. ಕಂಥಾಧಾರಣೆ ಸೇವೆಯಲ್ಲಿ ಊರಿನ ಸುಮಸ್ತ ಜನರು ಭಾಗವಹಿಸುತ್ತಾರಾದರೂ ಹಾಲುಮತ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸುವರು. ಅಂದಿನ ಕಾಲದಿಂದ ಇಂದಿನವರೆವಿಗೂ ಹಾಲುಮತ ಜನಾಂಗದ


ಸಾವಂತಕುಲದ ಒಡೆಯರುಗಳು ರೇವಣಸಿದ್ಧನ ಪೂಜೆಯನ್ನು ಮಾಡುತ್ತಾ ಬಂದಿರುವರು. ಒಡೆಯರುಗಳ ವೈಯಕ್ತಿಕ ಆಚಾರ-ವಿಚಾರ ಸಂಪ್ರದಾಯಗಳು ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಮುಂದುವರಿಕೆಯ ಭಾಗವಾಗಿದೆ. ಪ್ರಸ್ತುತ ಶ್ರೀ ಜಯದೇವ ಒಡೆಯರ್, ಶ್ರೀ ರೇವಣ್ಣ ಒಡೆಯರ್ ಹಾಗೂ ಶ್ರೀ ತೇಜಶಂಕರ ಒಡೆಯರ್ ಸಹೋದರರು ರೇವಣಸಿದ್ಧನ ಪೂಜೆಯ ಹಕ್ಕುಳ್ಳವರಾಗಿದ್ದಾರೆ.



೨೪. ಹುಳಿಯಾರು ಗ್ರಾಮ : ಚಿಕ್ಕನಾಯಕನಹಳ್ಳಿ ತಾಲ್ಲೂಕು: ತುಮಕೂರು ಜಿಲ್ಲೆ

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರಿನಲ್ಲಿ ಶ್ರೀ ಗುರು ರೇವಣಸಿದ್ಧೇಶ್ವರ ಸಿಂಹಾಸನವಿದೆ. ೫-೬ ಶತಮಾನಗಳ ಹಿಂದೆಯೇ ಹೆಂಚಿನ ಭಾವಣಿಯ ಶ್ರೀರೇವಣಸಿದ್ಧ ದೇವಸ್ಥಾನ-ವಿದ್ದುದಾಗಿಯೂ; ಇತ್ತೀಚಿಗೆ ೨೦೦೩ರಲ್ಲಿ ಅದೇ ಸ್ಥಳದಲ್ಲಿಯೇ ಹೊಸದಾಗಿ ದೇವಾಲಯವನ್ನು ನಿರ್ಮಿಸಲಾಗಿದೆ ಎಂದು ಸ್ಥಳೀಯರು ಹೇಳುವರು. ಈ ನೆಲೆಯ ರೇಖಾಂಶ ೧೩೦ ೩೫' ೬.೧೨" ಹಾಗೂ ಅಕ್ಷಾಂಶ - ೭೬೦ ೩೨' ೨೨" ಗಳಲ್ಲಿರುವುದು ಹಾಗೂ ಸಮುದ್ರ ಮಟ್ಟದಿಂದ ೬೨೮.೦೦ ಮೀಟರ್‌ಗಳಷ್ಟು ಎತ್ತರದಲ್ಲಿದೆ. ದೇವಾಲಯವು ಗರ್ಭಗುಡಿ, ಪ್ರಾಂಗಣ ಮತ್ತು ಹೊರ ಪ್ರಾಂಗಣಗಳನ್ನು ಹೊಂದಿದೆ. ಗರ್ಭಗುಡಿಯ ಸಿಂಹಾಸನ ಪೀಠದ ಮೇಲೆ ಎರಡು ಸಿಂಹಗಳ ಮಧ್ಯದಲ್ಲಿ ಲಿಂಗುರೂಪದ ರೇವಣಸಿದ್ಧನನ್ನು, ಪ್ರಭಾವಳಿ, ಬೆತ್ತ, ತ್ರಿಶೂಲ, ಅಲಗು ಹಾಗೂ ಛಾಮರಸಗಳನ್ನು ಇಡಲಾಗಿದೆ. ಇಲ್ಲಿ ರೇವಣಸಿದ್ಧನನ್ನು ಲಿಂಗು ರೂಪದಲ್ಲಿಯೇ ಪ್ರತಿಷ್ಟಾಪಿಸಲಾಗಿರುವುದು ವಿಶೇಷವಾಗಿದೆ. ಒಳಪ್ರಾಂಗಣವು ಕಲ್ಲಿನ ಕಂಬ ಹಾಗೂ ಕಲ್ಲಿನ ಭಾವಣಿಯನ್ನು ಒಳಗೊಂಡಿದೆ. ಈ ಪ್ರಾಂಗಣವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಿರಿಸಲಾಗಿದೆ. ಶ್ರೀ ಬಸವರಾಜ ಒಡೆಯರು ಪ್ರಸ್ತುತ ರೇವಣಸಿದ್ಧನ ಪೂಜಾರಿಗಳಾಗಿದ್ದಾರೆ. ಈ ನೆಲೆಯಲ್ಲಿ ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಒಡೆಯರುಗಳು ಇರುವರು. ಇವರ ಆಚಾರ ವಿಚಾರಗಳು ಈ ಸಂಪ್ರದಾಯಕ್ಕೆ

ಸೇರಿದವರುಗಳಾಗಿವೆ. ಮಂಗಳಕಾರ್ಯ, ಗೃಹಪ್ರವೇಶ, ನಾಮಕರಣ ಮತ್ತು ಮದುವೆಗಳು ಒಡೆಯರ ನೇತೃತ್ವದಲ್ಲಿಯೇ ನಡೆಯುತ್ತವೆ. ಮರಣದ ಸಂದರ್ಭಗಳಲ್ಲಿ ಒಡೆಯರುಗಳು ಸ್ಮಶಾನದ ಹೊರವಲಯದಲ್ಲಿ ಕರಿಯ ಕಂಬಳಿಯ ಮೇಲೆ ಕುಳಿತುಕೊಳ್ಳುವರು; ಆ ಸಂದರ್ಭದಲ್ಲಿ ಶವಸಂಸ್ಕಾರದಲ್ಲಿ ಭಾಗವಹಿಸಿದವರ ಕೈ-ಕಾಲು ತೊಳೆದುಕೊಂಡು ಒಡೆಯರುಗಳಲ್ಲಿರುವೆಡೆ ಬಂದು ನಮಸ್ಕರಿಸಿ ವಿಭೂತಿ ಧರಿಸುವರು. ಇಲ್ಲಿಗೆ ಶವ ಸಂಸ್ಕಾರ ವಿಧಿ ವಿಧಾನಗಳು ಪೂರ್ಣಗೊಳ್ಳುತ್ತವೆ.



೨೫. ದೊಡ್ಡಬಾತಿ ಗ್ರಾಮ: ದಾವಣಗೆರೆ ತಾಲ್ಲೂಕು: ದಾವಣಗೆರೆ ಜಿಲ್ಲೆ

ದಾವಣಗೆರೆ ನಗರ ಹಾಗೂ ಹರಿಹರ ತಾಲ್ಲೂಕು ಕೇಂದ್ರವನ್ನು ಸಂಪರ್ಕಿಸುವ ರಸ್ತೆಯ ಮಧ್ಯಭಾಗದಲ್ಲಿ ದೊಡ್ಡಬಾತಿ ಗ್ರಾಮವು ಇರುವುದು. ಗ್ರಾಮದ ಪಕ್ಕದಲ್ಲಿರುವ ಬೆಟ್ಟದ ಮೇಲೆ ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನವಿದೆ. ಈ ಬೆಟ್ಟವನ್ನು ಸಿದ್ದಪ್ಪನ ಗುಡ್ಡ ಎಂದು ಕರೆಯುವರು. ಪುರಾತನ ದೇವಾಲಯವಿದ್ದ ಸ್ಥಳದಲ್ಲಿಯೇ ಇತ್ತೀಚೆಗೆ ೨೦೦೮ರಲ್ಲಿ ಹೊಸ ದೇವಾಲಯವನ್ನು ನಿರ್ಮಿಸಿದ್ದಾರೆ. ದೇವಾಲಯ ಗರ್ಭಗುಡಿ; ಮೂರು ಪ್ರಾಂಗಣಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ರೇವಣಸಿದ್ಧನ ಉದ್ಭವಲಿಂಗವಿದೆ. ಮೊದಲ ಪ್ರಾಂಗಣದಲ್ಲಿ ನಾಗದೇವತೆಯನ್ನು, ಮೂರನೇಯ ಪ್ರಾಂಗಣದಲ್ಲಿ ಜೆಟ್ಟೆಪ್ಪ ದೇವರನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಎದುರು ಬನ್ನಿಗಿಡ, ದೀಪಾಲಿ ಕಂಬ ಮತ್ತು ಬೀರಲಿಂಗೇಶ್ವರ ಗದ್ದುಗೆ ಇದೆ. ಜಾತ್ರಾ ಸಮಯದಲ್ಲಿ ಬೀರೇಶ್ವರನ ಪಲ್ಲಕ್ಕಿಯನ್ನು ಈ ಗದ್ದುಗೆಯ ಮೇಲಿರಿಸುವರು. ದೇವಸ್ಥಾನದ ಅಭಿವೃದ್ಧಿಗಾಗಿ ರೇವಣಸಿದ್ಧೇಶ್ವರ ಸೇವಾ ಸಮಿತಿಯನ್ನು ರಚಿಸಲಾಗಿದೆ. ಶ್ರೀ ಎಂ.ಪಿ.ಕುಮಾರಸ್ವಾಮಿರವರು ಪ್ರಸ್ತುತ ಸೇವಾ ಸಮಿಯ ಅಧ್ಯಕ್ಷರಾಗಿದ್ದಾರೆ. ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಗವಿಸಿದ್ಧೇಶ್ವರ ಗುಹೆ ಇರುವುದು. ರೇವಣಸಿದ್ಧನ ಇತರ ನೆಲೆಗಳಲ್ಲಿರುವಂತೆ; ಶ್ರಾವಣಮಾಸ, ಕಾರ್ತಿಕಮಾಸದ ದಿನಗಳಲ್ಲಿ ವಿಶೇಷ ಪೂಜೆಗಳು ಹಾಗೂ ಪ್ರತಿ ವರುಷ ಜಾತ್ರೆಯು ನೆರವೇರುವುದು. ಕಾರ್ತಿಕ ಮಾಸದಲ್ಲಿ ದಿನಂಪ್ರತಿ ದೀಪಾಲಂಕಾರವನ್ನು ಮಾಡುವರು ಹಾಗೂ ಶಬರಿಮಲೈ ಅಯ್ಯಪ್ಪನ

ಸನ್ನಿಧಿಗೆ ತರಳುವ ಮುನ್ನ ಭಕ್ತಾದಿಗಳು ಆಚರಿಸುವ ಸಂಪ್ರದಾಯದ ಪೂಜೆಗಳು ದೇವಾಲಯದಲ್ಲಿಯೇ ಜರುಗುತ್ತವೆ. ರೇವಣಸಿದ್ಧನಿಗೆ ಹಸಿ ತರಕಾರಿ, ಹಸಿ ಕಾಳು ಹಾಗೂ ಗೋದಿ ಹುಗ್ಗಿಯ ನೈವೇದ್ಯವಾಗುವುದು.

ಪ್ರತಿ ವರುಷವೂ ಸಾಮಾನ್ಯವಾಗಿ ಮಾರ್ಚ್ ತಿಂಗಳಲ್ಲಿ ರೇವಣಸಿದ್ಧನ ಜಾತ್ರಾ ಮಹೋತ್ಸವವು ಜರುಗುವುದು. ಎರಡು ದಿನಗಳ ಜಾತ್ರೆಯ, ಮೊದಲದಿನದಂದು ರೇವಣಸಿದ್ಧನ ತೇರನ್ನು ಎಳೆಯುವರು. ಎರಡನೇ ದಿನದಂದು ಓಕುಳಿಯಾಡುವ ಪದ್ಧತಿ ಜಾರಿಯಲ್ಲಿದೆ. ಜಾತ್ರೆಯ ಮೊದಲ ದಿನದಂದು; ರೇವಣಸಿದ್ಧನು ಬೀರಲಿಂಗೇಶನ ಜೊತೆ ಪಲ್ಲಕ್ಕಿಯಲ್ಲಿ; ಸೂಳಿಕೆರೆಗೆ ಗಂಗಾಪೂಜೆಗೆ ಹೋಗುವುದರ ಮುಖೇನ ಜಾತ್ರೆ ಪ್ರಾರಂಭವಾಗುವುದು. ಅಂದು ರಾತ್ರಿ ೧೨.೦೦ ಗಂಟೆಯ ಸಮಯದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ರೇವಣಸಿದ್ಧನ ರಥೋತ್ಸವದ ನಂತರ ಸನ್ನಿಧಿಗೆ ಸೇರುವುದು. ಎರಡನೇಯ ದಿನದಂದು; ತೇರುಬೀದಿಯಲ್ಲಿ ಊರಿನ ಜನರೆಲ್ಲ ಭಾಗಿಯಾಗಿ ಓಕುಳಿಯಾಡುವರು. ರೇವಣಸಿದ್ಧನ ಜಾತ್ರೆಯಲ್ಲಿ ಸಮಾಜದ ಸಮಸ್ತ ಜನಾಂಗದ ಜನರು ಭಾಗಿಯಾಗುತ್ತಾರಾದರೂ ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯಿತ ಮತ್ತು ಕುರುಬ ಸಮಾಜದವರು ಭಾಗವಹಿಸುವರು. ಪಂಚಮಸಾಲಿ ಜಂಗಮರು ರೇವಣಸಿದ್ಧನ ಪೂಜೆಯ ಹಕ್ಕುಳ್ಳವರಾಗಿದ್ದಾರೆ.

೨೬. ಹಂದನಕೆರೆ ಗ್ರಾಮ: ಚಿಕ್ಕನಾಯಕನಹಳ್ಳಿ ತಾಲ್ಲೂಕು: ತುಮಕೂರು ಜಿಲ್ಲೆ

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಗ್ರಾಮವು ಒಂದು ಪುರಾತನ ಗ್ರಾಮವಾಗಿದ್ದು, ಸುಮಾರು ೧೦೧ ದೇವಾಲಯಗಳ ಸಂಗಮವಾಗಿದೆ. ಗ್ರಾಮದ ಪ್ರಮುಖ ದೇವರು ಶ್ರೀ ಸಿದ್ದೇಶ್ವರನಾಗಿದ್ದು; ಗ್ರಾಮದಲ್ಲಿ ಸುಮಾರು ೫–೬ ಶತಮಾನಗಳ ಹಳೆಯದಾದ ಶ್ರೀ ಗುರು ರೇವಣಸಿದ್ಧೇಶ್ವರ ಸಿಂಹಾಸನ ಮಠವಿದೆ. ಮಠವು ಗರ್ಭಗುಡಿ, ಎರಡು ಪ್ರಾಂಗಣ ಹಾಗೂ ಗರ್ಭಗುಡಿಯು ಗೋಪುರವನ್ನು ಹೊಂದಿದೆ. ಗರ್ಭಗುಡಿಯಲ್ಲಿ; ಮೂರು ಮೆಟ್ಟಿಲುಗಳ ಸಿಂಹಾಸನದ ಮೇಲೆ ಲಿಂಗು, ಪ್ರಭಾವಳಿ, ಎಡ ಮತ್ತು ಬಲಬದಿ ಬಸವಣ್ಣ, ತ್ರಿಶೂಲ, ಲಿಂಗು ಮತ್ತು ಛತ್ರಿಗಳನ್ನು ಸ್ಥಾಪಿಸಲಾಗಿದೆ. ಲಿಂಗಕ್ಕೆ ಮುಖಪದ್ಮವನ್ನು ಧರಿಸಲಾಗಿದೆ. ಶ್ರೀಮಠಕ್ಕೆ ೧೬.೦೦ ಎಕರೆ ಜಮೀನು ಸೀಗೆಬಾಗಿ ಗ್ರಾಮದಲ್ಲಿದೆ. ದೇವಾಲಯವು ಕಲ್ಲು ಕಂಬ, ಕಲ್ಲುಚಪ್ಪಡೆ ಗೋಡೆ ಹಾಗೂ ಛಾವಣಿಗಳನ್ನು ಹೊಂದಿದ್ದು, ಗೋಪುರವನ್ನು ಹಾಗೂ ಆವರಣಗೋಡೆಯನ್ನು ಗಾರೆಯಿಂದ ನಿರ್ಮಾಣ ಮಾಡಲಾಗಿವೆ. ಇತ್ತೀಚೆಗೆ ಶಾಸಕರ ನಿಧಿಯಿಂದ ರೇವಣಸಿದ್ಧ ಸಮುದಾಯವನ್ನು ನಿರ್ಮಾಣಮಾಡಲಾಗಿದೆ. ದೇವಾಲಯದ ಮುಂದೆ ಬಾವಿ ಹಾಗೂ ದೀಪದ ಕಂಬವಿದೆ. ದೇವಾಲಯವು ರೇಖಾಂಶ ೧೩೦ ೩೦' ೧೭.೫" ಹಾಗೂ ಅಕ್ಷಾಂಶ ೭೬೦ ೨೬' ೫೮.೭೨" ಗಳ ನಡುವಿದ್ದು, ಸಮುದ್ರ ಮಟ್ಟದಿಂದ

೬೬೩.೨೦ ಮೀಟರ್‌ಗಳಷ್ಟು ಎತ್ತರದಲ್ಲಿದೆ. ಶ್ರೀ ಸಿಂಹಾಸನ ಮಠಕ್ಕೆ ಸೀಗೇಬಾಗಿ, ದೊಡ್ಡ ಎಣ್ಣೆಗೆರೆ, ಚಿಕ್ಕ ಎಣ್ಣೆಗೆರೆ, ಮೋಟಿಹಳ್ಳಿ ಹಾಗೂ ಹುಚ್ಚನಹಳ್ಳಿ ಬುಡಕಟ್ಟುಗಳಿವೆ.

ಕಾರ್ತಿಕ ಮಾಸದ ಪೂಜೆಯು ಅಮಾವಾಸ್ಯೆಯಿಂದ ಪ್ರಾರಂಭವಾಗಿ ಮುಂದಿನ ಅಮಾವಾಸ್ಯೆಗೆ ಮುಕ್ತಾಯವಾಗುತ್ತದೆ. ಶ್ರೀ ಸಿಂಹಾಸನಕ್ಕೆ ೩೦ ಯಜಮಾನರುಗಳು ಇರುವರು. ಸಾಮಾನ್ಯವಾಗಿ ೫೦ ಮನೆಯ ಮಂದಿಯನ್ನು ಒಳಗೊಂಡಂತೆ ಒಬ್ಬರಿಗೆ ಯಜಮಾನಿಕೆಯನ್ನು ನೀಡುತ್ತಾರೆ. ಹಂದನಕೆರೆ ಗ್ರಾಮದಲ್ಲಿ ಒಟ್ಟು ಇಂತಹ ೩೦ ಯಜಮಾನರನ್ನು ನಿಯುಕ್ತಿಗೊಳಿಸಲಾಗಿದ್ದು, ಕಾರ್ತಿಕ ಮಾಸದಲ್ಲಿ ಈ ಯಜಮಾನರು ದಿನಕ್ಕೊಬ್ಬರಂತೆ; ರೇವಣಸಿದ್ಧನ ದಿನದ ವಿಶೇಷ ಪೂಜೆಯನ್ನು ಮಾಡಿಸುವರು. ಈ ಮಾಸದಲ್ಲಿ ವಿಶೇಷವಾಗಿ ಸಂಜೆ ದೀಪಾಲಂಕಾರವನ್ನು ಮಾಡುವರು ಮತ್ತು ಕೊನೆಯ ದಿನ ಕದಲಿ ಪೂಜೆಯನ್ನು ಮಾಡುವರು. ಈ ಮಾಸದಲ್ಲಿ ರೇವಣಸಿದ್ಧನಿಗೆ, ತಳಿಗೆ ಅನ್ನವನ್ನು ಎಡೆಬಾನವಾಗಿ ಅರ್ಪಿಸುವರು. ಹಾಗೂ ಕದಲಿ ಪೂಜೆಯ ದಿನದಂದು ಕರಿ ಕಡ್ಲೆಕಾಳು (ಹಸಿ) ಪ್ರಸಾದ ವಿನಿಯೋಗವಾಗುವುದು.

ಕಾರ್ತಿಕ ಮಾಸದ ಪೂಜೆ ಮುಗಿದ ನಂತರ, ೧೫ ದಿನಗಳ ಕಾಲ ಧನುರ್‌ಮಾಸ ಪೂಜೆ ಮಾಡುವರು. ಈ ದಿನಗಳಲ್ಲಿ ಬೆಳಿಗ್ಗೆ ೫.೦೦ ಗಂಟೆಯಿಂದಲೇ ಪೂಜೆ ಪ್ರಾರಂಭವಾಗುವುದು. ಇತರೆ ನೆಲೆಗಳಂತೆ ಶಿವರಾತ್ರಿಯಂದು, ರಾತ್ರಿಯಿಡೀ ಭಜನೆ, ಜಾಗರಣೆ ಹಾಗೂ ಬಿಲ್ವಪತ್ರೆಯಿಂದ ವಿಶೇಷ ಪೂಜೆಗಳೂ ನಡೆಯುತ್ತವೆ. ಅಂದು ಸಾಯಂಕಾಲ ಈರಗಾರರು ಅಲಗು ಸೇವೆಯನ್ನು ಮಾಡುವರು ಹಾಗೂ ಭಕ್ತಾದಿಗಳು ಒಡೆಯರುಗಳಿಗೆ ಹೊಸ ಬಟ್ಟೆ ನೀಡುವರು.

ಕಂಥಾಧಾರಣೆ ಸೇವೆಯು ಪ್ರಚಲಿತದಲ್ಲಿದೆ. ಪ್ರತಿ ೧೩-೧೪ ವರ್ಷಗಳಿಗೊಮ್ಮೆ ಕಂಥಾಧಾರಣ ಸೇವೆಯನ್ನು ಮಾಡುವರು. ಶ್ರೀಮಠದಿಂದ ೧.೦೦ ಕಿ.ಮೀ. ದೂರಲದಲ್ಲಿರುವ ಮಜ್ಜನಬಾವಿಗೆ ರಾತ್ರಿ ೧೦.೦೦ ಗಂಟೆಗೆ ತಲುಪಿ; ಕಂಥಾಧಾರಣ ವಿಧಿವಿಧಾನಗಳು ಸುಮಾರು ಬೆಳಗಿನ ಜಾವ ೨.೦೦ ಗಂಟೆಗೆ ಮುಗಿದ ನಂತರ ನಡೆಮುಡಿಯೊಂದಿಗೆ ಮೆರವಣಿಗೆ ಪ್ರಾರಂಭವಾಗಿ ಮಧ್ಯಹ್ನ ೧.೦೦ ಗಂಟೆಯ ವೇಳೆಗೆ ದೇವಸ್ಥಾನ ತಲುಪುವುದು. ಕಂಥಾಧಾರಣೆಯಲ್ಲಿ ಬೀರದೇವರು, ಗ್ರಾಮದೇವತೆ, ಸಿದ್ಧೇಶ್ವರ ಹಾಗೂ ಗ್ರಾಮದ ಇತರೆ ದೇವತೆಗಳು, ಭಕ್ತಾದಿಗಳು ಭಾಗವಹಿಸುವರು. ಕಂಥಾಧಾರಣೆಯ ರೀತಿ ರಿವಾಜುಗಳು, ಸಂಪ್ರದಾಯಗಳು ಚಿಕ್ಕನಾಯಕನಹಳ್ಳಿ ಶ್ರೀರೇವಣಸಿದ್ಧನ ನೆಲೆಯಲ್ಲಿರುವಂತೆ ಇರುವವು. ಒಡೆಯರ ವೈಯಕ್ತಿಕ ವಿಚಾರಗಳು ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಮುಂದುವರಿಕೆಯ ಭಾಗಗಳಾಗಿವೆ. ಇಲ್ಲಿನ ನೆಲೆಯಲ್ಲಿ ಸರದಿಯಂತೆ ಸಾವಂತ ಕುಲದ ಒಡೆಯರ ಸಹೋದರರು ಶ್ರೀ ರೇವಣಸಿದ್ಧನ ಪೂಜೆಯನ್ನು ಮಾಡುತ್ತಿದ್ದಾರೆ. ತಿಮ್ಲಾಪುರ ಗ್ರಾಮದಲ್ಲಿ ವಾಸಿಸುತ್ತಿರುವ ಶ್ರೀ ಶಾಂತಯ್ಯ ಒಡೆಯರು ಪ್ರಸಕ್ತ ವರ್ಷದ(೨೦೧೬) ಪೂಜಾರರಾಗಿರುತ್ತಾರೆ.

೨೭. ಹೊನ್ನವಳ್ಳಿ: ತಿಪಟೂರು ತಾಲ್ಲೂಕು: ತುಮಕೂರು ಜಿಲ್ಲೆ

ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಹೊನ್ನವಳ್ಳಿಯಲ್ಲಿ ೨೫೦ ವರ್ಷಗಳಷ್ಟು ಪ್ರಾಚೀನ ರೇವಣಸಿದ್ಧೇಶ್ವರ ಮಠವಿದೆ. ಶ್ರೀ ಮಠವು ಗರ್ಭಗುಡಿ ಮತ್ತು ಹೊರ ಪ್ರಾಂಗಣವನ್ನು ಹೊಂದಿದೆ. ಗರ್ಭಗುಡಿಯಲ್ಲಿ ರೇವಣಸಿದ್ಧನ ಗದ್ದುಗೆ ಮತ್ತು ಹೊರಪ್ರಾಂಗಣದಲ್ಲಿ ಹರಿವಾಣ ಗದ್ದುಗೆ ಇದೆ. ಈ ಹರಿವಾಣ ಗದ್ದುಗೆಯ ಮೇಲೆ ಕಂಬಳಿ ಹಾಸುವುದರ ಮುಖಾಂತರ ಧಾರ್ಮಿಕ ಕಾರ್ಯಕ್ರಮಗಳ ಹಾಗೂ ನ್ಯಾಯತೀರ್ಮಾನದ ವೇದಿಕೆಯಾಗುತ್ತದೆ. ಪಶ್ಚಿಮಾಭಿಮುಖ ವಾಗಿರುವರಿಲ್ಲಿನ ರೇವಣಸಿದ್ಧನಿಗೆ ದಿನಂಪ್ರತಿ, ಬೆಳಗಿನ ಜಾವ ಹಾಗೂ ಸಾಯಂಕಾಲ ಪೂಜೆ ನೆರವೇರುತ್ತವೆ.

ರೇವಣಸಿದ್ಧನ ಇತರೆ ನೆಲೆಗಳಂತೆ, ಇಲ್ಲಿಯೂ ಕಾರ್ತಿಕಮಾಸ, ಧನುರ್ಮಾಸದಲ್ಲಿ ವಿಶೇಷ ಪೂಜೆಗಳು ಮಾಸದುದ್ದಕ್ಕೂ ನಡೆಯುತ್ತವೆ. ಕಂಥಾಧಾರಣೆ ಸೇವೆಯು ಇಲ್ಲಿ ಪ್ರಚಲಿತದಲ್ಲಿದೆ. ಕಂಥಾಧಾರಣೆ ಸೇವೆಯನ್ನು ಕಡ್ಡಾಯವಾಗಿ ಸೋಮವಾರದಂದೆ ಖಡ್ಡಾಯವಾಗಿ ಪ್ರಾರಂಭಿಸುವುದು ಇಲ್ಲಿಯ ವಾಡಿಕೆಯಾಗಿದೆ. ಈ ಹಿಂದೆ ಕಂಥಾಧಾರಣೆ ಸೇವೆ ಮಾಡಿದ ಸಂದರ್ಭದಲ್ಲಿ ಚಿತ್ರೀಕರಣಗೊಂಡ ವೀಡಿಯೋ ಕ್ಯಾಸೆಟ್‌ಗಳು ಇಲ್ಲಿಯ ಒಡೆಯರುಗಳಲ್ಲಿವೆ. ಒಡೆಯರ ವೈಯಕ್ತಿಕ ಆಚಾರ ವಿಚಾರಗಳು, ಹಾಲುಮತ ಸಮಾಜದೊಡನಿರುವ ಸಂಬಂಧಗಳು ಹಾಗೂ ಧಾರ್ಮಿಕ ಸಮಾರಂಭಗಳ ಸಂದರ್ಭದಲ್ಲಿ ನೇತೃತ್ವ ಇತರೆ ನೆಲೆಗಳಲ್ಲಿರುವಂತೆ ಇಲ್ಲಿಯೂ ಮುಂದುವರೆದಿವೆ. ಒಡೆಯರುಗಳ ಸರತಿಯ ಪ್ರಕಾರ, ರೇವಣಸಿದ್ಧನ ಪೂಜೆಯ ಹಕ್ಕನ್ನು ಪಡೆಯುತ್ತಾರೆ. ಪ್ರಸ್ತುತ ಶ್ರೀ ಬಸವರಾಜ ಒಡೆಯರು ಶ್ರೀಮಠದ ಪೂಜೆಯ ಹಕ್ಕುಳ್ಳವರಾಗಿದ್ದಾರೆ.

೨೮. ದೊಡ್ಡೇರಿ: ಚಳ್ಳಕೆರೆ ತಾಲ್ಲೂಕು: ಚಿತ್ರದುರ್ಗ ಜಿಲ್ಲೆ


ದೊಡ್ಡೇರಿ ಗ್ರಾಮವು ಚಳ್ಳಕೆರೆ ತಾಲ್ಲೂಕು ಕೇಂದ್ರದಿಂದ ೭.೦೦ ಕಿಮೀ ದೂರದಲ್ಲಿದೆ. ಗ್ರಾಮದಲ್ಲಿ ಸುಮಾರು ೩–೪ ಶತಮಾನಗಳಷ್ಟು ಪುರಾತನ ರೇವಣಸಿದ್ದೇಶ್ವರ ಮಠವಿದೆ. ಶ್ರೀ ಮಠದ ಮುಖ್ಯದ್ವಾರದ ಮೇಲು ತೊಲೆಯಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ಶ್ರೀ ರೇವಣಸಿದ್ದೇಶ್ವರ ದೈವವು ೩೦ ಹಳ್ಳಿಗಳ ಗುಡಿಕಟ್ಟು, ನೇರಲಗುಂಟೆ ಗ್ರಾಮದ ಕೊಲ್ಕಾರರು ಹಾಗೂ ಗೊರಲಕಟ್ಟೆಯ ಗೌಡರುಗಳನ್ನು ಒಳಗೊಂಡಿರುತ್ತದೆ. ದೈವಕ್ಕೆ ಸಂಬಂಧಿಸಿದಂತೆ ಗುಡಿಕಟ್ಟಿನ ಹಳ್ಳಿಗಳಾದ ಚಳ್ಳಕೆರೆ, ಗೊರಲಕಟ್ಟೆ, ನನ್ನಿವಾಳ, ನೇರಲಗುಂಟೆ, ಭೀಮಸಕೆರೆ, ಮನಮೈನಹಟ್ಟಿ, ನಾಯಕನಹಟ್ಟಿ, ಗೌಡಿಗೆರೆ, ತೊರೆಕೋಲಮ್ಮದ ಹಳ್ಳಿ, ಚಿಕ್ಕಹಳ್ಳಿ, ಚಿಕ್ಕಮ್ಮನಹಳ್ಳಿ, ಸೂರನಹಳ್ಳಿ, ಗೋಪನಹಳ್ಳಿ, ಗಂಜಗುಂಟೆ, ಗೊರ್ಲತ್ತು, ಕಲಮರಹಳ್ಳಿ, ಸಾಣೀಕೆರೆ, ಮಧುರೆ ಬುಕ್ಕಿಪುರ, ಸಿದ್ದಾಪುರ, ನವರಂಗೆರೆ, ಕರೀಕೆರೆ, ಪಗಡಲಬಂಡೆ, ಬೃಂದಾವನಹಳ್ಳಿ, ಸಾಸಲಕುಂಟೆ,

ಗೌರೀಪುರ, ಮಹದೇವಪುರ ಮತ್ತು ಪಾಲನಾಯಕನಹಟ್ಟಿಗಳು ಸೇರುತ್ತವೆ. ದೈವಕ್ಕೆ ನೇರಲಗುಂಟೆ ಗ್ರಾಮದವರು ಕೋಲ್ಕಾರರಾಗಿ ಮತ್ತು ಹೊರ್ಲಕಟ್ಟೆಯವರು ಗೌಡರುಗಳಾಗಿರುತ್ತಾರೆ. ಶ್ರೀಮಠವು ಸರೂರು ಸಂಪ್ರದಾಯದ ಮುಂದುವರಿಕೆಯಾಗಿದೆ.

ಶ್ರೀ ಮಠದಲ್ಲಿ ವಿಜಯದಶಮಿಯ ದಿನದಲ್ಲಿ ಬನ್ನಿ ಮುಡಿಯುವ ಸಂಪ್ರದಾಯ, ಕಾರ್ತಿಕ ಮಾಸದುದ್ದಕ್ಕೂ ವಿಶೇಷ ದೀಪಗಳ ಅಲಂಕಾರ ಹಾಗೂ ಯುಗಾದಿ ಹಬ್ಬದ ಸಂದರ್ಭದಲ್ಲಿ ಚಂದ್ರದರ್ಶನ ಮಾಡುವ ಸಂಪ್ರದಾಯ ಇಂದಿಗೂ ನಡೆದುಕೊಂಡು ಬಂದಿದೆ. ಶ್ರೀ ಮಠದ ಒಡೆಯರುಗಳು ಇಂದಿಗೂ ಕಂತೀ ಭಿಕ್ಷೆಗೆ ಹೋಗುವ ದೊರೆತ ಆಹಾರಧಾನ್ಯಗಳಿಂದ ನೈವೇದ್ಯ ತಯಾರಿಸಿ ಪೂಜೆಯ ನಂತರ ವಿತರಿಸುವ ಸಂಪ್ರದಾಯ ಮುಂದುವರಿದಿದೆ. ಯುಗಾದಿಯ ಚಂದ್ರದರ್ಶನ ದಿನದಂದು ಹಾಲುಮತ ಸಮಾಜದವರು ವಿಶೇಷವಾಗಿ ದೇವಾಲಯಕ್ಕೆ ಬಂದು ಒಟ್ಟಾರೆಯಾಗಿ ಸೇರಿ ಚಂದ್ರದರ್ಶನ ಮಾಡುವ ವಿಶೇಷ ಸಂಪ್ರದಾಯ ಇಂದಿಗೂ ಪ್ರಸ್ತುತವಾಗಿದೆ.

ಒಡೆಯರಿಗೆ ಸಂಬಂಧಿಸಿದ ವೈಯಕ್ತಿಕ ಹಾಗೂ ಧಾರ್ಮಿಕ ಸಂಪ್ರದಾಯ ಆಚರಣೆಗಳು ಸರೂರು ಒಡೆಯರುಗಳ ಸಂಪ್ರದಾಯದಂತೆ ಮುಂದುವರೆದಿವೆ. ೫೦-೬೦ ವರ್ಷಗಳ ಹಿಂದೆ ಶ್ರೀಮಠದ ಒಡೆಯರಾಗಿದ್ದ ಸಿದ್ದಯ್ಯ ಒಡೆಯರ್‌ರವರು ತೀರಿಕೊಂಡಾಗ ಅವರಿಗೆ ಗಂಡು ಸಂತಾನ ಇಲ್ಲದ ಕಾರಣ ಅವರ ಧರ್ಮಪತ್ನಿ ಶ್ರೀಮತಿ ಹನುಮವ್ವ ಒಡೆಯರ್ ತನ್ನ ಹೆಣ್ಣು ಮಕ್ಕಳನ್ನು ಬಿಳಿಚೋಡಿನ ಒಡೆಯರ ವಂಶಸ್ಥರಿಗೆ ಕೊಟ್ಟು ವಿವಾಹ ಮಾಡಿದ ಕಾರಣ ಅಂದಿನಿಂದ ಬಿಳಿಚೋಡಿನ ಒಡೆಯರ ವಂಶಸ್ಥರು ದೊಡ್ಡೇರಿ ಗ್ರಾಮಕ್ಕೆ ಬಂದು ನೆಲೆಸಿ ರೇವಣಸಿದ್ದನ ಪೂಜೆ ಪುನಸ್ಕಾರಗಳನ್ನು ಮಾಡುತ್ತಿರುವರು. ಆ ಒಡೆಯರುಗಳ ವಂಶವೃಕ್ಷ ಕೆಳಗಿನಂತಿದೆ. ಪ್ರಸ್ತುತ ಶ್ರೀ ಪ್ರಕಾಶ್ ಒಡೆಯರ್‌ರವರು ಶ್ರೀಮಠದ ಒಡೆಯರಾಗಿದ್ದಾರೆ.




೨೯. ರಂಗವ್ವನಹಳ್ಳಿ: ಚಳ್ಳಕೆರೆ ತಾಲ್ಲೂಕು: ಚಿತ್ರದುರ್ಗ ಜಿಲ್ಲೆ

ರಂಗವ್ವನಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರ ಚಳ್ಳಕೆರೆಯಿಂದ ೧೪.೦೦ ಕಿಮೀಗಳ ದೂರದಲ್ಲಿದೆ. ಗ್ರಾಮದಲ್ಲಿ ಪುರಾತನ ರೇವಣಸಿದ್ಧನ ದೇವಾಲಯವಿದೆ. ಇತ್ತೀಚೆಗೆ ನೂತನವಾಗಿ

ರೇವಣಸಿದ್ಧದೇವಾಲಯವನ್ನು ಗ್ರಾಮದವರು ನಿರ್ಮಿಸುತ್ತಿದ್ದು, ಮುಕ್ತಾಯ ಹಂತದಲ್ಲಿದೆ. ರೇವಣಸಿದ್ದನಿಗೆ ಒಟ್ಟು ೩೨ ಹಳ್ಳಿಗಳ ಗುಡಿಕಟ್ಟು ಇದ್ದು, ಅವುಗಳ ವಿವರ ಇಂತಿದೆ. ಚೌಳೂರು, ಪರಶುರಾಮಪುರ, ಟಿ.ಎನ್.ಕೋಟೆ, ಓಬನಹಳ್ಳಿ, ಕಡೆಗೂಡೇವು, ವಲಸೆ(ಆಂಧ್ರಪ್ರದೇಶ), ಅಮರಾಪುರ, ಮುದ್ದನಕುಂಟೆ (ಆಂಧ್ರಪ್ರದೇಶ), ದ್ಯಾವಗಾನಹಳ್ಳಿ, ಪಾವಗಡ, ರಂಗಸಮುದ್ರ, ಶೈಲಾಪುರ, ಗುಂಡಾರನಹಳ್ಳಿ, ತಿಲ್ಲಾರನಹಳ್ಳಿ, ಓಬಳಾಪುರ, ಪಾತಪ್ಪನಗುಡಿ, ಕಾಮಸಮುದ್ರ, ದೊಡ್ಡಉಳ್ಳಾರತಿ, ಘತಪತ್ರಿ, ಹೊನ್ನೂರು, ಮಲ್ಲಸಮುದ್ರ, ದೇವರಹಳ್ಳಿ, ಉಡೇವು, ಕೋನಸಾಗರ, ಕೊಂಡ್ಲಹಳ್ಳಿ, ಮೊಗಲಹಳ್ಳಿ, ಖಾನಾಹೊಸಳ್ಳಿ, ಗೌರಸಮುದ್ರ, ರಂಗವ್ವನಹಳ್ಳಿ, ನಡೆಗಲ್ಲು, ಎಸ್.ಆರ್ ಪಾಳ್ಯ ಮತ್ತು ಕೊಂಡೆ ತಿಮ್ಮನಹಳ್ಳಿ ಗ್ರಾಮಗಳು. ದೇವಸ್ಥಾನಕ್ಕೆ ಸಂಬಂಧಿಸಿದ ತಾಳೇಗರಿ ಪ್ರತಿಗಳು, ಹಳೆ ಕನ್ನಡ ಲಿಪಿಗಳಲ್ಲಿರುವ ಮಾಹಿತಿಗಳು ಇದ್ದುದಾಗಿಯೂ ಪ್ರಸ್ತುತ ಈ ದಾಖಲೆಗಳು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಇರುವುದಾಗಿಯೂ ಗ್ರಾಮಸ್ಥರು ಹೇಳುತ್ತಾರೆ. ರೇವಣಸಿದ್ದೇಶ್ವರ ಮಠ ದೊಡ್ಡೇರಿ ತಾಲ್ಲೂಕು ಚಳ್ಳಕೇರಿಯಲ್ಲಿ ನಡೆಯುವಂತೆ ಆಚರಣೆ ಉತ್ಸವಗಳು ಇಲ್ಲಿಯೂ ನಡೆಯುತ್ತವೆ.

ಶ್ರೀ ಮಠಕ್ಕೆ ಸಂಬಂಧಿಸಿದೆ ಧಾರ್ಮಿಕ ಹಾಗೂ ಸಮಾಜದ ಎಲ್ಲ ಧಾರ್ಮಿಕ ಕಾರ್ಯಕ್ರಮಗಳು ಹಾಲುಮತ ಸಮಾಜಕ್ಕೆ ಸೇರಿದ ಒಡೆಯರುಗಳ ನೇತೃತ್ವದಲ್ಲಿ ಅಂದಿನಿಂದ ಇಂದಿನವರೆಗೂ ನಡೆಯುತ್ತಾ ಬಂದಿವೆ. ಶ್ರೀ ಮಠಕ್ಕೆ ಸಂಬಂಧಿಸಿದ ಒಡೆಯರುಗಳ ವಂಶವೃಕ್ಷ ಈ ಕೆಳಗಿನಂತಿದೆ. ಪ್ರಸ್ತುತ ಶ್ರೀಮಠದ ಒಡೆಯರಾಗಿ ಶ್ರೀ ರೇವಪ್ಪ ಒಡೆಯರ್‌ರವರು ಕಾರ್ಯನಿರ್ವಹಿ ಸುತ್ತಿದ್ದಾರೆ.



೩೦. ಇಂಗಳೇಶ್ವರ: ಬಾಗೇವಾಡಿ ತಾಲ್ಲೂಕು: ವಿಜಯಪುರ ಜಿಲ್ಲೆ

ರೇವಣಸಿದ್ದರು ಕೊಲ್ಲಿಪಾಕಿಯಿಂದ ಲೋಕಕಲ್ಯಾಣಾರ್ಥ ಸಂಚಾರ ಕೈಗೊಂಡ ಸಂದರ್ಭದಲ್ಲಿ ಕೆಲದಿನಗಳು ತಂಗಿದ್ದರೆಂದು ಹೇಳಲಾಗುವ ಇಂಗಳೇಶ್ವರ ಗ್ರಾಮ ವಿಜಾಪುರ ಜಿಲ್ಲೆಯ ಬಸವನ

ಬಾಗೇವಾಡಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಗ್ರಾಮಕ್ಕೂ ರೇವಣಸಿದ್ಧರಿಗೂ ಸಂಬಂಧಿಸಿದಂತೆ ತನ್ನದೇ ಆದ ಇತಿಹಾಸವಿದೆ. ಕೊಲ್ಲಿಪಾಕಿಯಿಂದ ಲೋಕಕಲ್ಯಾಣಾರ್ಥ ಸಂಚಾರ ಹೊರಟ ರೇವಣಸಿದ್ಧರು; ಗ್ರಾಮದ ಅಜ್ಜಮ್ಮ ಸಜ್ಜನ್ ಎಂಬ ಗಾಣಿಗರ ಮನೆಯಲ್ಲಿ, ಗಾಣ ನಡೆಸುವ ಆಳಾಗಿ ದುಡಿದರು; ಆಗ ಅಜ್ಜಮ್ಮಳ ಬಡತನವೆಲ್ಲಾ ನೀಗಿ ಸಿರಿತನ ಬಂದುದಾಗಿಯೂ, ಸಂಜೆ ವೇಳೆ ಮನೆ ನೀರು ತುಂಬುವ ಕೆಲಸವೂ ರೇವಣಸಿದ್ಧರದಾಗಿತ್ತು. ನೀರು ತರುವಾಗ ಎರಡೂ ಭುಜದ ಮೇಲೆ ಹೊತ್ತ ನೀರಿನ ಕೊಡಗಳು, ನಾಲ್ಕು ಬೆರಳುಗಳ ಅಂತರದಲ್ಲಿರುತ್ತಿವ, ದೃಷ್ಯವನ್ನು ಕಂಡ ಗ್ರಾಮಸ್ಥರು, ಈತನು ಸಾಮಾನ್ಯನಲ್ಲ; ಅದ್ಭುತ ವ್ಯಕ್ತಿತ್ವವುಳ್ಳವನೆಂದು ವಿಷಯವನ್ನು ಅಜ್ಜಮ್ಮನಿಗೆ ತಿಳಿಸಿದರೆಂದು; ಆಗ ರೇವಣಸಿದ್ಧರು ತಮ್ಮ ನಿಜ ಪರಿಚಯ ಮಾಡಿಕೊಂಡು ಜ್ಞಾನೋದಯ ಹಾಗು ಲಿಂಗದೀಕ್ಷೆಯನ್ನು ಅಜ್ಜಮ್ಮಳಿಗೆ ದಯಪಾಲಿಸಿದರು ಎಂಬುದು ಇಲ್ಲಿಯ ಸ್ಥಳ ಪುರಾಣ ಹಾಗು ಸ್ಥಳೀಯರ ನಂಬಿಕೆ. ಈ ಸಂಬಂಧವಾದ ಘಟನೆಗಳ ಉಲ್ಲೇಖಗಳನ್ನು ಹಾಲುಮತ ಲಿಖಿತ ಸಾಹಿತ್ಯ, ಪುರಾಣಗಳಲ್ಲಿಯೂ ಗಮನಿಸಬಹುದಾಗಿದೆ.

ಇಂಗಳೇಶ್ವರದಲ್ಲಿ ಪವಾಡಗೈದ ರೇವಣಸಿದ್ಧರು, ಕಣ್ಣಂಚಿನ ದೂರದಲ್ಲಿರುವ ತಪೋನಂದಿ ಬೆಟ್ಟದೆಡೆಗೆ ನಡೆದರು. ಅಷ್ಟೇನು ಎತ್ತರ ಪ್ರದೇಶವಲ್ಲದ ಈ ಬೆಟ್ಟದಲ್ಲಿ; ಕ್ರೂರ ಪ್ರಾಣಿಗಳ ಜೊತೆ-ಜೊತೆಗೆ ಜಿಂಕೆಗಳಂತಹ ಕಾಡು ಪ್ರಾಣಿಗಳೂ ಸಹ ಯಾವದೆ ಅಂಜಿಕೆಯಿಲ್ಲದೆ, ಅನ್ಯೋನ್ಯವಾಗಿ ವಾಸಿಸುತ್ತಿದ್ದವೆಂದೂ, ಹಾಗೂ ಅನೇಕ ಸಿದ್ಧರಿಗೆ ತಪೋ ಭೂಮಿಯಾಗಿತ್ತು ಎಂಬುದು ಐತಿಹ್ಯ. ರೇವಣಸಿದ್ಧರು ಬೆಟ್ಟಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ ನಿಂತಿದ್ದರೆಂದು ಹೇಳಲಾಗುವ ಸ್ಥಳವನ್ನು ಗ್ರಾಮಸ್ಥರು ಈಗಲೂ ತೋರಿಸುತ್ತಾರೆ. ಆ ಸ್ಥಳಕ್ಕೆ ರೇವಣಸಿದ್ಧರ ಪಾದಗಟ್ಟಿ ಎಂದು ಕರೆಯುತ್ತಾರೆ. ಈ ಸ್ಥಳದಲ್ಲಿ ಗ್ರಾಮಸ್ಥರು ಪಾದಗಟ್ಟಿಯನ್ನು ನಿರ್ಮಿಸಿದ್ದಾರೆ. ಆ ಪಾದಗಟ್ಟಿಯ ಮೇಲೆ ಪಾದುಕೆಗಳನ್ನು ಇಟ್ಟು; ಪೂಜೆ ಮಾಡುತ್ತಿದ್ದಾರೆ.

ತಪೋನಂದಿ ಬೆಟ್ಟದಲ್ಲಿ ರೇವಣಸಿದ್ಧರು ತಪಸ್ಸುಗೈದರೆಂದು ಹೇಳಲಾದ ಸ್ಥಳಕ್ಕೆ ಹೊಂದಿಕೊಂಡಂತೆ ಇತ್ತೀಚೆಗೆ ರೇವಣಸಿದ್ಧರ ದೇವಾಲಯವನ್ನು ವಿಸ್ತರಿಸಿ ವ್ಯವಸ್ಥಿತವಾಗಿ ಜೀರ್ಣೋದ್ಧಾರ ಮಾಡಲಾಗಿದೆ. ಈ ಸಂಬಂಧ ದೇವಾಲಯ ಅಭಿವೃದ್ಧಿ ಕಮೀಟಿಯನ್ನು ರಚಿಸಲಾಗಿದ್ದು, ಪ್ರಸ್ತುತ ಹಾಲುಮತ ಜನಾಂಗದ ಶ್ರೀ ಭೀಮರಾಯ್ ಸಿದ್ಧಪ್ಪ ಶೇಕಣ್ಣ ಅವರು ಅಧ್ಯಕ್ಷರಾಗಿದ್ದಾರೆ. ಬೆಟ್ಟದ ಮೇಲಿನ ರೇವಣಸಿದ್ಧರ ದೇವಸ್ಥಾನದಿಂದ ಸುಮಾರು ೧.೫ಕಿ.ಮೀ ಅಂತರದ ಎತ್ತರ ಪ್ರದೇಶದಲ್ಲಿ ಅಕ್ಕ ನಾಗಮ್ಮನ ದೇವಾಲಯವಿದೆ. ಈ ಎರಡೂ ದೇವಾಲಯಗಳು ಅತ್ಯಂತ ಕಡಿದಾದ, ದುರ್ಗಮವಾದ ಸುರಂಗಮಾರ್ಗದ ಮುಖಾಂತರ ಜೋಡಣೆಯಾಗಿವೆ. ಈ ಸುರಂಗವು ಅನೇಕ ಸಿದ್ಧರಿಗೆ ತಪೋಭೂಮಿಯಾಗಿತ್ತೆಂದು ಸ್ಥಳೀಯರು ಹೇಳುತ್ತಾರೆ.

ಈಗಲೂ ಇದಕ್ಕೆ ಪುರಾವೆಯೆಂಬಂತೆ ಅನೇಕ ಕುರುಹುಗಳನ್ನು ಇಲ್ಲಿ ಕಾಣಬಹುದು. ಈ ಗುಹೆಯಲ್ಲಿಯೇ ಬಸವೇಶ್ವರರ ಸಹೋದರಿ, ಅಕ್ಕನಾಗಮ್ಮನೂ ತಪಸ್ಸು ಮಾಡಿದ್ದಳೆಂದು ಸ್ಥಳೀಯರು ಹೇಳುತ್ತರಾದರೂ, ಪೂರಕ ಪುರಾವೆಗಳು ದೊರೆಯುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಸುರಕ್ಷತೆಯ ದೃಷ್ಟಿಯಿಂದ; ಸುರಂಗದ ದ್ವಾರವನ್ನು ಮುಚ್ಚಲಾಗಿದ್ದರೂ ಅನತಿ ದೂರದವರೆಗೆ ಸುರಂಗದಲ್ಲಿ ಹೋಗಬಹುದಾಗಿದೆ. ತಪೋನಂದಿ ಬೆಟ್ಟಕ್ಕೆ ಹೊಂದಿಕೊಂಡಂತೆ, ಸುಮಾರು ೨೦೦ ಎಕರೆಗಳಷ್ಟು ವ್ಯವಸಾಯದ ಭೂಮಿಯು ರೇವಣಸಿದ್ಧ ದೇವಾಲಯದ ಒಡೆತನದಲ್ಲಿದೆ. ಪ್ರತಿವರ್ಷ ಸಾರ್ವಜನಿಕ ಹರಾಜಿನ ಮೂಲಕ ರೈತರಿಗೆ ವ್ಯವಸಾಯ ಮಾಡುವುದಕ್ಕಾಗಿ ಈ ಭೂಮಿಯನ್ನು ನೀಡಲಾಗುತ್ತಿದೆ ಮತ್ತು ಬರುವ ಆದಾಯವನ್ನು ದೇವಸ್ಥಾನದ ಅಭಿವೃದ್ಧಿ ಕಮೀಟಿಗೆ ಜಮೆ ಮಾಡಿ ದೇವಾಲಯದ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತಿದೆ.

ಇಂದಿನ ಇಂಗಳೇಶ್ವರ, ಗ್ರಾಮವು ಮೂಲಸ್ಥಳದಿಂದ ಸ್ಥಳಾಂತರಗೊಂಡ ಗ್ರಾಮವಾಗಿದೆ. ಹಿಂದೆ ಗ್ರಾಮವು ತಪೋನಂದಿ ಬೆಟ್ಟಕ್ಕೆ ಹೊಂದಿಕೊಂಡಿತ್ತು ಹಾಗು ಭದ್ರಗಿರಿ (ತಿಂಗಳೇಶ್ವರ) ಎಂದು ಕರೆಯಲ್ಪಡುತ್ತಿತ್ತು. ಪೂರಕವೆನ್ನುವಂತೆ ಮೂಲಸ್ಥಳದಲ್ಲಿ ಗ್ರಾಮದೇವತೆ ತಿಂಗಳಾಂಬೆಯ ದೇವಸ್ಥಾನದ ಕುರುಹುಗಳು ದೊರೆಯುತ್ತವೆ. ತಿಂಗಳಾಂಬೆ ದೇವಸ್ಥಾನವು ಪ್ರಸ್ತುತ ಸಂಪೂರ್ಣ ಹಾಳಾಗಿದೆ. ತಿಂಗಳಾಂಬೆ ದೇವಸ್ಥಾನಕ್ಕೆ ಹೊಂದಿಕೊಂಡಂತೆ, ಕಲ್ಲಿನಾಥ ದೇವಾಲಯವಿದ್ದು ಸಂರಕ್ಷಣೆಯ ಕೊರತೆಯಿಂದಾಗಿ ಪಾಳು ಬಿದ್ದು ಜಟಿಲಾವಸ್ಥೆ ತಲುಪಿದೆ. ದೇವಾಲಯದ ಗರ್ಭಗುಡಿಯಲ್ಲಿ ಲಿಂಗ ಪ್ರತಿಷ್ಠಾಪಿಸಿದುದನ್ನು ಗಮನಿಸಬಹುದಾಗಿದೆ.

ಕಲ್ಲಿನಾಥ ದೇವಾಲಯದ ಎದಿರು, ಹನ್ನೆರಡು ಲಿಂಗಗಳನ್ನು ಮುಂಭಾಗದಲ್ಲಿ ಪ್ರತಿಷ್ಠಾಪಿಸಿದ ಮತ್ತೊಂದು ದೇವಾಲಯವಿದೆ. ಈ ದೇವಾಲಯವನ್ನು ಆದಿ ಹನುಮಂತ ದೇವಸ್ಥಾನ ಎಂದು ಕರೆಯುತ್ತಾರಾದರೂ, ಈ ದೇವಾಲಯವು ಮೂಲ ಹನುಮ ದೇವಾಲಯವೇ ಎಂಬುದಕ್ಕೆ ಪುರಾವೆಗಳು ದೊರೆಯುವುದಿಲ್ಲ. ದೇವಸ್ಥಾನದ ಎದುರಿನ ಪ್ರವೇಶದ್ವಾರವು ಅಳಿದುಳಿದಿದೆ. ಅವಶೇಷಗಳಲ್ಲಿ ಕೆತ್ತಲಾದ ಚಿತ್ರಗಳ ಮಾದರಿ ಹಾಗು ವಿನ್ಯಾಸಗಳಿಂದ ದೇವಾಲಯ ನಿರ್ಮಾಣದ ಕಾಲಮಾನವನ್ನು ನಿರ್ಧರಿಸಬಹುದಾಗಿದೆ. ಈ ದೇವಾಲಯದ ಪಕ್ಕದಲ್ಲಿ ಬಹುಪುರಾತನ ಕಲ್ಲಪ್ಪ ಬಾಪಿ ಇದೆ. ಚಚ್ಚೌಕಾರದ ಭಾಪಿಯು ಆಳ ಹಾಗು ವಿಸ್ತಾರವಾಗಿದ್ದು ಸುಸಜ್ಜಿತ ಕಲ್ಲು ಕಟ್ಟಡದಿಂದ ನಿರ್ಮಾಣಗೊಂಡಿದೆ. ಅಳವಡಿಸಲಾದ ಮೆಟ್ಟಲುಗಳ ಮುಖಾಂತರ ಬಾಪಿಯಲ್ಲಿ ಇಳಿಯಬಹುದಾಗಿದೆ. ಶ್ರೀ ರೇವಣಸಿದ್ಧರ ಅಭಿವೃದ್ಧಿ ಕಮೀಟಿಯವರು ಬಾಪಿಯ ಜೀರ್ಣೋದ್ಧಾರ ಮಾಡಿದ್ದು; ಇಲ್ಲಿಂದಲೇ ತಪೋನಂದಿ ಬೆಟ್ಟದಲ್ಲಿರುವ ರೇವಣಸಿದ್ಧರ ದೇವಾಲಯಕ್ಕೆ ಪ್ರಸ್ತುತ ನೀರು ಸರಬರಾಜು ವ್ಯವಸ್ಥೆಯನ್ನು ಮಾಡಿರುತ್ತಾರೆ.

ಸ್ಥಳೀಯ ಚರಿತ್ರೆಗಳ ಪ್ರಕಾರ ಗ್ರಾಮದೇವತೆ ಇಂಗಳಾಂಬೆ ಹಾಗು ಈಶ್ವರನ ನೆಲೆಗಳಿಂದಾಗಿ ಗ್ರಾಮವು ಇಂಗಳೇಶ್ವರ ಎಂದು ಮರು ನಾಮಗೊಂಡು ಪ್ರಖ್ಯಾತವಾಯಿತು. ತಪೋನಂದಿ ಬೆಟ್ಟದ ಗುಹೆಯಲ್ಲಿ ಸಿದ್ಧರು ತಪಸ್ಸು ಮಾಡುತ್ತಿದ್ದರು ಎಂಬ ವಾದಕ್ಕೆ ಕುರುಹಾಗಿ, ಗುಹೆಯೊಳಗೆ ಶಿವಲಿಂಗಗಳಿರುವುದನ್ನು ಗಮನಿಸಬಹುದಾಗಿದೆ, ಗುಹೆಯ ಒಂದೆಡೆ ಗೂಡಿನಲ್ಲಿ ಎರಡು ಸ್ತ್ರೀ ಹಾಗು ಒಂದು ಗಂಡು ದೇವರ ವಿಗ್ರಹಗಳಿವೆ; ವಾಸ್ತವವಾಗಿ ಆ ವಿಗ್ರಹಗಳು ತಿಂಗಳಾಂಬೆ ಹಾಗು ಇಂಗಳಾಂಬೆಯರ ವಿಗ್ರಹಗಳಾಗಿರಬಹುದೆಂದು ಅಭಿಪ್ರಾಯಿಸಬಹುದಾಗಿದೆ. ಗಂಡು ವಿಗ್ರಹವು ನಾಥಪಂಥೀಯ ರೂಪವನ್ನು ಹೋಲುವ ಕಾರಣ ಸಿದ್ಧ ಪರಂಪರೆಯ ಮೇಲೆ ನಾಥಪರಂಪರೆಯ ಪ್ರಭಾವ ಇತ್ತೆಂಬ ವಾದಕ್ಕೆ ಮತ್ತಷ್ಟು ಪುಷ್ಟೀಕರಣ ನೀಡುವಂತದ್ದಾಗಿದೆ.

ಶ್ರೀ ರೇವಣಸಿದ್ಧರ ದೇವಾಲಯದಲ್ಲಿ ಮದುವೆ–ಮಂಗಳಕಾರ್ಯಗಳು ವರ್ಷವಿಡೀ ನಡೆಯುತವೆ. ಸುತ್ತಮುತ್ತಲಿನ ಗ್ರಾಮದ ಜನರು ಅದರಲ್ಲೂ ವಿಶೇಷವಾಗಿ ಹಾಲುಮತ ಜನಾಂಗದವರು, ಮದುವೆ–ಮಂಗಳಕಾರ್ಯಗಳನ್ನು ಈ ದೇವಾಲಯಲ್ಲಿಯೇ ನೆರವೇರಿಸುತ್ತಾರೆ. ಇಲ್ಲಿ ನೆರವೇರುವ ಈ ಮದುವೆ ಸಮಾರಂಭಗಳು ಗುರುವಿನವರ ನೇತೃತ್ವದಲ್ಲಿ ನಡೆಯುತ್ತವೆ. ಶಾಂತಮುತ್ತಯ್ಯ ಸಂಪ್ರದಾಯದ ಗುರುವಿನವರು, ಮಂತ್ರ ಪಠಣ ಮಾಡುವ ಮೂಲಕ ನೆರವೇರಿಸಿಕೊಡುತ್ತಾರೆ. ಮೊದಲಿನಿಂದಲೂ ನಡೆದುಕೊಂಡು ಬಂದ ಈ ಸಂಪ್ರದಾಯಕ್ಕೆ ಪ್ರಸ್ತುತ ಪ್ರಸ್ತುತ ಶಿವಾನಂದ ಗುರುವಿನ ಮತ್ತು ಶ್ರೀ ವಿಠಲ್ ಗುರುವಿನವರು ಮುಖ್ಯಸ್ಥರಾಗಿದ್ದಾರೆ. ಪ್ರಸ್ತುತ ಗುರುವಿನ ಮನೆತನದವರು ಇಂಗಳೇಶ್ವರ ಗ್ರಾಮದ ಒಂದು ವಾರ್ಡ್ ಆಗಿ ಪರಿವರ್ತನೆಯಾಗಿರುವ ಬಳ್ಳಾವೂರಿನಲ್ಲಿ ಇಂದಿಗೂ ನೆಲೆಸಿದ್ದಾರೆ.

ಇತರೆಡೆ ಇರುವ ಸಂಪ್ರದಾಯದಂತೆ ಗುರುವಿನವರು ತಮ್ಮ ತಮ್ಮಲ್ಲಿ ಹೆಣ್ಣು–ಗಂಡು ಕೊಟ್ಟು ಪಡೆದು ಮದುವೆಯಾಗುವ ಸಂಪ್ರದಾಯವಿದೆ. ಕೆಲ ಸಂದರ್ಭಗಳಲ್ಲಿ ಮಾತ್ರ ಗುರುವಿನವರಿಗೆ ಹಾಲುಮತ ಜನಾಂಗದ ಹೆಣ್ಣನ್ನು ಕೊಟ್ಟು ಮದುವೆ ಮಾಡಿದರೂ, ಹೊರಳಿ ಅವರ ಮನೆತನದಿಂದ ಹೆಣ್ಣನ್ನು ತೆಗೆದುಕೊಳ್ಳದೆ ಇರುವ ಸಂಪ್ರದಾಯ ಈಗಲೂ ಮುಂದುವರೆದಿದೆ.

ಗುರುವಿನವರಿಗೆ ಸಂಬಂಧಿಸಿದಂತೆ ಜನನ, ಶವಸಂಸ್ಕಾರ ಹಾಗು ಇತರೆ ಸಂದರ್ಭಗಳಲ್ಲಿ ಆಚರಿಸುವ ಧಾರ್ಮಿಕ ವಿಧಿ ವಿಧಾನಗಳು, ಶಾಂತಮುತ್ತಯ್ಯ ಗುರುಪರಂಪರೆ ಸಂಪ್ರದಾಯದಂತೆ ಈಗಲೂ ನಡೆಯುತ್ತಲಿವೆ.

ಪ್ರತಿವರ್ಷ ಹೊಸ್ತಿಲ ಹುಣ್ಣಿಮೆಯಂದು (ಡಿಸೆಂಬರ್) ಪ್ರಾರಂಭವಾಗುವ ಜಾತ್ರೆಯಲ್ಲಿ ಐದು ದಿನಗಳ ಕಾಲ ರೇವಣಸಿದ್ಧನ ಒಡ್ಡೋಲಗವು ನೆರವೇರುವುದು; ಹಾಗೂ ಜಾತ್ರೆಯು ಒಂದು ತಿಂಗಳವರೆಗೆ ಮುಂದುವರೆಯುವುದು. ಈ ಸಂದರ್ಭದಲ್ಲಿ ಸುತ್ತಮುತ್ತಲಿನ ಗ್ರಾಮದ

ದೇವತೆಗಳು ರೇವಣಸಿದ್ಧನ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡರೂ, ಇಂಗಳೇಶ್ವರ ಗ್ರಾಮದ ಬೀರದೇವ ಪಲ್ಲಕ್ಕಿ ಮಾತ್ರ ಭಾಗವಹಿಸದಿರುವುದು ವಿಶೇಷವಾಗಿದೆ. ಜಾತ್ರಾ ಮಹೋತ್ಸವ ಮುಕ್ತಾಯವಾಗುವರೆಗೂ ದಿನಂಪ್ರತಿ ರೇವಣಸಿದ್ಧನ ಹಾಗು ಇತರೆ ಸಿದ್ಧರ ಕುರಿತಾದ ಡೊಳ್ಳಿನ ಹಾಡುಗಳನ್ನು ಹಾಡುವ, ದೈವವನ್ನು ನೆನೆಯುವ ಭಜನೆ ಹಾಗು ಕುದುರೆ ಕುಣಿತ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಜಾತಿ-ಮತ ಬೇಧವಿಲ್ಲದೆ ಗ್ರಾಮದ ಸುತ್ತಮುತ್ತಲಿನ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಇಂಗಳೇಶ್ವರ ಗ್ರಾಮದ ರೇವಣಸಿದ್ಧನ ಪೂಜಾರಿಕೆಯು ಪಂಚಮಸಾಲಿ ಜನಾಂಗದವರಿಗೆ ಸೇರಿದೆ. ಪ್ರಸ್ತುತ ಶ್ರೀ ಬಸಪ್ಪ ಪೂಜಾರಿಯವರು ರೇವಣಸಿದ್ಧನ ಅರ್ಚಕರಾಗಿದ್ದಾರೆ.

ಪ್ರತಿವರ್ಷ ಯುಗಾದಿ ಪಾಡ್ಯ ಕಳೆದು ನಾಲ್ಕು ದಿನಗಳ ನಂತರ ನೆಲಮಾಳ ಸಿದ್ಧನ ಜಾತ್ರೆ ಉತ್ಸವವು ಎರಡು ದಿನಗಳ ಕಾಲ ಜರುಗುವುದು. ಜಾತ್ರಾ ಉತ್ಸವಕ್ಕೆ ಹೊಂದಿಕೊಂಡಂತೆ ೨೧ ದಿನಗಳ ಕಾಲ ಪುರಾಣ-ಪುಣ್ಯಕಥೆಗಳ ಪ್ರವಚನಗಳು ನಿರಂತರವಾಗಿ ನಡೆಯುತ್ತವೆ. ಜಾತ್ರಾ ಉತ್ಸವದಲ್ಲಿ ಪಡೆಗಾನೂರು, ಶಿವಣಗಿ, ತಾಂಬಾ, ಕಗ್ಗೋಡ ಗ್ರಾಮ ದೇವತೆಗಳ ಪಲ್ಲಕ್ಕಿಗಳು ಬಂದು ಸೇರುತ್ತವೆ.

ಶ್ರೀ ರೇವಣಸಿದ್ಧರು ಸಮಸ್ತ ಜನಾಂಗದವರಿಗೂ ಆರಾಧ್ಯದೈವವಾಗಿದ್ದರೂ; ಹಾಲುಮತಸ್ಥರಿಗೆ ಆತನೇ ಮುಖ್ಯ ದೈವವಾಗಿದ್ದಾನೆ ಹಾಗು ರೇವಣಸಿದ್ಧ ಸಂಪ್ರದಾಯದ ಶಾಂತಮುತ್ತಯ್ಯನ ಗುರುಪರಂಪರೆಯು ಮುಂದುವರೆದಿದ್ದು ಇಂದಿಗೂ ತನ್ನದೇ ಆದ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

೩೧. ಮನಗೂಳಿ: ಬಸವನ ಬಾಗೇವಾಡಿ ತಾಲ್ಲೂಕು: ವಿಜಯಪುರ ಜಿಲ್ಲೆ

ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮನಗೂಳಿ ಗ್ರಾಮವು ಒಂದು ಪುರಾತನ ರೇವಣಸಿದ್ಧನ ನೆಲೆಯಾಗಿದೆ. ಮನಗೂಳಿ ಗ್ರಾಮದಲ್ಲಿ ೧೨ನೆಯ ಶತಮಾನದ ಸುಮಾರಿನಲ್ಲಿ ಕಟ್ಟಿದ ರೇವಣಸಿದ್ಧನ ದೇವಾಲಯವಿದೆ. ಪ್ರಸ್ತುತ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಮನಗೂಳಿ ಗ್ರಾಮದ ಹಾಲುಮತ ಜನಾಂಗದವರು ಕೈಗೆತ್ತಿಕೊಂಡಿದ್ದು ಕಟ್ಟಡ ಕಾರ್ಯವು ಪ್ರಗತಿಯಲ್ಲಿದೆ. ಮನಗೂಳಿ ಗ್ರಾಮದ ಈ ನೆಲೆಗೆ ಪುರಾತನ ಇತಿಹಾಸವಿದೆ. ರೇವಣಸಿದ್ಧರು ಆಂಧ್ರ ಪ್ರದೇಶದ ಕೊಲ್ಲಿಪಾಕಿಯಿಂದ ಲೋಕಸಂಚಾರ ಕೈಗೊಂಡು ಸರೂರು, ಇಂಗಳೇಶ್ವರ ಮುಖಾಂತರ ಮನಗೂಳಿ ಗ್ರಾಮಕ್ಕೆ ಬಂದಿದ್ದರು ಎಂಬದು ಐತಿಹ್ಯ. ಕೊಲ್ಲಾಪುರದ ಮಾಯಿ ನವಕೋಟಿ ಸಿದ್ಧರನ್ನು ಬಂಧನದಲ್ಲಿಟ್ಟು ಹಿಂಸಿಸುತ್ತಿದ್ದಳು. ಆಗ ಸಿದ್ಧರನ್ನು ಬಂಧಮುಕ್ತ ಮಾಡುವುದಕ್ಕೋಸ್ಕರ ಕೊಲ್ಲಾಪುರದೆಡೆ ಹೋಗುವ ಮಾರ್ಗದಲ್ಲಿ ಮನಗೂಳಿಯಲ್ಲಿ ತಂಗಿದ್ದರು.

ಆ ಸ್ಮರಣಾರ್ಥ ರೇವಣಸಿದ್ಧ ದೇವಾಲಯವು ನಿರ್ಮಾಣವಾಯಿತು ಎಂಬುದು ಸ್ಥಳೀಯ ಜನರ ನಂಬಿಕೆ. ಈಗಲೂ ದೇವಾಲಯದ ಆವರಣದಲ್ಲಿ ರೇವಣಸಿದ್ಧರು ತಂಗಿದ್ದ ಸ್ಥಳವನ್ನು ಗ್ರಾಮಸ್ಥರು ತೋರಿಸುತ್ತಾರೆ.

ಮನಗೂಳಿಯ ರೇವಣಸಿದ್ಧನ ದೇವಾಸ್ಥಾನದ ಪಕ್ಕದಲ್ಲಿಯೇ ಶ್ರೀ ಬೀರೇಶ್ವರ ದೇವಾಲಯವಿದೆ. ಮನಗೂಳಿ ಗ್ರಾಮದ ಹಾಲುಮತಸ್ಥ ಜನಾಂಗದವರಿಗೆ ಶ್ರೀ ಬೀರೇಶ ಹಾಗು ಶ್ರೀ ರೇವಣಸಿದ್ಧರೇ ಮುಖ್ಯ ಆರಾಧ್ಯ ದೈವರಾಗಿದ್ದಾರೆ. ರೇವಣಸಿದ್ಧನ ಪೂಜೆ ಪುನಸ್ಕಾರಗಳನ್ನು ಮೊದಲಿನಿಂದಲೂ ಹಾಲುಮತ ಗುರುಪರಂಪರೆಯ, ಗುರುವಿನವರು ಮಾಡುತ್ತ ಬಂದಿದ್ದಾರೆ. ಮನಗೂಳಿ ಗ್ರಾಮದ ಗುರುವಿನವರು ಸರೂರು ಗ್ರಾಮದ ಮೂಲದವರು. ಗ್ರಾಮದ ಹಿರಿಯರು ಹೇಳುವಂತೆ ಆ ಕಾಲದಲ್ಲಿಯೇ ರೇವಣಸಿದ್ಧನ ಪೂಜೆಗೆಂದು ಸರೂರಿನ ಶಾಂತಮುತ್ತಯ್ಯನ ಗುರುಪರಂಪರೆಯವರಾದ ಗುರುವಿನವರನ್ನು ಮನಗೂಳಿ ಗ್ರಾಮಕ್ಕೆ ಕರೆತಂದರೆಂದು ಹೇಳುತ್ತಾರೆ. ಈಗಲೂ ಇಲ್ಲಿನ ಗುರುವಿನವರ ಹೆಸರಿನ ಮುಂದೆ ಸರೂರು ಗ್ರಾಮದ ಅಡ್ಡಹೆಸರನ್ನು ಕರೆಯುತ್ತಾರೆ. ಪ್ರಸ್ತುತ ಶ್ರೀ ಮಲ್ಲಯ್ಯ ಸರೂರು ಹಾಗು ಶ್ರೀ ಸಿದ್ಧಯ್ಯ ಸರೂರು ಅವರು ಗುರುವಿನವರಿದ್ದಾರೆ. ಗುರುವಿನವರ ಮುಂದೆ ಸರೂರು ಅಡ್ಡ ಹೆಸರನ್ನು ಸೇರಿಸುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಅಂದು ಬಂದ ಈ ಗುರುವಿನವರು ಮನಗೂಳಿ ಗ್ರಾಮದಲ್ಲಿ ನೆಲೆಸಿದ್ದಾರೆ.

ಪ್ರತಿವರ್ಷ ಅಕ್ಷತೆಯ ಅಮಾವಾಸ್ಯೆಯ ನಂತರ (ಮೇ ತಿಂಗಳಲ್ಲಿ) ೫ನೇ ದಿನದಂದು ಮನಗೂಳಿ ಗ್ರಾಮದಲ್ಲಿ ರೇವಣಸಿದ್ಧನ ಪಲ್ಲಕ್ಕಿ ಉತ್ಸವವು ಜರುಗುವುದು. ಎರಡು ದಿನಗಳ ಕಾಲ ಸಂಭ್ರಮದಿಂದ ಭಕ್ತಿ ಭಾವಗಳಿಂದ ನಡೆಯುವ ಈ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಜರುಗುವ ಆಚರಣೆಗಳಿಂದಾಗಿ ವಿಶೇಷತೆಯನ್ನು ಪಡೆಯುತ್ತದೆ. ಮೊದಲನೇ ದಿನದಂದು ಡೊಳ್ಳು ಕುಣಿತ ಮತ್ತು ಇತರೆ ವಾದ್ಯಗಳೊಂದಿಗೆ ರೇವಣಸಿದ್ಧನ ಪಲ್ಲಕ್ಕಿ ಮೆರವಣಿಗೆಯು, ಊರಿನ ಪ್ರಮುಖ ಬೀದಿಗಳ ಮುಖಾಂತರ ರೇವಣಸಿದ್ಧನ ದೇವಸ್ಥಾನಕ್ಕೆ ತಲುಪುತ್ತದೆ.

ಪಲ್ಲಕ್ಕಿ ಉತ್ಸವದಲ್ಲಿ ಸುತ್ತಲಿನ ಗ್ರಾಮಗಳಾದ ಬಾಗೇವಾಡಿ ತಾಲ್ಲೂಕಿನ ತಳೇವಾಡದ ಜೀರಸಿದ್ಧೇಶ್ವರ ದೇವರು, ಹತ್ತರಿಕಾಳದ ಜೆಟ್ಟಿಂಗೇಶ್ವರ, ಯರನಾಳು ಗ್ರಾಮದ ಜೀರಸಿದ್ಧೇಶ್ವರ; ವಿಜಾಪುರ ತಾಲ್ಲೂಕಿನ ಸವನಹಳ್ಳಿಯ ಜೀರಸಿದ್ದೇಶ್ವರ, ಹೆಗಡೆಹಾಳ ಲಗುಮವ್ವ ದೇವಿ ದೇವರುಗಳು ಪಾಲ್ಗೊಳ್ಳುತ್ತವೆ. ಪಲ್ಲಕ್ಕಿ ಉತ್ಸವ ಜರುಗುವ ಹಿಂದಿನ ದಿನವೇ, ಈ ಎಲ್ಲ ದೇವರುಗಳ ಪಲ್ಲಕ್ಕಿಗಳು ಮನಗೂಳಿ ಗ್ರಾಮಕ್ಕೆ ಬಂದು ಸೇರುತ್ತವೆ. ಈ ಎಲ್ಲ ದೇವರುಗಳಿಗೆ ಧಾರ್ಮಿಕವಾಗಿ ಸ್ವಾಗತವನ್ನು, ಹಂದರ ಹಾಕುವ ಕಾರ್ಯಕ್ರಮದ ಮುಖಾಂತರ ಮಾಡಲಾಗುತ್ತದೆ.

ಪಲ್ಲಕ್ಕಿ ಉತ್ಸವದ ಮೊದಲ ದಿನದ ರಾತ್ರಿ ಗುರು ರೇವಣಸಿದ್ಧರ ಕುಲದೈವ ಬೀರೇಶ್ವರ ಹಾಗು ಹಾಲುಮತ ಜನಾಂಗದ ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಚರಿತ್ರೆ, ಪುರಾಣಗಳ ಪಠಣ ಹಾಗು ಡೊಳ್ಳಿನ ಪದಗಳನ್ನು ಹಾಡಲಾಗುವುದು. ಮನಗೂಳಿ ಗ್ರಾಮದಲ್ಲಿ ರೇವಣಸಿದ್ಧೇಶ್ವರ ಡೊಳ್ಳಿನ ಸಂಘ ಅಸ್ತಿತ್ವದಲ್ಲಿದ್ದು ಪ್ರಸ್ತುತ ಗ್ರಾಮ ಪಂಚಾಯಿತಿ ಸದಸ್ಯರೂ ಆದ ಶ್ರೀ ಯಲ್ಲಪ್ಪ, ರಾಮಪ್ಪ, ರೊಳ್ಳಿಯವರು ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸ್ವತಃ ಡೊಳ್ಳಿನ ಪದಗಳ ಹಾಡುಗಾರರಾದ ಅವರು ಸುತ್ತಮುತ್ತಲಿನ ಗ್ರಾಮದಲ್ಲಿ ಈ ಕುರಿತಾದ ಕಾರ್ಯಕ್ರಮಗಳನ್ನು ಪ್ರಸ್ತುತ ನೀಡುತ್ತಿದ್ದಾರೆ. ಈ ಪಲ್ಲಕ್ಕಿ ಉತ್ಸವದ ಮೊದಲ ದಿನದ ವಿಶೇಷವೇನೆಂದರೆ ಅಂದು ಸಂಜೆ ಸರಿಸುಮಾರು ೬ಗಂಟೆಯ ಸಮಯದಲ್ಲಿ ಹೇಳಿಕೆ ಹೇಳುವ ಧಾರ್ಮಿಕ ಆಚರಣೆ ಇದೆ. ಮುಳ್ಳಿನ ಕಂಟೆಯನ್ನೇರಿ ಹೇಳಿಕೆ ಹೇಳುವುದನ್ನು ಹಾಲುಮತ ಜನಾಂಗಕ್ಕೆ ಸೇರಿದ ಗುರುವಿನವರು ನೆರವೇರಿಸಿ ಕೊಡುತ್ತಾರೆ. ರೇವಣಸಿದ್ಧನ ದೇವಾಲಯದ ಮುಂಭಾಗದಲ್ಲಿ ಈ ಹೇಳಿಕೆ ಹೇಳುವುದಕ್ಕಾಗಿ ವಿವಿಧ ಮುಳ್ಳಿನ ಕಂಟಿಗಳನ್ನು ತಂದು ಮುಳ್ಳಿನ ರಾಶಿಯನ್ನು ಮಾಡುವರು ಹಾಗು ಆ ಮುಳ್ಳಿನ ರಾಶಿಯನ್ನೇರಿ ಗುರುವಿನವರು ಹೇಳಿಕೆ ಹೇಳುವ ಸಂಪ್ರದಾಯವು ಈಗಲೂ ಮುಂದುವರೆದಿದೆ. ಈ ಸಂದರ್ಭದಲ್ಲಿ ಸುತ್ತಮುತ್ತಲಿನ ಗ್ರಾಮದ ಜನರು ಜಾತಿ ಬೇಧವಿಲ್ಲದೆ ಭಾಗವಹಿಸುತ್ತಾರಾದರೂ ಹೆಚ್ಚಿನ ಸಂಖ್ಯೆಯಲ್ಲಿ ಹಾಲುಮತ ಜನಾಂಗದ ಭಾಗವಹಿಸುವಿಕೆಯನ್ನು ಗಮನಿಸಬಹುದಾಗಿದೆ.

ಪಲ್ಲಕ್ಕಿ ಉತ್ಸವದ ಎರಡನೆಯ ದಿನದಂದು ಎಲ್ಲ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಇರುವುದು. ಜೊತೆಗೆ ಉತ್ಸವದ ಆಕರ್ಷಣೆಯಾಗಿ ಟಗರಿನ ಕಾಳಗವನ್ನು ಏರ್ಪಡಿಸುತ್ತಾರೆ. ಕರ್ನಾಟಕ ಹಾಗೂ ಇತರೆ ರಾಜ್ಯದ ರೇವಣಸಿದ್ಧ ದೇವಾಲಯಗಳಂತೆ ಶ್ರಾವಣಮಾಸದಲ್ಲಿ ವಿಶೇಷ ಪೂಜೆ, ಅಭಿಷೇಕ ಕಾರ್ಯಕ್ರಮಗಳು ಇಲ್ಲಿಯೂ ನಡೆಯುತ್ತವೆ. ಈ ಮಾಸದಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ, ವಿಶೇಷ ಅಲಂಕಾರಿಕ ಪೂಜೆಗಳು ನೆರವೇರುವುದರ ಜೊತೆಗೆ ಪ್ರಸಾದ ವಿನಿಯೋಗವಾಗುವುದು. ಅನ್ನ, ಹಾಲು, ಹೋಳಿಗೆ, ಕರಿಗಡುಬು, ತುಪ್ಪ ನೈವೇದ್ಯಗಳನ್ನು ರೇವಣಸಿದ್ಧನಿಗೆ ಅರ್ಪಿಸುತ್ತಾರೆ. ಶ್ರಾವಣ ತಿಂಗಳ ಕೊನೆವರೆಗೂ ಪ್ರತಿದಿನ ರಾತ್ರಿ ೯ ರಿಂದ ೧೦ ಘಂಟೆಯವರೆಗೆ ರೇವಣಸಿದ್ಧನ ಕುರಿತಾದ ಡೊಳ್ಳಿನ ಪದಗಳನ್ನು ಹಾಡುವರು ಹಾಗು ಸಿದ್ಧರಿಗೆ ಸಂಬಂಧಿಸಿದ ಪವಾಡ ಹಾಗು ಚರಿತ್ರೆ – ಪುರಾಣಗಳ ಪಠಣ ಮಾಡುವ ಕಾರ್ಯಕ್ರಮದಲ್ಲಿ ಗ್ರಾಮದ ಸಮಸ್ತ ಜನಾಂಗದವರು ಅತ್ಯಂತ ಶ್ರದ್ಧೆ ಭಕ್ತಿಯಿಂದ ಪಾಲ್ಗೊಳ್ಳುವರು. ಗ್ರಾಮದ ಹಾಲುಮತ ಜನಾಂಗದವರು ರೇವಣಸಿದ್ಧ ಹಾಗು ಬೀರೇಶನ ಆರಾಧಕರಲ್ಲದೇ ಸುತ್ತಮುತ್ತಲಿನ ಇತರೆ ದೈವಗಳ ಆರಾಧಕರೂ ಹಾಗು ಭಕ್ತರೂ ಆಗಿದ್ದಾರೆ. ಉದಾಹರಣೆಯಾಗಿ ವಿಜಾಪುರ ತಾಲ್ಲೂಕಿನ ನಾಗಠಾಣ ಗ್ರಾಮದ ಬೀರಸಿದ್ಧೇಶ್ವರ, ಜಮಖಂಡಿ ತಾಲ್ಲೂಕು ಮುಂಡಗನೂರಿನ

ಮಾಳಿಂಗರಾಯ, ಕೋಣನೂರಿನ ಕರಿಸಿದ್ಧೇಶ್ವರ ಹಾಗು ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ, ಮಂಗಳವೇಡಾ ತಾ॥, ಹುಲಜಂತಿಯ ಮಾಳಿಂಗರಾಯ ಇವರಲ್ಲಿ ಪ್ರಮುಖರಾಗಿದ್ದಾರೆ. ವಿಶೇಷವಾಗಿ ದೀಪಾವಳಿ ಅಮಾವಾಸ್ಯೆಯಂದು, ಮಾಳಿಂಗರಾಯನ ಮುಂಡಾಸ ದರ್ಶನಕ್ಕೆ ಗ್ರಾಮದವರು ತಪ್ಪದೇ ಹೋಗುತ್ತಾರೆ.

೩.೨. ಮಣ್ಣೂರ ಗ್ರಾಮ: ಸವಣೂರ ತಾಲ್ಲೂಕು: ಹಾವೇರಿ ಜಿಲ್ಲೆ

ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಮಣ್ಣೂರ ಗ್ರಾಮದ ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನವು, ಬಂಕಾಪೂರ ಗ್ರಾಮದಿಂದ ೬ ಕಿ. ಮೀ. ದೂರದಲ್ಲಿದೆ. ದೇವಸ್ಥಾನವು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಕಾಲ-ಕಾಲದಿಂದಲೂ ದೇವಸ್ಥಾನ ನಿರ್ಮಾಣವಾದ ಬಗೆಗಳನ್ನು ಗಮನಿಸಿದಾಗ, ಭಕ್ತರು ದೇವಸ್ಥಾನವನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ, ತನು-ಮನ ಧನಗಳೊಂದಿಗೆ ಬೆಲೆ ಬಾಳುವ ಬಂಗಾರದ ಆಭರಣಗಳನ್ನು ವಜ್ರ-ವೈಡೂರ್ಯಗಳನ್ನು ದೇವರಿಗೆ ಅರ್ಪಿಸುವುದರ ಮೂಲಕ ದೇವಾಲಯಗಳನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಆದರೆ ಪ್ರಸ್ತುತ ದೇವಾಲಯದ ನಿರ್ಮಾಣವನ್ನು, ನೀರಿನ ಬದಲಾಗಿ ಕುರಿ ಹಾಲನ್ನು ಬಳಸಿ ನಿರ್ಮಿಸಿದ್ದಾರೆ. ಈ ಕಾರಣದಿಂದಾಗಿ ದೇವಾಲಯವು ಇತರೆ ದೇವಾಲಯಕ್ಕಿಂತ ಭಿನ್ನವಾದ, ವಿಶೇಷತೆಯನ್ನೂ ಖ್ಯಾತಿಯನ್ನೂ ಪಡೆದುಕೊಂಡಿದೆ. ರೇವಣಸಿದ್ಧೇಶನ ದೇವಾಲಯದ ಜೊತೆಗೆ ಎದಿರು ಬದಿರಾಗಿ ಪದುಮಗೌಡ ಚಿಮ್ಮಲಾದೇವಿ ದೇವಸ್ಥಾನವನ್ನು ನಿರ್ಮಾಣ ಮಾಡಲಾಗಿದೆ.

ಪ್ರಸ್ತುತ ದೇವಸ್ಥಾನ ನಿರ್ಮಾಣವಾದ ಸ್ಥಳಕ್ಕೆ ತನ್ನದೇ ಆದ ಸ್ಥಳ ಪುರಾಣವಿದೆ. ಸ್ಥಳೀಯ ಹಾಗು ಹಾಲುಮತದ ಹಿರಿಕರು ಹೇಳುವಂತೆ ಹಾಲುಮತ ಪುರಾಣದಲ್ಲಿ ಈ ಸ್ಥಳದ ವಿವರವಿದೆ. ಪುರಾಣದಲ್ಲಿ ಆದಿಗೌಡ ಹಾಗು ಚೊಂಚಲಗೌಡ ದಂಪತಿಗಳ ಐದನೇಯ ಮಗನಾಗಿ ಜನಿಸಿದವನು ಪದ್ಮಗೌಡ. ಪದ್ಮಗೌಡ ಬಾಲ್ಯದಲ್ಲಿ ಸೋಮಾರಿಯಾಗಿದ್ದ; ಒಂದು ದಿನ ಆತನಿಗೆ ತನ್ನ ಸಹೋದರರಿಗೆ ಊಟ ತೆಗೆದುಕೊಂಡು ಹೋಗಲು ಹೇಳಿದಾಗ, ಬುತ್ತಿಯೊಂದಿಗೆ ಹೊಲಕ್ಕೆ ಬಂದ ಪದ್ಮಗೌಡ; ತನ್ನ ಸಹೋದರರು ವಿಶ್ರಾಂತಿಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಹೊಲ ಹೂಳಲು ಆರಂಭಿಸಿದಾಗ ನೇಗಿಲು ಹುತ್ತಿನ ಮೇಲೆ ಹಾಯ್ದು ಅಲ್ಲಿಂದ ಕುರಿಗಳು ಹೊರಬಂದುದಾಗಿಯೂ, ಅಂದಿನಿಂದ ಆತನು ಕುರಿಗಳ ಪಾಲನೆಯನ್ನು ಆರಂಭಿಸಿದನೆಂದು, ತದನಂತರದಲ್ಲಿ ಆತನ ಜೀವಿತಕ್ರಮದಲ್ಲಿ ಬದಲಾವಣೆಗಳಾಗಿ, ಬಿಡುವಿನ ಸಮಯ ರಾತ್ರಿಯ ವೇಳೆಯಲ್ಲಿ ಗುರು-ಹಿರಿಯರ ಸೇವೆ ಮಾಡಲು ಮುಂದಾದನು ಎಂದು ಹೇಳುವರು.

ಗುರು ಹಿರಿಯರ ಸೇವೆಯಲ್ಲಿ ನಿರತನಾಗಿದ್ದ ಪದ್ಮಗೌಡ ಒಂದು ದಿನ ತನ್ನ ಗುರುವಿಗೆ ಪ್ರಸಾದ ತಯಾರಿಸಲಿಕ್ಕೆ ಬೆಂಕಿ ಬೇಕಾದಾಗ, ಬೆಂಕಿ ಹುಡುಕುತ್ತ ನಡೆದಾಗ ಬಂಕಾಪೂರ

ಸಮೀಪದ ಚೆನ್ನಾಪುರ ಗ್ರಾಮದ ಗುಡ್ಡದಲ್ಲಿ ಬೆಂಕಿ ಕಾಣುವುದು. ಅಲ್ಲಿ ರಾಕ್ಷಸಿಯೊಡನೆ ಕಾದಾಡಿ, ಆಕೆಯನ್ನು ಸಂಹರಿಸಿ ಆಕೆಯ ವಶದಲ್ಲಿದ್ದ ಚಿಮ್ಮಲಾದೇವಿಯನ್ನು ಸೆರೆಯಿಂದ ಬಿಡಿಸಿ, ಬೆಂಕಿಯ ಜೊತೆಗೆ ಚಿಮ್ಮಲಾದೇವಿಯನ್ನು ಕರೆತರುತ್ತಾನೆ. ಆಗ ಆತನ ಗುರುಗಳು ಇವರಿಬ್ಬರಿಗೂ ಮದುವೆ ಮಾಡಿಸಿದರೆಂದು, ಆ ಗುರುಗಳೇ ರೇವಣಸಿದ್ಧರೆಂದು, ಮತ್ತು ಗುರುಕಾಣಿಕೆಯಾಗಿ ಪದ್ಮಗೌಡ ದಂಪತಿಗಳು ರೇವಣಸಿದ್ಧರಿಗೆ ೨೧ ಏಡಿನ(ನೂಲಿನ) ಕಂಬಳಿಯನ್ನು ಅರ್ಪಿಸಿದರೆಂದು, ಅಂದಿನಿಂದ ರೇವಣಸಿದ್ಧರು ಹಾಲುಮತಕ್ಕೆ ಗುರುಗಳಾದರೆಂದು ಸ್ಥಳೀಯರ ನಂಬಿಕೆ.

ಅಂದು ನಡೆದ ಮಂಗಳಕಾರ್ಯದ ಸ್ಥಳದಲ್ಲೆ ನೀರಿನ ಬದಲಾಗಿ ಕುರಿಹಾಲನ್ನು ಉಪಯೋಗಿಸಿ ಇತ್ತೀಚೆಗೆ ರೇವಣಸಿದ್ಧನ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ ಎಂದು ಸ್ಥಳೀಯರು ಹೇಳುವರು. ಈ ಸ್ಥಳವು ರೇವಣಸಿದ್ಧರಿಗೂ ಹಾಗೂ ಹಾಲುಮತದವರಿಗೆ ಇರುವ ಶತ ಶತಮಾನಗಳ ಗುರು–ಶಿಷ್ಯ /ದೈವ–ಭಕ್ತ ಸಂಬಂಧಗಳನ್ನು ಗಮನಿಸಬಹುದಾಗಿದೆ, ಪದ್ಮಗೌಡ ಹಾಗೂ ಚಿಮ್ಮಲಾದೇವಿಯ ಮದುವೆ ಸಂದರ್ಭದಲ್ಲಿ, ಶ್ರೀ ಗುರುರೇವಣಸಿದ್ಧರು, ವಧು–ವರರಿಗೆ ಕುರಿ ಉಣ್ಣೆಯಿಂದ ನೂಲು ತೆಗೆದು, ಆ ನೂಲಿನಿಂದಲೇ ಕಂಕಣ ಮಾಡಿ ಕಟ್ಟಿದರು, ಆ ಕಾರಣ ಹಾಲುಮತ ಜನಾಂಗದ ಉಣ್ಣೆ ಕಂಕಣದ ಬೆಡಗು ಪ್ರಾರಂಭವಾಯಿತೆಂದು ಸ್ಥಳೀಯರ ನಂಬಿಕೆ ಹಾಲುಮತ ಜನಾಂಗದಲ್ಲಿ ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ ಎಂಬ ಎರಡು ಬೆಡಗುಗಳು ಇರುವುದನ್ನು ಈಗಲೂ ಗಮನಿಸಬಹುದಾಗಿದೆ. ಪ್ರಸ್ತುತ ದೇವಾಲಯ ನಿರ್ಮಾಣವಾದ ಭೂಮಿಯು ಮಣ್ಣೂರ ಗ್ರಾಮದ, ಮುಸ್ಲಿಂ ಸಮುದಾಯದ ಮಹಮ್ಮದ್ ಹುಸೇನ್ ಮನಿಯಾರ ಎಂಬುವವರಿಗೆ ಸೇರಿದ್ದಾಗಿತ್ತು. ಸ್ವಇಚ್ಛೆಯಿಂದ ಮನಿಯಾರ್‌ರವರು ದೇವಾಲಯ ನಿರ್ಮಾಣಕ್ಕೆ ಭೂಮಿಯನ್ನು ನೀಡಿರುವ ಹಿನ್ನೆಲೆಯಲ್ಲಿ ಈ ಕ್ಷೇತ್ರವು ಒಂದು ಹಿಂದು–ಮುಸ್ಲಿಂ ಭಾವೈಕ್ಯ ಕೇಂದ್ರವೂ ಆಗಿದೆ.

೩೩. ಅವ್ವೇರಹಳ್ಳಿ ಗ್ರಾಮ: ರಾಮನಗರ ತಾಲ್ಲೂಕು: ರಾಮನಗರ ಜಿಲ್ಲೆ

ಜಿಲ್ಲಾ ಕೇಂದ್ರ ರಾಮನಗರದಿಂದ ಕನಕಪುರದೆಡೆಯ ರಸ್ತೆಯ ೧೨.೦೦ನೇ ಕಿ.ಮೀ.ನಲ್ಲಿ ಅವ್ವೇರಹಳ್ಳಿ ಗ್ರಾಮವಿದೆ. ಅಲ್ಲಿಂದ ೩.೦೦ ಕಿ.ಮೀ. ದೂರದಲ್ಲಿ ಬೆಟ್ಟವಿದೆ. ಈ ಬೆಟ್ಟವನ್ನು ರೇವಣಸಿದ್ಧೇಶ್ವರ ಬೆಟ್ಟವೆಂತಲೂ, ಭೀಮೇಶಾದ್ರಿ ಬೆಟ್ಟವೆಂತಲೂ ಕರೆಯುತ್ತಾರೆ. ರೇವಣಸಿದ್ಧೇಶ್ವರ ಬೆಟ್ಟಕ್ಕೆ ಬರುತ್ತಿದ್ದಂತೆ ಮೊದಲು ಕಾಣುವುದು ರೇಣುಕಾಂಬ ದೇವಸ್ಥಾನ. ಪೂರ್ವಾಭಿಮುಖವಾದ ಪ್ರವೇಶ ದ್ವಾರ ಹೊಂದಿರುವ ದೇವಾಲಯವು ಉತ್ತರಾಭಿಮುಖವಾಗಿದೆ. ಇಲ್ಲಿಯ ದೈವವನ್ನು ರೇವಣಾಂಬೆ, ತೇರುಬೀದಿಯಮ್ಮ, ರೇವಕ್ಕಮ್ಮ ಎಂದು ಕರೆಯುತ್ತಾರೆ. ಈಕೆ ಮಾಯಾದೇವಿಯ

ಏಕೈಕ ಪುತ್ರಿ ತಾಯಿ ಮಾಯಾದೇವಿ ಮತ್ತು ಪುತ್ರಿ ರೇವಣಾಂಶ ಇಬ್ಬರೂ ರೇವಣಸಿದ್ಧನ ಪರಮ ಭಕ್ತರಾಗಿದ್ದರೆಂದೂ, ಮಾಯೆಯ ಸ್ವಗ್ರಾಮ ಗುನ್ನೂರು ಗ್ರಾಮವೆಂದೂ ಅವಳು ಮಂಗಳವೇಡೆಯಿಂದ ಪುತ್ರಿ ರೇವಣಾಂಬ ರೇವಣಸಿದ್ಧನೊಂದಿಗೆ ಇಲ್ಲಿಗೆ ಬಂದರು ಎಂದು ಇಲ್ಲಿನ ಸ್ಥಳೀಯರು ಹಾಗೂ ಸ್ಥಳ ಪುರಾಣಗಳು ಹೇಳುತ್ತವೆ. ರೇವನಸಿದ್ಧನು ವೇಶ್ಯೆ ಮಾಯೆ ಹಾಗೂ ಪುತ್ರಿ ರೇವಣಾಂಬೆಯನ್ನು ಮಾಚನೂರಿನಿಂದ ತನ್ನ ಜೊತೆಗೆ ಕರೆತಂದದ್ದು, ದಕ್ಷಿಣದ ಈ ಅವ್ವೇರಹಳ್ಳಿಯ ಭೀಮೇಶಾದ್ರಿ ಬೆಟ್ಟಕ್ಕೆ ಮಹಾಭಾರತದ ಕಾಲದಲ್ಲಿ ಪಾಂಡವರು ವನವಾಸದಲ್ಲಿರುವಾಗ, ಭೀಮನು ಈ ಬೆಟ್ಟದಲ್ಲಿ ಲಿಂಗವನ್ನು ಸ್ಥಾಪಿಸಿದುದರಿಂದ ಈ ಬೆಟ್ಟಕ್ಕೆ ಭೀಮೇಶಾದ್ರಿ ಬೆಟ್ಟವೆಂಬ ಹೆಸರು ಬಂತೆಂದು ಸ್ಥಳೀಯರು ಹೇಳುವರು. ರೇಣುಕಾಂಬೆಯನ್ನು ಬೆಟ್ಟದ ಬುಡದ ತಪ್ಪಲಲ್ಲಿ ಬಿಟ್ಟು, ರೇವಣಸಿದ್ಧ ಬೆಟ್ಟದ ಮೇಲೆ ತಪಸ್ಸಿಗೆ ಕುಳಿತನು ಎಂಬ ನಂಬಿಕೆಗಳು ಇಲ್ಲಿ ಪ್ರಚಲಿತದಲ್ಲಿವೆ.

ರೇಣುಕಾಂಬೆಯ ಮಂದಿರದ ಗರ್ಭಗುಡಿಯಲ್ಲಿ ಮೂರ್ತಿ ಇರುವುದಿಲ್ಲ. ಆದರೆ ಗದ್ದುಗೆಯ ಸ್ಥಳದಲ್ಲಿ ಮೂರು ಅಡಿ ಎತ್ತರದ ಕಲ್ಲನ್ನು ನೆಡಲಾಗಿದೆ. ಇದನ್ನೇ ರೇಣುಕಾಂಬೆ ದೈವವೆಂದು ಪೂಜಿಸುತ್ತಾರೆ. ವಿಶೇಷ ದಿನಗಳಂದು ಉತ್ಸವ ಮೂರ್ತಿಯನ್ನು ಈ ಕಲ್ಲಿನ ಮೇಲೆ ಸ್ಥಾಪಿಸಿ, ಸೀರೆಯುಡಿಸಿ ಅಲಂಕರಿಸಿ ಪೂಜಿಸುತ್ತಾರೆ. ಶವಸಂಸ್ಕಾರದ ನಂತರ ಸಮಾಧಿಯ ತಲೆಭಾಗವನ್ನು ಗುರುತಿಸುವ ದೃಷ್ಟಿಯಿಂದ ಒಂದು ಉದ್ದವಾದ ಕಲ್ಲನ್ನು ನೆಡಲಾಗುವುದನ್ನು ಇಲ್ಲಿ ನೆನೆದಾಗ, ಇದು ಅದೇ ರೀತಿಯದಾಗಿರಬಹುದು. ಕಾರಣ ಇಲ್ಲಿರುವುದು ರೇಣುಕಾಂಬೆಯ ಸಮಾಧಿಯಾಗಿರ ಬಹುದಾಗಿದೆ. ಹಾಗೂ ಕಾಲಕ್ರಮೇಣ ಇದು ಮಂದಿರ ಸ್ಥಾನವನ್ನು ಪಡೆದುದಾಗಿದೆ.

ಅವ್ವೇರಹಳ್ಳಿಯಿಂದ ೧.೫೦ ಕಿ.ಮೀ.ದೂರದಲ್ಲಿ ಗುನ್ನೂರು ಗ್ರಾಮವಿದೆ. ಇಲ್ಲಿನ ಗ್ರಾಮದೇವತೆ ಮಾಯೆ. ಗ್ರಾಮದ ಸಮಸ್ತ ಜನರು ಜಾತಿಬೇಧಭಾವವಿಲ್ಲದೆ ಗ್ರಾಮದೇವತೆಗೆ ನಡೆದುಕೊಳ್ಳುತ್ತಾರೆ. ಗ್ರಾಮದ ಹೊರವಲಯದಲ್ಲಿ ಪೂರ್ವಾಭಿಮುಖವಾಗಿ ಗ್ರಾಮದೇವತೆಯ ಮಂದಿರವಿದೆ. ಗರ್ಭಗುಡಿಯಲ್ಲಿ ರೇಣುಕಾಂಬೆಯ ಮಮದಿರದಲ್ಲಿರುವ ಹಾಗೆ ಗದ್ದುಗೆಯಲ್ಲಿ ಕಲ್ಲು ನೆಡಲಾಗಿದ್ದು, ಇದುವೆ ಇಲ್ಲಿಯ ಮೂಲ ದೈವವಾಗಿದೆ. ಪಕ್ಕದಲ್ಲಿಯೇ ಉತ್ಸವ ಮುರ್ತಿಯನ್ನು ಸ್ಥಾಪಿಸಿ ಪೂಜೆ ಮಾಡುತ್ತಿರುವರು. ಇದೂ ಕೂಡ ಮಾಯೆಯ ಸಮಾಧಿ ಸ್ಥಳವೇ ಆಗಿದ್ದು, ನಂತರದ ದಿನಗಳಲ್ಲಿ ಮಂದಿರವಾಗಿ ಬದಲಾಗಿರಬಹುದಾಗಿದೆ.

ಸ್ಥಳೀಯ ಪುರಾಣದ ಪ್ರಕಾರ ರೇವಣಸಿದ್ಧನು ತೆಂಗಿನಕಲ್ಲ ಅರಸ ಚಾಮರಸನಿಗೆ, ಒಲಿದು ಉದ್ಧಾರ ಮಾಡಿದನು. ಅದರಂತೆ ರಾಜನ ವಂಶಸ್ಥರು, ಪ್ರತಿವರ್ಷ ವ್ಯಾಸಪೂರ್ಣಿಮೆಯಮದು ವಿಶೇಷ ಪೂಜೆ, ಉತ್ಸವಗಳನ್ನು ಏರ್ಪಡಿಸಬೇಕೆಂದೂ ಈ ಕ್ಷೇತ್ರದ

ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವುದೇ ಉತ್ಸವಗಳನ್ನು ಆಚರಿಸುವ ಮುನ್ನ ತಪ್ಪಲಿನಲ್ಲಿ ನೆಲೆಸಿರುವ ರೇವಣಾಂಬೆಗೆ ಮೊದಲು ಪೂಜೆ ಸಲ್ಲಿಸಿ, ಪ್ರಾರಂಭಿಸುವಂತೆ ಆಜ್ಞಾಪಿಸಿದನು ಎಂಬುದಾಗಿದೆ. ಈ ಅಂಶಗಳನ್ನು ಗಮನಿಸಿದಾಗ ರೇವಣಸಿದ್ಧ ಬದುಕಿರುವಾಗಲೇ, ಈ ಸ್ಥಳದಲ್ಲಿಯೇ ರೇವಣಾಂಬೆ ಮತ್ತು ಮಾಯೆಯು ತೀರಿರಬಹುದಾಗಿದೆ. ಇಲ್ಲಿ ಉಲ್ಲೇಖಗೊಂಡ ಚಾಮರಸ ಚನ್ನಪಟ್ಟಣದ ಪಾಳೇಗಾರನಾಗಿರಬೇಕು ಇಲ್ಲವೇ ತೆಂಗಿನಕಲ್ಲ ಬೆಟ್ಟದ ಸಾಮಂತರಸ ಇಲ್ಲವೆ ಪಾಳೇಗಾರನಾಗಿರಬೇಕು ಎಂದು ಇತಿಹಾಸಕಾರರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಪ್ರತಿವರ್ಷ ವ್ಯಾಸಪೂರ್ಣಿಮೆಯಿಂದ ಪ್ರಾರಂಭವಾಗುವ ಜಾತ್ರಾಮಹೋತ್ಸವವು ಐದು ದಿನಗಳ ಕಾಲ ನಡೆಯುವುದು. ವ್ಯಾಸಪೂರ್ಣಿಮೆಯ ಬೆಳಗಿನ ಸಮಯದಲ್ಲಿ ಅಗ್ನಿ ತುಳಿಯುವ ಕಾರ್ಯಕ್ರಮವಿರುತ್ತದೆ. ೩ನೇಯ ದಿನದಂದು ರೇಣುಕಾಂಬೆಯ ಮುತ್ತಿನ ಪಲ್ಲಕ್ಕಿ ಮೆರವಣಿಗೆ ನಡೆಯುವುದು. ಈ ಸಮಯದಲ್ಲಿ ಬೆಟ್ಟದ ತುದಿಯಲ್ಲಿಯ ತಂದೆ ರೇವಣಸಿದ್ಧನ ಉತ್ಸವಮೂರ್ತಿಯು ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದು. ಗುನ್ನೂರಿನ ಗ್ರಾಮಸ್ಥರು ತಮ್ಮ ಊರಿನ ಮಗಳ ಜಾತ್ರೆಯೆಂಬ ಭಾವನೆಯಿಂದ ಪಾಲ್ಗೊಳ್ಳುವರು. ಆದರೆ, ರೇಣುಕಾಂಬೆಯ ಜಾತ್ರೆ ಮುಗಿದು ೧೫ ದಿನಗಳ ನಂತರದಲ್ಲಿ ಗುನ್ನೂರಿನಲ್ಲಿ ನಡೆಯುವ ತಾಯಿ ಮಾಯೆಯ ಜಾತ್ರೆಯಲ್ಲಿ ರೇವಣಾಂಬೆಯ ಉತ್ಸವಮೂರ್ತಿ ಬರುವುದಿಲ್ಲ. ಈ ಅಂಶಗಳನ್ನು ಗಮನಿಸಿದಾಗ; ರೇವಣಾಂಬೆಯ ನಿಧನದ ಸಮಯದಲ್ಲಿ ಮಾಯೆಯ ಜೀವಂತವಾಗಿದ್ದಳೆಂದು ತೋರುತ್ತದೆ.

ಮಾಯೆಯು ರೇವಣಸಿದ್ಧನ ಜೀವಿತದ ಕೊನೆಯ ಘಟ್ಟದವರೆಗೂ ಜೊತೆಯಾಗಿದ್ದವಳು, ನೆರಳಿನಂತೆ ಹಿಂಬಾಲಿಸಿದವಳು ಅದರಲ್ಲೂ ವಿಶೇಷವಾಗಿ ರೇವಣಸಿದ್ಧನ ದಕ್ಷಿಣದೆಡೆಯ ಪ್ರವಾಸದಲ್ಲಿ ಜೊತೆಯಾಗಿದ್ದವಳು. ಕಾರಣ ರೇವಣಸಿದ್ಧನ ಅನೇಕ ಕ್ಷೇತ್ರಗಳಲ್ಲಿ ಅವಳಿಗಾಗಿಯೇ ಪ್ರತ್ಯೇಕ ಮಂದಿರಗಳಿದ್ದು, ಅಲ್ಲಿ ಇಂದಿಗೂ ವಿಶೇಷ ಪೂಜೆ ನಡೆಯುತ್ತಿರುವುದನ್ನು ಗಮನಿಸಬಹುದಾಗಿದೆ. ರೇವಣಸಿದ್ಧನ ಬದುಕಿನ ಕಾಲಘಟ್ಟವನ್ನು ಕಟ್ಟಿಕೊಡುವಲ್ಲಿ ಬೆಟ್ಟದ ಬುಡದಲ್ಲಿರುವ ಅವ್ವೇರಹಳ್ಳಿ ಶಾಸನ(೧೧೯೩) ನೆರವಾಗುವುದು ಹಾಗೂ ಆ ಸಮಯದಲ್ಲಿ ರೇವಣಸಿದ್ಧನು ಅವ್ವೇರಹಳ್ಳಿಯ ಬೆಟ್ಟದಲ್ಲಿ ಕೊನೆಯ ದಿನಗಳನ್ನು ಕಳೆದನು ಎಂಬುದರ ಬಗ್ಗೆ ಪುರಾವೆ ಒದಗಿಸುತ್ತವೆ ಎಂಬುದು ಇತಿಹಾಸಕಾರರ ಅಭಿಪ್ರಾಯ. ಈ ಸಾಕ್ಷಾಧಾರಗಳಿಂದ ರೇವಣಸಿದ್ಧ, ಮಾಯೆ ಹಾಗೂ ರೇಣುಕಾಂಬೆ ಅಂತಿಮ ದಿನಗಳಲ್ಲಿ ರೇವಣಸಿದ್ಧ ಬೆಟ್ಟದಲ್ಲಿ ಇದ್ದರೆಂದೂ ಹಾಗೂ ಅಲ್ಲಿಯೇ ದೇಹತ್ಯಾಗ ಮಾಡಿರಬಹುದೆಂದು ಅಭಿಪ್ರಾಯ ಪಡಬಹುದಾಗಿದೆ. ಎಲ್ಲ ಸಮಕಾಲೀನ ಸಿದ್ಧರಂತೆ, ರೇವಣಸಿದ್ಧನೂ ಜೀವಂತ ಸಮಾಧಿ ತೆಗೆದುಕೊಂಡಿರುವ ಅಂಶ ಗಣನೀಯವಾದುದು. ರೇವಣಸಿದ್ಧ ಗಿರಿಯ ತುದಿಯಲ್ಲಿರುವ ಗುಹೆಯಲ್ಲಿ ಘೋರ ತಪಸ್ಸನ್ನಾಚರಿಸಿ ಜೀವಂತ ಸಮಾಧಿ ಪಡೆದನೆಂಬುದು ಸ್ಥಳೀಯ ಪುರಾಣ. ಆದರೆ ರೇವಣಸಿದ್ಧನು ನಿಖರವಾಗಿ ಎಂದು ಜೀವಂತ ಸಮಾಧಿ

ಹೊಂದಿದನೆಂಬುದಕ್ಕೆ ಪುರಾವೆಗಳು ದೊರೆಯುವುದು ಕಷ್ಟಸಾಧ್ಯ. ಅವ್ವೇರಹಳ್ಳಿಯ ರೇವಣಸಿದ್ಧನ ಉತ್ಸವವು ವ್ಯಾಸಪೂರ್ಣಿಮೆಯ ಹಿಂದಿನ ರಾತ್ರಿಯಿಂದಲೇ ಪ್ರಾರಂಭವಾಗುವುದು ಹಾಗೂ ಬೆಳಗಿನ ಜಾವದಲ್ಲಿ ಭಕ್ತರು ಅಗ್ನಿ ತುಳಿಯುವುದರಿಂದ; ರೇವಣಸಿದ್ಧನು ಗುರು ಪೂರ್ಣಿಮೆಯ ಹಿಂದಿನ ರಾತ್ರಿಯೇ ಜೀವಂತ ಸಮಾಧಿ ತೆಗೆದುಕೊಂಡಿರಬಹುದಾಗಿದೆ. ಇಂದಿಗೂ ಅವ್ವೇರಹಳ್ಳಿಯಲ್ಲಿ ವ್ಯಾಸಪೂರ್ಣಿಮೆಯಂದು ನಡೆಯುವ ಆರಾಧನೆಗೆ ಹಕ್ಕುಳ್ಳವನು ರೇವಣಸಿದ್ಧನೇ ಆಗಿರುವುದನ್ನು ಸ್ಮರಿಸಬಹುದಾಗಿದೆ. ಈ ಕಾರಣಗಳಿಂದಾಗಿ ಅವ್ವೇರಹಳ್ಳಿಯ ರೇವಣಸಿದ್ಧನ ಬೆಟ್ಟವು ದಕ್ಷಿಣ ಕರ್ನಾಟಕದ ಆತನ ಪ್ರಮುಖ ನೆಲೆಯಾಗಿ ನಿಲ್ಲುವುದು.

೫.೨ ಕರ್ನಾಟಕೇತರ ನೆಲೆಗಳು

೫.೨.೧. ಮಹಾರಾಷ್ಟ್ರದ ನೆಲೆಗಳು

೧. ಮಂಗಳವಾಡ (ಮಂಗಳವೇಢಾ): ಮಂಗಳವಾಡ ತಾಲ್ಲೂಕು: ಸೊಲ್ಲಾಪುರ

ಮಂಗಳವಾಡ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಈ ಸ್ಥಳವು ಹಿಂದೊಮ್ಮೆ ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ ಕಲಚೂರ್ಯರ ರಾಜಧಾನಿಯಾಗಿತ್ತು. ತ್ರಿಪುರಾಂತಕ, ಬೋಗೇಶ್ವರ, ಸಮಂತಕೇಶ್ವರ, ನಾರಾಯಣ, ಗೋಪತೇಶ್ವರ ದೇವಾಲಯಗಳಿದ್ದ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿತವಾಗಿದ್ದರೂ ಪ್ರಸ್ತುತ ಈ ದೇವಾಲಯಗಳು ಕಾರಸಿಗುವುದಿಲ್ಲ. ಇಲ್ಲಿರುವ ಗಹನೀನಾಥನ ದೇವಾಲಯವು ನಾಥ ಪರಂಪರೆಯ ನೆಲೆಯನ್ನೂ ಸ್ಪಷ್ಟೀಕರಿಸುತ್ತದೆ. ಮಂಗಳವಾಡದ ಇಂದಿನ ತಹಶೀಲ್ದಾರ್ ಕಾರ್ಯಾಲಯದ ಪಕ್ಕದಲ್ಲಿರುವ ಪುರಾತನ ಕೋಟೆಯ ಸಮೀಪ ಪ್ರಾಚೀನ ಕಾಲದ ರೇವಣಸಿದ್ಧ ದೇವಾಲಯವಿದ್ದು, ಸುತ್ತೂಲೂ ಪ್ರಾಚೀನ ಶಾಸನಗಳು, ಅವಶೇಷಗಳಿವೆ. ಕಲ್ಯಾಣ ಚಾಲುಕ್ಯ ಶೈಲಿಯ ಕಂಬಗಳನ್ನು ಹೊಂದಿರುವ ದೇವಾಲಯವು ಚಿಕ್ಕದಾಗಿದ್ದು ನೆಲಮಟ್ಟದಿಂದ ಕೆಳಗೆ ಸ್ಥಾಪಿತವಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದ್ದು ಸಭಾಮಂಟಪವನ್ನು ಪಡೆದುಕೊಂಡಿದೆ.

ದೇವಾಲಯದ ಸಮೀಪದಲ್ಲಿ ಧ್ಯಾನ ಯೋಗಿಯ ಒಂದು ಶಿಲ್ಪವಿದೆ. ಯೋಗಿಯು ಪದ್ಮಾಸನದಲ್ಲಿ ಕುಳಿತು ಧ್ಯಾನಮಾಡುತ್ತಿರುವನು. ಅವನ ಉದ್ದ ಜಡೆ ಎರಡೂ ಭುಜಗಳ ಒಂದೆ ಹರಡಿಕೊಂಡಿದೆ. ಎದೆ ಮತ್ತು ಭುಜಗಳಲ್ಲಿ ರುದ್ರಾಕ್ಷಿ ಮಾಲೆ ಧರಿಸಿರುವನು. ಈ ಶಿಲ್ಪವು ರೇವಣಸಿದ್ಧನದ್ದು ಆಗಿರಬಹುದೇ ಎಂಬುದನ್ನು ಇನ್ನೂ ಖಚಿತಪಡಿಸಬೇಕಿದೆ. ರೇವಣಸಿದ್ಧನ ಚರಿತ್ರೆಯಲ್ಲಿ ಮಂಗಳವಾಡ ಅತ್ಯಂತ ಪ್ರಮುಖ ನೆಲೆ. ರೇವಣಸಿದ್ಧನು ಬಿಜ್ಜಳನ ಅರಮನೆಯಲ್ಲಿ ಮೆರೆದ ಉರಿಯ ಪವಾಡ ನಡೆದದ್ದು ಇಲ್ಲಿಯೇ. ವಿಭೀಷಣನ ವಿನಂತಿಯ ಮೇರೆಗೆ ತ್ರಿಕೋಟಿ ಲಿಂಗ ಪ್ರತಿಷ್ಠಾಪನೆಗಾಗಿ ಲಂಕೆಗೆ ಹೋಗಿದ್ದು ಇಲ್ಲಿಂದಲೇ. ಲಂಕೆಯಿಂದ ಮರಳಿ ಬಂದದ್ದು ಇಲ್ಲಿಗೇ.

೨. ಮಾ(ಸ)ಚನೂರು: ಪಂಡರಾಪುರ ತಾಲ್ಲೂಕು: ಸೊಲ್ಲಾಪುರ ಜಿಲ್ಲೆ

ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ಪಂಡರಾಪುರ ತಾಲ್ಲೂಕಿನ ಒಂದು ಗ್ರಾಮ. ಮಾ(ಸ)ಚನೂರು ರೇವಣಸಿದ್ಧನ ಅತ್ಯಂತ ಪ್ರಮುಖ ನೆಲೆಯಾದ ಮಂಗಳವೇಢಾದಿಂದ ೧೨.೦೦ ಕಿ.ಮೀ. ದೂರಲದಲ್ಲಿದೆ. ಇಲ್ಲಿ ರೇವಣಸಿದ್ಧನ ಕುರಿತು ಅನೇಕ ಐತಿಹ್ಯಗಳು, ದೇವಾಲಯಗಳೂ ಇವೆ.

ತಿಗಣೆಗಳನ್ನು ನೊಸಲಗಣ್ಣಿನಿಂದ ಸುಟ್ಟಿದ್ದು, ಮಾಸನೂರಿನಲ್ಲಿ. ಗ್ರಾಮವು ಭೀಮಾನದಿಯ ತಟದಲ್ಲಿದೆ. ಜನಸಾಮಾನ್ಯರಿಗೆ ತೊಂದರೆ ಕೊಡುತ್ತಿದ್ದ ಮಾಚನೂರಿನ ತಿಗಣೆಗಳು ರೇವಣಸಿದ್ಧೇಶ್ವರನ ನೊಸಲಗಣ್ಣಿನ ಬೆಂಕಿಗೆ ಸಿಕ್ಕು ಉಕ್ಕಿನ ಗುಂಡುಗಳಾದಾಗ ಅವುಗಳನ್ನು ಕಮ್ಮಾರನಿಗೆ ಕೊಟ್ಟು ಎರಡು ಖಡ್ಗಮಾಡಿಸಿಕೊಂಡನು. ಹಲ್ಲು ಮೊರೆದ ಗಂಡು ಕಠಾರಿಯನ್ನು ಭೀಮೆಯ ಮಡುವಿನಲ್ಲಿ ಮೊನೆ ಕೆಳಗಾಗಿ ಮಿಸುಕದಂತೆ ಹುಗಿದಿದ್ದು ಇಲ್ಲಿಯೇ. ಖರ್ಪರ ಜೋಗಿಯನ್ನು ಸೋಲಿಸಿ ೧೨೦೦೦ ಕನ್ಯೆಯರನ್ನು ಬಿಡುಗಡೆಗೊಳಿಸಿದ ಪವಾಡದ ತಾಣವಿದು. ಎಲ್ಲಿ ಭೀಮಾನದಿಯ ತಟದಲ್ಲಿ ಎರಡು ಪ್ರಾಚೀನ ದೇವಾಲಯಗಳಿವೆ. ಒಂದು ಮಲ್ಲಿಕಾರ್ಜುನದು ಮತ್ತೊಂದು ಸಿದ್ಧೇಶ್ವರನದು. ದೇವಾಲಯದ ಪುರಾತನ ವಾಸ್ತುಶಿಲ್ಪವು ಆಕರ್ಷಕವಾಗಿದ್ದು, ಕಟ್ಟಡವು ಇಂದಿಗೂ ಸುಸ್ಥಿತಿಯಲ್ಲಿದೆ. ದೇವಾಲಯವನ್ನು ಭೀಮಾನದಿಯ ದಡಕ್ಕೆ ಸರಿಹೊಂದುವಂತೆ, ನೇರವಾಗಿ ನದಿಗೆ ಇಳಿಯಲು ಅನುಕೂಲವಾಗುವಂತೆ ಮೆಟ್ಟಿಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಭೀಮಾ ನದಿಯಲ್ಲಿಯೇ ಜಟೇಶ್ವರನ ದೇವಸ್ಥಾನವನ್ನು ನಿರ್ಮಿಸಲಾಗಿದೆ. ರೇವಣಸಿದ್ಧನ ಬದುಕಿನ ಒಂದು ಕೇಂದ್ರಭಾಗವಾಗುವ ಮಾ(ಸ)ಚನೂರು ಆತನ ಪವಾಡಗಳ ನೆಲೆಯಾಗುವುದು.

ಮಾಚನೂರಿನ ದೇವಾಲಯದಲ್ಲಿ ಸಿದ್ಧೇಶನು ಮುಖ್ಯವಾಗಿ ಪೂಜೆಗೆ ಪಾತ್ರನಾಗಿದ್ದಾನೆ. ಇಂದಿಗೂ ದಿನಂಪ್ರತಿ ಪೂಜೆ ಪುನಸ್ಕಾರಗಳು ಎರಡೂ ಹೊತ್ತೂ ನಡೆಯುತ್ತವೆ. ಪ್ರತಿ ವರುಷ ಮಹಾಶಿವರಾತ್ರಿಯಿಂದ ಪ್ರಾರಂಭವಾಗಿ ಐದು ದಿನಗಳವರೆಗೆ ಸಿದ್ದೇಶ್ವರ ಸ್ವಾಮಿಯ ಜಾತ್ರೆ ನಡೆಯುತ್ತದೆ. ಜಾತ್ರಾ ಉತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮದ ದೇವರುಗಳು ಮಹಾಶಿವರಾತ್ರಿಯಂದು ದೇವಾಲಯಕ್ಕೆ ಆಗಮಿಸಿ ಐದು ದಿನಗಳ ಕಾಲ ಅಲ್ಲಿಯೇ ತಂಗಿ ಜಾತ್ರೆಯಲ್ಲಿ ಪಾಲ್ಗೊಂಡು ಹೊರಡುವ ಪದ್ಧತಿ ಅಂದಿನಿಂದಲೂ ಇಂದಿಗೂ ಮುಂದುವರಿದಿದೆ. ಶ್ರಾವಣ ತಿಂಗಳಲ್ಲಿ ಇತರೆ ನೆಲೆಗಳಲ್ಲಿ ನಡೆಯುವಂತೆ ಇಲ್ಲಿಯೂ ವಿಶೇಷ ಆಚರಣೆ ಉತ್ಸವಗಳು ನಡೆಯುತ್ತವೆ. ಶ್ರೀಮಠಕ್ಕೆ ಲಿಂಗಾಯತ, ಧನಗರ (ಕುರುಬ/ಹಾಲುಮತ) ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರಿದ್ದಾರೆ. ಅಂದಿನಿಂದಲೂ ಗೊರವರು ಲಿಂಗದ ಅರ್ಚಕರಾಗಿದ್ದಾರೆ. ಪ್ರಸ್ತುತ ಶ್ರೀ ಬಾಕಾಸಾಹಿ ದತ್ತಾತ್ರೇಯ. ಪೂಜಾರಿ. ಶ್ರೀಪ್ರಶಾಂತ ಗುಂಡೋಪಂಥ ದೇಶಮುಖ್ ಹಾಗೂ ಶ್ರೀಗಜಾನನ ಪೂಜಾರಿಯವರು ಶ್ರೀಮಠದ ಅರ್ಚಕರಾಗಿದ್ದಾರೆ.

೩. ಸೊಲ್ಲಾಪುರ: ಸೊಲ್ಲಾಪುರ ತಾಲ್ಲೂಕು: ಸೊಲ್ಲಾಪುರ ಜಿಲ್ಲೆ

ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ನಗರವು ಪ್ರಾಚೀನ ಇತಿಹಾಸವುಳ್ಳ ನಗರ. ಈ ಹಿಂದೆ ನಗರವು ಸೊನ್ನಲಿಗೆ ಎಂಬ ಹೆಸರಿನಿಂದ ಪ್ರಖ್ಯಾತವಾಗಿತ್ತು. ಇಂದು ಸೊಲ್ಲಾಪುರವು ಒಂದು ವಾಣಿಜ್ಯ ನಗರವಾಗಿ ಬೆಳೆದಿದೆ. ಸೊಲ್ಲಾಪುರದಲ್ಲಿ ಶ್ರೀ ಸಿದ್ಧರಾಮೇಶ್ವರನ ದೇವಾಲಯವಿದ್ದು ಪ್ರಖ್ಯಾತ ಧಾರ್ಮಿಕ ಸ್ಥಳವಾಗಿದೆ. ಸಿದ್ಧರಾಮೇಶ್ವರ ದೇವಾಲಯವು ಕೆರೆಯ ಮಧ್ಯಭಾಗದಲ್ಲಿದ್ದು ನೀರಿನಿಂದ ಆವೃತವಾಗಿದೆ. ಇಲ್ಲಿ ಸಿದ್ಧರಾಮೇಶ್ವರರು ಕೆರೆಯನ್ನು ಕಟ್ಟಿಸಿದರು ಹಾಗೂ ಆ ಕೆರೆಯ ಮಧ್ಯದಲ್ಲಿಯೇ ಜೀವಂತ ಸಮಾಧಿಯನ್ನು ಹೊಂದಿರುವುದು ತಿಳಿದು ಬರುವುದು. ನಂತರದಲ್ಲಿ ಸಿದ್ಧರಾಮರು ಸಮಾಧಿಯಾದ ಸ್ಥಳದಲ್ಲಿ ದೇವಾಲಯವನ್ನು ಕಟ್ಟಲಾಯಿತು ಎಂಬುದು ಇಲ್ಲಿಯ ಸ್ಥಳ ಪುರಾಣ ಹಾಗೂ ಜನಪದರಿಂದ ತಿಳಿದುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಸಿದ್ಧರಾಮೇಶ್ವರ ದೇವಾಲಯವು ಜೀರ್ಣೋದ್ಧಾರಗೊಂಡು ಪ್ರಮುಖ ಯಾತ್ರಾ ಸ್ಥಳವಾಗಿ ಬೆಳೆದಿದೆ. ದೇವಾಲಯದ ಪ್ರಾಂಗಣದಲ್ಲಿ ಸಿದ್ಧರಾಮೇಶ್ವರರ ಗುಡಿ ಹಾಗೂ ಸಮಾಧಿ ಇದೆ. ಶ್ರೀ ಸಿದ್ಧರಾಮೇಶ್ವರರ ದೇವಾಲಯದ ಅನತಿದೂರದಲ್ಲಿ ಆದಿಲ್‌ಶಾಹಿ ಕಾಲದ ಔರಂಗಜೇಬನ ಆಡಳಿತದಲ್ಲಿ ಕಟ್ಟಲಾದ ಕೋಟೆಯಿದೆ. ಪಾಳುಬಿದ್ದ ಈ ಕೋಟೆಯ ಪ್ರಾಂಗಣದಲ್ಲಿ ಶ್ರೀ ಸಿದ್ಧರಾಮೇಶ್ವರರು ಶ್ರೀಶೈಲದ ಮಲ್ಲಿಕಾರ್ಜುನನ್ನು, ಕಪಿಲಸಿದ್ಧ ಮಲ್ಲಿನಾಥನೆಂದು ಕರೆದು ಪ್ರತಿಷ್ಠಾಪಿಸಿದ ಅತ್ಯಂತ ಪುರಾತನವಾದ ದೇವಾಲಯದ ಅವಶೇಷಗಳನ್ನು ಈಗಲೂ ಕಾಣಬಹುದಾಗಿದೆ. ಕಪಿಲಸಿದ್ಧ ಮಲ್ಲಿನಾಥನ ದೇವಾಲಯದ ಸಮೀಪದಲ್ಲಿಯೇ ಆಹಾರ ಸಂಗ್ರಹಣೆಗಾಗಿ ಆ ಕಾಲದಲ್ಲಿ ಕಟ್ಟಿದ ಕಟ್ಟಡವನ್ನೂ ಕಾಣಬಹುದಾಗಿದೆ. ಈ ಕಟ್ಟಡವನ್ನು ಆದಿಲಾಶಾಹಿಗಳು ಮಸೀದಿಯನ್ನಾಗಿ ಪರಿವರ್ತಿಸಿದುದನ್ನು ಪ್ರಸ್ತುತ ಅಳಿದುಳಿದಿರುವ ಭಗ್ನಾವಶೇಷಗಳಲ್ಲಿ ನೋಡಬಹುದಾಗಿದೆ. ಆದಿಲ್‌ಶಾಹಿಗಳು ಕೋಟೆಯನ್ನು ನಿರ್ಮಾಣ ಮಾಡುವಾಗ ಕಪಿಲಸಿದ್ಧ ಮಲ್ಲಿನಾಥ ದೇವಾಲಯ ಹಾಗೂ ಇತರ ದೇವಾಲಯಗಳನ್ನು ಧ್ವಂಸಗೊಳಿಸಿ ದೊರೆತ ಕಲ್ಲುಗಳನ್ನು ಹಾಗೂ ಶಿಲಾಶಿಲ್ಪಗಳನ್ನು ಉಪಯೋಗಿಸಿಕೊಂಡು ಕೋಟೆ ಕಟ್ಟಿರುವುದನ್ನು ಗಮನಿಸಬಹುದಾಗಿದೆ.

ಶ್ರೀ ರೇವಣಸಿದ್ಧರಿಗೂ ಹಾಗೂ ಶ್ರೀ ಸಿದ್ಧರಾಮೇಶ್ವರರರಿಗೂ ಇರುವ ಸಂಬಂಧಗಳನ್ನು ಚರಿತ್ರೆಯ ಪುಟಗಳು ತೆರೆದಿಡುತ್ತದೆ. ಶ್ರೀ ರೇವಣಸಿದ್ಧರು ತನ್ನ ಶಿಷ್ಯರೊಂದಿಗೆ ಪಲ್ಲಕ್ಕಿಯಲ್ಲಿ ಸಂಚಾರ ಮಾಡುತ್ತ ಮಾಚನೂರಿನಿಂದ ಸೊನ್ನಲಿಗೆ ಊರಿನ ಸೀಮೆಯ ಹತ್ತಿರ ಬಂದಾಗ ಪಲ್ಲಕ್ಕಿಯಿಂದ ಕೆಳಗಿಳಿದು ಪಾದುಕೆಗಳನ್ನು ಕಳೆದು ಭಯ ಭಕ್ತಿಯಿಂದ ಹೆಜ್ಜೆ ಹೆಜ್ಜೆಗೆ ನಡೆಯಲಾರಂಭಿಸಿದರಂತೆ, ಇದನ್ನು ಕಂಡ ಶಿಷ್ಯರು ಆಶ್ಚರ್ಯಚಕಿತರಾಗಿ ಕಾರಣವೇನೆಂದು ಕೇಳಿದಾಗ, ಇಲ್ಲಿ ಮಹಾಸಿದ್ಧ ಪುರುಷನೊಬ್ಬನು ಹುಟ್ಟಿ ಬರುವವನಿದ್ದಾನೆ. ಈ ಸುಯೋಗದಿಂದ

ಈ ಊರು ಪವಿತ್ರ ಬೀಡಾಗುವುದೆಂದರಂತೆ. ಆ ಮಹಾಪುರಷ ಯಾರೆಂದು ಶಿಷ್ಯರು ಪ್ರಶ್ನಿಸಿದಾಗ, ರೇವಣಸಿದ್ಧರು ತಮ್ಮನ್ನು ಸ್ವಾಗತಿಸಲು ಬಂದ ಪ್ರತಿಷ್ಠಿತ ಜನರೊಂದಿಗೆ, ಮುದ್ದುಗೌಡನ ಹೆಂಡತಿ ಸುಗ್ಗಲಾದೇವಿಯ ಮನೆಯೆದುರು ಬಂದು ಅವಳ ಬಸಿರನ್ನು ಮುಟ್ಟಿ "ನಿನ್ನ ಉದರದಿಂದ ಯಾವತ್ತಿಗೂ ಸುಖ-ದುಃಖವಿಲ್ಲದ, ಶೀತ-ಉಷ್ಣ ಎಂಬ ಬೇಧವಿಲ್ಲದ, ಇವನು ಶತ್ರು, ಇವನು ಮಿತ್ರ ಎಂಬ ಅಂತರವಿಲ್ಲದ, ಇದು ಕಾಡು ಇದು ಊರು ಎಂಬ ವ್ಯತ್ಯಾಸವಿಲ್ಲದ, ಹಸಿವು-ತೃಪ್ತಿ ಎರಡೂ ಒಂದೆ ಆಗಿರುವ, ಸುಖ-ದುಃಖಗಳನ್ನು ಸಮ ಸಮವಾಗಿ ಭಾವಿಸುವ, ಹೊಗಳಿಕೆ-ತೆಗಳಿಕೆಗಳನ್ನು ಒಂದಾಗಿ ಕಾಣುವ, ಹೆಂಗಸರು-ಗಂಡಸರು ಎಂದು ಖಿನ್ನತೆಯನ್ನು ಕಲ್ಪಿಸದ, ಹಗಲು-ರಾತ್ರಿಗಳು, ಮೃದುತ್ವ-ಕಠಿಣತ್ವಗಳನ್ನು ಏಕರೀತಿಯಲ್ಲಿ ಕಾಣುವ ಅಪ್ರತಿಮನಾದ ಶಿವಯೋಗದಿಂದ ಕೂಡಿದ ಮಗನು ನಿಮಗೆ ಹುಟ್ಟುತ್ತಾನೆ" ಎಂದು ಹರಸಿದರಂತೆ. ಮುಂದುವರೆದು ಆ ರೀತಿಯಾಗಿ ಹುಟ್ಟಿದ ಗಂಡು ಮಗುವಿಗೆ ಸಿದ್ಧರಾಮನೆಂದು ಹೆಸರಿಡುವಂತೆ ಸೂಚಿಸಿದರಂತೆ. ಈ ರೀತಿಯಾಗಿ ರೇವಣಸಿದ್ಧರ ಆಶೀರ್ವಾದದಿಂದ ಶ್ರೀ ಸಿದ್ಧರಾಮನು ಜನಿಸಿದ ಎಂಬುದನ್ನು ಇಲ್ಲಿಯ ಸ್ಥಳ ಪುರಾಣಗಳು ಹೇಳುತ್ತವೆ.

ರೇವಣಸಿದ್ಧರ ಆಶೀರ್ವಾದದಿಂದ ಜನಿಸಿದ ಸಿದ್ಧರಾಮ ಮುಂದೆ ಸಿದ್ಧ ಪುರುಷನಾಗಿ ಬೆಳೆದು ಲೋಕೋದ್ಧಾರದ ಕೈಂಕರ್ಯವನ್ನು ಕೈಗೊಂಡು ಸೊನ್ನಲಿಗೆಯಲ್ಲಿ ಶ್ರೀ ಸಿದ್ಧರಾಮೇಶ್ವರನಾಗಿ ನೆಲೆಯಾದನು ಎಂಬುದು ಸ್ಥಳೀಯ ಚರಿತ್ರೆ. ಮಾ(ಸ)ಚನೂರಿನಿಂದ ಸಂಚಾರ ಕೈಗೊಂಡ ರೇವಣಸಿದ್ಧರು ಸೊನ್ನಲಿಗೆಗೆ (ಸೊಲ್ಲಾಪುರ) ಬಂದು ಪವಾಡಗೈದ ಈ ಸ್ಥಳ ರೇವಣಸಿದ್ಧನ ಪ್ರಮುಖ ನೆಲೆಯಾಗಿ ನಿಲ್ಲುತ್ತದೆ. ರೇವಣಸಿದ್ಧರು ಸೊನ್ನಲಿಗೆ ಊರಿನ ಸೀಮೆಯ ಹತ್ತಿರ ಬಂದಿಳಿದರೆಂದು ಹೇಳಲಾದ ಸ್ಥಳದಲ್ಲಿ ಶ್ರೀ ರೇವಣಸಿದ್ಧೇಶ್ವರರ ದೇವಾಲಯವು ನಿರ್ಮಾಣವಾಯಿತೆಂಬುದು ಇಲ್ಲಿಯ ಸ್ಥಳೀಯರ ಅನಿಸಿಕೆ.

ಅಂದು ಈ ಸ್ಥಳದಲ್ಲಿ ಸ್ಥಾಪಿಸಲಾಗಿದೆ ಎನ್ನಲಾದ ರೇವಣಸಿದ್ಧೇಶ್ವರರ ದೇವಾಲಯವನ್ನು ನಾವು ಇಂದಿಗೂ ಕಾಣಬಹುದಾಗಿದೆ. ರೇವಣಸಿದ್ಧರ ಈ ದೇವಾಲಯದಲ್ಲಿ ಲಿಂಗದ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅರ್ಥಾತ್ ನೆಲ ಅಂತಸ್ತಿನ ಲಿಂಗದ ಮೇಲೆ ಮಗದೊಂದು ಲಿಂಗವನ್ನು ಮಹಡಿಯಲ್ಲಿ ಸ್ಥಾಪಿಸಲಾಗಿದೆ. ಈ ರೀತಿಯಾದ ಲಿಂಗ ಪ್ರತಿಷ್ಠಾಪನ ಮಾದರಿಯನ್ನು ಶ್ರೀ ಸಿದ್ಧರಾಮೇಶ್ವರರು ಸ್ವಯಂ ಸ್ಥಾಪಿಸಿದ ಕಪಿಲಸಿದ್ಧ ಮಲ್ಲಿನಾಥ ದೇವಾಲಯದಲ್ಲೂ ಕಾಣಬಹುದಾಗಿದೆ. ಪ್ರಸ್ತುತ ರೇವಣಸಿದ್ಧೇಶ್ವರನ ಅರ್ಚಕರಾಗಿ ಜಂಗಮ ಕುಲದವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸೊಲ್ಲಾಪುರದ ಶ್ರೀ ರೇವಣಸಿದ್ಧ ಹಾಗೂ ಶ್ರೀ ಸಿದ್ಧರಾಮರ ದೇವಾಲಯಗಳಿಗೆ ಜಾತಿ ಬೇಧವಿಲ್ಲದೆ ಸಮಾಜದ ಸಮಸ್ತ ಜನಾಂಗದವರು ನಡೆದುಕೊಳ್ಳುತ್ತಾರೆ. ಸೊಲ್ಲಾಪುರವು

ಈ ಈರ್ವರ ಸಂಗಮ ಒಂದು ಪ್ರಮುಖ ನೆಲೆಯಾಗಿ ನಿಲ್ಲುವುದಲ್ಲದೇ, ಶ್ರೀ ರೇವಣಸಿದ್ಧರ ಲೋಕಸಂಚಾರದ ನೆಲೆಯ ಒಂದು ಪ್ರಮುಖ ಮೈಲುಗಲ್ಲಾಗುವುದು.

೪ ಸಿದ್ಧನಕೆರೆ : ಮಂಗಳವೇಡೆ ತಾಲ್ಲೂಕು: ಸೊಲ್ಲಾಪುರ ಜಿಲ್ಲೆ

ಸಿದ್ಧನ ಕೆರೆಯು ಮಂಗಳವಾಡದಿಂದ ೨೦ ಕಿ.ಮೀ. ದೂರದಲ್ಲಿದೆ. ಕೊಲ್ಲಾಪುರದ ಮಾಯೆಯ ಗರ್ವಭಂಗಮಾಡಿದ ಸ್ಥಳವಾಗಿದೆ. ಆಕೆಯ ಮೊಲೆ ಮೂಗುಗಳನ್ನು ಕೊಯ್ದಾಗ ಆ ಊರಿನ ಕೆರೆಯಲ್ಲಿ ನೀರು ಬರಬಾರದೆಂದು ಆಕೆ ಶಾಪವಿತ್ತಳು. ಈ ಪ್ರಸಂಗವನ್ನು ಪ್ರತ್ಯಕ್ಷ ನೋಡಿದ ಊರಿನ ಜನತೆ ರೇವಣಸಿದ್ಧನನ್ನು ಪ್ರಾರ್ಥಿಸಲಾಗಿ, ರೇವಣಸಿದ್ಧರು ಒಣಗಿದ ಕೆರೆಯಲ್ಲಿ ಪಾದಾರ್ಪಣೆ ಮಾಡಲಾಗಿ ಕೆರೆಗೆ ನೀರು ತುಂಬಿಕೊಂಡಿತು ಎಂಬುದು ಸ್ಥಳೀಯರ ನಂಬಿಕೆ. ಸಿದ್ಧನಕೆರೆಯಲ್ಲಿ ರೇವಣಸಿದ್ಧನ ದೇವಾಲಯವಿದೆ. ಇಲ್ಲಿನ ರೇವಣಸಿದ್ಧನ ದೇವಾಲಯವು ತ್ರಿಕೂಟ ದೇವಾಲಯ ಇದರ ಗರ್ಭಗುಡಿಯಲ್ಲಿ ಮೂರು ಲಿಂಗಗಳಿವೆ, ಸಿದ್ಧರಾಮ ಮತ್ತು ಮರುಳಸಿದ್ಧ, ರೇವಣಸಿದ್ಧರೊಡಗೂಡಿ ಮಾಯೆಯ ಗರ್ವಮುರಿದುದರ ಸಂಕೇತವಾಗಿಯೇ ಈ ತ್ರೀಕೂಟ ದೇವಾಲಯವು ನಿಮಾಣವಾಯಿತು ಎಂಬುದು ಸ್ಥಳ ಐತಿಹ್ಯ. ದೇವಾಲಯದ ಆವರಣದಲ್ಲಿ ಭಗ್ನ ಮೂರ್ತಿಗಳು ಹಾಗೂ ಚಿಕ್ಕ ಚಿಕ್ಕ ದೇವಾಲಯಗಳಿವೆ . ಇವುಗಳು ಸಿದ್ಧರ ಸಮಾಧಿಗಳಗಿಬಹುದೆಂಬುದು ತಜ್ಞರ ಅಭಿಪ್ರಾಯ.

೫.೨.೨ ಆಂಧ್ರಪ್ರದೇಶ (ಸೀಮಾಂಧ್ರ)ದ ನೆಲೆಗಳು

೧. ಓಬಳಾಪುರ: ರಾಯದುರ್ಗ ತಾಲ್ಲೂಕು: ಅನಂತಪುರ ಜಿಲ್ಲೆ

ಓಬಳಾಪುರಂ ಗ್ರಾಮವು ತಾಲ್ಲೂಕು ಕೇಂದ್ರ ರಾಯದುರ್ಗದಿಂದ ೪೦.೦೦ ಕಿ.ಮೀ. ಹಾಗೂ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲಾ ಕೇಂದ್ರದಿಂದ ೧೬.೦೦ ಕಿ.ಮೀ. ದೂರದಲ್ಲಿದೆ. ಸುಮಾರು ೨೫೦೦ ಜನಸಂಖ್ಯೆಯುಳ್ಳ ಗ್ರಾಮದಲ್ಲಿ ೪-೫ ತಲೆಮಾರಿನಿಂದ ಶ್ರೀ ರೇವಣಸಿದ್ಧೇಶ್ವರ ಗುರುಮಠವು ಮನೆಯಲ್ಲಿ ಇದ್ದು, ಇತ್ತೀಚಿಗಷ್ಟೆ ಮೂಲ ಗುರುಮಠವಿದ್ದ ಸ್ಥಳದಲ್ಲಿಯೇ ಹೊಸದಾಗಿ ರೇವಣಸಿದ್ಧನ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ದೇವಾಲಯವು ಗರ್ಭಗುಡಿ ಮತ್ತು ಪ್ರಾಂಗಣವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಲಿಂಗೋದ್ಭವ ರೇವಣಸಿದ್ಧನನ್ನು ಹಾಗೂ ಪ್ರಾಂಗಣದಲ್ಲಿ ನಾಗರಕಟ್ಟೆಯನ್ನು ಪ್ರತಿಷ್ಠಾಪಿಸಲಾಗಿದೆ. ತಲೆತಲೆಮಾರುಗಳಿಂದ ಹಾಲುಮತ ಜನಾಂಗಕ್ಕೆ ಸೇರಿದ ರೇವಣಸಿದ್ಧ ಒಡೆಯರುಗಳೆ ರೇವಣಸಿದ್ಧನ ಪೂಜೆ ಪುನಸ್ಕಾರಗಳನ್ನು ಮಾಡುತ್ತ ಬಂದಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಶ್ರೀ ಮಹದೇವಯ್ಯ ಒಡೆಯರ್‌ರವರು ಪ್ರಸ್ತುತ ಒಡೆಯರಾಗಿರುತ್ತಾರೆ.

ರೇವಣಸಿದ್ಧನ ದೇವಾಲಯದಲ್ಲಿ ವಿಜಯ ದಶಮಿ ಸಂಬಂಧಿ ಆಚರಣೆಗಳು ಗಮನ ಸೆಳೆಯುತ್ತವೆ. ಆ ಸಮಯದಲ್ಲಿ ಹಾಲುಮತ ಸಮಾಜದ ಹೊಸಕೇರಪ್ಪ ದೈವವು ರೇವಣಸಿದ್ಧನಲ್ಲಿಗೆ ಬಂದ ನಂತರವೇ ಮೆರವಣಿಗೆಯಲ್ಲಿ ಬನ್ನಿ ಮರದೆಡೆ ತೆರಳುವುದು. ಈ ಸಂದರ್ಭದಲ್ಲಿ ರೇವಣಸಿದ್ಧನ ಬೆತ್ತವು ಆತನ ಪ್ರತೀಕವಾಗಿ ಮೆರವಣಿಗೆಯಲ್ಲಿ ಭಾಗವಹಿಸುವುದನ್ನು ಗಮನಿಸಬಹುದಾಗಿದೆ. ಡೊಳ್ಳುವಾದ್ಯಗಳೊಡನೆ ಮೆರವಣಿಗೆಯಲ್ಲಿ ತೆರಳುವ ಈ ದೈವಗಳು ಬನ್ನಿ ಮರದ ಕೆಳಗೆ ಸ್ಥಾಪಿಸಲ್ಪಟ್ಟು, ನಂತರ ಪೂಜೆ ಪುನಸ್ಕಾರಗಳು ನಡೆದು ಬನ್ನಿ ಮುಡಿಯುವುದರೊಂದಿಗೆ ಸಂಪನ್ನಗೊಳ್ಳುತ್ತದೆ. ಈ ಸಂಪ್ರದಾಯ ಅಂದಿನಿಂದ ಇಂದಿನವರೆಗೂ ಪ್ರಚಲಿತದಲ್ಲಿದೆ. ಇಲ್ಲಿ ದೈವ ಹೊಸಕೇರಪ್ಪ ಬೀರಪ್ಪನ ಸ್ಥಾನ ತುಂಬಿ ರೇವಣಸಿದ್ಧನ ಸಂಬಂಧಿ ಆಚರಣೆಗಳಲ್ಲಿ ಭಾಗವಹಿಸುವುದನ್ನು ಮುಖ್ಯವಾಗಿ ಗಮನಿಸಬಹುದಾಗಿದೆ. ಶ್ರಾವಣ ಮಾಸದ ಕೊನೆಯ ದಿನದಂದು ದೇವಾಲಯದಲ್ಲಿರುವ ನಾಗರಕಲ್ಲಿಗೆ ಒಡೆಯರೆಲ್ಲರೂ ಸೇರಿ ಹಾಲೆರೆದು ದಾಸೋಹ ಏರ್ಪಡಿಸುವುದ ವಾಡಿಕೆಯಾಗಿದೆ. ಇಲ್ಲಿಯ ಒಡೆಯರುಗಳ ವಯಕ್ತಿಕ ಆಚರಣೆಗಳು ಸರೂರು ಶಾಂತಮುತ್ತಯ್ಯನ ಸಂಪ್ರದಾಯದಂತೆ ಇರುತ್ತವೆ. ಆದರೆ ಒಡೆಯರುಗಳು ಶವಸಂಸ್ಕಾರ ಸಂದರ್ಭದಲ್ಲಿ ಮಾತ್ರ ಹಾಲುಮತ ಸಮುದಾಯದವರೆ ಸಮಾಧಿ ತೋಡುವುದರಿಂದ ಹಿಡಿದು ಕೊನೆಯವರೆಗಿನ ಸಂಪ್ರದಾಯಗಳನ್ನು ಕಡ್ಡಾಯವಾಗಿ ನೆರವೇರಿಸುವುದನ್ನು ಗಮನಿಸಬಹುದಾಗಿದೆ.

೨ ತೆನಗಲ್ಲು : ರಾಯದುರ್ಗ ತಾಲ್ಲೂಕು : ಅನಂತಪುರ ಜಿಲ್ಲೆ

ತೆನಗಲ್ಲು ಗ್ರಾಮವು ತಾಲ್ಲೂಕು ಕೇಂದ್ರ ಕಲ್ಯಾಣದುರ್ಗದಿಂದ ೩೦.೦೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ಪ್ರತ್ಯೇಕವಾಗಿ ರೇವಣಸಿದ್ಧನ ದೇವಾಲಯ ಇಲ್ಲದಿರುವುದು ಹಾಗೂ ಶ್ರೀ ಬೀರೇಶ್ವರ ದೇವಾಲಯದಲ್ಲಿಯೆ ರೇವಣಸಿದ್ಧನನ್ನು ಸ್ಥಾಪಿಸಲಾಗಿದೆ. ಕಲ್ಲು ಚಪ್ಪಡಿ ಛಾವಣಿ, ಕಲ್ಲುಗಾರೆ ಗೋಡೆಗಳಿಂದ ನಿರ್ಮಿತವಾದ ಪುರಾತನ ಬೀರೇಶ್ವರ ದೇವಾಲಯವಿದ್ದು ಗರ್ಭಗುಡಿ ಮತ್ತು ಪ್ರಾಂಗಣವನ್ನು ಹೊಂದಿರುವುದು. ಗರ್ಭಗುಡಿಯಲ್ಲಿ ದೈವ ಬೀರಪ್ಪನನ್ನು ಹಲವಾರು ಬಿರುದಾವಳಿಗಳೊಂದಿಗೆ ಮುಖ್ಯ ದೈವವಾಗಿ ಪ್ರತಿಷ್ಠಾಪಿಸಲಾಗಿದ್ದು ಪಕ್ಕದಲ್ಲಿಯೇ ರೇವಣಸಿದ್ದನನ್ನು ಪ್ರತಿಷ್ಠಾಪಿಸಲಾಗಿದೆ.

೩೦೦-೪೦೦ ವರ್ಷಗಳ ಹಿಂದಿನಿಂದಲೂ ಒಡೆಯರುಗಳಿಗೆ ಸೇರಿದ ಮನೆಯಲ್ಲಿಯೇ ರೇವಣಸಿದ್ಧನ ಗುರುಮಠ ಇದ್ದುದಾಗಿಯೂ, ದಿನಂಪ್ರತಿ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದುದಾಗಿಯೂ ಇತ್ತೀಚಿನ ದಿನಗಳಲ್ಲಿ ಸಂಬಂಧಿಸಿದ ಒಡೆಯರುಗಳು ಊರು ತೊರೆದು ಜೀವನಕ್ಕಾಗಿ ಬೇರೆ ಊರಿಗೆ ಸ್ಥಳಾಂತರಗೊಂಡ ಸಂದರ್ಭದಲ್ಲಿ ತಾವು ಪೂಜಿಸುತ್ತಿದ್ದ ರೇವಣಸಿದ್ಧ ದೈವ ಹಾಗೂ ಪರಿಕರಗಳನ್ನು ಬೀರದೇವರ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿರುವುದಾಗಿಯೂ

ಹಾಗೂ ಅಂದಿನಿಂದ ಬೀರದೇವರ ಪೂಜಾರುಗಳೆ ರೇವಣಸಿದ್ಧನಿಗೂ ನಿತ್ಯ ಪೂಜೆ ಮಾಡುತ್ತಿರುವುದಾಗಿ ಹಾಗೂ ಮುಂದಿನ ದಿನಗಳಲ್ಲಿ ರೇವಣಸಿದ್ಧನಿಗೆ ಪ್ರತ್ಯೇಕ ದೇವಾಲಯ ನಿರ್ಮಿಸುವುದಾಗಿಯೂ ಸ್ಥಳೀಯರು ಹೇಳುವರು.

ಸುಮಾರು ೨೫೦೦ ಜನಸಂಖ್ಯೆಯುಳ್ಳ ಗ್ರಾಮದಲ್ಲಿ ೧೫೦೦ ರಷ್ಟು ಹಾಲುಮತ ಸಮಾಜದವರು ವಾಸವಾಗಿದ್ದು, ದೈವ ರೇವಣಸಿದ್ಧ ಹಾಗೂ ಇವರುಗಳ ನಡುವೆ ಇರುವ ಅನ್ಯೋನ್ಯ ಸಂಬಂಧವನ್ನು ಇಲ್ಲಿಯೂ ಕಾಣಬಹುದು. ಪ್ರಸ್ತುತ ಒಡೆಯರುಗಳು ಇಲ್ಲಿ ನೆಲೆಸದೇ ಇರುವ ಕಾರಣ ಶೆಟ್ಟೂರು ಮಂಡಲ, ಲಕ್ಷ್ಮಪನಪಲ್ಲಿ ಹಾಗೂ ಕಂಬದೂರು ಮಂಡಲಗೆ ಸೇರಿದ ಪ್ರಸ್ತುತ ಕರ್ತನಪರ್ತಿ ಗ್ರಾಮದಲ್ಲಿ ವಾಸವಾಗಿರುವ ಒಡೆಯರುಗಳು ತೆನಗಲ್ಲು ಗ್ರಾಮಕ್ಕೆ ಬಂದು ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಾರೆ. ಹಾಗೂ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆಯ ರೇವಣಸಿದ್ಧನ ದೇವಸ್ಥಾನದ ಒಡೆಯರುಗಳು ಇಲ್ಲಿನ ರೇವಣಸಿದ್ಧನ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವರು ಹಾಗೂ ಈ ದೈವಕ್ಕೆ ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಗ್ರಾಮದಲ್ಲಿ ಒಕ್ಕಲುಗಳಿವೆ.

ಶ್ರೀ ಮಲ್ಲಪ್ಪಸ್ವಾಮಿ ಒಡೆಯರ್ ಹಾಗೂ ಅವರ ಮಕ್ಕಳಾದ ಶ್ರೀ ಮಲ್ಲಿಕಾರ್ಜುನ್, ಶ್ರೀ ಹನುಮಂತರಾಯ, ಶ್ರೀ ಶಾಂತಮೂರ್ತಿ ಹಾಗೂ ಶ್ರೀ ರಾಮಕೃಷ್ಣ ಒಡೆಯರುಗಳು ಹಾಲುಮತ ಸಮಾಜದ ಮಂಗಳ ಕಾರ್ಯಗಳಲ್ಲಿ, ಧಾರ್ಮಿಕ ವಿಧಿ ವಿಧಾನಗಳ ನೇತೃತ್ವವನ್ನು ವಹಿಸಿ ಕೊಂಡಿದ್ದಾರೆ.

೩ ಗೌಡನಹಳ್ಳಿ : ಮಡಕಸಿರಾ ತಾಲ್ಲೂಕು : ಅನಂತಪುರ ಜಿಲ್ಲೆ

ಗೌಡನಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರ ಮಡಕಸಿರಾದಿಂದ ೪.೦೦ ಕಿ.ಮೀ. ಹಾಗೂ ಕರ್ನಾಟಕ ರಾಜ್ಯದ ಪಾವಗಡ ತಾಲ್ಲುಕು ಕೇಂದ್ರದಿಂದ ೨೦.೦೦ ಕಿ.ಮೀ. ದೂರದಲ್ಲಿದೆ. ೩೫೦೦ ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ಸುಮಾರು ೩-೪ ತಲೆಮಾರು ಹಳೆಯ ರೇವಣಸಿದ್ಧನ ದೇವಾಲಯವಿದೆ. ಕಲ್ಲುಗಾರೆಗಳಿಂದ ನಿರ್ಮಿತವಾದ ದೇವಾಲಯವು ಗರ್ಭಗುಡಿ ಹಾಗೂ ಪ್ರಾಂಗಣವನ್ನು ಹೊಂದಿರುವುದು. ಗರ್ಭಗುಡಿಯಲ್ಲಿ ಮುಖ್ಯ ದೈವ ರೇವಣಸಿದ್ಧನನ್ನು ಹಾಗೂ ಪ್ರಾಂಗಣದಲ್ಲಿ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯವು ಸರ್ವ ಸಮುದಾಯದ ಧಾರ್ಮಿಕ ಕೇಂದ್ರವಾಗಿದ್ದು ಈಶ್ವರ ದೇವಾಲಯವೆಂದೆ ಮನೆ ಮಾತಾಗಿದೆ.

ರೇವಣಸಿದ್ಧನ ಪೂಜಾ ಕೈಂಕರ್ಯಗಳನ್ನು ಅಂದಿನಿಂದ ಒಡೆಯರುಗಳೆ ಮಾಡುತ್ತ ಬಂದಿರುವರಾದರೂ. ಇಂದು ಗ್ರಾಮದಲ್ಲಿ ಒಡೆಯರುಗಳು ವಾಸವಾಗದೇ ಇರುವ ಕಾರಣ ಕರ್ನಾಟಕ ರಾಜ್ಯದ ಸಿರಾ ಪಟ್ಟಣದಲ್ಲಿ ವಾಸವಾಗಿರುವ ಸಾವಂತಕುಲದ ಶ್ರೀ ಶಿವಣ್ಣ

ಒಡೆಯರ್‌ರವರು ಪ್ರಸ್ತುತ ರೇವಣಸಿದ್ಧನ ಒಡೆಯರಾಗಿರುತ್ತಾರೆ. ವಿಶೇಷ ಉತ್ಸವ ಆಚರಣೆಗಳ ಸಂದರ್ಭದಲ್ಲಿ ಇಲ್ಲಿಗೆ ಆಗಮಿಸಿ ಧಾರ್ಮಿಕ ವಿಧಿವಿಧಾನಗಳ ನೇತೃತ್ವವನ್ನು ವಹಿಸಿಕೊಂಡು ನಡೆಸಿಕೊಡುತ್ತಿದ್ದಾರೆ. ಉಳಿದ ದಿನಗಳಲ್ಲಿ ಬೀರದೇವರ ಪೂಜಾರಿಗಳಾದ ಶ್ರೀ ಆಂಜನೇಯಲುರವರು ರೇವಣಸಿದ್ಧನ ಪೂಜೆಯನ್ನು ಮಾಡುತ್ತಿರುವರು. ದಸರಾ, ಶಿವರಾತ್ರಿ, ಯುಗಾದಿ ಹಬ್ಬಗಳ ಸಂದರ್ಭದಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತಲಿವೆ. ವಿಶೇಷವಾಗಿ ಕಾರ್ತಿಕ ಮಾಸದಲ್ಲಿ ರೇವಣಸಿದ್ಧನ ಉತ್ಸವ ನೆರವೇರುವುದು. ಆ ಸಂದರ್ಭದಲ್ಲಿ ವಾದ್ಯಗಳ ಸಮೇತ ಮೆರವಣಿಗೆಯಲ್ಲಿ ರೇವಣಸಿದ್ಧನು ಊರ ಸಂಚಾರ ಕೈಗೊಳ್ಳುವನು. ಈ ಸಂದರ್ಭದಲ್ಲಿ ಗ್ರಾಮದ ಸಮಸ್ತ ಸಮುದಾಯದವರು ಭಾಗವಹಿಸುತ್ತಾರಾದರೂ ಹಾಲುಮತಸ್ಥರು ಕಡ್ಡಾಯವಾಗಿ ಭಾಗವಹಿಸುವುದನ್ನು ಇಲ್ಲಿ ಗಮನಿಸಬಹುದಾಗಿದೆ. ರೇವಣಸಿದ್ಧನ ಜಾತ್ರೆ ಹಾಗೂ ಕಂಥಾಧಾರಣ ಸೇವೆಯಂತ ಆಚರಣೆಗಳು ಪ್ರಚಲಿತದಲ್ಲಿ ಇರುವುದಿಲ್ಲ. ಸರೂರು ಶಾಂತಮುತ್ತಯ್ಯ ಸಂಪ್ರದಾಯಸ್ಥ ಒಡೆಯರುಗಳಾದ ಶ್ರೀ ಶಿವಣ್ಣ ಒಡೆಯರ್ ಮತ್ತು ಶ್ರೀ ರೇವಣ್ಣ ಒಡೆಯರ್ ಸಹೋದರರು ಒಡೆಯರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇತರೆ ನೆಲೆಗಳಲ್ಲಿ ಇರುವಂತೆ ಒಡೆಯರುಗಳಿಗೆ ಸಂಬಂಧಿಸಿದ ವೈಯಕ್ತಿಕ ಆಚರಣೆಗಳು, ಸಂಪ್ರದಾಯಗಳು ಇಲ್ಲಿಯೂ ಪ್ರಸ್ತುತವಾಗಿವೆ.

೪. ಗೋವಿಂದವಾಡ : ರಾಯದುರ್ಗ ತಾಲ್ಲೂಕು : ಅನಂತಪುರ ಜಿಲ್ಲೆ

ಗೋವಿಂದವಾಡ ಗ್ರಾಮವು ರಾಯದುರ್ಗ ತಾಲ್ಲೂಕು ಕೇಂದ್ರದಿಂದ ೩೫.೦೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ಸುಮಾರು ನಾಲ್ಕು ತಲೆಮಾರಿನಷ್ಟು ಹಳೆಯ ಶ್ರೀ ರೇವಣಸಿದ್ಧೇಶ್ವರ ದೇವಾಲಯವಿದೆ. ಮೂಲ ದೇವಾಲಯದಲ್ಲಿ ರೇವಣಸಿದ್ಧನ ಗದ್ದುಗೆ ಮಾತ್ರ ಇದ್ದುದಾಗಿಯೂ, ಇತ್ತೀಚೆಗೆ ದೇವಾಲಯದ ಜೀರ್ಣೋದ್ಧಾರ ಸಮಯದಲ್ಲಿ ಲಿಂಗೋದ್ಭವ ರೇವಣಸಿದ್ಧನ ವಿಗ್ರಹ ಹಾಗೂ ಎದುರಿಗೆ ಕುಳಿತ ಭಂಗಿಯ ಬಸವಣ್ಣನ ವಿಗ್ರಹಗಳನ್ನು ಪ್ರತಿಷ್ಠಪಿಸಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ದೇವಾಲಯವು ಗರ್ಭಗುಡಿ ಪ್ರಾಂಗಣವನ್ನು ಹೊಂದಿದ್ದು, ಕಟ್ಟಡವನ್ನು ಕಲ್ಲುಗಾರೆ, ತೊಲೆಕಂಬಗಳಿಂದ ನಿರ್ಮಿಸಲಾಗಿದೆ. ಗ್ರಾಮದಲ್ಲಿ ಇತರೆ ದೈವಗಳ ದೇವಾಲಯಗಳು ಇದ್ದರೂ ರೇವಣಸಿದ್ಧ ಹಾಗೂ ಬೀರದೇವರ ದೇವಾಲಯಗಳು ಪ್ರಮುಖವಾಗಿವೆ.

ಸುಮಾರು ೪೦೦೦ ಜನಸಂಖ್ಯೆಯುಳ್ಳ ಗ್ರಾಮದಲ್ಲಿ ಹಾಲುಮತ ಸಮುದಾಯಕ್ಕೆ ಸೇರಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಲುಮತ ಸಮುದಾಯದವರಿಗೆ ಇಲ್ಲಿ ರೇವಣಸಿದ್ಧನೆ ಪ್ರಮುಖ ದೈವವಾಗಿರುವುದನ್ನು ಗಮನಿಸಬಹುದಾಗಿದೆ. ಇತರೆ ನೆಲೆಗಳಲ್ಲಿ ಪ್ರಚಲಿತದಲ್ಲಿರುವಂತೆ ರೇವಣಸಿದ್ಧನ ಜಾತ್ರೆ, ಉತ್ಸವಗಳ ಸಂದರ್ಭಗಳಲ್ಲಿ ಬೀರದೇವರ ಭಾಗವಹಿಸುವಿಕೆಯನ್ನು ಗಮನಿಸಬಹುದಾಗಿದೆ. ಓರೇಹಾಳ ಮಂಡಲ ರಾಯದುರ್ಗ ತಾಲ್ಲೂಕು ಓಬಳಾಪುರ ಗ್ರಾಮದ ಶ್ರೀ ಪಂಪಾಪತಿ

ಸ್ವಾಮಿ ಒಡೆಯರ್‌ರವರು ಗೋವಿಂದವಾಡದ ಶ್ರೀ ಸಿದ್ದಯ್ಯಸ್ವಾಮಿ ಒಡೆಯರ್‌ರವರಿಗೆ ದತ್ತುಪುತ್ರರಾಗಿ ಬಂದು ಗೋವಿಂದವಾಡ ಗ್ರಾಮದಲ್ಲಿ ನೆಲೆಸಿ ಅಂದಿನಿಂದ ರೇವಣಸಿದ್ಧನ ಒಡೆಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಸಂಪ್ರದಾಯದ ಮುಂದುವರಿಕೆಯಂತೆ ಇವರ ಪುತ್ರರಾದ ಶ್ರೀ ಪರಮೇಶ್ವರಯ್ಯ, ಶ್ರೀ ರೇವಣ ಸಿದ್ಧಯ್ಯ, ಶ್ರೀ ಮಹದೇವಯ್ಯ, ಶ್ರೀ ಕುಮಾರಸ್ವಾಮಿ ಹಾಗೂ ಶ್ರೀ ಸಣ್ಣಸಿದ್ಧಯ್ಯ ಸ್ವಾಮಿಗಳು ಕೂಡ ದೀಕ್ಷೆ ಪಡೆದು ರೇವಣಸಿದ್ಧನ ಒಡೆಯರಾಗಿ ಸೇವೆ ಸಲ್ಲಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಶ್ರಾವಣ ಮಾಸ, ಕಾರ್ತಿಕ ಮಾಸ ಹಾಗೂ ಮಹಾಶಿವರಾತ್ರಿಯ ಆಚರಣೆಗಳ ಸಂದರ್ಭಗಳಲ್ಲಿ ರೇವಣಸಿದ್ಧನ ದೇವಾಲಯದಲ್ಲಿ ವಿಶೇಷ ಪೂಜೆಗಳು ನೆರವೇರುತ್ತವೆ. ವಿಶೇಷವಾಗಿ ಶಿವರಾತ್ರಿ ಆಚರಣೆ ಸಂದರ್ಭದಲ್ಲಿ ರಾತ್ರಿ ಇಡೀ ಜಾಗರಣೆ, ಭಜನೆ, ರೇವಣಸಿದ್ಧನಿಗೆ ಸಂಬಂಧಿಸಿದ ಪುರಾಣ ಪ್ರವಚನಗಳನ್ನು ಮಾಡುವರು. ಇತರ ನೆಲೆಗಳಲ್ಲಿ ಇರುವಂತೆ ಇಲ್ಲಿ ರೇವಣಸಿದ್ಧನ ಜಾತ್ರೆ ಇಲ್ಲದಿರುವುದನ್ನು ಗಮನಿಸಬಹುದಾಗಿದೆ. ಯುಗಾದಿ, ದಸರಾ ಹಬ್ಬಗಳ ಆಚರಣೆಗಳ ಸಂದರ್ಭಗಳಲ್ಲಿ ಗ್ರಾಮದ ಬೀರದೈವವು ರೇವಣಸಿದ್ಧನ ಬಳಿಗೆ ಬಂದ ನಂತರದಲ್ಲಿ ಊರ ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದು.

ಶಾಂತಮುತ್ತಯ್ಯನ ಅನುಯಾಯಿಗಳಾದ ಒಡೆಯರುಗಳು ಸಸ್ಯಾಹಾರಿಗಳಾಗಿದ್ದು, ಹಾಲುಮತ ಸಮಾಜದವರೊಡನೆ ಹೆಣ್ಣುಗಂಡು ಕೊಟ್ಟುಪಡೆಯುವ ಸಂಪ್ರದಾಯ ಉಳ್ಳವರಾಗಿರುವುದನ್ನು ಹಾಗೂ ನಂತರದ ತತ್ಸಂಬಧಿ ಆಚರಣೆಗಳು ಇಲ್ಲಿಯೂ ಪ್ರಚಲಿತದಲ್ಲಿರುವುದನ್ನು ಗಮನಿಸಬಹುದಾಗಿದೆ. ಹಾಲುಮತ ಸಮಾಜದವರ ಮಂಗಳಕಾರ್ಯ, ಮದುವೆ ಹಾಗೂ ಶವಸಂಸ್ಕಾರ ಸಂದರ್ಭಗಳಲ್ಲಿ ಒಡೆಯರುಗಳ ಪಾತ್ರ ಬಹುಮುಖ್ಯವಾಗಿರುವುದನ್ನು ಗಮನಿಸಬಹುದಾಗಿದೆ.

ಅಧ್ಯಾಯ : ಆರು

ರೇವಣಸಿದ್ಧ ಪರಂಪರೆ : ಸಾಂಸ್ಕೃತಿಕ ಅನನ್ಯತೆಗಳು

೬.೧. ಜಾತ್ರೆಗಳು–ಉತ್ಸವಗಳು

೬.೨. ಸೇವೆಗಳು

೬.೩. ಆಚರಣೆಗಳು ಮತ್ತು ದೀಕ್ಷೆಗಳು

ಅಧ್ಯಾಯ : ಆರು

ರೇವಣಸಿದ್ಧ : ಸಾಂಸ್ಕೃತಿಕ ಅನನ್ಯತೆಗಳು

ಜನಪದರ ತಾತ್ವಿಕ ಜೀವನದಲ್ಲಿ ದೈವದ ಬಗೆಗಿನ ಭಾವನೆಗಳು ಬಹುಮುಖ್ಯ. ದೈವವನ್ನು ಕುರಿತಂತೆ ಜನಪದರು ತಮ್ಮದೇ ಆದ ನೆಲೆಗಳನ್ನು ಹೊಂದಿದ್ದಾರೆ. ದೇವರನ್ನು ಅವರು ತಮ್ಮ ನಡುವೆ ಜೀವಿಸುವ ಮಾನವ ರೂಪಧಾರಿ ಎಂದು ಭಾವಿಸುತ್ತಾರೆ. ದೇವರಿಗೂ ಮಾನವರಂತೆ ಸುಖ–ದುಃಖಗಳಿವೆ. ತಮ್ಮಂತೆ ನೋವನ್ನು ಅನುಭವಿಸುತ್ತಾನೆ, ಆತನ ನೋವಿಗೆ ಅಯ್ಯೋ ಎಂದು ಮರುಗುತ್ತಾನೆ. ದೇವರಿಗೆ ನೋವಾಗುತ್ತದೆಂದು ಭಾವಿಸಿ ಆ ನೋವು ತಮಗಾಗಿದೆಯೋ ಎಂಬಂತೆ ತಳಮಳಿಸುತ್ತಾರೆ. ತಮ್ಮ ದೇವರಿಗೆ ತಮ್ಮಂತೆ ಉಡುಗೆಯನ್ನು ಉಡಿಸುತ್ತಾರೆ. ಆಭರಣಗಳನ್ನು ತೊಡಿಸುತ್ತಾರೆ. ದೇವರಿಗೆ ಅಗಾಧ ಶಕ್ತಿ ಇದೆ ಎಂದು ಜನಪದರು ನಂಬುತ್ತಾರೆ. ದೇವರ ದಯದಿಂದ ತಮಗೆ ಒಳ್ಳೆಯ ಬದುಕು ಪ್ರಾಪ್ತವಾಗಿದೆ ಎಂದು ನಂಬುತ್ತಾರೆ. ದೇವರ ದಯೆ ಇಲ್ಲದಿದ್ದರೆ ಬದುಕು ದುಸ್ಸಾಧ್ಯವಾಗುತ್ತದೆ. ಅದಕ್ಕಾಗಿ ಹರಕೆ, ಆರಾಧನೆ, ಪ್ರಾರ್ಥನೆ, ವ್ರತ ಪೂಜೆಗಳಿಂದ ದೇವರನ್ನು ಒಲಿಸಿಕೊಳ್ಳಲು, ಆತನ ಕೃಪೆಗೆ ಪಾತ್ರರಾಗಲು ನಿರಂತರ ಪ್ರಯತ್ನಿಸುತ್ತಾರೆ. ಬಾಯಿಗೆ ಬೀಗ ಜಡಿದುಕೊಳ್ಳುವುದು. ಉರುಳು ಸೇವೆ ಸಲ್ಲಿಸುವುದು, ಸಿಡಿಯಾಡುವುದು, ಇತ್ಯಾದಿ ಹರಕೆಗಳನ್ನು ಸಲ್ಲಿಸುತ್ತಾರೆ.

ದೇವರು ಸರ್ವಾಂತರ್ಯಾಮಿ ಎಂಬುದನ್ನು ಜನಪದರು ಅರಿತವರು. ದೇವರಿಲ್ಲದೆ ಅಣುರೇಣು ತೃಣಕಾಷ್ಠಗಳು ಚಲಿಸುವುದಿಲ್ಲವೆಂಬುದು ಅವರ ನಂಬಿಕೆ. ಜನಪದರು ದೇವರನ್ನು ಲೋಕದ ವ್ಯಕ್ತಿಯಾಗಿ ಅಲೌಖಿಕ ಶಕ್ತಿಯಾಗಿ ಏಕಕಾಲಕ್ಕೆ ಪರಿಭಾವಿಸಿದ್ದಾರೆ. ಜನಪದರ ಸಮಸ್ತ ದೈವಿಕ ಭಾವನೆಗಳು ಜನಪದ ಸ್ತುತಿ ಗೀತೆಗಳು, ಪೌರಾಣಿಕ ಗೀತೆಗಳಲ್ಲಿ ಮೂಡಿ ನಿಂತಿದೆ. ಅವರ ಆಚರಣೆ, ಅವರ ನಂಬಿಕೆ, ಅವರ ಕಲ್ಪನೆ ಹೀಗೆ ಅನೇಕ ವಿಷಯಗಳಿಗೆ ಗೀತೆಗಳು ಕನ್ನಡಿ ಹಿಡಿಯುತ್ತವೆ. ಈ ಬಗೆಯ ತಾತ್ವಿಕ ಚಿಂತನೆಗಳು ಜನಪರದ್ದಾಗಿದೆ. ಅಲ್ಲಿ ಒಡಮೂಡಿದ ಸಾಹಿತ್ಯ, ಜಾತ್ರೆ–ಉತ್ಸವ, ಆಚರಣೆಗಳು, ಕಟ್ಟಳೆಗಳು ಸಾಂಸ್ಕೃತಿಕ ಅನನ್ಯಗಳಾಗಿರುತ್ತವೆ.

೬.೧. ಜಾತ್ರೆ–ಉತ್ಸವಗಳು

ಜನಪದ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ ಜಾತ್ರೆ. ಜಾತ್ರೆಯು ಪರಿಸೆ, ತೇರು, ರಥೋತ್ಸವ, ಪಲ್ಲಕ್ಕಿ ಉತ್ಸವ ಇತ್ಯಾದಿ ಹೆಸರುಗಳಿಂದ ಆಚರಿಸಲ್ಪಡುವುದು. ಜಾತ್ರೆಯೆಂಬುದು ಜಾತಿ ಮೀರಿದ ಒಕ್ಕೂಟ, ದೇವರ ಉತ್ಸವದ ವೈವಿಧ್ಯ ರೂಪ. ಜಾತ್ರೆ–ಉತ್ಸವಗಳ ಹಿನ್ನೆಲೆಯಲ್ಲಿ ಅನೇಕ ಜನಪದ ಆಚರಣೆಗಳು ಬೆಳೆದು ಬಂದಿವೆ. ಇವುಗಳಲ್ಲಿ ಪಲ್ಲಕ್ಕಿ ಉತ್ಸವ, ದೋಣಿಸೇವೆ, ಆರತಿಸೇವೆ, ಜಾಡಿಸೇವೆ, ಮಂಡೆಸೇವೆ, ಸರಪಣಿ ಸೇವೆ , ಭಂಡಾರೋತ್ಸವ ಇತ್ಯಾದಿಗಳನ್ನು ಗಮನಿಸಬಹುದಾಗಿದೆ. ಭಾರತೀಯ ಸಿದ್ಧಪರಂಪರೆಯಲ್ಲಿ ರೇವಣಸಿದ್ಧನ ಹೆಸರು ಪ್ರಸಿದ್ಧವಾದುದು. ವಿಶೇಷವಾಗಿ ಕರ್ನಾಟಕದಲ್ಲಿ ಲಿಂಗಾಯತ ಮತ್ತು ಹಾಲುಮತ ಸಮಾಜಗಳಿಗೆ ಈತ ಪೂಜನೀಯ ವ್ಯಕ್ತಿಯಾಗಿದ್ದಾನೆ. ಅದರಲ್ಲಿಯೂ ಹಾಲುಮತ ಗುರುಪರಂಪರೆಯಲ್ಲಿ ಈತನಿಗೆ ಅಗ್ರಸ್ಥಾನವಿದೆ.

ಭಾರತದ ಪ್ರಮುಖ ಸಮುದಾಯಗಳಲ್ಲಿ ಹಾಲುಮತ ಸಮುದಾಯವೂ ಬಹುದೊಡ್ಡ ಪರಂಪರೆಯನ್ನು ಹೊಂದಿದೆ. ಜಾಗತೀಕರಣ ಉದಾರೀಕರಣಗಳಂಥ ಇಂದಿನ ಸಂದರ್ಭದಲ್ಲಿಯೂ ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು ಪರಂಪರಾಗತ ಜೀವನ ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ನಡೆಯುವ ಹಬ್ಬ–ಹರಿದಿನಗಳ ಆಚರಣೆ ಉತ್ಸವ ನಂಬಿಕೆ ಸಂಪ್ರದಾಯಗಳು ಇದಕ್ಕೆ ಸಾಕ್ಷಿಯಾಗಿವೆ.

ಕೊಲ್ಲಿಪಾಕಿಯ ರೇವಣಸಿದ್ಧೇಶ್ವರ, ಸೊಲ್ಲಾಪುರದ ಸಿದ್ಧರಾಮೇಶ್ವರ, ಅರಿಕೇರಿಯ ಅಮೋಘಸಿದ್ದೇಶ್ವರ, ಸರೂರಿನ ಶಾಂತಮುತ್ತಯ್ಯ, ತೂಗುಗುಡ್ಡದ ಸಿದ್ಧಮಂಕರು ಹಾಲುಮತ ಸಮುದಾಯದ ಪರಮ ಗುರುಗಳಾದರೆ ಬೀರಪ್ಪ, ಮಾಳಪ್ಪ, ಮೈಲಾರಪ್ಪ, ಇಟ್ಟಪ್ಪ, ಬುಳ್ಳಪ್ಪ, ಹುಲ್ಲಪ್ಪ, ಚಂದಪ್ಪ ಮುಂತಾದವರು ಸಾಂಸ್ಕೃತಿಕ ವೀರರಾಗಿ ಜನಮಾನಸದಲ್ಲಿ ನೆಲೆ ನಿಂತಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಕುರುಬರ ಕುಲಗುರು ರೇವಣಸಿದ್ಧನ ಮಠಮಂದಿರಗಳಿವೆ. ನಿರ್ದಿಷ್ಟ ಅವಧಿಯಲ್ಲಿ ಜಾತ್ರೆ, ಉತ್ಸವ, ಆಚರಣೆಗಳು ಇಲ್ಲಿ ನೆರವೇರುತ್ತವೆ. ಸಾಮಾನ್ಯವಾಗಿ ರೇವಣಸಿದ್ಧೇಶ್ವರ ಜಾತ್ರೆಯ ಸಂದರ್ಭದಲ್ಲಿ ಕಂಥಾಧಾರಣಾ ಸೇವೆ, ಗದ್ದಿಗೆ ಧಾವಳಿ, ಪಲ್ಲಕ್ಕಿ ಉತ್ಸವ, ಚಂದ್ರಮಂಡಲೋತ್ಸವ, ಜಾಡಿಸೇವೆ, ಮಂಡೇಸೇವೆ, ಬಿಲ್ವವೃಕ್ಷ ಉತ್ಸವ, ಗಂಗೆ ಪೂಜೆ, ಮಡಿಲಕ್ಕಿ ಪಯಣ, ಗದ್ದುಗೆ ಸೇವೆ, ಸರ್ಪವಾಹನೋತ್ಸವ, ಉಯ್ಯಾಲೋತ್ಸವ ಆಚರಣೆಗಳನ್ನು ಕಾಣಬಹುದು.

ರೇವಣಸಿದ್ಧನ ಸೇವಾಕರ್ತರಾಗಿ ಪರಂಪರಾಗತವಾಗಿ ಸಾಗಿಬಂದ ಒಂದೊಂದು ಬುಡಕಟ್ಟುಗಳಿಗೂ ಒಂದು ನಿರ್ದಿಷ್ಟ ಕಾಯಕ ನಿರ್ಧಾರವಾಗಿರುತ್ತದೆ. ಚಾಮರದವರು,

ಗಂಧಬಟ್ಟಲಿನವರು, ಪಟಾಗಾರರು, ನಂದಿಧ್ವಜದವರು, ಉಗ್ರಾಣಿಗಳು ಹೀಗೆ ದೇವರ ಉತ್ಸವ ಕಾಲದಲ್ಲಿ ಹಂಚಿಕೆಯಾಗಿರುತ್ತವೆ.

ಕರ್ನಾಟಕವನ್ನು ಮೀರಿ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಹಂಚಿರುವ ರೇವಣಸಿದ್ಧನ ನೆಲೆಗಳಲ್ಲಿ ಆತನನ್ನು ಆರಾಧನೆಗೈಯುವ ಜಾತ್ರೆ ಉತ್ಸವಗಳು ಏಕ ಪ್ರಕಾರಗಳಲ್ಲಿ ನಡೆಯುವುದಿಲ್ಲ. ಪ್ರಾದೇಶಿಕ ವ್ಯತ್ಯಾಸದ ಹಿನ್ನೆಲೆಯಲ್ಲಿ ಸ್ಥಳೀಯ ಆಚಾರ ನಂಬಿಕೆ ಸಂಪ್ರದಾಯದ ಹಿನ್ನೆಲೆಯಲ್ಲಿ ಜರುಗುತ್ತವೆ. ಆದರೂ ಕುರುಬರ ಸಂಪ್ರದಾಯದಂತೆ ಭಂಡಾರ ಧಾರಣೆ, ಡೊಳ್ಳುಕುಣಿತ, ದೇವರು ಬೀಜಂಗೈಯುವಾಗ ಭೂಚಕ್ರದ ಕೊಡೆ ಚಾಮರ, ದೇವರ ಪೂಜಾ ಸಲಕರಣೆ, ತುಂಬಿದ ಗೂಡೆ (ಬಿದುರು ಬುಟ್ಟಿ), ಕಂಬಳಿ ಗದ್ದುಗೆ ಸಾಮಗ್ರಿ ಇರುವುದನ್ನು ಗಮನಿಸಬಹುದಾಗಿದೆ.

೬.೧.೧ ಸರೂರು ಜಾತ್ರೆ

ಕುರುಬರ ಗುರು ಪರಂಪರೆಯನ್ನು ಅವಲೋಕಿಸಿದಾಗ, ಗುರುಪರಂಪರೆಯ ಮೂಲವು ವಿಜಯಪುರ ಜಿಲ್ಲೆ ಎಂಬುದು ಮನದಟ್ಟಾಗುವುದು. ಕುರುಬರ ಗುರು ಪರಂಪರೆಯನ್ನು ಮುಖ್ಯವಾಗಿ (೧) ರೇವಣಸಿದ್ಧ ಗುರು ಪರಂಪರೆ (೨) ಸಿದ್ಧಮಂಕ ಗುರು ಪರಂಪರೆ (೩) ಅಮೋಘಸಿದ್ಧ ಪರಂಪರೆಗಳಲ್ಲಿ ಗುರುತಿಸಬಹುದಾಗಿದೆ. ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕು ಸರೂರು ಗ್ರಾಮವು ರೇವಣಸಿದ್ಧ ಸಂಪ್ರದಾಯ ಹಾಗೂ ಸಿದ್ಧಮಂಕ ಸಂಪ್ರದಾಯದ ಒಡೆಯರುಗಳಿಗೆ ಮೂಲ ನೆಲೆಯಾಗಿರುವುದು ವಿಶೇಷವಾಗಿದೆ. ಹೀಗೆ ಉಗಮಗೊಂಡ ಕುರುಬರ ಗುರುಪರಂಪರೆಗಳು ಮುಂದಿನ ಕಾಲಘಟ್ಟಗಳಲ್ಲಿ ನಾಡಿನ ಬೇರೆ ಬೇರೆ ಪ್ರದೇಶಗಳಿಗೆ ಪ್ರಸರಣಗೊಂಡಿರುವುದನ್ನು ಗುರುತಿಸಬಹುದಾಗಿದೆ. ಸರೂರಿನಲ್ಲಿ ಶ್ರೀ ರೇವಣಸಿದ್ಧೇಶ್ವರ ಮೂಲ ಗುರುಪೀಠ ಊರಾಚೆ ಬಯಲಲ್ಲಿ ಪ್ರಾಚೀನವಾದ ಪಂಚಕೂಟ ರೇವಣಸಿದ್ಧೇಶ್ವರ ದೇವಾಲಯ ಮತ್ತು ದೇವಾಲಯದ ಪಕ್ಕದಲ್ಲಿ ಬಂಡೆಗಳಿಂದ ಆವೃತ್ತವಾದ ಶಾಂತಮುತ್ತಯ್ಯನ ಗದ್ದುಗೆ ಇರುವುದು. ಈ ದೇವಾಲಯ ಹಾಗೂ ಗದ್ದುಗೆಯ ಪೂಜೆಯ ಹಕ್ಕುಳ್ಳವರು ಶಾಂತಮುತ್ತಯ್ಯನ ವಂಶಜರು. ಕಾಲಕ್ರಮೇಣ ಈ ವಂಶಜರಲ್ಲಿ ರೇವಣಸಿದ್ಧನ ಪೂಜೆಯ ಹಕ್ಕಿನ ವಿಚಾರವಾಗಿ ವ್ಯಾಜ್ಯ ನಡೆದು ಎರಡು ಗುಂಪುಗಳಾಗಿರುವುದನ್ನು ಗಮನಿಸಬಹುದಾಗಿದೆ. ಅಂತಿಮವಾಗಿ ನ್ಯಾಯಾಲಯದ ಆದೇಶದ ಪ್ರಕಾರ ೧. ಊರ ಹೊರಗಿನ ರೇವಣಸಿದ್ಧನ ದೇವಾಲಯದ ಪೂಜೆ ಉತ್ಸವ, ಜಾತ್ರೆ ಮಾಡುವ ಅಧಿಕಾರ ಒಂದು ಸಂತತಿಯವರಿಗೂ ೨. ಊರೊಳಗಿನ ರೇವಣಸಿದ್ಧನ ದೇವಾಲಯ ಹಾಗೂ ತೂಗು ಗುಡ್ಡದಲ್ಲಿರುವ ರೇವಣಸಿದ್ಧೇಶ್ವರ ಪೂಜೆ, ಉತ್ಸವ.

ಜಾತ್ರೆ ನಡೆಸುವ ಹಕ್ಕನ್ನು ಇನ್ನೊಂದು ಸಂತತಿಯವರಿಗೆ ನೀಡಲಾಗಿದೆ. ಇಂದಿಗೂ ಇಲ್ಲಿಯ ರೇವಣಸಿದ್ಧ ಜಾತ್ರೆ ಈ ನ್ಯಾಯಾಲಯ ಆದೇಶದಂತೆಯೇ ನಡೆಯುತ್ತದೆ.

ಮಹಾಶಿವರಾತ್ರಿಯ ಸಂದರ್ಭದಲ್ಲಿ ಏಳುಗುಡಿಯ ರೇವಣಸಿದ್ಧೇಶ್ವರ ಜಾತ್ರೆಯು ನಡೆಯುತ್ತದೆ. ಈ ಜಾತ್ರೆಯ ನೇತೃತ್ವ ವಹಿಸುವ ಹಾಗೂ ಶಂತಮುತ್ತಯ್ಯನ ಗದ್ದುಗೆಯ ಬಳಿ ಹೇಳಿಕೆಯನ್ನು ಮಾಡುವವರು ಮೊದಲ ಗುಂಪಿನ ಗುರು ಒಡೆಯರು. ಅದೇ ರೀತಿ ಶ್ರಾವಣಮಾಸದ ಕೊನೆಯ ಸೋಮವಾರದಂದು ಊರಿನಲ್ಲಿರುವ ರೇವಣಸಿದ್ಧನ ಜಾತ್ರೆಯ ನೇತೃತ್ವ ಹಾಗೂ ತೂಗುಗುಡ್ಡದಲ್ಲಿ (ಹಿರೇಗುಡ್ಡ) ಹೇಳಿಕೆಯನ್ನು ಮಾಡುವವರು ಎರಡನೇಯ ಗುಂಪಿನ ಗುರು ಒಡೆಯರು. ಹೀಗೆ ಸರೂರಿನಲ್ಲಿ ಶ್ರೀ ರೇವಣಸಿದ್ಧೇಶ್ವರ ಜಾತ್ರೆಯು ವರ್ಷಕ್ಕೆ ಎರಡು ಬಾರಿ ನಡೆಯುವುದು ವಿಶೇಷವಾಗಿದೆ.

ಮಹಾಶಿವರಾತ್ರಿ ಮತ್ತು ಯುಗಾದಿ ಪಾಡ್ಯದಂದು ರೇವಣಸಿದ್ಧನ ಹಾಗೂ ಶಾಂತಮುತ್ತಯ್ಯನ ಪಲ್ಲಕ್ಕಿಗಳು ತೂಗುಗುಡ್ಡಕ್ಕೆ ಹೋಗುತ್ತವೆ. ವಿಶೇಷ ಪೂಜೆಯ ನಂತರ ದೈವಗಳನ್ನು ಪಲ್ಲಕ್ಕಿಯಲ್ಲಿ ಡೊಳ್ಳುವಾದ್ಯ, ಕೊಂಬು ಕಹಳೆ ವಾದ್ಯಗಳೊಂದಿಗೆ ಊರ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತ, ಊರ ಹೊರಗಿನ ರೇವಣಸಿದ್ಧ ದೇವಾಲಯವನ್ನು ತಲುಪುವುದು. ಪಲ್ಲಕ್ಕಿಯು ದೇವಾಲಯವನ್ನು ಏಳುಬಾರಿ ಪ್ರದಕ್ಷಿಣೆ ಹಾಕುವುದು. ನಂತರ ಆಯಾ ಗದ್ದುಗೆಯ ಮೇಲೆ ಆಯಾ ದೈವಗಳನ್ನು ಸ್ಥಾಪಿಸಿ ಪೂಜಿಸುತ್ತಾರೆ. ನಂತರದಲ್ಲಿ ಸಂಪ್ರದಾಯಿಕವಾಗಿ ಒಡೆಯರುಗಳು ಹೇಳಿಕೆಗಳನ್ನು ನುಡಿವರು. ಸ್ಥಳೀಯರು ಈ ಹೇಳಿಕೆಗಳನ್ನು ಸಿದ್ದಾಟಿಕೆಗಳೆಂದೂ, ಶಿವನಿಂದ ಬಂದ ನುಡಿಗಳೆಂದೂ ಹಾಗೂ ದೈವವಾಣಿ ಎಂದು ನಂಬಿದ್ದಾರೆ. ಹೇಳಿಕೆಯ ವಾಣಿಯಂತೆ ಮುಂಬರುವ ದಿನಗಳ ಮಳೆ-ಬೆಳೆ, ಒಳಿತು-ಕೆಡುಕು ಅರಿತು ಮುಂಬರುವ ವರುಷಕ್ಕೆ ಸಿದ್ಧರಾಗುತ್ತಾರೆ.

ಪ್ರತಿ ವರುಷ ಶ್ರಾವಣ ಸೋಮವಾರ ಜೋಡುಪಲ್ಲಕ್ಕಿ ಮೆರವಣಿಗೆಯು ನಡೆಯುವುದು. ಹಾಗೂ ತೂಗುಡ್ಡದ ಏಳು-ಮುಳ್ಳು ಕಂಟಿಯ ಮೇಲೆ ಒಡೆಯರುಗಳು ನಿಂತು ಹೇಳಿಕೆ ಮಾಡುವರು. ಕುರುಬರ ಗುರು-ಪರಂಪರೆಯ ಮೂಲ ಪೀಠವಾದ ಸರೂರಿನಲ್ಲಿ ಶ್ರೀರೇವಣಸಿದ್ಧೇಶ್ವರ ಜಾತ್ರೆಯು ವರ್ಷಕ್ಕೆ ಎರಡುಬಾರಿ ಜರುಗುವುದು ವಿಶೇಷವಾಗಿದೆ. ಈ ಜಾತ್ರೆಗಳಿಗೆ ನಾಡಿನ ನಾನಾ ಕಡೆಯಿಂದ ಕುರುಬ ಜನಾಂಗದ ಭಕ್ತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬರುವರು. ಭಕ್ತವರ್ಗ ಮತ್ತು ಗುರುವರ್ಗಗಳ ನಡುವೆ ಇರುವ ಪ್ರೀತಿವಾತ್ಸಲ್ಯ ಮತ್ತು ಗುರುವರ್ಗದವರು ಭಕ್ತವರ್ಗದವರನ್ನು ಆಶೀರ್ವದಿಸುವ ಕ್ರಿಯೆಯನ್ನು ಇಲ್ಲಿ ವಿಶೇಷವಾಗಿ ಗಮನಿಸಬಹುದಾಗಿದೆ.

೬.೧.೨ ಹೊರ್ತಿ ಜಾತ್ರೆ

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹೊರ್ತಿ ಗ್ರಾಮದ ಹೊರವಲಯದಲ್ಲಿ ಪ್ರಾಚೀನ ರೇವಣಸಿದ್ದೇಶ್ವರ ದೇವಾಲಯ (ಬನದಗುಡಿ). ಊರ ಒಳಗೆ ಇತ್ತೀಚೆಗೆ ನಿರ್ಮಿಸಲಾದ

ರೇವಣಸಿದ್ಧನ ಗುಡಿ ಇದೆ. ಈ ನೆಲೆಯಲ್ಲಿ ಪ್ರತಿವರುಷ ಛಟ್ಟಿ ಅಮಾವಾಸ್ಯೆಯ ನಂತರ ಬರುವ ಮಾರ್ಗಶಿರ ಮಾಸದ ರೇವತಿ ನಕ್ಷತ್ರದಲ್ಲಿ ರೇವಣಸಿದ್ಧನ ಜಾತ್ರೆಯು ನೆರವೇರುವುದು. ಈ ಸಂದರ್ಭದಲ್ಲಿ ರೇವಣಸಿದ್ಧನ ಪಲ್ಲಕ್ಕಿಯೊಂದಿಗೆ ಸುತ್ತಮುತ್ತಲಿನ ಗ್ರಾಮದ ನಂದಿಕೋಲು, ಸದರು, ಪಲ್ಲಕಿಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತವೆ. ವಾದ್ಯ ವೈಭವಗಳೊಂದಿಗೆ ಹೊರಟ ಮೆರವಣಿಗೆ; ಮೊದಲು ಬೆಟ್ಟದ ಮೇಲಿರುವ ಮಾಳಮ್ಮನ ದರ್ಶನ ಮಾಡಿಕೊಂಡು ಬನದ ಗುಡಿ ತಲುಪುವುದು. ಜಾತ್ರೆಯು ಒಂದು ವಾರದ ಕಾಲ ನಡೆಯುವುದು. ಜಾತ್ರೆಯ ಅಂಗವಾಗಿ ಮದ್ದು ಸುಡುವುದು, ದನಗಳ ಜಾತ್ರೆ, ಜಂಗೀನಿಖಾಲಿ ಕುಸ್ತಿ ಸ್ಪರ್ಧೆ ಏರ್ಪಡಿಸುವರು. ಈ ಭಾಗದಲ್ಲಿ ನಡೆಯುವ ದನಗಳ ಜಾತ್ರೆಯು ಪ್ರಸಿದ್ಧವಾಗಿದೆ.

ಊರೊಳಗಿನ ರೇವಣಸಿದ್ಧನ ಗುಡಿಯಲ್ಲಿ ಪ್ರತಿವರ್ಷ ದೀಪಾವಳಿ ಹಾಗೂ ಯುಗಾದಿ ಹಬ್ಬಗಳ ಸಂದರ್ಭಗಳಲ್ಲಿ ವಿಶೇಷ ಆಚರಣೆಗಳು ನಡೆಯುತ್ತವೆ. ಆ ಸಂದರ್ಭಗಳಲ್ಲಿ ಬೀರದೇವರ ಫಾಲಿಕೆ, ಡೊಳ್ಳುವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ರೇವಣಸಿದ್ಧ ದೇವಾಲಯಕ್ಕೆ ಬರುವುದು. ಈ ಮೆರವಣಿಗೆಯು ರಾತ್ರಿಯಿಂದ ಬೆಳಗಿನ ಜಾವದವರೆಗೂ ನಡೆಯುವುದು. ಹೀಗೆ ಬಂದ ಬೀರದೇವರ ಮೆರವಣಿಗೆ; ರೇವಣಸಿದ್ಧನ ಪ್ರದಕ್ಷಿಣೆಯ ನಂತರ ಅಂತ್ಯಗೊಳ್ಳುವುದು. ನಂತರದಲ್ಲಿ ಹಾಲುಮತ ಜನಾಂಗದವರು, ಕಬ್ಬಿಣದ ಗುಂಡುಗಳಿಂದ ಹೊಡೆದು ಕೊಳ್ಳುತ್ತ ದೇಹವನ್ನು ದಂಡಿಸಿಕೊಳ್ಳುತ್ತಾ ಹೇಳಿಕೆ ಮಾಡುವರು. ಹೊರ್ತಿ ಗ್ರಾಮದ ರೇವಣಸಿದ್ಧನಿಗೆ ಲಿಂಗಾಯತರು ಪೂಜಾರಿಗಳಾಗಿದ್ದರೂ, ರೇವಣಸಿದ್ಧನ ಉತ್ಸವಗಳಲ್ಲಿ ಕುರುಬರ ಆಚರಣೆಗಳು ಮತ್ತು ಬೀರದೇವರ ಭಾಗವಹಿಸುವಿಕೆಗಳು ಗಮನಾರ್ಹವಾದವುಗಳು.

೬.೧.೩ ಮಾ(ಸ)ಚನೂರು ಜಾತ್ರೆ

ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ಪಂಡರಾಪುರ ತಾಲ್ಲೂಕಿನ ಮಾ(ಸ)ಚನೂರು ಗ್ರಾಮವು ರೇವಣಸಿದ್ಧನ ಪ್ರಮುಖ ನೆಲೆಯಾಗಿದೆ. ರೇವಣಸಿದ್ಧನ ಕುರಿತಾದ ಸಾಹಿತ್ಯದಲ್ಲಿ, ಮಾಚನೂರು ಬಹುಪ್ರಾಮುಖ್ಯತೆಯನ್ನು ಪಡೆದಿದೆ. ಇಲ್ಲಿ ಸಿದ್ಧೇಶ್ವರನು ಮುಖ್ಯ ದೈವವಾಗಿದ್ದಾನೆ. ಮಹಾ ಶಿವರಾತ್ರಿಯಿಂದ ಐದು ದಿನಗಳವರೆಗೆ ಜಾತ್ರೆಯು ನಡೆಯುತ್ತದೆ. ಈ ಸಂದರ್ಭದಲ್ಲಿ ಸುತ್ತಮುತ್ತ ಗ್ರಾಮದ ದೈವಗಳು ಮೆರವಣಿಗೆಯಲ್ಲಿ ದೇವಾಲಯಕ್ಕೆ ಬಂದು, ಐದು ದಿನಗಳ ಕಾಲ ಅಲ್ಲಿಯೇ ತಂಗಿ; ಜಾತ್ರೆಯಲ್ಲಿ ಪಾಲ್ಗೊಂಡು ನಂತರದಲ್ಲಿ ಸ್ವಸ್ಥಾನಕ್ಕೆ ಹೊರಡುವ ಸಂಪ್ರದಾಯ ಈವರೆವಿಗೂ ಮುಂದುವರೆದಿದೆ.

೬.೧.೪ ಇಂಗಳೇಶ್ವರ ಜಾತ್ರೆ

ವಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮವು ರೇವಣಸಿದ್ಧನ ನೆಲೆಯಾಗಿ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಹಾಗೂ ಆತ ಪವಾಡಗೈದ ಸ್ಥಳವಾಗಿದೆ.

ಪ್ರತಿ ವರುಷ ಹೊಸ್ತಿಲ ಹುಣ್ಣಿಮೆ (ಡಿಸೆಂಬರ್) ಆರಂಭವಾಗುವ ಜಾತ್ರೆಯು ಒಂದು ತಿಂಗಳಕಾಲ ನಡೆಯುವುದು. ಈ ಅವಧಿಯಲ್ಲಿ ೫ ದಿನಗಳ ಕಾಲ ರೇವಣಸಿದ್ಧನ ಒಡ್ಡೋಲಗವು ನೆರವೇರುವುದು. ಈ ಸಂದರ್ಭದಲ್ಲಿ ಸುತ್ತಮುತ್ತಲಿನ ಗ್ರಾಮದ ದೈವಗಳು ರೇವಣಸಿದ್ಧನ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡರೂ, ಇಂಗಳೇಶ್ವರ ಗ್ರಾಮದ ಬೀರದೇವರ ಪಲ್ಲಕ್ಕಿ ಮಾತ್ರ ಭಾಗವಹಿಸದಿರುವುದು ವಿಶೇಷವಾಗಿದೆ. ಜಾತ್ರಾ ಮಹೋತ್ಸವದ ತಿಂಗಳುದ್ದಕ್ಕೂ ರೇವಣಸಿದ್ಧ ಹಾಗೂ ಇತರೆ ಸಿದ್ಧರ ಕುರಿತಾದ ಡೊಳ್ಳಿನ ಹಾಡು, ಭಜನೆ, ಕುದುರೆ ಕುಣಿತ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವರು.

೬.೧.೫ ಮಣ್ಣೂರು ಜಾತ್ರೆ

ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಮಣ್ಣೂರ ಗ್ರಾಮದಲ್ಲಿ ನೀರಿನ ಬದಲಾಗಿ ಕುರಿ ಹಾಲನ್ನು ಉಪಯೋಗಿಸಿ ನಿರ್ಮಿಸಿದ ರೇವಣಸಿದ್ಧನ ದೇವಾಲಯವಿದೆ. ತನ್ನದೇ ಆದ ಸ್ಥಳ ಪುರಾಣವನ್ನು ಹೊಂದಿದೆ. ಉತ್ತರ ಕರ್ನಾಟಕದ ಅಲೆಮಾರಿ ಕುರುಬರ ನೇತೃತ್ವದಲ್ಲಿ; ಪ್ರತಿ ವರ್ಷ ರೇವಣಸಿದ್ಧರ ಜಯಂತಿಯಂದು, ಎರಡು ದಿನಗಳ ಕಾಲ ಜಾತ್ರಾ ಮಹೋತ್ಸವವು ನಡೆಯುವುದು. ಮೊದಲ ದಿನದಂದು ಬೇರೆ ಬೇರೆ ಭಾಗಗಳಿಂದ ಆಗಮಿಸುವ ಅಲೆಮಾರಿ ಕುರುಬರು ಗುಡಿಯ ಬಳಿ ಸೇರಿ; ಜಾತ್ರೆಯ ತಯಾರಿಯನ್ನು ಮಾಡಿಕೊಳ್ಳುವರು. ರಾತ್ರಿ ಗುಡಿಯ ಬಯಲಿನಲ್ಲಿ ಬಿಡಾರ ನಿರ್ಮಿಸಿಕೊಂಡು ತಂಗುವರು. ಎರಡನೇ ದಿನದಂದು ರೇವಣಸಿದ್ಧನ ಜಾತ್ರಾ ಮಹೋತ್ಸವ ಸಂಪ್ರದಾಯಿಕ ಧಾರ್ಮಿಕ ಆಚರಣೆಗಳೊಂದಿಗೆ ಶಾಂತಮುತ್ತಯ್ಯ ಸಂಪ್ರದಾಯಸ್ಥ ಒಡೆಯರುಗಳ ಮಾರ್ಗದರ್ಶನದಲ್ಲಿ ನಡೆಯುವವು.

ಈ ಸಂದರ್ಭದಲ್ಲಿ ಹೊನ್ನಾಪುರದ ಕರಿಸಿದ್ದೇಶ್ವರ, ಹಾನಗಲ್ಲು ತಾಲ್ಲೂಕು ಶಿವಪುರ ಗ್ರಾಮದ ಶ್ರೀಮಾಳಿಂಗರಾಯ, ಬನ್ನೂರಿನ ಶ್ರೀ ಚೌಡೇಶ್ವರಿ ಹಾಗೂ ಬೀರದೇವರ ಪಲ್ಲಕ್ಕಿಗಳು ಭಾಗವಹಿಸುತ್ತವೆ. ಜೊತೆಗೆ ಸುತ್ತಮುತ್ತಲಿನ ಕುರುಬ ಜನಾಂಗದವರು ಕುರಿಹಾಲಿನ ಕೊಡಗಳನ್ನು ಮೆರವಣಿಗೆಯಲ್ಲಿ ಹೊತ್ತು ತಂದು ರೇವಣಸಿದ್ಧನಿಗೆ ಅರ್ಪಿಸುವರು. ದೈವಗಳ ಜೊತೆ ಮೆರವಣಿಗೆಯಲ್ಲಿ ಹೊರಟ ರೇವಣಸಿದ್ಧನಿಗೆ ಈರಗಾರರು ಅತ್ಯಂತ ಶ್ರದ್ಧಾ ಭಕ್ತಿಯಿಂದ ಅಲಗು ಸೇವೆ ಗೈಯುವರು. ಈ ಸೇವೆ ಗೈಯ್ಯುವ ಈರಗಾರರ ಮೇಲೆ ಭಕ್ತಾದಿಗಳೆಲ್ಲರೂ ಭಂಡಾರ ಎರಚುವರು ಆಗ ಗುಡಿಯ ಸುತ್ತಮುತ್ತಲಿನ ಬಯಲೆಲ್ಲಾ ಭಂಡಾರಮಯವಾಗುವುದು ರೋಮಾಂಚನಕಾರಿಯಾಗಿದೆ.

ಗೋಧಿಹುಗ್ಗಿ, ಕುರಿಯ ಹಾಲು ಇಲ್ಲಿ ರೇವಣಸಿದ್ಧನ ನೈವೇದ್ಯ. ಗೋಧಿಹುಗ್ಗಿಯನ್ನು ಭಕ್ತಾದಿಗಳೆಲ್ಲರೂ ಸೇರಿ ಸಾಮೂಹಿಕವಾಗಿ ತಯಾರಿಸುತ್ತಾರೆ. ಹುಗ್ಗಿಯು ಕುದಿಯುವ ಸಂದರ್ಭ

ದಲ್ಲಿಯೇ ಕೈಯಿಂದಲೇ ನೇರವಾಗಿ ಹುಗ್ಗಿಯನ್ನು ತೆಗೆದು ಐದು ಎಡೆಗಳಿಗೆ ಒಡೆಯರುಗಳು ಮೀಸಲು ಅರ್ಪಿಸುವುದು, ಹುಗ್ಗಿ ಪವಾಡವೆಂದೇ ಪ್ರಸಿದ್ಧವಾಗಿದೆ. ಜಾತ್ರಾಮಹೋತ್ಸವದ ಮೊದಲ ಅಭಿಷೇಕದ ಅಂಗವಾಗಿ ೨೧ ಏಡಿನ (ನೂಲಿನ) ಕಂಬಳಿಯನ್ನು ಧಾರ್ಮಿಕವಾಗಿ, ಪಾರಂಪರಿಕ ಸಂಪ್ರದಾಯದಂತೆ ಕುರುಬ ಜನಾಂಗದವರು ರೇವಣಸಿದ್ಧನಿಗೆ ಅರ್ಪಿಸುವುವರು. ಜಾತ್ರೆಯ ಎರಡನೇ ದಿನದ ರಾತ್ರಿಯಿಡೀ ಸವಾಲ-ಜವಾಬ ಮಾದರಿ ಡೊಳ್ಳು ಪದಗಳನ್ನು ಹಾಡಿಸುವುದರ ಮುಖೇನ ಜಾತ್ರೆಯು ಸಂಪನ್ನಗೊಳ್ಳುತ್ತದೆ. ಅಲೆಮಾರಿ ಜನಾಂಗವೊಂದು, ಎಲ್ಲಿಂದಲೋ ಬಂದು ಈ ನೆಲೆಯಲ್ಲಿ ರೇವಣಸಿದ್ಧನ ಜಾತ್ರೆಯನ್ನು ತಮ್ಮದೇ ಆದ ವೈಶಿಷ್ಟ್ಯ ಪೂರ್ಣ ಆಚರಣೆಗಳೊಂದಿಗೆ ಅಂದಿನಿಂದ ಇಂದಿನವರೆಗೆ ಆಚರಿಸುತ್ತ ಬಂದಿರುವುದು ವಿಶೇಷವಾಗಿದೆ.

೬.೧.೬ ಮತ್ತಿಘಟ್ಟ ಜಾತ್ರೆ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಮತ್ತಿಘಟ್ಟ ಗ್ರಾಮದಲ್ಲಿ ರೇವಣಸಿದ್ಧೇಶ್ವರ ಮಹಾಸಂಸ್ಥಾನವಿದೆ. ಇಲ್ಲಿನ ದೈವವು ೧೨ ಗುಡಿಕಟ್ಟು ಮತ್ತು ೧೮ ಹರಿವಾಣಗಳನ್ನು ಹೊಂದಿದೆ. ಇಲ್ಲಿ ಪ್ರತಿವರುಷ ರೇವಣಸಿದ್ಧನ ಪಲ್ಲಕ್ಕಿ ಉತ್ಸವ ಜರುಗುವುದು. ಈ ಉತ್ಸವದಲ್ಲಿ ಸರದಿಯಂತೆ ೧೨ ಗುಡಿಕಟ್ಟಿನ ಎಲ್ಲ ಬೀರದೇವರುಗಳು ಭಾಗವಹಿಸುವವು. ೧೩ ವರುಷಕ್ಕೊಮ್ಮೆ ರೇವಣಸಿದ್ಧನ ಜಾತ್ರೆಯು ನೆರವೇರುವುದು. ಆ ಸಂದರ್ಭದಲ್ಲಿ ೧೨ ಬುಡಕಟ್ಟಿನ ಬೀರದೇವರ ಪಲ್ಲಕ್ಕಿಗಳು ಭಾಗವಹಿಸುವವು.

೬.೧.೭ ಕಾರೇಹಳ್ಳಿ ಜಾತ್ರೆ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಾರೇಹಳ್ಳಿಯ ರೇವಣಸಿದ್ಧನ ನೆಲೆಯಲ್ಲಿ ಪ್ರತಿ ೧೨ ವರ್ಷಗಳಿಗೊಮ್ಮೆ ತೋಪು ಜಾತ್ರೆಯು ನಡೆಯುವುದು. ಜಾತ್ರೆಯಲ್ಲಿ ಗಡಿಹಳ್ಳಿ, ಮುಗಳ್ಳಿ, ಹೊಸೂರು ಹಾಗೂ ಸೊಲ್ಲಾಪುರದ ಬೀರಲಿಂಗೇಶ್ವರ ಹಾಗೂ ಬಸವಣ್ಣ ದೈವಗಳು ಭಾಗವಹಿಸುತ್ತವೆ. ರೇವಣಸಿದ್ಧನ ಜಾತ್ರೆಯ ಸಂದರ್ಭದಲ್ಲಿ ಸೊಲ್ಲಾಪುರಕ್ಕೆ ಭಕ್ತಾದಿಗಳು ಭೇಟಿಯಿತ್ತರೆ, ಸಿದ್ಧರಾಮ ರೇವಣಸಿದ್ಧನಿಗೆ ಏಳುಕಾಲು ರೂಪಾಯಿಗಳನ್ನಲು ಕಪ್ಪಕಾಣಿಕೆಯಾಗಿ ನೀಡುವನು ಎಂಬುದು ಸ್ಥಳೀಯರ ನಂಬಿಕೆಯಾಗಿದೆ.

೬.೧.೮ ಭೆಂಡವಾಡ ಜಾತ್ರೆ

ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಭೆಂಡವಾಡ ಗ್ರಾಮದ ರೇವಣಸಿದ್ಧನ ನೆಲೆಯಲ್ಲಿ ದವನದ ಹುಣ್ಣಿಮೆಯಂದು ಆರಂಭವಾಗುವ ಜಾತ್ರೆಯು ೩ ದಿನಗಳ ಕಾಲ ನಡೆಯುವುದು. ಮೊದಲ ದಿನದಂದು ಎಲ್ಲ ದೈವಗಳ ಫಾಲಿಕೆಗಳು, ಸುತ್ತಮುತ್ತಲಿನ ಊರುಗಳ

ಭಕ್ತಾದಿಗಳು, ಕರಡಿ ಮಜಲು ತಂಡದವರು ಶ್ರೀಮಠಕ್ಕೆ ಬಂದು ಸೇರುವರು. ಎಲ್ಲ ಭಕ್ತಾದಿಗಳಿಗೂ ಅಂದು ಸಂಜೆ ಹೋಳಿಗೆ ಹಾಗೂ ಬಾನದ ಪ್ರಸಾದವಿರುತ್ತದೆ.

ಎರಡನೇಯ ದಿನದಂದು ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗುವ ದೈವಗಳ ಪಾಲಿಕೆಗಳು, ಶ್ರೀಮಠದ ಪಕ್ಕದಲ್ಲಿರುವ ಗಿರಿ ಏರಲು ಸಿದ್ಧವಾಗುತ್ತವೆ. ಗಿರಿಯ ಮೇಲಿರುವ ರೇವಣಸಿದ್ಧನ ಕಟ್ಟೆಗೆ ನೈವೇದ್ಯ ಮಾಡುವ ಸಂಪ್ರದಾಯವಿದೆ. ಕುರುಬ ಸಮಾಜದ ಒಡೆಯರುಗಳು, ತಮ್ಮ ತಮ್ಮ ಗುಂಡುಗೊಪ್ಪ, ಜಾಗಟೆ, ಭವನಾಸಿಗಳನ್ನು ರೇವಣಸಿದ್ಧನ ಕಟ್ಟೆಯ ಮೇಲಿಟ್ಟು ಸಕ್ಕರೆ ನೈವೇದ್ಯ ಮಾಡುವ ಮೂಲಕ ಸಂಪ್ರದಾಯವನ್ನು ನೆರವೇರಿಸುವರು. ಸಕ್ಕರೆ ನೈವೇದ್ಯ ಮಾಡುವ ಹಕ್ಕು ಕುರುಬ ಸಮಾಜಕ್ಕೆ ಸೇರಿದ ಒಡೆಯರುಗಳದ್ದು ಎಂಬ ಕಟ್ಟಳೆ ಇರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಮೂರನೇಯ ದಿನದಂದು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ ದೈವಗಳಿಗೆ ಪುರಸ್ಕರಿಸಿ, ಬೀಳ್ಕೊಡುವುದರೊಂದಿಗೆ ಜಾತ್ರಾ ಮಹೋತ್ಸವವು ಸಂಪನ್ನವಾಗುವುದು.

೬.೧.೯ ಅವ್ವೇರಹಳ್ಳಿ ಜಾತ್ರೆ

ರಾಮನಗರ ಜಿಲ್ಲೆಯ ಅವ್ವೇರಹಳ್ಳಿಯ ನೆಲೆಯಲ್ಲಿ ರೇವಣಸಿದ್ಧನು ತನ್ನ ಜೀವಿತ ಅವಧಿಯ ಕೊನೆಯ ದಿನಗಳನ್ನು ಮಾಯಾದೇವಿ ಹಾಗೂ ಪುತ್ರಿ ರೇವಕಾಂಬೆಯರೊಡನೆ ಕಳೆದನು ಎಂಬುದು ಈ ವರೆಗಿನ ಅಧ್ಯಯನ, ಶಾಸನಗಳಿಂದ ತಿಳಿದುಬರುತ್ತದೆ. ಪ್ರತಿ ವರುಷ ವ್ಯಾಸಪೂರ್ಣಿಮೆಯಿಂದ (ಮೇ ತಿಂಗಳು) ಐದು ದಿನಗಳ ಕಾಲ ಜಾತ್ರೆ ನೆರವೇರುವುದು. ಮೊದಲ ದಿನದ ಬೆಳಗಿನ ಜಾವದಲಿ ಅಗ್ನಿ ತುಳಿಯುವುದರ ಮುಖಾಂತರ ಶಿವಪಾರ್ವತಿಯರ ಮೂರ್ತಿಯನ್ನು ಸ್ಥಾಪಿಸುತ್ತಾರೆ. ಎರಡನೇಯ ದಿನದಂದು ಶಿವಪಾರ್ವತಿಯರ ಉತ್ಸವ ಮೂರ್ತಿಗಳನ್ನು ಗಿರಿ ಪ್ರದಕ್ಷಿಣೆ ಮಾಡಿಸುತ್ತಾರೆ. ಮೂರನೇಯ ದಿನದಂದು ರೇಣುಕಾಂಬೆಯ ಮುತ್ತಿನ ಪಲ್ಲಕ್ಕಿ ಮೆರವಣಿಗೆ ಇರುವುದು. ಈ ಮೆರವಣಿಗೆಯಲ್ಲಿ ರೇವಣಸಿದ್ಧ ಮತ್ತು ಮಾಯಾದೇವಿ ಉತ್ಸವ ಮೂರ್ತಿಗಳು ಭಾಗವಹಿಸುವುದು ವಿಶೇಷವಾಗಿರುವುದು. ಹರಕೆ ಹೊತ್ತ ಭಕ್ತಾದಿಗಳು ಬಾಯಿಗೆ ಅಸ್ತ್ರ ಹಾಕಿಕೊಳ್ಳುವುದರ ಮೂಲಕ ತೀರಿಸುವರು. ಇದನ್ನು ಸ್ಥಳೀಯರು ಬಾಯಿಕಟ್ಟುವುದು ಎಂದು ಕರೆಯುವರು. ತಂಬಿಟ್ಟಿನ ಉಂಡೆಯನ್ನು ಪ್ರಸಾದ ರೂಪದಲ್ಲಿ ಭಕ್ತಾದಿಗಳಿಗೆ ಹಂಚುವರು.

೬.೨. ಸೇವೆಗಳು

೬.೨.೧ ಕಂಥಾಧಾರಣ ಸೇವೆ

ರೇವಣಸಿದ್ಧ ಸಂಪ್ರದಾಯದ ಕುರುಬ ಒಡೆಯರುಗಳ ಬಹುಮುಖ್ಯ ಆಚರಣೆಗಳಲ್ಲಿ ಕಂಥಾಧಾರಣ ಸೇವೆಯು ಒಂದು. ಇಲ್ಲಿ ಕಂಥೆ ಎಂದರೆ ಕೈ ಹೆಣಿಗೆಯಿಂದ ಮಾಡಿದ ವಸ್ತ್ರ

ಅಥವಾ ಶೈವ ಸನ್ಯಾಸಿಗಳು ಧರಿಸುವ ವಸ್ತ್ರ ಎಂದು ಅರ್ಥೈಸಬಹುದು. ಕುರುಬ ಜನಾಂಗದವರು ತಮ್ಮ ಕುಲಗುರು ರೇವಣಸಿದ್ಧನಿಗೆ ಅಚ್ಚ ಕರಿಯ ಉಣ್ಣೆಯಿಂದ ತಯಾರಿಸಿ ಧರಿಸುವ ಒಂದು ಪವಿತ್ರ ವಸ್ತ್ರ. ಈ ಕರಿಯ ಕಂಥೆಯನ್ನು ತಯಾರಿಸುವ, ರೇವಣಸಿದ್ಧನಿಗೆ ಅರ್ಪಿಸುವ ಬಗೆ ಒಂದು ವಿಶೇಷ ಆಚರಣೆಯಾಗಿದೆ. ಕಂಥೆ ಸಿದ್ಧಪಡಿಸಲು ಅಚ್ಚಕರಿಯ ಉಣ್ಣೆಯನ್ನು ಬಳಸುವುದು ವಿಶೇಷವಾಗಿದೆ.

೬.೨.೨.೧. ಉಣ್ಣೆಯನ್ನು ಸಂಗ್ರಹಿಸುವುದು

ರೇವಣಸಿದ್ಧನಿಗೆ ಅರ್ಪಿಸುವ ಕಂಥೆ ಸೇವೆಯು ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಮಾಡುವ ಆಚರಣೆ. ಈ ಹಿಂದೆ ರೇವಣಸಿದ್ಧರಿಗೆ ಅರ್ಪಿಸಿದ ಕಂಥೆಯು ಭಿನ್ನವಾದಾಗ ಮತ್ತೊಂದು ಹೊಸ ಕಂಥೆಯನ್ನು ಅರ್ಪಿಸುವ ತೀರ್ಮಾನವನ್ನು ರೇವಣಸಿದ್ಧೇಶ್ವರ ಮಠದ ಒಡೆಯರುಗಳು, ಗೌಡರು, ಭಂಡಾರಿ, ಸಾವಿರದವರೆಲ್ಲಾ ಸೇರಿ ತೆಗೆದುಕೊಳ್ಳುತ್ತಾರೆ. ಗರ್ಭಗುಡಿಯ ರೇವಣಸಿದ್ಧೇಶ್ವರ ಸ್ವಾಮಿಯ ಎದುರಿನಲ್ಲಿ ಕರಿಯ ಕಂಬಳಿಯನ್ನು ಹಾಸಿ ಅದರ ಮೇಲೆ ತುಂಬೆಯ ಪುಷ್ಪವನ್ನು ಹಾಕುವುದರ ಮೂಲಕ ಯಾವ ದಿಕ್ಕಿನಿಂದ ಉಣ್ಣೆಯನ್ನು ತರಬೇಕೆಂದು ನಿರ್ಧರಿಸುತ್ತಾರೆ. ಆ ದಿಕ್ಕಿನೆಡೆ ಒಡೆಯರುಗಳು, ಗುಡಿಯ ಗೌಡರು, ಉಣ್ಣೆಯನ್ನು ಸಂಗ್ರಹಿಸುವವರು, ಪೂಜಾ ಸಾಮಗ್ರಿಯೊಂದಿಗೆ ಹೋಗುತ್ತಾರೆ. ಅಲ್ಲಿ ಕುರಿಹಟ್ಟಿಯ ಯಜಮಾನರನ್ನು ಭೇಟಿಮಾಡಿ ಬಂದಿರುವ ವಿಷಯ ತಿಳಿಸುವರು. ಅವರ ಕುರಿಯ ಹಿಂಡಿನಲ್ಲಿರುವ ಅಚ್ಚ ಕರಿಯ ಹುಟ್ಟುಮರಿಗೆ ರೇವಣಸಿದ್ಧೇಶ್ವರಸ್ವಾಮಿ ಪ್ರಸಾದವನ್ನು ಪ್ರೋಕ್ಷಿಸಿ, ವಿಭೂತಿಯನ್ನು ಧರಿಸಿ, ಬಿಲ್ವದಳಗಳನ್ನು ಏರಿಸಿ ಕಂಥೆಯ ಮರಿಗಳೆಂದು ಗುರುತಿಸುವರು. ಆ ಮರಿಗಳನ್ನು ಅತಿ ಜೋಪಾನವಾಗಿ ಪಾಲನೆ ಮಾಡಲು ತಿಳಿಸಿ ಹಿಂದಿರುಗುವರು. ಆ ಮರಿಗಳ ಉಣ್ಣೆಯು ಸೊಂಪಾಗಿ ಬೆಳೆದಾಗ ಪ್ರಥಮ ಕೊಯ್ಲನ್ನು ಮಾಡುವುದಕ್ಕೆ ರೇವಣಸಿದ್ಧ ಮಠದಲ್ಲಿ ಕಂಥೆಮರಿಗಳ ಉಣ್ಣೆಯನ್ನು ಕತ್ತರಿಸಲು ಹೊಸ ಕತ್ತರಿ ಉಣ್ಣೆ ತುಂಬಲು ಹೊಸಗೂಡೆ, ಗೂಡೆ ಕಟ್ಟಲು ಹೊಸ ಜೋಳಿಗೆ, ಉಣ್ಣೆ ಕತ್ತರಿಸುವವರಿಗೆ ಹೊಸಬಟ್ಟೆ ಇತ್ಯಾದಿಗಳನ್ನು ಜೋಡಿಸಿಕೊಳ್ಳುತ್ತಾರೆ. ಹೀಗೆ ಜೋಡಿಸಿಕೊಂಡ ಸಾಮಗ್ರಿಗಳೊಂದಿಗೆ ಒಡೆಯರುಗಳು, ಗೌಡರುಗಳು, ಸಾವಿರದವರ ಕಂಥೆ ಮರಿಗಳಿರುವ ಹಟ್ಟಿಗೆ ಹೋಗುವರು ಹಾಗೂ ರಾತ್ರಿ ಅಲ್ಲಿಯೇ ತಂಗಿ ಮಾರನೇ ದಿನ ಬೆಳಗಿನ ಜಾವ ಕಂಥೆಯ ಮರಿಗಳನ್ನು, ಮೈಯನ್ನು ತೊಳೆದು, ಒಣಗಲು ಬಿಡುವರು. ನಂತರದಲ್ಲಿ ಕಂಥೆಮರಿಯ ಉಣ್ಣೆಯನ್ನು ಕಟಾವು ಮಾಡಲು ನಿಯುಕ್ತಗೊಂಡವರ ತಲೆ ಕೂದಲನ್ನು ತೆಗೆಸಿ, ಸ್ನಾನಮಾಡಿಸಿ, ಹೊಸಬಟ್ಟೆಯನ್ನು ಧರಿಸಲು ನೀಡುವರು. ನಂತರ ಒಡೆಯರುಗಳು ಕತ್ತರಿ ಪೂಜೆ ಮತ್ತು ಕಂಥೆಮರಿಗೆ ಪೂಜೆಮಾಡಿ, ಅಂಗನೂಲನ್ನು ಕಟ್ಟಿ ಮಂಗಳಾರತಿಯನ್ನು ಮಾಡಿ ಉಣ್ಣೆ

ಕತ್ತರಿಸುವವರಿಗೆ ಕಂಕಣವನ್ನು ಕಟ್ಟಿ ಮುಂದಿನ ಕಾರ್ಯಕ್ಕೆ ಅನುಮತಿಸುವರು. ನಂತರದಲ್ಲಿ ಯಾರೂ ನೋಡದಂತೆ ಸುತ್ತಲೂ ಬಟ್ಟೆಯ ತೆರೆಯನ್ನು ಕಟ್ಟಿ , ಮಾತಾಡದಂತೆ ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು, ಮರಿಗೆ ತಮ್ಮ ಪಾದಸ್ಪರ್ಶವಾಗದಂತೆ ಮೊಣಕಾಲೂರಿ ಕುಳಿತುಕೊಂಡು ಉಣ್ಣೆಯನ್ನು ಕತ್ತರಿಸಲು ಪ್ರಾರಂಭಿಸುವರು. ಹೀಗೆ ಕತ್ತರಿಸಿದ ಉಣ್ಣೆಯನ್ನು ಒಡೆಯರುಗಳು ಗೂಡೆಗಳಲ್ಲಿ ತುಂಬುವರು.

ಕಂಥೆಯ ಮರಿಗಳಿಂದ ಉಣ್ಣೆ ಸ್ವೀಕರಿಸಿದ ಒಡೆಯರುಗಳು ಕುರಿ ಹಟ್ಟಿಯ ಯಜಮಾನರಿಗೆ ಹಣ್ಣು ವೀಳ್ಯೆಯದೊಂದಿಗೆ ಗೌರವ ಹಣವನ್ನು, ಹೊಸ ವಸ್ತ್ರವನ್ನು ನೀಡುವುದರ ಮುಖಾಂತರ ಮಠದ ಪರವಾಗಿ ಗೌರವಿಸುವರು. ಉಣ್ಣೆ ತುಂಬಿದ ಗೂಡೆಯನ್ನು ಹೊಸ ಜೋಳಿಗೆಯಲ್ಲಿ ಕಟ್ಟಿ ಮಂಗಳಾರತಿ ಮಾಡಿದ ನಂತರ ನೆನೆಹಾಕಿದ ಮೊಳಕೆಯ ಹೆಸರು ಕಾಳಿನ ಫಲಹಾರವನ್ನು ವಿತರಿಸುವರು. ಇಲ್ಲಿಂದ ಮೊದಲಗೊಂಡು ಕಂಥಾನೇಯ್ಗೆಯ ಸಿದ್ಧತೆ ಮುಗಿಯುವವರೆಗೆ ಗುರುಗಳು ಮತ್ತು ಕಂಥೆಯನ್ನು ನೇಯುವವರು ಹಗಲು-ರಾತ್ರಿ ನೆನೆಹಾಕಿದ ಹೆಸರು ಕಾಳಿನ ಫಲಹಾರವನ್ನೇ ಸ್ವೀಕರಿಸುವುದು, ಎಳೆನೀರು ಕುಡಿಯುವುದು ಪದ್ಧತಿ. ಇದಲ್ಲದೇ ಬೇರೆ ಆಹಾರವನ್ನು ಸ್ವೀಕರಿಸುವಂತಿಲ್ಲ. ನೀರನ್ನು ಕುಡಿಯುವಂತಿಲ್ಲ. ಈ ಕಟ್ಟಳೆ ಅಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದು, ಒಂದು ವ್ರತವಾಗಿ ಮಾರ್ಪಟ್ಟಿದೆ.

ಈ ರೀತಿಯಾಗಿ ಉಣ್ಣೆ ತುಂಬಿದ ಗೂಡೆಯನ್ನು ಹೊತ್ತು ಒಡೆಯರುಗಳು, ಭಂಡಾರಿಗಳು, ಗೌಡರುಗಳು ಯಾವುದೇ ರೀತಿಯ ಮೈಲಿಗೆ ಆಗದಂತೆ ಹಳ್ಳಿಗಳ ಹೊರಹಾದಿಯಲ್ಲಿ ಸಾಗುತ್ತಾರೆ. ದಾರಿ ಮಧ್ಯದಲ್ಲಿ ಸಿಗುವ ದೇವಾಲಯಗಳಿಗೆ ತೆರಳಿ ಕಾಯಿ-ಕರ್ಪೂರ ಸೇವೆಯನ್ನು ಸಲ್ಲಿಸುತ್ತಾ ಮುಂದುವರೆಯುವರು. ಹೀಗೆ ಹೊರಟವರು ರಾತ್ರಿಯ ಹೊತ್ತಿಗೆ ತಮ್ಮ ಮಠವಿರುವ ಊರಿನ ಹೊರಭಾಗದಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆಯುವರು. ಈ ವಿಚಾರ ತಿಳಿದ ಸಮಾಜದವರು ಗೂಡೆ ಇರುವೆಡೆ ಬಂದು ಪೂಜಿಸುವರು. ನಂತರ ರಾತ್ರಿ ಊರ ಜನರ ಸಂಚಾರ ಸ್ಥಬ್ದಗೊಂಡನಂತರ, ದೀವಟಿಗೆಯ ಬೆಳಕಲ್ಲಿ ಮಠಕ್ಕೆ ಬರುತ್ತಾರೆ. ಗೂಡೆಗೆ ಆರತಿ ಬೆಳಗಿದ ನಂತರ ರೇವಣಸಿದ್ಧ ಗದ್ದುಗೆಯ ಮೇಲೆ ಇಡುತ್ತಾರೆ.

೬.೨.೨.೨. ಕಂಥೆ ನೇಯ್ಗೆ ವಿಧಾನ

ನಾಲ್ಕು ಜನ ಒಡೆಯರುಗಳು ಮಂಡೆಯನ್ನು ಬೋಳಿಸಿಕೊಂಡು ಸ್ನಾನ ಮಾಡಿ, ಮಡಿಯುಟ್ಟು, ಉಪವಾಸದೊಂದಿಗೆ ಕಂಥೆಯನ್ನು ಸಿದ್ಧಪಡಿಸುವ ಕಾರ್ಯಕ್ಕೆ ತೊಡಗುತ್ತಾರೆ. ಈ ಕಂಥೆಯ ನೇಯ್ಗೆ ಮಾಡುವುದನ್ನು ಯಾರೂ ನೋಡದಂತೆ ಗರ್ಭಗುಡಿಯ ಒಳಗೆ

ಮಾಡುವವರು, ಒಡೆಯರುಗಳು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ಮಾತನಾಡದೇ ಕಾಲುತಾಕದಂತೆ ಕಾಲನ್ನು ಹಿಂದಕ್ಕೆ ಮಡಿಚಿಕೊಂಡು ಕುಳಿತುಕೊಂಡು ಕಂಥೆ ನೇಯುವ ಕಾರ್ಯವನ್ನು ಪ್ರಾರಂಭಿಸುವರು. ಕಂಥೆಯ ನೇಯ್ಗೆ ಪೂರ್ಣವಾಗುವವರೆಗೆ ಗರ್ಭಗುಡಿಯಿಂದ ಯಾವುದೇ ಕಾರ್ಯಕ್ಕೆ ಹೊರಬಂದರೂ ಮತ್ತೆ ಸ್ನಾನಮಾಡಿಕೊಂಡು ಒಳ ಹೋಗಬೇಕು ಎಂಬ ಕಟ್ಟಳೆಯನ್ನು ಈಗಲೂ ಪಾಲಿಸಿಕೊಂಡು ಬರಲಾಗುತ್ತಿದೆ. ಮತ್ತೊಂದು ವಿಶೇಷವೇನೆಂದರೆ ಉಣ್ಣೆಯನ್ನು ನೂಲಾಗಿಸುವ, ನೂಲನ್ನು ಉಂಡೆಯಾಗಿಸುವ, ನೂಲನ್ನು ಅಣಿಹಾಕುವ ಎಲ್ಲ ಕ್ರಿಯೆಗಳು ರಾಟಿ, ಮಗ್ಗದ ಸಹಾಯವಿಲ್ಲದೇ ಕೈಯಿಂದಲೇ ಮಾಡುವುದು ವಿಶೇಷವಾಗಿದೆ. ಕಂಥೆಯ ನೇಯ್ಗೆಯ ಕಾರ್ಯವು ಪ್ರಾರಂಭವಾದಂದಿನಿಂದ ಅದು ಮುಗಿಯುವವರೆಗೆ ಅಂದರೆ ಮೂರು –ನಾಲ್ಕು ದಿವಸಗಳ ಕಾಲ ಕುರುಬ ಸಮಾಜದ ಬಂಧುಬಾಂಧವರು ಶ್ರೀಮಠದ ಕಾರ್ಯದಲ್ಲಿ ಪಾಲ್ಗೊಳ್ಳುವರು. ಹೀಗೆ ಕಂಥೆಯನ್ನು ನೇಯುವ ಅರ್ಪಿಸುವ ಕಾರ್ಯ ಸಮಾಜದವರಿಗೆ ಸಂಭ್ರಮ ಸಡಗರ ಅದ್ದೂರಿಯ ಹಬ್ಬವಾಗಿದೆ.

೬.೨.೨.೩. ಕಂಥಾಧಾರಣೆ

ಸಾವಿರದವರು, ಗುಡಿಯಗೌಡರು ಮತ್ತು ಸಕಲ ಕುಲಬಾಂಧವರು ಸೇರಿ ಜಾತ್ರೆಯನ್ನು ಪ್ರಾರಂಭಿಸುವರು. ಜಾತ್ರೆಯ ಮೊದಲದಿನ ಬೆಳಿಗ್ಗೆ ಕುರುಬರ ಕುಲದೈವ ಶ್ರೀ ಬೀರೇಶ್ವರನನ್ನು ಗುರುಮಠಕ್ಕೆ ಕರೆತಂದು, ಧರ್ಮ ಧ್ವಜಾರೋಹಣ ಕಾರ್ಯ ನಡೆಯುತ್ತದೆ. ಈ ಜಾತ್ರೆಯ ಪ್ರಾರಂಭದಿಂದ ಅಂತ್ಯದವರೆಗೂ ಕುರುಬ ಜನಾಂಗದವರು ತಮ್ಮ ದೈನಂದಿನ ಕುಲಕಸುಬುಗಳನ್ನು ನಿಲ್ಲಿಸಿ ಜಾತ್ರೆಯಲ್ಲಿ ಉತ್ಸಾಹದಿಂದ ಭಾಗವಹಿಸುವರು.

ರೇವಣಸಿದ್ಧನಿಗಾಗಿ ಸಿದ್ಧಗೊಂಡಿರುವ ಕಂಥೆಯನ್ನು ಅರ್ಪಿಸುವುದು ಬಹುಮುಖ್ಯವಾದುದು. ಮೊದಲು ಸ್ವಾಮಿಯ ಬೆಳ್ಳಿಪಲ್ಲಕ್ಕಿ, ಬಂಗಾರದ ಗೂಡೆ ಇತ್ಯಾದಿಗಳನ್ನು ಹೊರುವರು ಮಂಡೆ ಸೇವೆಯನ್ನು ಗೈದನಂತರ, ಇವರೆಲ್ಲರಿಗೂ ಮಠದವತಿಯಿಂದ ಹೊಸಬಟ್ಟೆಯನ್ನು ನೀಡುತ್ತಾರೆ. ಇವರೆಲ್ಲರೂ ಸೇರಿ ಬೆಳ್ಳಿಪಲ್ಲಕ್ಕಿಯನ್ನು ಶುಭ್ರವಾಗಿಸಿ, ಗೂಡೆ, ಕುಚ್ಚು, ಕೊಂಬುಗಳಿಗೆ ತೊಡಿಕೆ ತೊಡಿಸಿ ದಂಡಿಗೆಯ ಮುಂದಿನ ಹಿಂದಿನ ಬಾಯಿಗಳಿಗೆ ಸಿಂಹದ ಮುಖವಾಡವನ್ನು ಸಿಕ್ಕಿಸಿ, ರೇಷ್ಮೆ ವಡಪಿ ಹಾಸಿ ನಡುವೆ ಪಂಚಕಲಶವಿರಿಸಿ, ಬಗೆಬಗೆಯ ಹೂವುಹಾರಗಳಿಂದ ಅಲಂಕಾರ ಮಾಡಿ ರೇವಣಸಿದ್ಧನ ಪಲ್ಲಕ್ಕಿಯನ್ನು ಮೆರವಣಿಗೆಗೆ ಸಿದ್ಧಪಡಿಸುವರು.

ರೇವಣಸಿದ್ಧನ ಪಲ್ಲಕ್ಕಿಯನ್ನು ಮೊದಲಿಂದಲೂ ಗೌಡರ ಮನೆಯವರೇ ಹೊರುವುದು ವಾಡಿಕೆಯಾಗಿದೆ. ಇವರನ್ನು ಮುಂದಿನ ಕೊಂಬಿನವರು, ಹಿಂದಿನ ಕೊಂಬಿನವರು ಎಂದು ಕರೆಯುವುದು ವಾಡಿಕೆಯಾಗಿದೆ. ಇವರೊಂದಿಗೆ ಬಂಗಾರದ ಗೂಡೆಯನ್ನು ನೂತನ ಕಂಥೆಯನ್ನು

ಹೊರುವ ಒಡೆಯರುಗಳು ಜೊತೆಯಲ್ಲಿಯೇ ಬರಿಗಾಲಿನಲ್ಲಿಯೇ ಗಂಗಾಸ್ನಾನಕ್ಕೆ ಹೋಗುವರು. ಇವರೊಂದಿಗೆ ಜೋಡು ನಗಾರಿಗಳನ್ನು ಕಟ್ಟಿದ ಬಸವ, ಕರಡೇವು, ಮೌರಿಜೋಡಿ ವಾದ್ಯಗಳೊಂದಿಗೆ ಬಿಳಿಯ ಛತ್ರಿ, ಚಾಮರ, ಪಕ್ಕೇವು, ಬಣ್ಣ ಬಣ್ಣದ ಮಕರ ತೋರಣ ಬಿರುದಾವಳಿಗಳಿಂದ ಕೂಡಿ ಕಸೆಪಂಚೆ, ಕೋಟು, ಪೇಟಧಾರಿಗಳಾದ ಗೌಡರು, ರೇಷ್ಮೆ ಬಟ್ಟೆ, ಜರತಾರಿ ಶಲ್ಯಾಧಾರಿಗಳಾದ ಸಾವಿರದವರು, ನಿಲುವಂಗಿ ರುಮಾಲು ಡವಾಲಿ ಸೊಂಟಪಟ್ಟಿ ಬಿಗಿದಿರುವ ಭಂಡಾರಿಗಳನ್ನೊಳಗೊಂಡ ಸ್ವಾಮಿಯ ಪರಿವಾರದವರು ಸಾಗುವರು.

ಈ ಮೆರವಣಿಗೆಯ ಮುಂದೆ ಜಾನಪದ ವಾದ್ಯಗಳಾದ ಡೊಳ್ಳು, ಚಮ್ಮೇಳ, ಕರಡೆ, ಮೌರಿ ಮುಂತಾದ ವಾದ್ಯ ವೈಭವಗಳು ಗೊರವರು, ನಂತರ ದಾಸಪ್ಪನವರು, ಬಂಗಾರದ ಗೂಡೆ ಹೊತ್ತವರು, ಕಂಥೆಯ ಗೂಡೆಯನ್ನು ಹೊತ್ತ ಒಡೆಯರುಗಳು, ವೀರಮಕ್ಕಳು, ಪೂಜಾರರು, ವಿವಿಧ ದೇವರುಗಳಿಗೆ ದೀಕ್ಷೆ ಹೊತ್ತವರು ಇವರ ಹಿಂದೆ ಭಕ್ತಾದಿಗಳು ಬಂಧು ಬಳಗದವರು ಸಾಗುತ್ತಾರೆ. ಈ ಎಲ್ಲ ಪರಿವಾರದವರ ಹಿಂದೆ ಅಲಂಕಾರಗೊಂಡಿರುವ ಶ್ರೀಗುರು ರೇವಣಸಿದ್ಧೇಶ್ವರ, ಕುಲದೈವ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಪಲ್ಲಕ್ಕಿಗಳು ಸಾಗುತ್ತವೆ.

ಈ ರೀತಿಯಲ್ಲಿ ಸಾಗಿದ ಸ್ವಾಮಿಯ ಮೆರವಣಿಗೆಯು ಸಂಜೆಯ ಹೊತ್ತಿಗೆ ಹತ್ತಿರದಲ್ಲಿಯೇ ಇರುವ ಗಂಗೆಯ ತಡೆಯನ್ನು ತಲುಪುತ್ತವೆ. ಇಡೀ ಭಕ್ತ ಸಮೂಹದವರು ಆ ರಾತ್ರಿ ಗಂಗೆಯ ತಡೆಯಲ್ಲಿಯೇ ಜಾಗರಣೆಯನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಎಲ್ಲ ಭಕ್ತ ಸಮೂಹಕ್ಕೆ ಸಾವಿರದವರು ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಮಾರನೇಯ ದಿವಸ ಬೆಳಗಿನ ಜಾವ ಸೂರ್ಯೋದಯಕ್ಕೆ ಮುಂಚೆ ದೇವತಾಕಾರ್ಯ ಆರಂಭವಾಗುತ್ತದೆ. ಗಂಗೆ ತಡಿಯಲ್ಲಿ ನೂತನವಾಗಿ ತೋಡಿರುವ ಮಜ್ಜನಬಾವಿಯನ್ನು ಪೂಜಿಸಿ, ಸುತ್ತಲೂ ತೆರೆಯನ್ನು ನಿರ್ಮಿಸಿ ಒಳಗೆ ದೇವರುಗಳನ್ನು ಮಜ್ಜನ ಬಾವಿಯ ಮುಂದೆ ಹಾಸಿರುವ ಮಡಿಯ ಮೇಲೆ ಪ್ರತಿಷ್ಠಾಪಿಸುತ್ತಾರೆ. ಮಜ್ಜನ ಬಾವಿ ರೇವಣಸಿದ್ಧಸ್ವಾಮಿಯ ಮಧ್ಯದಲ್ಲಿ ಗುರುಕಲಶವನ್ನು ಹೂಡುವರು. ಈ ಗುರುಕಲಶಕ್ಕೆ ಗುರುಗಳು ಸ್ವಾಮಿಯ ಕೊರಳಿನಿಂದ ಸೂತ್ರವನ್ನು ಬಿಡುವರು. ಈ ಕ್ರಿಯೆಯಿಂದ ಸೂತ್ರದ ಮೂಲಕ ದೈವಶಕ್ತಿಯು ಗುರುಕಲಶಕ್ಕೆ ಬರುವುದೆಂಬುದು ಬಲವಾದ ನಂಬಿಕೆ. ನಂತರ ಹೊಸದಾಗಿ ಸಿದ್ಧಗೊಳಿಸಿರುವ ಕಂಥೆಯನ್ನು, ನೇಯ್ಗೆಮಾಡಿದವರು, ಮಜ್ಜನಬಾವಿಯ ನೀರಿನಲ್ಲಿ ತೊಳೆದು ಕಂಥೆಯಲ್ಲಿರುವ ಗಂಜಿಯನ್ನು ತೆಗೆದು, ಪವಿತ್ರ ಮಾಡಿ, ಗಂಧದ ಚೆಕ್ಕೆ, ಸಾಂಬ್ರಾಣಿಯನ್ನು ಸ್ವಲ್ಪ ಸ್ವಲ್ಪವೇ ಹಾಕುತ್ತ ಅದರ ಹೊಗೆಯಲ್ಲಿಯೇ ಒಣಗಿಸುತ್ತಾರೆ. ಆ ವೇಳೆಗಾಗಲೇ ಕಂಥಾಧಾರಣ ಸೇವೆಗೆ ಸಂಬಂಧಿಸಿದ ಸಕಲ ಪೂಜಾ ಕ್ರಿಯೆಗಳನ್ನು ಇತರರು ಸಿದ್ಧಗೊಳಿಸುತ್ತಾರೆ.

ಎಲ್ಲಾ ಮಠದ ಭಕ್ತರುಗಳ ಆಶಯದಂತೆ, ಪೂರ್ವನಿಗದಿತ ಮುಹೂರ್ತಕ್ಕೆ ಸರಿಯಾಗಿ, ಮಂಗಳ ವಾದ್ಯಗಳ ಮೊಳಗುವಿಕೆ ಹಾಗೂ ಭಕ್ತರ ಹರ್ಷೋದ್ಗಾರಗಳ ನಡುವೆ, ಗುರುಗಳು ಶ್ರೀಗುರು ರೇವಣಸಿದ್ಧನಿಗೆ ನೂತನ ಕಂಥೆಯನ್ನು ಧಾರಣಮಾಡುವರು. ಆನಂತರ ಹೂವು ಹಾರಗಳನ್ನು ಧರಿಸುವ ಮೂಲಕ ಸ್ವಾಮಿಗೆ ಧಾರಣಮಾಡಿರುವ ಕಂಥೆಯು ಯಾರಿಗೂ ಕಾಣದಂತೆ ಮಾಡುವರು. ಈ ಮೊದಲು ಸ್ವಾಮಿಗೆ ಧಾರಣೆ ಮಾಡಿದ್ದ ಹಳೆಯ ಭಿನ್ನ ಕಂಥೆಯನ್ನೂ ಹಾಗೂ ನೂತನ ಕಂಥೆಯನ್ನು ತಯಾರಿಸಿ ನಂತರ ಮಿಕ್ಕ ಉಳಿದ ಉಣ್ಣೆ ಇತ್ಯಾದಿ ವಸ್ತುಗಳನ್ನು ಬಾವಿಯಲ್ಲಿಯೇ ವಿಸರ್ಜಿಸುತ್ತಾರೆ. ಹೀಗೆ ರೇವಣಸಿದ್ಧೇಶ್ವರ ಸ್ವಾಮಿಗೆ ನೂತನವಾದ ಕಂಥಾಧಾರಣ ಕ್ರಿಯೆಯನ್ನು ಮಾಡುವಾಗ ಮಠದ ಒಡೆಯರುಗಳು ಮತ್ತು ಕಂಥೆಯನ್ನು ನೇಯುವವರು ಮಾತ್ರ ತೆರೆಯ ಒಳಗಡೆ ಇರುವುದು ವಿಶೇಷ. ಸ್ವಾಮಿಗೆ ಅರ್ಪಿಸುವ ಕಂಥೆಯು ಒಂದು ಪವಿತ್ರವಾದ ವಸ್ತು, ಸಾರ್ವಜನಿಕರ ಕಣ್ಣಿಗೆ ಬಿದ್ದರೆ ಅದರ ಪವಿತ್ರತೆಗೆ ಧಕ್ಕೆ ಉಂಟಾಗುತ್ತದೆ ಎಂಬ ಬಲವಾದ ನಂಬಿಕೆ ಇರುವುದರಿಂದ ಕಂಥಾಧಾರಣೆಯನ್ನು ಗುಪ್ತವಾಗಿಯೇ ಇಡುತ್ತಾರೆ.

ಕಂಥಾಧಾರಣ ಪ್ರಕ್ರಿಯೆಗಳು ಮುಗಿದ ನಂತರ ಸುತ್ತಲು ಕಟ್ಟಿರುವ ಪರದೆಯನ್ನು ತೆಗೆಯುವರು. ನಂತರದಲ್ಲಿ ಅಲಂಕೃತ ರೇವಣಸಿದ್ಧೇಶನನ್ನು ಭಕ್ತಾದಿಗಳು ದರ್ಶನ ಪಡೆಯುವರು. ಭಕ್ತರ ದರ್ಶನ ಮುಗಿದ ನಂತರ ಮಹಾಮಂಗಳಾರತಿ ಮಾಡುವರು. ನಂತರದಲ್ಲಿ ಭಕ್ತಾದಿಗಳಿಗೆ ಅನ್ನಸಂತರ್ಪಣೆಯಾಗುತ್ತದೆ. ಇದಾದನಂತರ ರೇವಣಸಿದ್ಧೇಶ್ವರ ಹಾಗೂ ಶ್ರೀ ಬೀರೇಶ್ವರ ಪಲ್ಲಕ್ಕಿಗಳು ಮೆರವಣಿಗೆಯಲ್ಲಿ ಶ್ರೀಮಠಕ್ಕೆ ಹಿಂದಿರುಗುವವು. ಹೀಗೆ ಮೆರವಣಿಗೆ ಬರುವಾಗ ಕುರುಬ ಜನಾಂಗದ ಹೆಣ್ಣುಮಕ್ಕಳು ರೇವಣಸಿದ್ಧನ ಕುರಿತಾದ ಕಥೆ, ಪವಾಡಗಳನ್ನು ಒಳಗೊಂಡ ಜಾನಪದ ಹಾಡುಗಳನ್ನು ಹಾಡುವುದು ಒಂದು ವಿಶೇಷವಾಗಿದೆ. ಈ ಸಂದರ್ಭದಲ್ಲಿಯ ಪವಾಡದ ಹಾಡುಗಳು, ತಗರುಪವಾಡದ ಕಥೆಯನ್ನು ಒಳಗೊಂಡಿರುವ ಐತಿಹಾಸಿಕ ಸಂಗತಿಗಳನ್ನು ಒಳಗೊಂಡಿರುವುದನ್ನು ಗಮನಿಸಬಹುದಾಗಿದೆ. ರೇವಣಸಿದ್ಧೇಶ್ವರರಿಗೆ ಕಂಥಾಧಾರಣೆಯನ್ನು ಮಾಡುತ್ತಿರುವ ಸಂದರ್ಭದಲ್ಲಯೇ ಇಂಥಹಾ ಹಾಡುಗಳನ್ನು ಹಾಡುತ್ತಿರುವುದರಿಂದ; ರೇವಣಸಿದ್ಧೇಶ್ವರರು ಕುರುಬರ ಕುಲಕ್ಕೆ ಗುರುವಾಗಿ ನೇಮಕಗೊಂಡಿರುವುದರ ಸ್ಮರಣೆಗಾಗಿಯೇ ಈ ಆಚರಣೆಯು ಬಂದಿರಬಹುದಾಗಿದೆ.

ಹೀಗೆ ಹೊಸ ಕಂಥೆಯನ್ನು ಧಾರಣೆಮಾಡಿದ ರೇವಣಸಿದ್ಧನನ್ನು ಪಲ್ಲಕ್ಕಿ ಉತ್ಸವದಲ್ಲಿ ಕರೆದುಕೊಂಡು ಬಂದು ಮಠದ ಗದ್ದುಗೆಯಲ್ಲಿ ಪ್ರತಿಷ್ಠಾಪಿಸುತ್ತಾರೆ. ನಂತರದಲ್ಲಿ ಅವರಿ ತಳಿಗೆ ಪ್ರಸಾದವನ್ನು ಭಕ್ತಾದಿಗಳಿಗೆ ನೀಡುವರು. ಈ ಪ್ರಸಾದವನ್ನು ಮಠದ ಗೌಡರು ಹಾಗೂ

ಗುರುಗಳು ಸೇರಿ ನೀಡುವರು. ಪ್ರತಿಯೊಂದು ಬುಡಕಟ್ಟು ಗೌಡರಿಗೆ, ಕಂಥೆ ನೇಯ್ಗೆ ಮಾಡಿದವರಿಗೆ, ಹರಿವಾಣದವರಿಗೆ, ದೀವಟಗೆ ಹಿಡಿದವರಿಗೆ, ಮಂಗಳವಾದ್ಯದವರಿಗೆ ಹೀಗೆ ಜಾತ್ರೆಯಲ್ಲಿ ಭಾಗವಹಿಸಿ ತಮ್ಮ ಪಾಲಿನ ಸೇವೆ ಸಲ್ಲಿಸಿದ ಎಲ್ಲರಿಗೂ ಗಂಧಾಕ್ಷತೆಯನ್ನಿಟ್ಟು ಹಣ್ಣು ವೀಳ್ಯೆಯನ್ನು ನೀಡಿ, ಹಾರ ಹಾಕಿ ಗೌರಿಸಿ, ತಳಿಗೆ ತುಂಬಿದ ಅರವಿಯನ್ನು ಹೊರಿಸಿ ಕಳಿಸುತ್ತಾರೆ. ಜಾತ್ರೆಯ ಆರಂಭದಲ್ಲಿ ಏರಿಸಿದ ಧರ್ಮಧ್ವಜಕ್ಕೆ ಪೂಜೆ ನೆರವೇರಿಸಿ ಅವರೋಹಣ ಮಾಡುವರು. ಕುಲದೈವವಾದ ಬೀರಲಿಂಗೇಶ್ವರ ಸ್ವಾಮಿಗೆ ಗುರುಮಠದ ಜಾತ್ರೆಯಲ್ಲಿ ಭಾಗವಹಿಸುವುದಕ್ಕಾಗಿ ನೆನಪಿನ ಕಾಣಿಕೆಯೊಂದಿಗೆ ಸಕಲ ಧಾರ್ಮಿಕ ವಿಧಿವಿಧಾನಗಳಿಂದ ಬೀಳ್ಕೊಡುವರು. ಇಲ್ಲಿಗೆ ರೇವಣಸಿದ್ಧೇಶ್ವರರ ಕಂಥಾಧಾರಣ ಆಚರಣೆಯು ವಿಧಿವತ್ತಾಗಿ ಸಂಪನ್ನಗೊಳ್ಳುವುದು. ಕಂಥಾ ಸೇವೆಯನ್ನು ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಮಾಡುವುದು ಕಂಡುಬರುತ್ತದೆ. ಸಾಮಾನ್ಯವಾಗಿ ರೇವಣಸಿದ್ಧನಿಗೆ ಧರಿಸಿದ ಕಂಥೆಯು ಭಿನ್ನವಾದಾಗ ಮತ್ತೊಂದು ಹೊಸಕಂಥೆಯನ್ನು ಅರ್ಪಿಸುವ ಏರ್ಪಾಟನ್ನು ಮಾಡುತ್ತಾರೆ. ಬಹು ವಿಸ್ತೃತವಾದ ಭೌಗೋಳಿಕ ನೆಲೆಯನ್ನು ಹೊಂದಿರುವ ರೇವಣಸಿದ್ಧನ ನೆಲೆಗಳನ್ನು ಉತ್ತರ ಕರ್ನಾಟಕದ ನೆಲೆಗಳು ಮತ್ತು ದಕ್ಷಿಣ ಕರ್ನಾಟಕದ ನೆಲೆಗಳೆಂದು ವಿಭಜಿಸಿದಲ್ಲಿ; ದಕ್ಷಿನ ಕರ್ನಾಟಕದ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಹಂದನಕೆರೆ, ಚಿತ್ರುದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಶ್ರೀರಾಮಪುರ ರೇವಣಸಿದ್ಧನ ನೆಲೆಗಳಲ್ಲಿ ಅಂದಿನಿಂದ ಇಂದಿನವರೆಗೂ ನಿಯಮಿತವಾಗಿ ಕಂಥಾಧಾರಣ ಸೇವೆಯನ್ನು ಆಚರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಹಾಗೂ ಈ ಭಾಗದ ಕೆಲ ನೆಲೆಗಳಲ್ಲಿ (ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಾರೇಹಳ್ಳಿಯಲ್ಲಿ) ಹಿಂದಿನಿಂದ ನಡೆದುಕೊಂಡು ಬಂದಿದ್ದ ಕಂಥಾಧಾರಣೆ ಉತ್ಸವ ಇತ್ತೀಚಿನ ದಿನಗಳಲ್ಲಿ ನಡೆಯದಿರುವುದನ್ನು ಕಾಣಬಹುದಾಗಿದೆ.


ಬಹುಶಃ ಈ ಸೇವೆಯನ್ನು ಮಾಡಲು ತಗಲುವ ಖರ್ಚುವೆಚ್ಚಗಳು ತುಂಬ ಅಧಿಕವಾಗಿರುವುದು ಹಾಗೂ ಈ ಸೇವೆ ಗೈಯುವ ಸಂದರ್ಭದಲ್ಲಿ ಆಚರಿಸಬೇಕಾಗಿರುವ ಧಾರ್ಮಿಕ ರೀತಿ, ರಿವಾಜು, ಕಟ್ಟಳೆಗಳ ಜೊತೆಗೆ ಒಡೆಯರ ಸಾಮಾಜಿಕ ಸ್ಥಿತಿಗತಿಗಳ ಕಾರಣವಿರಬಹುದಾಗಿದೆ. ರೇವಣಸಿದ್ಧ ಪರಂಪರೆ, ಆತನ ಪರಂಪರೆಯ ಒಡೆಯರುಗಳು ಹಾಗೂ ವಿಶೇಷವಾಗಿ ಕುರುಬಜನಾಂಗ, ಜನಾಂಗೀಯ ಮೂಲ ದೈವಗಳ ಜೊತೆಯಲ್ಲಿ ಆಚರಿಸುವ ಕಂಥಾಧಾರಣೆ ಸೇವೆಯು ರೇವಣಸಿದ್ಧ ಸಂಪ್ರದಾಯದ ಒಂದು ಅವಿಭಾಜ್ಯ ಅಂಗವಾಗಿದೆ. ಕಾರಣ ಕಂಥಾಧಾರಣ ಸೇವೆಯು ರೇವಣಸಿದ್ಧ ಪರಂಪರೆಯ ಸಾಂಸ್ಕೃತಿಕ ಚಹರೆಗಳನ್ನು ಅನಾವರಣಗೊಳಿಸುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ, ತುಮಕೂರು ಜಿಲ್ಲೆಯ

ಚಿಕ್ಕನಾಯಕನಹಳ್ಳಿಯಲ್ಲಿ ನಡೆದ ಇತ್ತೀಚಿನ ಕಂಥಾಧಾರಣೆ ಸೇವೆಯನ್ನು ಅವಲೋಕಿಸಲಾಗಿದೆ. ಈ ಸಂಬಂಧಿ ವೀಡಿಯೋ ಮತ್ತು ಛಾಯಾಚಿತ್ರಗಳನ್ನು ತೆಗೆಯಲಾಗಿದೆ. (ವಿವರಗಳನ್ನು ಸಲ್ಲಿಸಲಾಗಿದೆ). ರೇವಣಸಿದ್ಧನ ಉತ್ತರ ಕರ್ನಾಟಕದ ನೆಲೆಗಳಲ್ಲಿ ಕಂಥಾಧಾರಣಸೇವೆ ಆಚರಣೆಯಲ್ಲಿರುವುದು ಕಂಡು ಬರುವುದಿಲ್ಲ. ಕುರುಬರ ಇನ್ನೆರೆಡು ಗುರುಪರಂಪರೆಗಳಾದ ಸಿದ್ಧರಾಮ ಪರಂಪರೆ ಮತ್ತು ಅಮೋಘಸಿದ್ಧಪರಂಪರೆಗಳ ಪೈಕಿ ಸಿದ್ಧರಾಮ ಪರಂಪರೆಯ ಶ್ರೀ ಸಿದ್ಧರಾಮೇಶ್ವರನಿಗೂ ಕಂಥೆ ಅರ್ಪಿಸುವ ಪದ್ಧತಿ ಇರುವುದು. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಸಿದ್ಧರಾಮೇಶ್ವರನಿಗೂ, ಗೋಡೆಕೆರೆ ಸಿದ್ಧರಾಮೇಶ್ವರನಿಗೂ ಪ್ರತಿ ಹನ್ನೆರೆಡು ವರ್ಷಗಳಿಗೊಮ್ಮೆ ಕಂಥೆ ಸೇವೆ ಆಚರಣೆಗಳಲ್ಲಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿಯೂ ಕಂಥೆಯನ್ನು ಅರ್ಪಿಸುವವರು ಕುರುಬ ಜನಾಂಗದವರಾಗಿದ್ದಾರೆ. ಈ ನೆಲೆಗಳಲ್ಲಿ ಈ ಎರಡೂ ಗುರುಪರಂಪರೆಯ ನಡುವಿರುವ ಸಂಬಂಧವನ್ನು ಗಮನಿಸಬಹುದಾಗಿದೆ.

೬.೨.೨ ಬಿಲ್ಲುಗೂಡಿನ ಸೇವೆ

೬.೨.೨.೧. ಎಡೆ ಬಿಲ್ಲುಗೂಡಿನ ಸೇವೆ

ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲ್ಲೂಕಿನ ಶಿವನಿ ಗ್ರಾಮದಲ್ಲಿ ಸುಮಾರು ೫೦೦ ರಿಂದ ೬೦೦ ವರುಷಗಳ ಹಳೆಯ ರೇವಣಸಿದ್ಧನ ಸಿಂಹಾಸನವಿದೆ. ಈ ನೆಲೆಯ ರೇವಣಸಿದ್ಧ ದೈವಕ್ಕೆ ಏಳುಬುಡಕಟ್ಟುಗಳು ಹಾಗೂ ಒಂದು ಹರಿವಾಣವನ್ನು ಹೊಂದಿದೆ. ಇಲ್ಲಿ ನಡೆಯುವ ಹಲವು ಆಚರಣೆಗಳಲ್ಲಿ; ಕಾರ್ತಿಕ ಮಾಸದಲ್ಲಿ ನಡೆಯುವ ೧೦೧ ಎಡೆ ಬಿಲ್ಲುಗೂಡಿನ ಸೇವೆಯು ಒಂದು. ವಿಶಿಷ್ಟ ಸೇವೆಯಾಗಿದೆ. ಈ ಸೇವೆಯಲ್ಲಿ ಒಡೆಯರುಗಳು, ಗೌಡರುಗಳು, ದಾಸಪ್ಪಗಳು, ಮಡಿವಾಳ ಜನಾಂಗದವರು ಹಾಗೂ ಭಕ್ತಾದಿಗಳು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಣೆಯಲ್ಲಿ ಪಾಲ್ಗೊಳ್ಳುವರು. ಕಾರ್ತಿಕಮಾಸದ ಮೊದಲ ದಿನ ರೇವಣಸಿದ್ಧನ ಸಿಂಹಾಸನದ ಮುಂದಿನ ಪ್ರಾಂಗಣದಲ್ಲಿ ಗುಡಿ ಗೌಡರು ಮತ್ತು ಒಡೆಯರುಗಳ ಸಮ್ಮುಖದಲ್ಲಿ ಧಾರ್ಮಿಕ ಬಾವುಟ ಹಾರಿಸುವರು; ನಂತರದಲ್ಲಿ ಕಾರ್ತಿಕಮಾಸದ ಧಾರ್ಮಿಕ ಕಾರ್ಯಗಳಿಗೆ ಚಾಲನೆ ದೊರೆಯುವುದು. ಅಂದು ಒಡೆಯರುಗಳು, ಈರಗಾರರು, ದಾಸಪ್ಪಗಳು ಹಾಗೂ ಒಂದು ಹೊತ್ತಿನವರ ಸಮ್ಮುಖದಲ್ಲಿ ಗುಡಿಗೌಡರು ದೊಡ್ಡ ದೀಪವನ್ನು ಬೆಳಗಿಸಿ ದೀಪಗಂಬಕ್ಕೇರಿಸುವರು. ಸಂಜೆ ದೀಪೋತ್ಸವವನ್ನು ಏರ್ಪಡಿಸುವರು. ಈ ದೀಪೋತ್ಸವ ಕಾರ್ತಿಕ ಮಾಸದುದ್ದಕ್ಕೂ ಸಂಜೆ ನೆರವೇರುವುದು. ಎರಡನೇಯ ದಿನದಂದು ಬೆಳಿಗ್ಗೆ ರೇವಣಸಿದ್ಧನ ಉತ್ಸವ ಮೂರ್ತಿಯು ಮೆರವಣಿಗೆಯಲ್ಲಿ ಊರ ಹೊರಗಿನ ದೊಡ್ಡಬಾವಿ (ಶಿವನಿ) ಯಡೆ ತೆರಳುವುದು. ಅಲ್ಲಿಯೇ ೧೦೧ ಎಡೆ-ಬಿಲ್ಲುಗೂಡಿನ ಸೇವೆಯು ನೆರವೇರುವುದು.



ಮಡಿವಾಳರು ನಡೆಮುಡಿ ಬಟ್ಟೆಯನ್ನು; ಚೌಕಾಕಾರವಾಗಿ ಹಾಸಿದ ನಂತರ ಬಿಲ್ಲುಗೂಡಿನ ಸೇವೆ ಜರುಗುವ ಸ್ಥಳ ನಿಖರವಾದ ನಂತರ, ಸೇವಾ ವಿಧಿ ವಿಧಾನಗಳು ಪ್ರಾರಂಭವಾಗುವವು. ಹೀಗೆ ನಡೆ–ಮುಗಿ ಬಟ್ಟೆಯಿಂದ ರಚಿಸಲಾದ ಚೌಕಾಕಾರದಲ್ಲಿ ಪೂರ್ವಕ್ಕೆ ಹೊರ–ಒಳಹೋಗುವ ದಾರಿಯನ್ನು ಅನುವು ಮಾಡಿಕೊಡುತ್ತಾರೆ. ಈ ಚೌಕಾಕಾರದ ಕೇಂದ್ರ ಬಿಂದುವಿನಲ್ಲಿ ಕರಿಯ ಕಂಬಳಿ ಗದ್ದುಗೆ ಮಾಡಿ ಗುರುಕಳಸ ಹೂಡುವರು. ಚೌಕದ ನಾಲ್ಕು ಮೂಲೆಗಳಲ್ಲಿ ಒಡೆಯರ, ದಾಸಪ್ಪಗಳ, ಗುಡಿಗೌಡರ ಮತ್ತು ಮಡಿವಾಳರಿಗೆ ಮೀಸಲಾದ ಎಡೆ ಏರಿಸಲು ಅನುವು ಮಾಡಿಕೊಡುವರು. ಗುರುಕಳಸದ ಸುತ್ತ ಖಾಲಿ ಇರುವ ಅಂಗಳದಲ್ಲಿ ೧೦೧ ಬಾಳೆ ಎಲೆಗಳನ್ನು ಭಕ್ತಾದಿಗಳ ನೈವೇದ್ಯಕ್ಕಾಗಿ ಮೀಸಲಿರಿಸುವರು. ಈ ೧೦೧ ಬಾಳೆ ಎಲೆಗಳಿಗೆ ಬೇಯಿಸದ ಹಸಿ ಕಾಳುಗಳನ್ನು ನೈವೇದ್ಯ ಮಾಡಿದ ನಂತರ ಒಡೆಯರುಗಳು ರೇವಣಸಿದ್ಧನ ಸೇವೆಯನ್ನು ಪ್ರಾರಂಭಿಸುವರು. ನಂತರದಲ್ಲಿ ರೇವಣಸಿದ್ಧನಿಗೆ ತಳಿಗೆ ಮತ್ತು ಫಲಹಾರದ ನೈವೇಯವಾಗುವುದು. ಒಡೆಯರುಗಳ ಪೂಜೆಯ ನಂತರ, ದಾಸಪ್ಪಗಳು ಬಿರುದಾವಳಿಗಳನ್ನು ಪರಾಕಗಳನ್ನು ಸ್ತುತಿಸುವುದರ ಮೂಲಕ ರೇವಣಸಿದ್ಧನ ಪೂಜೆ ಮಾಡುವರು. ಈರ್ವರ ಪೂಜೆಯ ನಂತರ ಅವರವರಿಗೆ ಮೀಸಲಾದ ಎಡೆಯನ್ನು ಅವರವರಿಗೆ ನೀಡುವರು. ಹಾಗೂ ೧೦೧ ಬಾಳೆ ಎಲೆಗಳಲ್ಲಿನ ಎಡೆಗಳನ್ನು ಪ್ರಸಾದ ರೂಪವಾಗಿ ನೀಡಿದ ನಂತರ ಸಂಪನ್ನವಾಗುವುದು. ೧೦೧ ಎಡೆ ಬಿಲ್ಲಿನ ಸೇವೆಯು ಇಂದಿಗೂ ಈ ನೆಲೆಯಲ್ಲಿ ನಡೆಯುತ್ತಿದ್ದು; ಈ ರೀತಿಯ ಆಚರಣೆಗಳು ರೇವಣಸಿದ್ಧನ ಇತರ ನೆಲೆಗಳಲ್ಲಿ ಕಂಡುಬರುವುದಿಲ್ಲ.

೬.೨.೩ ಅಂಬು ಹೊಡೆಯುವ ಸೇವೆ

ಅಂಬು ಹೊಡೆಯುವ ಸೇವೆಯು ಶಿವನಿ ರೇವಣಸಿದ್ಧನ ನೆಲೆಯಲ್ಲಿ ಪ್ರತಿ ವರುಷ ನವಮಿ (ದಸರಾ)ಯಲ್ಲಿ ನೆರವೇರುವ ಒಂದು ವಿಶೇಷ ಸೇವೆಯಾಗಿದೆ. ನವಮಿಯ ಮೊದಲ ದಿನದಂದು ದೇವಾಲಯ ಹಾಗೂ ರೇವಣಸಿದ್ಧನಿಗೆ ಸಂಬಂಧಿಸಿದ ಸಾಂಪ್ರದಾಯಿಕ ಪರಿಕರಗಳಾದ ಕತ್ತಿ, ಕಠಾರಿ ಇತ್ಯಾದಿಗಳನ್ನು ಶುಭ್ರಗೊಳಿಸಿ, ದೈವಕ್ಕೆ ಹೊಸ ಉಡುಗೆ-ತೊಡುಗೆಗಳನ್ನು ತೊಡಿಸುವರು. ಸಿಂಹಾಸನಕ್ಕೆ ಸಂಬಂಧಿಸಿದ ಎಲ್ಲ ಧಾರ್ಮಿಕ ಮುಖಂಡರುಗಳು ಸೇರಿ ಧಾರ್ಮಿಕ ಬಾವುಟ ಆರೋಹಣ ಮಾಡುವ ಮೂಲಕ; ವಿದ್ಯುಕ್ತವಾಗಿ ನವಮಿಯ ಧಾರ್ಮಿಕ ಆಚರಣೆಗಳಿಗೆ ಚಾಲನೆ ನೀಡುವರು. ನಂತರದಿಂದ ೯ ದಿನಗಳ ಕಾಲವೂ ತ್ರಿಕಾಲದಲ್ಲಿ ವಿಶೇಷ ಪೂಜೆಗಳು ನೆರವೇರುತ್ತವೆ.

ನವಮಿ ಆಚರಣೆಯ ಮುಕ್ತಾಯ ಸಂಕೇತವಾಗಿ ಕೊನೆಯ ಧಾರ್ಮಿಕ ರೀತಿ-ರಿವಾಜಾಗಿ, ೯ನೇಯ ದಿನದಂದು ಒಡೆಯರು, ಗೌಡರು, ಗುಡಿಕಟ್ಟಿನವರು, ಹರಿವಾಣದವರು ರೇವಣಸಿದ್ಧನ ಸಿಂಹಾಸನದಲ್ಲಿ ಸೇರುವರು. ಶ್ರೀಮಠದಲ್ಲಿ ಬನ್ನಿಮರದ ಕೊಂಬೆ, ಫಲಸಹಿತವಿರುವ ಬಾಳೆದಿಂಡು ತೆಂಗಿನಕಾಯಿಗಳನ್ನು ಒಂದೆಡೆ ಇಟ್ಟು; ಪರಂಪರಾಗತ ಸಂಪ್ರದಾಯದಂತೆ, ಅತ್ಯಂತ ಶ್ರದ್ಧಾಪೂರಕವಾಗಿ ಪೂಜೆ ಮಾಡುವರು. ರೇವಣಸಿದ್ಧ ಗದ್ದುಗೆಯ ಮೇಲಿರುವ ಬಿಲ್ಲನ್ನು ಹೂಡಿ ಬನ್ನಿಮರದ ಕೊಂಬೆಗೆ ಬಾಣ ಬಿಡುವರು. ಆಗ ಗೌಡರುಗಳು ಕತ್ತಿಯಿಂದ ಮೊದಲು ತೆಂಗಿನಕಾಯಿ ನಂತರ ಬಾಳೆಕಂದು ಕತ್ತರಿಸಿ, ಅರಿಶಿಣ ನೀರು ಹೊಯ್ಯುವ ಮುಖಾಂತರ ಓಕಳಿಯಾಡುವರು. ನವಮಿ ಆಚರಣೆಯ ಅಂತ್ಯವಾಗಿ ಧರ್ಮ ಬಾವುಟಕ್ಕೆ ಎಡೆ ಹಾಕಿ, ಏಳು ಊರಿನ ಭಕ್ತಾದಿಗಳಿಗೆ ಫಲಹಾರ ವಿತರಿಸಿ, ಬಾವುಟ ಅವರೋಹಣ ಮಾಡುವರು.

೬.೩ ಆಚರಣೆಗಳು ಮತ್ತು ದೀಕ್ಷೆಗಳು

೬.೩.೧ ಮದುವೆ ಸಂದರ್ಭದ ಆಚರಣೆಗಳು

ಪ್ರತಿಯೊಂದು ಜನಾಂಗವು ತನ್ನ ಧಾರ್ಮಿಕ ವಿಧಿವಿಧಾನಗಳನ್ನು ಮದುವೆ-ಮುಂಜಿವೆಯಂತಹಾ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಲು ಪುರೋಹಿತ ವರ್ಗವನ್ನು ಸೃಷ್ಟಿಸಿಕೊಂಡು ಬಂದಿರುವುದು ಕಂಡು ಬರುತ್ತದೆ. ಇದಕ್ಕೆ ಕರ್ನಾಟಕದ ಕುರುಬ ಜನಾಂಗವು ಹೊರತಾಗಿಲ್ಲ. ಪ್ರಾಚೀನ ಕಾಲದಿಂದಲೇ ಒಡೆಯರು ಎಂಬ ವಿಶಿಷ್ಟವಾದ ಗುರುವರ್ಗದವರನ್ನು ಸ್ಥಾಪಿಸಿಕೊಂಡು, ಅವರ ಮೂಲಕ ತಮ್ಮ ಧಾರ್ಮಿಕ ಆಚರಣೆಗಳನ್ನು ಮತ್ತು ಮದುವೆ, ಮುಂಜಿ, ಜನನದ ಮರಣದ ಸಂದರ್ಭದ ವಿಧಿವಿಧಾನಗಳನ್ನು ನೆರವೇರಿಸಕೊಂಡು ಬರುತ್ತಿದ್ದಾರೆ. ಈ ಒಡೆಯರುಗಳು ರೇವಣಸಿದ್ಧ, ಸಿದ್ಧರಾಮೇಶ್ವರ, ಅಮೋಘಸಿದ್ಧರ ಆರಾಧಕರು

ಹಾಗೂ ಅನುಯಾಯಿಗಳು. ಕುರುಬರಲ್ಲಿಯ ಒಡೆಯರದು ಒಂದು ಪ್ರತ್ಯೇಕವಾದ ಗುಂಪು. ಪುರೋಹಿತ ವರ್ಗದವರಾದ ಇವರು ಕುರುಬರಿಗೆ ಗುರುಸ್ಥಾನದಲ್ಲಿರುವುದರಿಂದ ಇವರ ಸಾಮಾಜಿಕ ಸ್ಥಾನ-ಮಾನ ಕುರುಬರಿಗಿಂತ ಮೇಲಿನದ್ದಾಗಿದೆ. ಆದರೂ ಇದು ಒಂದು ಪ್ರತ್ಯೇಕ ಜಾತಿಯಾಗದಿರುವುದು ವಿಶೇಷವಾಗಿದೆ. ಈವರೆಗಿನ ಅಧ್ಯಯನಗಳಿಂದ ರೇವಣಸಿದ್ಧನ ಶಿಷ್ಯನಾದ ಶಾಂತಮುತ್ತಯ್ಯನಿಗೆ ಕುರುಬರ ಗುರುಪರಂಪರೆಯಲ್ಲಿ ಪ್ರಮುಖ ಸ್ಥಾನವಿರುವುದು ತಿಳಿಯುವುದು. ಆದ್ದರಿಂದ ಈ ಶಾಂತಮುತ್ತಯ್ಯನು ಕುರುಬರ ಗುರುಪರಂಪರೆಯ ಮೂಲಪುರುಷನೆಂದು ಹಾಗೂ ಸರೂರು ಕುರುಬರ ಮೂಲ ಪೀಠವೆಂದು ಗುರುತಿಸಬಹುದು.

ಸಾಮಾನ್ಯವಾಗಿ ಕುರುಬರ ಮದುವೆಗಳು ಕುಲಗುರುಗಳಾದ ಒಡೆಯರುಗಳ ನೇತೃತ್ವದಲ್ಲಿಯೇ ನಡೆಯುತ್ತವೆ. ಈ ಒಡೆಯರುಗಳು ದೊರಕದೆ ಇದ್ದ ಸಂದರ್ಭದಲ್ಲಿ ಲಿಂಗಾಯತ ಜಂಗಮರು ಕುರುಬರ ಲಗ್ನದ ಪೌರೋಹಿತ್ಯವನ್ನು ವಹಿಸುವರು. ಈ ಸಂಬಂಧವನ್ನು ಕುರುಬ ಮತ್ತು ಲಿಂಗಾಯತರ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಈ ಹಿಂದೆ ಎಲ್ಲಿಯೂ ಕುರುಬರ ಮದುವೆಗೆ ಬ್ರಾಹ್ಮಣ ಪುರೋಹಿತರನ್ನು ಆಹ್ವಾನಿಸುತ್ತಿರಲಿಲ್ಲ. ಆದರೆ ಇತ್ತೀಚೆಗೆ ಆಧುನಿಕತೆಯ ಪರಿಣಾಮವಾಗಿ ಬ್ರಾಹ್ಮಣ ಪೌರೋಹಿತ್ಯವನ್ನು ಅಪ್ಪಿಕೊಳ್ಳುತ್ತಿದ್ದಾರೆ.

ಒಡೆಯರುಗಳು ಕುರುಬ ಜನಾಂಗದವರ ಮದುವೆಗಳಲ್ಲಿ ಪುರೋಹಿತನ ಕಾರ್ಯವನ್ನು ನಿರ್ವಹಿಸಿ; ಮದುವೆಗೆ ಒಂದು ರೀತಿಯ ಧಾರ್ಮಿಕ ಸ್ವರೂಪವನ್ನು ತಂದುಕೊಡುತ್ತಾರೆ. ವಧು-ವರರಿಗೆ ಮುತ್ತೈದೆಯರು ಸುರಗಿ ನೂಲನ್ನು ಸುತ್ತಿ ಹಸೆಮಣೆಯ ಮೇಲೆ ಕುಳ್ಳಿರಿಸಿ ಎಣ್ಣೆ ಹಚ್ಚಿ ಅರಿಶಿಣ ಹಚ್ಚಿ ಸ್ನಾನ ಮಾಡಿಸಿ ಹೊಸಬಟ್ಟೆ ತೊಡಿಸುತ್ತಾರೆ. ಒಡೆಯರು ಕರಿಯ ಕಂಬಳಿ ಗದ್ದುಗೆಯ ಮೇಲೆ ಕುಳಿತು ವಧುವರರಿಗೆ ಕಂಕಣಧಾರಣೆಯನ್ನು ಮಾಡಿಸಿ, ತಾಳಿಯನ್ನು ಪೂಜಿಸಿ ವರನಿಂದ ವಧುವಿಗೆ ಕಟ್ಟಿಸುತ್ತಾರೆ. ಮಾಂಗಲ್ಯ ಧಾರಣೆಯ ನಂತರ;

ಕಲಿಕಲಿಯಾಗಿ

ಕರ್ಣಜ್ಜನಾಗಿ

ಭೀಮಣ್ಣನಾಗಿ

ಭಿಲ್ಲ ರಾಜ್ಯವನಾಳಿ

ಗುರು ರೇವಣಸಿದ್ಧ ಕಟ್ಟಿದ

ಸೇಸೆ ಸ್ಥಿರವಾಗಿರಲಿ

ಸರೂರು ಶಾಂತಮುತ್ತಯ್ಯ

ಕಟ್ಟಿಸಿದ ಕಲ್ಯಾಣ ಸ್ಥಿರವಾಗಿರಲಿ

ಸೋಬತಿ ಸೋಪಾನ

ಸೋಬತಿ ಸೋಪಾನ

ಎಂದು ಒಡೆಯರು ವಧು-ವರರಿಗೆ ಶುಭ-ಹಾರೈಕೆಯ ಮಂತ್ರವನ್ನು ಹೇಳುತ್ತಾರೆ. ನಂತರ ತೆಂಗಿನಕಾಯಿ ಮುಚ್ಚಿದ ಹಾಲಿನ ಕರಗದಿಂದ ನವದಂಪತಿಗಳ ಕೈಗೆ ಎಲ್ಲರಿಂದ ಹಾಲು ಎರೆಯಿಸುವರು. ಇಬ್ಬರಿಗೂ ಸಂಬಂಧ ಮಾಲೆಯನ್ನು ಪರಸ್ಪರ ಹಾಕಿಸಿ ಅಡಿಕೆಯ ಗೋಟನ್ನು ವಸ್ತ್ರದ ಒಳಗಿಟ್ಟು ಇಬ್ಬರ ಸೆರಗಿಗೂ ಗಂಟು ಹಾಕಿಸುತ್ತಾರೆ. ಇದನ್ನು ಬ್ರಹ್ಮಗಂಟು ಎಂದು ಕರೆಯುತ್ತಾರೆ. ಇಲ್ಲಿಗೆ ಮದುವೆಯ ಆಚರಣೆಯ ಮುಖ್ಯ ಭಾಗವು ಮುಗಿಯುತ್ತದೆ. ಪೌರೋಹಿತ್ಯದ ಪ್ರತಿಫಲವಾಗಿ ಒಡೆಯರುಗಳು ದಕ್ಷಿಣೆ, ದವಸಧಾನ್ಯ ಇತ್ಯಾದಿಗಳನ್ನು ಪಡೆಯುವರು. ಅಂದಿನಿಂದ ಇಂದಿಗೂ ಕುರುಬ ಜನಾಂಗದ ಮದುವೆಯ ಪೌರೋಹಿತ್ಯವನ್ನು ಒಡೆಯರುಗಳು ಮುನ್ನೆಡೆಸಿಕೊಂಡು ಬಂದಿರುವುದನ್ನು ರೇವಣಸಿದ್ಧನ ನೆಲೆಗಳ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಯಿತು.

೬.೩.೨ ಜನನ ಋತುಮತಿಯಾದ ಸಂದರ್ಭದ ಶುದ್ಧಿ ಆಚರಣೆಗಳು

ಒಡೆಯರುಗಳು ಕುರುಬ ಜನಾಂಗದವರ ಮನೆಗಳಲ್ಲಿ ಜನನ/ಋತುಮತಿಯಾದ ಸಂದರ್ಭಗಳಲ್ಲಿ; ಅದರ ಸೂತಕವನ್ನು ಒಡೆಯರು ಕಳೆದು ಬರುತ್ತಾರೆ. ಆದರೆ ಒಡೆಯರುಗಳು ಸಾಮಾನ್ಯವಾಗಿ ಜನನ, ಋತುಮತಿ ಆಚರಣೆಗಳಲ್ಲಿ ಭಾಗವಹಿಸುವುದಿಲ್ಲ; ಜನನವಾದ ಐದು ದಿವಸ ಇಲ್ಲವೇ ಹದಿಮೂರನೇಯ ದಿವಸಕ್ಕೆ ಸೂತಕ ಮುಗಿದ ಮೇಲೆ ಭಕ್ತರು ಮನೆಯನ್ನು ಸಾರಿಸಿ, ಹಾಸಿಗೆ ಹೊದಿಕೆಗಳನ್ನು ತೊಳೆದು ಮಡಿ ಮಾಡಿದ ನಂತರ ಒಡೆಯರುಗಳನ್ನು ಆಹ್ವಾನಿಸುತ್ತಾರೆ. ಅವರನ್ನು ಕರಿಯ ಕಂಬಳಿಯ ಮೇಲೆ ಕುಳ್ಳಿರಿಸಿ ಅವರ ಪಾದವನ್ನು ತೊಳೆದು ಪಾದೋದಕವನ್ನು ತೆಗೆದುಕೊಂಡು ಮನೆಯೆಲ್ಲ ಚಿಮುಕಿಸಿ, ಮನೆಯ ಸೂತಕವನ್ನು ಕಳೆಯುತ್ತಾರೆ. ಋತುಮತಿಯಾದ ಸಂದರ್ಭದಲ್ಲಿಯೂ ಸೂತಕವನ್ನು ಇದೇ ರೀತಿಯಾಗಿ ಕಳೆಯುವರು.

೬.೩.೩. ಮರಣ ವಿಧಿ ಸಂದರ್ಭದ ಆಚರಣೆಗಳು

ಕುರುಬರ ಮನೆಯಲ್ಲಿ ಸಾವು ಸಂಭವಿಸಿದಾಗ ಒಡೆಯರೇ ಹೋಗಿ ಕರ್ಮ ಕಳೆಯಬೇಕು. ಸಾವು ಸಂಭವಿಸಿದ ಮನೆಯಲ್ಲಿ ಬಂಧುಗಳು ಶವದ ಸ್ನಾನವನ್ನು ಮಾಡಿಸಿ ಹೊಸ ಬಟ್ಟೆಯನ್ನು ತೊಡಿಸಿದ ನಂತರ, ಒಡೆಯರುಗಳು ಶವದ ಹಣೆಗೆ ವಿಭೂತಿಯನ್ನು ಇಟ್ಟಾಗ ಶವ ಸಂಸ್ಕಾರಕ್ಕೆ

ಸಿದ್ಧವಾಗುತ್ತದೆ. ಮರಣ ಸಂಭವಿಸಿದ ಮೂರನೇಯ ದಿನಕ್ಕೆ ಮನೆಯನ್ನು ಸಾರಿಸಿ ಬಟ್ಟೆ ಬರೆಗಳನ್ನು ಮಡಿ ಮಾಡಿಕೊಂಡು, ಸೂತಕ ಕಳೆಯಲು ಒಡೆಯರನ್ನು ಆಹ್ವಾನಿಸುತ್ತಾರೆ. ಅವರ ಪಾದವನ್ನು ತೊಳೆದು, ಪಾದೋದಕವನ್ನು ಮನೆಯಲೆಲ್ಲಾ ಸಿಂಪಡಿಸಿ ಮರಣದ ಸೂತಕವನ್ನು ಕಳೆದುಕೊಳ್ಳುತ್ತಾರೆ.

೬.೩.೪ ಹೂವು ಕೇಳುವುದು

ಹೂವು ಕೇಳುವುದು ಎಂದರೆ ಭಕ್ತಾದಿಗಳು ಮುಂದೆ ತಾವು ತೆಗೆದುಕೊಳ್ಳುವ ತೀರ್ಮಾನಕ್ಕೆ ದೈವದ ಅಪ್ಪಣೆ ಪಡೆಯುವುದು ಎಂದು ಅರ್ಥೈಸಬಹುದಾಗಿದೆ. ಹಾಗೂ ಇದೊಂದು ವಿಶಿಷ್ಟವಾದ ನಂಬಿಕೆಯಾಗಿದೆ. ಈ ನಂಬಿಕೆಯನ್ನು ಸಾಮಾನ್ಯವಾಗಿ, ಎಲ್ಲ ದೇವಾಲಯಗಳಲ್ಲಿ ಕಾಣಬಹುದಾದರೂ ಕುರುಬರ ಗುರು ಸಂಪ್ರದಾಯದ ಶ್ರೀ ರೇವಣಸಿದ್ಧೇಶ್ವರ, ಸಿದ್ಧರಾಮೇಶ್ವರ, ಅಮೋಘಸಿದ್ಧ ಸಂಪ್ರದಾಯದ ದೇವಾಲಯಗಳಲ್ಲಿ ಬಹು ಮುಖ್ಯವಾಗಿ ಗಮನಿಸಬಹುದಾಗಿದೆ. ಹೂವು ಕೇಳುವುದು ಎಂದರೆ, ದಿನದ ಬೆಳಗಿನ ಸಾಯಂಕಾಲದ ಸ್ವಾಮಿಯ ಪೂಜೆಯು ಮುಗಿದ ನಂತರ ಒಡೆಯರುಗಳು ಸ್ವಾಮಿಯ ತಲೆಯ ಮೇಲೆ ಹೂವನ್ನು ಇಡುವರು. ಆ ಹೂವು ಸ್ವಾಮಿಯ ಬಲಗಡೆ ಬಿದ್ದರೆ ಶುಭವೆಂದೂ, ತಾವು ಅಂದುಕೊಂಡ ಕೆಲಸವಾಗುವುದೆಂದೂ ಹಾಗೂ ಕಾರ್ಯಕ್ಕೆ ಸ್ವಾಮಿಯ ಅನುಮತಿ ದೊರಕಿತೆಂದು ಭಾವಿಸುತ್ತಾರೆ. ಹೀಗೆ ಏರಿಸಿದ ಹೂವು ಸ್ವಾಮಿಯ ಎಡಭಾಗಕ್ಕೆ ಬಿದ್ದರೆ ಅಶುಭವೆಂದು ತಾವು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡ ಕಾರ್ಯಗಳು ಆಗುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ. ಕುರುಬ ಜನಾಂಗವು ಪಾಲಿಸಿಕೊಂಡು ಬಂದಿರುವ ಪರಂಪರಾಗತ ನಂಬಿಕೆಗಳಲ್ಲಿ ಇದೂ ಒಂದಾಗಿದೆ. ಯಾವುದೇ ಶುಭಕಾರ್ಯ ಮಾಡುವ ಮೊದಲು ತಮ್ಮ ಕುಲಗುರುವಿನ/ ಕುಲದೈವದ ಅಪ್ಪಣೆಯನ್ನು ಹೂವು ಕೇಳುವ ಮುಖಾಂತರ ಪಡೆಯುತ್ತಾರೆ. ಈ ಹೂವು ಕೇಳುವ ನಂಬಿಕೆಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ರೇವಣಸಿದ್ಧನ ನೆಲೆಯಲ್ಲಿ ಅತ್ಯಂತ ಪ್ರಸಿದ್ಧವಾಗಿರುವುದನ್ನು ಗಮನಿಸಬಹುದಾಗಿದೆ. ಈ ಹೂವು ಕೇಳುವ ನಂಬಿಕೆಯನ್ನು ಉತ್ತರ ಕರ್ನಾಟಕದ ರೇವನಸಿದ್ಧ, ಅಮೋಘಿ ಸಿದ್ಧನ ನೆಲೆಗಳಲ್ಲಿಯೂ ಕಾಣಬಹುದಾಗಿದೆ. ಈ ಭಾಗದಲ್ಲಿ ಹೂವು ಕೇಳುವುದಕ್ಕೆ "ಕೌಲು ಕೇಳುವುದು " ಪತ್ರಿ ಕೌಲು ಕೇಳುವುದು ಎಂದು ಕರೆಯುತ್ತಾರೆ.

೬.೩.೫ ವ್ಯಾಜ್ಯ ಪರಿಹಾರ ಶುದ್ಧೀಕರಣ ಕ್ರಿಯೆ

ಕುರುಬರ ಗುರುಪರಂಪರೆಯ ಒಡೆಯರುಗಳು: ಸಮಾಜದ ಧಾರ್ಮಿಕ ಆಚರಣೆಯ ಮುಖಂಡತ್ವವಹಿಸಿ, ಸಾಂಪ್ರದಾಯಿಕ ಆಚರಣೆಗಳನ್ನು ನಡೆಸಿಕೊಡುವುದರ ಜೊತೆ ಜೊತೆಗೆ: ಸಮಾಜದಲ್ಲಿ ಶಾಂತಿ-ಸಹಬಾಳ್ವೆಯನ್ನು ಮೂಡಿಸುವಲ್ಲಿ ಒಡೆಯರುಗಳ ಪಾತ್ರ ಹಿರಿದಾಗಿದೆ.

ಕುರುಬ ಕುಲ ಬಾಂಧವರಲ್ಲಿ ನಡೆದ ಜಗಳದಲ್ಲಿ ಚಪ್ಪಲಿಯಿಂದ ಹೊಡೆದಾಡಿದ್ದರೆ; ಚಪ್ಪಲಿಯಿಂದ ಹೊಡಿಯಿಸಿಕೊಂಡ ವ್ಯಕ್ತಿಯನ್ನು ಶುದ್ಧಿಗೊಳಿಸಿ ಕುಲದ ಒಳಗೆ ಸೇರಿಸಿಕೊಳ್ಳುವಲ್ಲಿ ಒಡೆಯರುಗಳೇ ಬೇಕು. ಹಾಗೂ ಅನೈತಿಕ ಸಂಬಂಧದಿಂದಾಗಿ ಕುಲದಿಂದ ಹೊರಗೆ ಹಾಕಿಸಿಕೊಂಡಿರುವ ವ್ಯಕ್ತಿಗಳನ್ನು ದಂಡಹಾಕಿ ವಸೂಲಿ ಮಾಡುವುದರ ಮೂಲಕ ಶುದ್ಧಿಗೊಳಿಸುವವರು ಒಡೆಯರುಗಳೇ ಆಗಿದ್ದಾರೆ.

ಕುರುಬರಲ್ಲಿ ಕುಲದ ಕಟ್ಟು ಪಾಡುಗಳಿರುವುದು ಹಾಗೂ ಅಂತಹ ಬಿಗಿಯಾದ ಕಟ್ಟುಪಾಡುಗಳನ್ನು ಕುಲದ ಪ್ರತಿಯೊಬ್ಬರೂ ಪಾಲಿಸಿಕೊಂಡು ಬರುವುದು ನಿಯಮ. ಒಂದು ವೇಳೆ ಈ ನಿಯಮಗಳನ್ನು ಮೀರಿದ ಪಕ್ಷದಲ್ಲಿ; ಮೊದಲ ಹಂತವಾಗಿ ಕುಲದ ಮುಖಂಡರುಗಳಾದ ಕಟ್ಟೆಮನೆಗೌಡ, ಬಳಗದಗೌಡ, ಹಟ್ಟಿಗೌಡ, ಕೋಲ್ಕಾರ, ಭಂಡಾರಿ, ಬಳಗದ ಯಜಮಾನರುಗಳು ಸೇರಿ ವಿಚಾರಣೆಯನ್ನು ಮಾಡಿ ನ್ಯಾ ತೀರ್ಮಾನಿಸುವರು. ಆಗಲೂ ಸಹ ಆ ವ್ಯಕ್ತಿ ತನ್ನ ತಪ್ಪನ್ನು ತಿದ್ದಿಕೊಂಡು ಸರಿಯಾದ ಮಾರ್ಗದಲ್ಲಿ ನಡೆಯೇ ಹೋದರೆ, ಅಂಥವರ ವಿಚಾರವನ್ನು ಒಡೆಯರ ಗುರುಸನ್ನಿಧಿಗೆ ಒಪ್ಪಿಸುವರು. ಈ ಎರಡನೇಯ ಹಂತದ ನ್ಯಾಯ ತೀರ್ಮಾನವೇ ಅಂತಿಮವಾದದ್ದು; ಎಲ್ಲಿಯೂ ತಲೆಭಾಗದವರು ಗುರುಸನ್ನಿಧಿಯಲ್ಲಿ ಭಾಗಲೇಬೇಕು. ಹೀಗೆ ಗುರು ಒಡೆಯರು ನ್ಯಾಯ ತೀರ್ಮಾನದ ವಿವರಗಳನ್ನು ರೇವಣಸಿದ್ಧನ ನೆಲೆಗಳಲ್ಲಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಯಿತು. ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ಗಮನಿಸಬಹುದಾಗಿದೆ.

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕು ಡಂಬಳದ ಶ್ರೀ ರೇವಣಸಿದ್ಧೇಶ್ವರ ಗುರುಮನೆಯ ಕ್ಷೇತ್ರಕಾರ್ಯ ಸಂದರ್ಭದಲ್ಲಿ; ಅಲ್ಲಿನ ಒಡೆಯರಾದ ಶ್ರೀ ಶಿವಕುಮಾರ, ಚನ್ನವೀರಯ್ಯ ಗುರುವಿನವರು, ತಲೆಮಾರುಗಳಿಂದ ತಮ್ಮ ಬಳಿ ಇದ್ದ ಕೆಲವು ಕಾಗದ ಪತ್ರಗಳನ್ನು ನೀಡಿದರು. ಆ ಕಾಗದ ಪತ್ರಗಳನ್ನು ಗಮನಿಸಿದಾಗ, ವಚನಪತ್ರ, ನ್ಯಾಯತೀರ್ಮಾನಕ್ಕೆ ಭಿನ್ನವಿಸಿದ ಪತ್ರ, ಶುದ್ಧಚಾರಿತ್ರ್ಯ ಪತ್ರ ಹಾಗೂ ಕಟ್ಟೆಮನೆ ಉತ್ತರದಾಯತ್ವಕ್ಕೆ ಸಂಬಂಧಿಸಿದಂತೆ ಒಡೆಯರುಗಳು ನೀಡಿದ ತೀರ್ಮಾನಗಳಾಗಿವೆ.

ಪತ್ರ : ೧

ಶ್ರೀಮದಲಿಂಗ ಚಕ್ರವರ್ತಿಗಳಾದ ರಾಜಪುರೋಹಿತ ರಾಜಮಾನ್ ರಾಜಶ್ರೀ ಧಾರವಾಡ ಜಿಲ್ಲಾ ಗದಗ ತಾಲ್ಲೂಕು ಮುಂಡರಗಿ ಪೀಠ ಪೈಕಿ ಡಂಬಳ ಸಂಸ್ಥಾನ ಮಠದಲ್ಲಿ ಉರುವ ಶ್ರೀ ಗುರುರೇವಣಸಿದ್ಧೇಶ್ವರ ಮಹಾಸ್ವಾಮಿ ಸನ್ನಿಧಿಗೆ ಬರಕೊಟ್ಟ ವಚನ ಪತ್ರವು ಯಂತಿ ನಮಸ್ಕಾರಗಳು.

ಆಡಪಿ ಸೋಮಾಪುರ ಹಾಲುಮತದವರು ಗುರುಗಳಿಗೆ ಕೊಂಡದರಿಂದ ನಮ್ಮ ದೈವದಲ್ಲಿ ಕ್ರಿಂಸಾ ಆಚಾರ ನಡೆಯುದರಿಂದ ನಮ್ಮ ಗ್ರಾಮಲ್ಲಿ ೫ ಮಂದಿ ಪಂಚರನ್ನು ನೇಮಿಸಬೇಕು

ಅಂತಾ ಗುರುಗಳಿಗೆ ತಿಳಿಸಿದರು. ಆದ್ದರಿಂದ ದೈವದ ಅನುಮತಿಯಿಂದ ಪಂಚರು ಗುರುಗಳ ಹೇಳಿಕೆ ಪ್ರಕಾರ ನಡೆಕೊಳ್ಳುತ್ತೇವೆಂದು ಒಪ್ಪಿದ್ದರಿಂದ ಪಂಚರನ್ನು ನೇಮಿಸಿರುತ್ತೇವೆ. ಅವರು ಯಾರು (೧) ಸಂಜೀವಪ್ಪ ಸೋಮನ ಕಟ್ಟಿ (೨) ಮರಿಯಪ್ಪ ಜಡಿ (೩) ಮಾದೇವಪ್ಪಾ ಕರಿ (೪) ಹನುಮಪ್ಪ ಹೊಸಳ್ಳಿ (೫) ಗೋಣೆಪ್ಪ ಯೀರಜ್ಜ (೬) ಮರಿಸಂಗಪ್ಪ ಹುಡೇದ ಯೀ ೫ ಮಂದಿ ಪಂಚರು ಗುರುಗಳ ಹೇಳಿಕೆ ಪ್ರಕಾರ ಜೀ ತಪ್ಪದೆ ನಡೆದು ಕೊಳ್ಳುತ್ತವೆ ಅಂತಾ ಬರಕೊಟ್ಟ ವಚನ ಪತ್ರವು ಮತ್ತು ಪಂಚರು ಹೇಳಿದ ಪ್ರಕಾರ ದೈವದವರುನ ನೆಡಕೊಳುತ್ತೇವೆ ಅಂತಾ ಬರಕೊಟ್ಟ ವಚನ ಪತ್ರವು. ಯಿಂಥಿ ನಮಸ್ಕಾರಗಳು.

ಈ ಪತ್ರಕ್ಕೆ ಹಾಲುಮತ ಕೇಂದ್ರ, ಸರೂರು ಮಠದ ಮುದ್ರೆ ಇದ್ದು, ಯಾವುದೇ ದಿನಾಂಕವನ್ನು ನಮೂದಿಸಿಲ್ಲ. ಹಾಗೂ ಈ ಪತ್ರಕ್ಕೆ ೨೦ ಮಂದಿ ಸಾಕ್ಷಿದಾರರು, ತಮ್ಮ ಎಡಗೈ ಹೆಬ್ಬಟ್ಟಿನ ಗುರುತನ್ನು ಕೆಲವರು ಹಸ್ತಾಕ್ಷರವನ್ನು ಹಾಕಿದ್ದಾರೆ(ಅನುಬಂಧ: ೧).

ಈ ಪತ್ರದಲ್ಲಿ ಅಡವಿ ಸೋಮಾಪುರ ಹಾಲುಮತ ಜನಾಂಗದವರು, ತಮ್ಮ ಗ್ರಾಮದಲ್ಲಿ ಕ್ರಿಯಾ ಆಚಾರ ನಡೆಯುತ್ತಿಲ್ಲವಾದ್ದರಿಂದ, ಇವುಗಳ ನೇತೃತ್ವವನ್ನು ವಹಿಸಿಕೊಳ್ಳಲು ಐದು ಜನ ಪಂಚಮರನ್ನು ನೇಮಿಸುವಂತೆ, ಡಂಬಳದ ಶ್ರೀ ಗುರು ರೇವಣಸಿದ್ಧೇಶ್ವರ ಗುರುಮಠಕ್ಕೆ ಭಿನ್ನವಿಸಿಕೊಂಡಿದ್ದರಿಂದ, ಶ್ರೀ ಗುರುಮಠದ ಒಡೆಯರು; ಗುರುಗಳ ಆದೇಶದಂತೆ ನಡೆಯುವ ಷರತ್ತಿನೊಂದಿಗೆ ೫ ಜನ ಪಂಚರನ್ನು ನೇಮಿಸಿರುವ ಉಲ್ಲೇಖವನ್ನು ಇದು ಒಳಗೊಂಡಿದೆ.

ಪತ್ರ: ೨

"ವೇ॥ರಾ॥ರಾ ಗುರುವರ್ಯರಾದ ರೇವಣಯ್ಯನವರ ಪಾದಸನ್ನಿಧಿಗೆ ಈ ಪತ್ರ ಬರೆಯಲಿಕ್ಕೆ ಕಾರಣವೇನೆಂದರೆ, ಮಲ್ಲಪ್ಪ ಸತ್ಯಪ್ಪ, ಗೊಣೆಪ್ಪ, ಹನುಮಪ್ಪ ಹೊಸಳ್ಳಿ ಇವರು ಬಂದು ದೈವದ ಮುಂದೆ ಹೇಳಿದರು ನಾವು ಕೇಳಿದಿವಿ. ಅವರು ನಾಲ್ಕು ಮಂದಿ ನಾವು ನಾಲ್ಕುಮಂದಿ ಹೇಳಿದಿವಿ ಊರೊಳಗೆ ಹಾಗೂ ಹೀಗೂ ಅಂತಾರ ನೀನು ರಂಡಿ ಮುಂಡಿಯಾಗಿ ವಳ್ಳೇರೀತಿಯಾಗಿ ಬಾಳೇವು ಮಾಡಿಕೊಂಡು ಹೋಗುವಾ ಅಂತಾ ಹೇಳಿದಿವಿ ಹಾಗಾದರೆ ನಮ್ಮ ಮನಿ ಸನೆಕ ಬಾಇಲ್ಲದಿದ್ದರೆ ಬರಬೇಡಾ ಅಂತ ಚೆನ್ನವ್ವ ಹೊಸಳ್ಳಿ ಹೇಳಿದಳು ಹಾಗಾದರೆ ನನ್ನಯನ್ನ ಕಂಡು ಬರವೇಡಾ ಅಂತ ಯಲ್ಲವ್ವ ಹೊಸಳ್ಳಿ ಇಕಿ ಕಾಲನವು ಕೈಯೊಳಗೆ ಹಿಡಕೊಂಡು ವಗೆದಳು ಅದು ತಪ್ಪಿ ತಳಗಡಿ ಬಿತ್ತು ಅಂತಾ ಹೇಳಿದರು. ನಾವು ದೈವದವರು ನಿಮ್ಮ ಕಡೆಗೆ ಕಳಿಸಿರುತ್ತೇವೆ. ತಾವು ಬರಬೇಕು ತಮಗೆ ಅನಕೂಲ ಇಲ್ಲದಿದ್ದರೆ ಬಂದವನ ಕೂಡ ನೀವು ಉತ್ತರ ಕಳಿಸಬೇಕು. ಈ ಪತ್ರಕ್ಕೆ ನಾಲ್ಕು ಹೆಬ್ಬಟ್ಟಿನ ಗುರುತುಗಳು ಸೇರಿದಂತೆ ಹತ್ತು ಜನರ ಹಸ್ತಾಕ್ಷರಗಳಿವೆ. ಮತ್ತು ಯಾವದೇ ದಿನಾಂಕವನ್ನು ನಮೂದಿಸಿರುವುದಿಲ್ಲ. (Annexure-II).

ಈ ಪತ್ರವು ಇಬ್ಬರು ವ್ಯಕ್ತಿಗಳ ನಡುವೆ, ಜಗಳ ನಡೆಯುವಾಗ ಮಾತಿನ ಚಕಮಿಕಿ ನಡೆದು, ಒಬ್ಬರು ತಮ್ಮ ಚಪ್ಪಲಿಯನ್ನು ಕೈಗೆತೆಗೆದುಕೊಂಡು ಇನ್ನೊಬ್ಬ ವ್ಯಕ್ತಿಯೆಡೆ ಬೀಸಿದಾಗ, ಅದು ಗುರಿ ತಪ್ಪಿ ಕೆಳಗಿ ಬಿದ್ದದ್ದು; ಈ ಕಾರಣದಿಂದಾಗ ಉಂಟಾದ ಧಾರ್ಮಿಕ ದಿಗ್ಬಂಧನ ಉಂಟಾದಾಗ, ಈ ಪ್ರಕರಣವನ್ನು ಶುದ್ಧೀಕರಿಸಲು ಸಂಬಂಧಿಸಿದ ಗ್ರಾಮಸ್ಥರು ಶ್ರೀಗುರು ರೇವಣಸಿದ್ಧೇಶ್ವರ ಗುರುಮಠದ ಒಡೆಯರುಗಳಿಗೆ ಬೇಡಿಕೊಂಡ ಪತ್ರವಿದಾಗಿದೆ. ಇಲ್ಲಿ ಒಡೆಯರುಗಳು ಸ್ವತಃ ಘಟನೆ ನಡೆದ ಊರಿಗೆ ಬರಲು ಶಕ್ಯವಾಗದೇ ಹೋದಲ್ಲಿ; ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಧಾರ್ಮಿಕ ತೀರ್ಮಾನ ಮತ್ತು ಶುದ್ಧೀಕರಣದಂತಹ ಕ್ರಿಯೆಗಳಿಗೆ ಪತ್ರದ ಮುಖೇನ ತಿಳಿಸಿದರೂ ಸಾಕು ಎಂದು ದೂರುದಾರರು ಭಿನ್ನವಿಸುದುದು, ಒಡೆಯರ ಆ ಕಾಲದ ಸಾಮಾಜಿಕ ಘನತೆ–ಗೌರವಗಳನ್ನು ಎತ್ತಿ ಹಿಡಿಯುತ್ತದೆ.

ಪತ್ರ : ೩

ಶ್ರೀ ಗುರು ಪ್ರಸನ್ನ

ರಾ॥ರಾ ಶ್ರೀ ಮದ್ಘನಲಿಂಗ ಚಕ್ರವರ್ತಿಗಳಾದ ಹಾಲುಮತಕ್ಕೆ ಅದ್ಧ್ಯಕ್ಷರಾದ ರಾಜಾದಿರಾಜ ಪೂಜರಾದ ವೇದಮರ್ತಿಗಳಿಂದ ಬಸಯ್ಯನವರು ತಾಲ್ಕು ಗದಗ ಜಿ ಧಾರವಾಡ ಸಂಸ್ಥಾನ ಡಂಬಳ ಯಿವರ ಮುಖಾವಳಿಯಿಂದ ಆದ ಶುದ್ಧ ಚಾರಿತ್ರ ಪತ್ರವು – ತಮ್ಮಲ್ಲಿ ಯಾವತ್ತು ಭಕ್ತ ಮಂಡಳಿಯವಾಗ ತಿಳಿಸುವುದೇನೆಂದರೆ–ಅಡವಿ ಸೋಮಾಪುರದಲ್ಲಿಯಿರುವ ದುರಗವ್ವ ಕೊಂ ರಾಯಪ್ಪ ಪುರದ ಯಿಕೆಯು ತನ್ನ ಅಳಿಯನಾದ ರಾಮಪ್ಪ ತಂದಿ ಬಸಪ್ಪ ಹುಡೆದ ಯಿತನಿಗೆ ಚೀ ಅಬುಯ ಮಾಡಿದಳು ಅದರ ಬಗ್ಗೆ ರಾಮಪ್ಪನು ನನಗೆ ದೋಷ ಬಂತೆಂದು ತಿಳಿದುಕೊಂಡು ತನ್ನ ದೋಷ ಕಳೆದುಕೊಳ್ಳಲಿಕ್ಕೆ ಗುರುಗಳಿಗೆ ಮತ್ತು ದೈವದವರಿಗೆ ತಿಳಿಸಿದನಲಿ, ದೈವದವರು ಗುರುಗಳು ಕೂಡಿ ರಾಮಪ್ಪನನ್ನು ಸುದ್ಧಾಚಾರ ಮಾಡಿರುತ್ತೇವೆ. ಆದಕಾರಣ ರಾಮಪ್ಪನ ಕೂಡ ಬಳಕೆ ಭೋಜನ ಮಾಡಲಿಕ್ಕೆ ಯಾವ ತರದ ಅಡ್ಡಿ ಆತಂಕ ಯಿಲ್ಲಾ ಅಮತ ಬರೆದುಕೊಟ್ಟ ಶುದ್ಧ ಚಾರಿತ್ರ್ಯ ಪತ್ರವು.

ಸಹಿ.
ಬಸವಯ್ಯನವರು, ಗುರುವಿನಪೀಠ
ಸಾ॥ ಡಂಬಳ

ಈ ಪತ್ರಕ್ಕೆ ದಿನಾಂಕವನ್ನು ಸಮೂದಿಸಿರುವುದಿಲ್ಲ ಹಾಗೂ ಮೂರು ಹೆಬ್ಬಟ್ಟಿನ ಗುರುತುಗಳನ್ನು, ಅವರ ಹೆಸರಿನೊಂದಿಗೆ ಹಾಕಲಾಗಿದೆ (Annexure- III). ಈ ಪತ್ರವು ಅಡವಿಸೋಮಾಪುರ ಗ್ರಾಮವಾಸಿಯಾದ ದುರಗವ್ವ ಕೋಂ ರಾಯಪ್ಪ ಪುರದ ಇವಳು ತನ್ನ ಅಳಿಯನಾದ ರಾಮಪ್ಪ ತಂದಿ ಬಸಪ್ಪ ಹುಡೆದ ಎಂಬಾತನಿಗೆ ಛೀಮಾರಿ ಹಾಕಿದುದರ ಪರಿಣಾಮವಾ

ಧಾರ್ಮಿಕ, ಸಂಪ್ರದಾಯ, ಸಮಸ್ಯೆಗಳು ಎದುರಾದಾಗ, ಪುನಃ ರಾಮಪ್ಪನನ್ನು ಡಂಬಳ ಗುರುಪೀಠದ ಗುರುಗಳು ಇತನನ್ನು ಶುದ್ಧಿಕರಿಸಿ, ಮತ್ತೆ ಜನಾಂಗದವರ ಜೊತೆ ಬಳಕೆ ಬೋಜನಕ್ಕೆ ಯೋಗ್ಯನನ್ನಾಗಿಸಿದ ಶುದ್ಧ ಚಾರಿತ್ರ್ಯ ಪತ್ರವು.

ಪತ್ರ : ೪

ಶ್ರೀ

ಶ್ರೀ ರೇವಣಸಿದ್ಧೇಶ್ವರ ಸಿಂಹಾಸನಾಧಿಪತಿಗೆ ಹಾಲುಮತ ಮೂಲಪೀಠ ಆಚಾರ ವಿಚಾರಕ್ಕೆ ಕರ್ತೃಗಳಾದ ರಾಜಾಧಿರಾಜ ಪೂಜ್ಯರಾದ ರಾ।ರಾ ಅಯ್ಯಪ್ಪಯ್ಯ ಸ್ವಾಮಿ ಸಾ॥ ಡಂಬಳ ತಾ। ಗದಗ ಜಿ. ಧಾರವಾಡರವರು ಹಾಲುಮತಕ್ಕೆ ಅಧ್ಯಕ್ಷರಾದ ಅಯ್ಯಪ್ಪನವರು ಮಾವತ್ತು ಮಂಡಳಿಯರಿಗೆ ಪ್ರಕಟಮಾಡುವುದೇನೆಂದರೆ, ಅಡಿವೆಪ್ಪಾ, ನಾಯಿಕ, ಕಟ್ಟೆಮನಿ, ಮೊದಲಿಗೆ ಇವನದೆ ಇದ್ದ ಕಾರಣ ಅಣ್ಣ-ತಮ್ಮಗಳಿಗೆ ನ್ಯಾಯಬದ್ಧ ಕಾರಣ ದೈವದರು ಗುರು ಹಿರಿಯರು ಕೂಡಿ ನ್ಯಾಯ ತೀರಿಸಿ ಮತ್ತು ಅಡಿವೆಪ್ಪನಿಗೆ ಕೊಟ್ಟಿರುತ್ತೇವೆ. ಇಂತಿ ಆಶೀರ್ವಾದಗಳು. ಈ ಪತ್ರದಲ್ಲಿ ದಿನಾಂಕವನ್ನು ನಮೂದಿಸಿರುವುದಿಲ್ಲ ಹಾಗೂ ಐದು ಜನ ಸಾಕ್ಷಿಗಳ ಹೆಬ್ಬಟಿನ ಗುರುತಗಳನ್ನು ಹೊಂದಿದೆ (Annexure- IV) ಈ ಪತ್ರವು ಅಣ್ಣತಮ್ಮಂದಿರ ನಡುವೆ ನಡೆದ ಕಟ್ಟಿಮನೆ ನಾಯಕತ್ವವನ್ನು ಪಡೆಯಲು, ಜಗಳವಾದಾಗ, ಒಡೆಯರು ಗುರುಹಿರಿಯ ಸಮಕ್ಷದಲ್ಲಿ ನ್ಯಾಯ ತೀರ್ಮಾನಿಸಿ, ಕಟ್ಟಿಮನಿ ನಾಯಕತ್ವ ಯಾರಿಗೆ ಸೇರಬೇಕು ಎಂಬುದನ್ನು ತೀರ್ಮಾನಿಸಿ, ಶ್ರೀ ರೇವಣಸಿದ್ಧೇಶ್ವರ ಸಿಂಹಾಸನ ಹಾಲುಮತ ಮೂಲಪೀಠ ಡಂಬಳ (ಗದಗ ಜಿಲ್ಲೆ) ದಿಂದ ಹೊರಡಿಸಿದ ಆದೇಶ ಪತ್ರವಾಗಿದೆ.

ಪತ್ರ : ೫

ಶ್ರೀ

ಶ್ರೀ ಗುರು ಪ್ರಸನ್ನ ಶ್ರೀ ಗುರು ರಾಜಾಧಿರಾಜ ರಾಜಪೂಜಿತರಾದ ಧಾರವಾಡ ಜಿಲ್ಲಾ ಗದಗ ತಾಲ್ಲೂಕು ಮುಂಡರಗಿ ವೇಡಾ ಡಂಬಳ ಸಂಸ್ಥಾನದಲ್ಲಿರುವಂತಾ ಕುರುಬರ ಕುಲಕ್ಕೆ ಅಥವಾ ಹಾಲುಮತಕ್ಕೆ ಶಿಕ್ಷೆ ಮೋಕ್ಷ ಕೊಡುವುದಕ್ಕೆ ಆಚಾರ-ವಿಚಾರ ಹೇಳಲಿಕ್ಕೆ ಅಧಿಕಾರಿಗಳಾದ ರೇವಣಸಿದ್ಧಯ್ಯ ಸ್ವಾಮಿಗಳ ನಾಗಯ್ಯನವರ ಸಮಕ್ಷಮ ಆದ ಬಹಿಷ್ಕಾರ ಪತ್ರದ ಮಜಕೂರು ಏನಂದ್ರೆ

ರಾಮಪ್ಪ ಬೆಳ್ಳಟ್ಟಿ ಯಿತನು ಜಾತಿ ಕುರುಬರವನಿದ್ದು ಒಬ್ಬ ಹೆಣ್ಣು ಮಗಳನ್ನು ತೆಗೆದುಕೊಂಡು ಬಂದು ಸೊರಟೂರು ಗ್ರಾಮದಲ್ಲಿ ಆಚಾರತಪ್ಪಿ ಕುಲಕ್ಕೆ ವಿರುದ್ಧ ಆಗಿ ನಡೆಯುತ್ತಿದ್ದು ಆದ್ರೆ

ಅವನನ್ನು ಗುರುಗಳು ಮತ್ತು ದೈವದವರು ವಿಚಾರಮಾಡುತ್ತಿರಲಾಗಿ ನಾನು ಇದೆ ಕೆಟ್ಟದಾರಿಯ ಮಾರ್ಗವನ್ನು ಹಿಡಿಯುತ್ತೇನೆಂದು ಜವಾಬು ಕೊಟ್ಟನು. ಆದ್ದರಿಂದ ಇವನಿಗೆ ನಮ್ಮ ಧರ್ಮಕುಲಕ್ಕೆ ವಿರುದ್ಧ ನಡೆದದ್ದರಿಂದ ಇವನಿಗೆ ಬಹಿಷ್ಕಾರ ಕೊಡುವುದಕ್ಕೆ ಕಾರಣವಿತ್ತು ಆದ್ರೆ ನಮ್ಮ ಗದಗ ತಾಲ್ಲೂಕು ಸೊರಬರು ಗ್ರಾಮದ ಭಕ್ತರು ಮತ್ತು ನಮ್ಮ ಜಗತ್ತಿನ ಮ್ಯಾಲೆ ಯಿರತಕ್ಕಂಥಾ ಭಕ್ತರು ಅಂದ್ರೆ ಹಾಲುಮತದವರಿಗೆ ಪ್ರಕಟಮಾಡಿ ತಿಳಿಸುವುದೇನಂದ್ರೆ ಮೇಲ್ಕಂಡ ರಾಮಪ್ಪ ಇತನ ಕೂಡಾ ಬಳಕೆ ಭೋಜನ ವ ಹವ್ಯಕವ್ಯ ಇತ್ಯಾದಿಗಳನ್ನು ಮಾಡಬಾರದು ಜರವಂದ ವ್ಯಳ್ಯಾ ಮಾಡಿದ್ರೆ ಗುರುಗಳಿಂದ ಯಾವ ದೈವದವರಿಂದಲೂ ಶಿಕ್ಷಕ್ಕೆ ಪಾತ್ರರಾದಿರಿ ಅಂತಾ ತಿಳಿಸಿರುತ್ತದೆ. ಬಹಿಷ್ಕಾರ ಪತ್ರದ ಹಕೀಕತ್ತು ಇಷ್ಟು ಇರುತ್ತದೆ. ಇಂತಿ ಅನೇಕ ಆಶೀರ್ವಾದಗಳು.

ತಾರೀಖು: ೫-೩-೧೯೪೦

ಪತ್ರಕ್ಕೆ ೧೨ ಜನರು ಸಾಕ್ಷಿಗಳಾಗಿದ್ದಾರೆ (Annexure- XV)

ಈ ಪತ್ರವು ಕುರುಬ ಜನಾಂಗದ ವ್ಯಕ್ತಿಯೋರ್ವ, ಸಮಾಜದ ಕಟ್ಟುಪಾಡುಗಳನ್ನು ಬಿಟ್ಟು, ಆಚಾರಬಿಟ್ಟು ವರ್ತಿಸಿದಾಗ; ದೈವದವರು ಹಾಗೂ ಗುರುಗಳು ನ್ಯಾಯಯುತವಾಗಿ ಬಾಳಲು ತಿಳಿಸಿದಾಗ್ಯು; ಆತನ ತನ್ನ ದಾರಿಯಲ್ಲೆ ನಡೆಯುತ್ತೇನೆಂದು ತಿಳಿಸಿದಾಗ; ಡಂಬಳ ಕ್ಷೇತ್ರದ ಒಡೆಯರುಗಳು, ದೈವದವರ ಸಮಕ್ಷದಲ್ಲಿ ಆತನಿಗೆ ಸಮಾಜದಿಂದ ಬಹಿಷ್ಕಾರ ಹಾಕಿದ ಪತ್ರ ಇದಾಗಿದೆ.

ಮೇಲೆ ಉದಾಹರಿಸಲಾದ ನಿದರ್ಶನಗಳು ದಾಖಲೆಗಳು ರೇವಣಸಿದ್ಧ ಪರಂಪರೆಯ ಒಡೆಯರುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಈ ದಾಖಲೆಗಳನ್ನು ಅವಲೋಕಿಸಿದಾಗ ಕುಲದ ಕಟ್ಟುಪಾಡುಗಳನ್ನು ಯಥಾವತ್ತಾಗಿ ಕಾಪಾಡಿಕೊಂಡು ಬರುವಲ್ಲಿ ಒಡೆಯರುಗಳ ಪಾತ್ರ ಬಹುಮುಖ್ಯವಾಗಿ ಕಾಣುತ್ತದೆ.

೬.೩.೬ ಕಟ್ಟಳೆಗಳು

ಪ್ರತಿಯೊಂದು ಜನಾಂಗವು ತಾನು ಬಾಳುವ ಪರಿಸರ ಆಯ್ದುಕೊಂಡ ಉದ್ಯೋಗ, ಒಡನಾಡಿ ಜನರೊಂದಿಗೆ ವ್ಯವಹರಿಸುವ ರೀತಿಗಳಿಗೆ ತಕ್ಕಂತೆ ಆಹಾರ ಪದ್ಧತಿ, ಉಡುಗೆ-ತೊಡುಗೆ, ಆಚಾರ-ವಿಚಾರ, ನಂಬಿಕೆ-ಸಂಪ್ರದಾಯ ಹಾಗೂ ಕಟ್ಟಳೆಗಳನ್ನು ರೂಢಿಸಿಕೊಂಡು ಬಂದಿರುತ್ತವೆ. ಈ ಪೈಕಿ ರೇವಣಸಿದ್ಧ ಸಂಪ್ರದಾಯದ ಶಾಂತಮುತ್ತಯ್ಯ ಅನುಯಾಯಿಗಳಾದ ಒಡೆಯರುಗಳು ತಮ್ಮದೆ ಆದ ಕೆಲವು ಕಟ್ಟಳೆಗಳನ್ನು ಹೊಂದಿದವರಾಗಿದ್ದಾರೆ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮದ ರೇವಣಸಿದ್ಧನ ನೆಲೆಯ ಒಡೆಯರುಗಳು ತಮ್ಮದೆ ಆದ ಕಟ್ಟಳೆಗಳನ್ನು ಆಚರಿಸುತ್ತಾ ಬಂದಿರುವರು.

೧. ಸರೂರು ಸಂಪ್ರದಾಯಸ್ಥ ಒಡೆಯರುಗಳ ಮನೆಗೆ ಸೊಸೆಯಾಗಿ ಬರುವವರು ಕಾಲಿಗೆ ಬೆಳ್ಳಿ ಉಂಗುರ ಧರಿಸುವಂತಿಲ್ಲ. ಬದಲಾಗಿ ಕೈ ಬೆರಳಿಗೆ ಉಂಗುರ ಧರಿಸುವರು. ಅಂತೆಯೇ ಗಂಡು ಮಕ್ಕಳು ಸೊಂಟಕ್ಕೆ ಬೆಳ್ಳಿ ಉಡದಾರ ಧರಿಸುವಂತಿಲ್ಲ. ಈ ಕಟ್ಟಳೆಗಳು ಈವರೆವಿಗೂ ಆಚರಣೆಯಲ್ಲಿವೆ. ಈ ಬಗ್ಗೆ ಕಾರಣ ಕೇಳಿದಾಗ ರೇವಣಸಿದ್ಧನಿಗೆ ತೊಡೆಸುವ ಮುಖವಾಡ ಬೆಳ್ಳಿಯದು ಆಗಿರುವುದರಿಂದ ಈ ಕಟ್ಟಳೆ ಇದೆಯೆಂದು ಒಡೆಯರುಗಳು ಹೇಳುವರು.

೨. ಒಡೆಯರ ಸೊಸೆಯರು ಹೆರಿಗೆಯ ನಂತರ ಮಗುವಿನೊಂದಿಗೆ ಗಂಡನ ಮನೆಗೆ ಬರುವಾಗ ಕಟ್ಟಿಗೆಯ ತೊಟ್ಟಿಲು ತರುವಂತಿಲ್ಲ ಹಾಗೂ ಹೆಣ್ಣು ಮಕ್ಕಳು ಹಾಸಿಗೆಯ ಮೇಲೆ ಮಲಗುವಂತಿಲ್ಲ. ಈ ಕಟ್ಟಳೆಗೆ ಕಾರಣವೇನೆಂದರೆ, ರೇವಣಸಿದ್ಧನನ್ನು ಹೊತ್ತು ತರುವ ಪಲ್ಲಕ್ಕಿಯು ಕಟ್ಟಿಗೆಯದಾಗಿರುವುದರಿಂದ ಹಾಗೂ ಪಲ್ಲಕ್ಕಿಯಲ್ಲಿ ಹಾಸಿಗೆಯ ಮೇಲೆ ರೇವಣಸಿದ್ಧನ ಉತ್ಸವ ಮೂರ್ತಿಯನ್ನು ಸ್ಥಾಪಿಸುವದರಿಂದ ಈ ಕಟ್ಟಳೆ ಇದೆಯೆಂದು ಒಡೆಯರು ಹೇಳುವರು.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಹರ್ತಿಕೋಟೆ ರೇವಣಸಿದ್ಧೇಶ್ವರ ಮಠದಲ್ಲಿ ಕೆಲವು ಕಟ್ಟಳೆಗಳು ಈಗಲು ಚಾಲನೆಯಲ್ಲಿದೆ.

೧. ರೇವಣಸಿದ್ಧನಿಗೆ ಸಂಬಂಧಿಸಿದ ಹಾಗೂ ಕುರುಬ ಸಮಾಜದ ಧಾರ್ಮಿಕ ಕಾರ್ಯಗಳು ಒಡೆಯರುಗಳ ಅಪ್ಪಣೆ ಪಡೆದನಂತರವೇ ಜರುಗಬೇಕು.

೨. ಶ್ರೀಮಠದ ದೈವ ರೇವಣಸಿದ್ಧನ ಮೂರ್ತಿಯನ್ನು ಉತ್ಸವಕ್ಕಾಗಲೀ, ಭಕ್ತರ ಮನೆಗಾಗಲೀ, ಒಡೆಯರ ಅಪ್ಪಣೆಯಿಲ್ಲದೆ ಯಾವ ಕಾರಣಕ್ಕೂ ಶ್ರೀಮಠದಿಂದ ಹೊರ ತೆಗೆಯುವಂತಿಲ್ಲ.

೩. ಶ್ರೀಮಠದ ಗರ್ಭಗುಡಿಯೊಳಗಿನ ಮೂರ್ತಿಗಳಿಗೆ ಏರಿಸಿದ ಕರಡಿಗೆಗಳನ್ನು ಒಡೆಯರನ್ನು ಹೊರತು ಪಡಿಸಿ ಯಾರು ಮುಟ್ಟುವಂತಿಲ್ಲ.

೪. ಪೂಜಾರಿಗಳ, ಗಣಾಚಾರಿಗಳ, ಭಂಡಾರಿಗಳ, ಈರಗಾರರ ಪಟ್ಟಗಳನ್ನು ಒಡೆಯರುಗಳ ವಂಶಸ್ಥರೇ ಮಾಡುವುದು ಕಡ್ಡಾಯ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಶಿವನಿ ಗ್ರಾಮದ ಶ್ರೀ ರೇವಣಸಿದ್ಧೇಶ್ವರ ಸಿಂಹಾಸನದ ಸುತ್ತಮುತ್ತಲಿನ ಏಳೂರು ಗ್ರಾಮದ ಪ್ರದೇಶಗಳಲ್ಲಿ ಬರಗಾಲವಿದ್ದಾಗ, ಮಳೆಗಾಗಿ ರೇವಣಸಿದ್ಧನ ಉತ್ಸವವನ್ನು ಹೊರಡಿಸಿದರೆ ಮಳೆ ಬರುವುದೆಂದು ಸ್ಥಳೀಯರ ನಂಬಿಕೆ ಈ ಸಂದರ್ಭದಲ್ಲಿ ರೇವಣಸಿದ್ಧನ ನೇತೃತ್ವದಲ್ಲಿ ಏಳು ಊರುಗಳ ಜೀರದೇವರುಗಳು, ಗ್ರಾಮದೇವತೆಗಳು, ಒಡೆಯರುಗಳು, ಈರಗಾರರು, ಗೌಡರು, ದಳವಾಯಿಗಳು, ಭಕ್ತಾದಿಗಳು ಮೆರವಣಿಗೆಯಲ್ಲಿ

ಸಾಗುವರು. ಹೀಗೆ ಮೆರವಣಿಗೆ ಸಾಗುವ ದಾರಿಯಲ್ಲಿ ನಾಯಿ, ಬೆಕ್ಕುಗಳು ಅಡ್ಡಬರುವಂತಿಲ್ಲ ಎಂಬ ಕಟ್ಟಳೆಯಿದೆ. ಒಂದು ವೇಳೆ ಅಡ್ಡ ಬಂದರೆ, ಮೆರವಣಿಗೆಯು ಮುಂದುವರೆಯುವಂತಿಲ್ಲ. ಇಂದಿಗೂ ಈ ಕಟ್ಟಳೆ ಜಾರಿಯಲ್ಲಿದೆ.

೬.೩.೭ ಮನೆ ಮದ್ದು ಅಂತ್ರ /ತಂತ್ರ ಜ್ಯೋತಿಷ್ಯ

ಒಡೆಯರುಗಳು ಕುರುಬ ಜನಾಂಗದ ಕುಲಕುರುಗಳಾಗಿ, ಧಾರ್ಮಿಕ ಕಾರ್ಯಗಳ ನೇತೃತ್ವವಹಿಸಿಕೊಳ್ಳುವುದರ ಜೊತೆಗೆ ನಾಟೀ ವೈದ್ಯನಾಗಿ ಜ್ಯೋತಿಷ್ಯಗಾರರಾಗಿ, ಅಂತ್ರತಂತ್ರ ಕಟ್ಟುವವರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ನಾಟೀ ವೈದ್ಯರಾಗಿ ಔಷಧಗಳನ್ನು ಬಳಸಿ, ರೋಗ–ರುಜಿನಗಳಿಗೆ ಚಿಕಿತ್ಸೆ ನೀಡುವುದನ್ನು ಗಮನಿಸಬಹುದಾಗಿದೆ. ಅದೇ ರೀತಿ ಮಕ್ಕಳಿಗೆ ಅಂತ್ರ–ತಂತ್ರ ಚೀಟಿ ಕಟ್ಟುವುದು ಮತ್ತು ಜ್ಯೋತಿಷ್ಯ ಹೇಳುವರು. ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಬೂದಗುಂಪಿಯ(ಕಕ್ಕೇರಾ) ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಮಹಾಸಂಸ್ಥಾನ ಮಠವಿದ್ದು; ಶ್ರೀ ಮ.ನಿ.ಪ್ರ.ಸ್ವ ಗುರುಬಸವ ಮಹಾಸ್ವಾಮಿಗಳು ಸಂಸ್ಥಾನದ ಅಧ್ಯಕ್ಷರಾಗಿರುವರು. ಶ್ರೀ ರೇವಣಸಿದ್ಧೇಶ್ವರರ ಪ್ರೇರಣೆಯಿಂದಲೇ ಮಠವನ್ನು ಈ ಸ್ಥಳದಲ್ಲಿ ನಿರ್ಮಾಣಮಾಡಲಾಗಿದೆ ಎಂದು ಮಹಾಸ್ವಾಮಿಗಳು ಹೇಳುವರು. ಶ್ರೀಮಠದಿಂದ ವೈದ್ಯಕೀಯ ಸೇವೆಯನ್ನು ಮಾಡುತ್ತಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಡ್ಲೆಕಂಸಾಗರ ರೇವಣಸಿದ್ಧನ ನೆಲೆಯ, ಒಡೆಯರಾದ ಶ್ರೀ ಓಂಕಾರಸ್ವಾಮಿ ಒಡೆಯರವರು, ಕುರುಬ ಸಮಾಜದ ಧಾರ್ಮಿ ಆಚರಣೆ, ಸಂಪ್ರದಾಯಗಳ ನೇತೃತ್ವವನ್ನು ವಹಿಸಿಕೊಳ್ಳುವುದರ ಜೊತೆಗೆ; ಜ್ಯೋತಿಷ್ಯವನ್ನು ಹೇಳುತ್ತಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಜ್ಯೋತಿಷ್ಯವನ್ನು ಕೇಳಲು ಬರುವವರು ಸ್ನಾನ ಮಾಡಿ ಗಂಧದಕಡ್ಡಿ, ಕಾಯಿ, ಬಾಳೆಹಣ್ಣು ತೆಗೆದುಕೊಂಡು ಬರಬೇಕು. ಜ್ಯೋತಿಷ್ಯ ಕೇಳಿದ ನಂತರ ದಕ್ಷಿಣೆ ಕೊಡು ವುದು ವಾಡಿಕೆಯಾಗಿದೆ. ಇದೇ ರೀತಿ ರೇವಣಸಿದ್ಧನ ಅನೇಕ ನೆಲೆಗಳಲ್ಲಿ ಒಡೆಯರುಗಳು ನಾಟೀ ವೈದ್ಯ, ಜ್ಯೋತಿಷ್ಯ ಇತ್ಯಾದಿ ಸಮಾಜಮುಖೀ ಕಾರ್ಯಗಳನ್ನು ಮಾಡುವುದನ್ನು ಗಮನಿಸಬಹುದಾಗಿದೆ.

೬.೩.೮ ಒಡೆಯರುಗಳ ಪ್ರಗತಿಪರ ಮದುವೆ

ರೇವಣಸಿದ್ಧನ ಇತಿವೃತ್ತ ಸಂದರ್ಭದಲ್ಲಿ ಆತನ ಕಾಲಮಾನವನ್ನು ಕ್ರಿ.ಶ. ೧೨ನೇ ಶತಮಾನದ ಸರಿಸುಮಾರು ಎಂದು ಅಂದಾಜಿಸಲಾಗಿದೆ. ಆ ಕಾಲಮಾನದಲ್ಲಿಯೇ ರೇವಣಸಿದ್ಧರು ಒಡೆಯರು ಎಂಬ ಗುರುವರ್ಗವನ್ನು ಸ್ಥಾಪಿಸಿ ತಮ್ಮದೆ ಆದ ಪ್ರಗತಿಪರವಾದ ಮದುವೆ ಪದ್ಧತಿಯನ್ನು ಹುಟ್ಟುಹಾಕಿದವರು. ಈ ಗುರುಪರಂಪರೆಯವರನ್ನು ಪ್ರತ್ಯೇಕ ಗುಂಪಾಗಿಸಿಯೂ ಕೂಡ,

ಜಾತಿಯಲ್ಲಿಯೇ ಇಟ್ಟುಕೊಂಡು; ಈ ಸಸ್ಯಾಹಾರಿ ಗುಂಪು ಮಾಂಸಾಹಾರಿಗಳಾದವರ ಜೊತೆ ವೈವಾಹಿಕ ಸಂಬಂಧ ಹೊಂದುತ್ತಲೇ; ಲಿಂಗದೀಕ್ಷೆಯ ಮೂಲಕ ಮಾಂಸಾಹಾರಿ ವಧುವನ್ನು ಸಸ್ಯಾಹಾರಿಯಾಗಿಸುವ ಸಂಪ್ರದಾಯವನ್ನು ಬೆಳೆಸಿದವರು ರೇವಣಸಿದ್ಧರು. ಅವರ ಆಚಾರ–ವಿಚಾರಗಳು; ಸಂಪ್ರದಾಯಗಳ ಮುಂದುವರಿಕೆಯ ಭಾಗವಾಗಿ ಸರೂರು ಶಾಂತಮುತ್ತಯ್ಯ ಸಂಪ್ರದಾಯದ ಒಡೆಯರ ಉಗಮಕ್ಕೆ ಕಾರಣವಾದವರು. ಸರಳವಾಗಿ ಆಡುಭಾಷೆಯಲ್ಲಿಯೇ ಮಧುಮಕ್ಕಳಿಗೆ ತಾಳಿಕಟ್ಟಿಸುವ ಸಂಪ್ರದಾಯವನ್ನು ಜಾರಿಗೆ ತಂದವರು. ಈ ಸಂದರ್ಭದಲ್ಲಿ ಒಡೆಯರ ಆಶೀರ್ವಚನ ಕೆಳಗಿನಂತಿದೆ.

ವರನಿಗೆ

ಗಿರಿಶೆಟ್ಟಿ ಗಿರಿರಾಮ
ಸರಿಗೆ ರೇವಕ್ಕ
ಮಗಳು ಬರುತಾಳೆಂದು
ಕಂಚಿ ಕಾಳಂಗಿ
ಕುಡಿನೀರ ಗಿಂಡಿ
ಸೋಬತಿ ಸೋಬಾನ

ವಧುವಿಗೆ:

ಪುಣ್ಯವಂತರ ಮಗಳೆ
ಭಾಗ್ಯವಂತರ ಮಗಳೆ
ಬಸವಣ್ಣ ಬರುತಾನೆ
ತೆಗೆ ನಿನ್ನ ಮುಸುಕು
ಸೋಬತಿ ಸೋಬಾನ
ಸೋಬತಿ ಸೋಬಾನ

ಈ ಮೇಲಿನ ಆಶೀರ್ವಚನವನ್ನು ಅವಲೋಕಿಸಿದಾಗ ಇಲ್ಲಿ ಹೆಣ್ಣನ್ನು ರೇವಣಸಿದ್ಧರ ಮಗಳಾದ ರೇವಕ್ಕನೆಂದೂ, ಗಂಡನ್ನು ಬಸವಣ್ಣನೆಂದೂ ಹಾಗೂ ಕುಲಗುರು ರೇವಣಸಿದ್ಧನನ್ನು ಆತನ ಪರಪಂರೆಯ ಶಿಷ್ಯ ಶಾಂತಮುತ್ತಯ್ಯನನ್ನು ನೆನೆಯುತ್ತ ಆಶೀರ್ವಾದ ಮಾಡಿರುವುದನ್ನು ಗಮನಿಸಿದರೆ; ಈ ನಾಲ್ಕೂ ಹೆಸರುಗಳು ಕೇವಲ ವ್ಯಕ್ತಿಯನ್ನು ಪರಿಚಯಿಸುವುದಲ್ಲದೆ, ವ್ಯಕ್ತಿತ್ವವನ್ನೂ ಪರಿಚಯಿಸುವಂತಹುಗಳಾಗಿವೆ. ಈ ಮೇಲಿನ ಆಶೀರ್ವಚನದ ಮಾಂಗಲ್ಯ ಧಾರಣೆ ಮಾಡಿಸುವ ಸಂಪ್ರದಾಯವೂ ಈಗಲೂ ವಿಶೇಷವಾಗಿ ದಕ್ಷಿಣ ಕರ್ನಾಟಕದ ರೇವಣಸಿದ್ಧನ ನೆಲೆಗಳಲ್ಲಿ ಆಚರಣೆಯಲ್ಲಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಯಿತು.

೬.೩.೯. ಒಡೇರಮ್ಮ ದೀಕ್ಷೆ

ರೇವಣಸಿದ್ಧ ಸಂಪ್ರದಾಯದ ಗುರುಪರಂಪರೆಯ ಒಡೆಯರದ್ದು ಭಾರತದಲ್ಲಿ ಒಂದು ವಿಶಿಷ್ಟವಾದ ಸಂಸ್ಕೃತಿಯೆಂದು ಹೇಳಬಹುದು. ಲಿಂಗಾಧಾರಿಗಳೂ, ಕಟ್ಟಾ ಸಸ್ಯಾಹಾರಿಗಳೂ ಆದ ಇವರು ಲಿಂಗಾಯತ ಜಂಗಮರಂತೆ ಇರುವರು. ಜಂಗಮರಿಗೂ ಒಡೆಯರಿಗೂ ಯಾವದೇ ಭಿನ್ನತೆ ಇಲ್ಲದೆ ಹೋದರೂ, ಲಿಂಗಾಯತ ಜಂಗಮರು ಒಡೆಯರುಗಳನ್ನು ತಮ್ಮ ಸಮಾನರೆಂದು ಒಪ್ಪಿಕೊಳ್ಳದಿರುವುದು ಆಶ್ಚರ್ಯಕರ. ಒಡೆಯರುಗಳ ಆಚಾರ ವಿಚಾರಗಳನ್ನು ಸ್ಥೂಲವಾಗಿ ಗಮನಿಸಿದಾಗ; ಇತರೆ ಪುರೋಹಿತ ವರ್ಗಕ್ಕಿಂತ ಮೇಲಾಗಿ ಕಾಣಬಹುದಾಗಿದೆ. ಮುಂದುವರೆದು ಇತರೆ ಸಾಮಾಜಿಕವಾಗಿ ಮುಂದುವರೆದ ಜನಾಂಗದ ಪುರೋಹಿತ ವರ್ಗಕ್ಕಿಂತಲೂ ಒಡೆಯರುಗಳಲ್ಲಿ ಕಂಡುಬರುತ್ತಿರುವುದು, ಈ ಜನಾಂಗದ ಹೆಗ್ಗಳಿಕೆಯೆಂದೆ ಹೇಳಬೇಕು. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ, ಈ ಒಡೆಯರುಗಳು ಕುರುಬರಲ್ಲಿಯ ಒಂದು ಪ್ರತ್ಯೇಕ ಗುಂಪಾದರೂ, ಅದೊಂದು ಪ್ರತ್ಯೇಕ ಜಾತಿಯಾಗದಿರುವುದು. ಈ ಕಾರಣದಿಂದಾಗಿ ಒಡೆಯರುಗಳೆಲ್ಲಾ ಸಹೋದರರೆಂಬ ಭಾವನೆ ಇರುವುದು. ಕಾರಣ ಅವರಲ್ಲಿಯೇ ಸಗೋತ್ರ ವಿವಾಹ ನಿಷಿದ್ಧ. ಅವರ ವೈವಾಹಿಕ ಸಂಬಂಧಗಳೇನಿದ್ದರೂ ಕುರುಬರಲ್ಲಿ ನಡೆಯುವುದು. ಈ ಗುರುವರ್ಗದವರ ಮತ್ತು ಭಕ್ತರುಗಳ ಮಧ್ಯವಿರುವ ಸಸ್ಯಹಾರ ಮತ್ತು ಮಾಂಸಾಹಾರ ಪದ್ಧತಿಗಳ ಸಮಸ್ಯೆಯ ನಡುವೆಯೂ; ಅದನ್ನು ಪರಿಹರಿಸಿಕೊಂಡ ಬಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿಶೇಷವಾಗಿದೆ.

ಹೆಣ್ಣಿನ ಕಡೆಯವರು ವರನ ಮನೆಯನ್ನು ನೋಡುವುದಕ್ಕೆ ಗುರು ಹಿರಿಯರು ಬಂಧು ಬಳಗ ಸಮೇತವಾಗಿ ಹೋಗುವರು. ವರನ ಮನೆತನ, ವಧುವಿನ ಕಡೆಯವರಿಗೆ ಒಪ್ಪಿತವಾದರೆ ನಿಶ್ಚಿತಾರ್ಥಕ್ಕೆ ಬರಬೇಕೆಂದು ವಿನಂತಿಸುವರು. ನಿಶ್ಚಿತಾರ್ಥ ಕಾರ್ಯವು ಸಾಮಾನ್ಯವಾಗಿ ವಧುವಿನ ಮನೆಯಲ್ಲಿ ನಡೆಯುವುದು. ಹೀಗೆ ನಿಶ್ಚಯ ಕಾರ್ಯ ಮುಗಿದ ಮೇಲೆ ಮದುವೆಗೆ ಮುಂಚೆ ನಡೆಯುವ ಆಚರಣೆಗಳಲ್ಲಿ ಮುಖ್ಯವಾದುದು ವಧುವಿನ ಲಿಂಗದೀಕ್ಷೆ ಕಾರ್ಯ. ಒಡೆಯರು ತಮ್ಮ ಮನೆಗೆ ಬರುವ ಸೊಸೆಯಾಗಿ ಬರುವ ಕುರುಬರ ಹುಡುಗಿಗೆ ಶಾಸ್ತ್ರೋಕ್ತವಾಗಿ ಲಿಂಗದೀಕ್ಷೆಯನ್ನು ಮಾಡುತ್ತಾರೆ. ಈ ಲಿಂಗದೀಕ್ಷೆಯ ಕಾರ್ಯ ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆಯುವುದು. ಸೊಸೆಯಾಗಿ ಬರುವ ಕನ್ಯೆಯ ತಲೆಯ ಮೇಲೆ ಹಿರಿಯ ಒಡೆಯರು ಪಾದವಿಟ್ಟು ಮಂಗಳಸ್ನಾನವನ್ನು ಮಾಡಿಸುವರು. ಹಲವೆಡೆ ಮಂಡೆಯ ಕೂದಲನ್ನು ತೆಗೆಯುವ ಪದ್ಧತಿ ಇದೆ. ನಂತರ ಕಷಾಯ ವಸ್ತ್ರಗಳನ್ನು ತೊಡಿಸುತ್ತಾರೆ. ಅವಳ ಉಡಿಯಲ್ಲಿ ಬಾಳೆ ಎಲೆ ಇಟ್ಟು, ಅದರಲ್ಲಿ ಐದು ಬಗೆಯ ಮರದ ಚೆಕ್ಕೆಯ ಕೆಂಡವನ್ನು ಹಾಕಿ ರೇವಣಸ್ವಾಮಿ ಪ್ರದಕ್ಷಿಣೆ

ಹಾಕಿಸುತ್ತಾರೆ. ಈ ಸಮಯದಲ್ಲಿ ಏನಾದರೂ ಅವಳ ಮಡಿಲು ಸುಟ್ಟರೆ ಅದು ಅಶುಭವೆಂದೂ ಅವಳ ನಡತೆ ಸರಿ ಇಲ್ಲವೆಂದೂ ತೀರ್ಮಾನಿಸುವರು. ವಿಸ್ತೃತ ಕ್ಷೇತ್ರಕಾರ್ಯ ಸಮಯದಲ್ಲಿ, ಒಡೆಯರುಗಳು ಈ ರೀತಿ ಮಡಿಲು ಸುಟ್ಟು ಹೋದ ಬಗ್ಗೆ ಎಲ್ಲಿಯೂ ಮಾಹಿತಿ ದೊರೆತಿಲ್ಲ. ನಂತರ ಬೇವಿನ ಕಡ್ಡಿಯಿಂದ ನಾಲಿಗೆ ಸುಟ್ಟು, ಗೋಮೂತ್ರದಿಂದ ನಾಲಿಗೆಯನ್ನು ತೊಳೆದು ಶುದ್ಧೀಕರಿಸಿದ ಮೇಲೆ, ರೇವಣಸಿದ್ಧ ಸ್ವಾಮಿಯ ಎದುರಗಡೆ ಕರಿಯ ಕಂಬಳಿಯ ಗದ್ದುಗೆಯನ್ನು ಹಾಕಿ ಅದರ ಮೇಲೆ ಸೇಸೆಯನ್ನು ಹೊಯ್ದು, ಅವಳನ್ನು ಪದ್ಮಾಸನದಲ್ಲಿ ಕುಳ್ಳಿರಿಸಿ, ಪಂಚಕಲಶ ಹೂಡಿ ಸುರಗಿಯ ನೂಲನ್ನು ಸುತ್ತುತ್ತಾರೆ.

ರೇವಣಸ್ವಾಮಿಯ ಕೊರಳಿನಿಂದ ನೂಲನ್ನು ತಂದು ಅದನ್ನು ಕನ್ಯೆಯ ಕೊರಳಿಗೆ ಹಾಕುತ್ತಾರೆ. ಇದನ್ನು ಸೂತ್ರವೆಂದು ಕರೆಯುತ್ತಾರೆ. ರೇವಣಸ್ವಾಮಿಯ ಮುಂದೆ ಕೆಂಪು ವಸ್ತ್ರದಲ್ಲಿ ಕಟ್ಟಿ ಇಟ್ಟಿರುವ ಕಂಥೆಯ ಲಿಂಗವನ್ನು ಐದು ಜನ ಹಿರಿಯ ಒಡೆಯರು ಆ ಸೂತ್ರದ ಮೂಲಕ ರೇವಣ್ಣಸ್ವಾಮಿಯ ಹೆಸರು ಹೇಳಿ, ಅವಳ ಕೊರಳಿಗೆ ಕಟ್ಟುತ್ತಾರೆ. ಹಾಗೂ ಕಿವಿಯಲ್ಲಿ ಓಂ ನಮಃ ಶಿವಾಯ ಎಂದು ಬೋಧಿಸುತ್ತಾರೆ. ಇದೇ ಸಂದರ್ಭದಲ್ಲಿ ಒಡೆಯರ ಹುಡುಗನಿಗೂ ಲಿಂಗದೀಕ್ಷೆ ಮಾಡುತ್ತಾರೆ. ಬಳಿಕ ಅವರಿಬ್ಬರಿಗೂ ಬೆತ್ತಕೊಟ್ಟು ಕೋರಾಣ್ಯ ಭಿಕ್ಷೆಗೆ ಕಳುಹಿಸುತ್ತಾರೆ. ಹೀಗೆ ದೀಕ್ಷೆ ಕಾರ್ಯ ಮುಗಿದ ಮೇಲೆ, ಕುರುಬರ ಮದುವೆಯ ಸಂಪ್ರದಾಯಗಳಂತೆ ಮದುವೆ ಕಾರ್ಯಗಳು ನಡೆಯುತ್ತವೆ. ಅಂದಿನಿಂದ ಹುಡುಗ ನಿಜವಾದ ಒಡೆಯರು ಹಾಗೂ ಅವನ ಹೆಂಡತಿ ಒಡೇರಮ್ಮ ಆಗುತ್ತಾಳೆ.

ಒಡೆಯರ ಹುಡುಗನನ್ನು ಕೈಹಿಡಿದು ಒಡೇರಮ್ಮನಾದ ಕುರುಬರ ಹುಡುಗಿಯು ಅಂದಿನಿಂದ ಕಟ್ಟಾ ಸಸ್ಯಾಹಾರಿಯಾಗುತ್ತಾಳೆ. ಸಮಾಜದ ದೃಷ್ಟಿಯಲ್ಲಿ ಅವಲ ಸ್ಥಾನ–ಮಾನ ಮೇಲಕ್ಕೇರುವುದು. ಅವಳನ್ನು ಹೆತ್ತ ತಂದೆ–ತಾಯಿಗಳೂ ತಲೆಬಾಗಿ ನಮಿಸುವರು. ಪ್ರತಿಯಾಗಿ ಅವರಿಗೆ ಅವಳು ನಮಸ್ಕರಿಸುವಂತಿಲ್ಲ. ಗಂಡನ ಮನೆಯಿಂದ ತವರು ಮನೆಗೆ ಹೋದ ಪಕ್ಷದಲ್ಲಿ, ಅವಳಿಗೆ ಪ್ರತ್ಯೇಕ ಅಡುಗೆ, ಪ್ರತ್ಯೇಕ ವಸತಿಯನ್ನು ಮಾಡುವರು. ಹಾಗೆಯೆ ತವರು ಮನೆಯವರು ತಮ್ಮ ಮಗಳ ಮನೆಗೆ ಬಂದಾಗ ಮನೆಯ ಹೊರಗಡೆಯೇ ಅವರಿಗೆ ಊಟದ ವ್ಯವಸ್ಥೆ ಇರುತ್ತದೆ. ಒಡೇರಮ್ಮ ತನ್ನ ಗಂಡನಂತೆಯೇ ಸದಾ ಹಣೆ ಮೇಲೆ ಮೂರು ಬೆರಳು ವಿಭೂತಿ, ಲಿಂಗವನ್ನು ಧರಿಸಿಕೊಂಡಿರುತ್ತಾಳೆ. ಈ ವೇಷಭೂಷಣಗಳು ಒಡೇರಮ್ಮನನ್ನು ಇತರೆ ಕುರುಬರ ಹೆಣ್ಣು ಮಕ್ಕಳಿಂದ ಪ್ರತ್ಯೇಕಿಸಿ ತೋರಿಸುವ ಅಂಶವಾಗಿದೆ. ಒಡೆಯರ ಹೆಂಡತಿಯನ್ನು ಒಡೇರಮ್ಮ, ಒಡೆಯರಮ್ಮ, ಅನ್ನೋರು ಎಂದು ಗೌರವದಿಂದ ಕರೆಯುವುದು ವಾಡಿಕೆಯಾಗಿದೆ. ಹಿಂದುಳಿದ ಜನಾಂಗವೊಂದರ ಸಮಾಜದಲ್ಲಿ ಸ್ತ್ರೀಗೆ ದೊರಕಿರುವ ಸಾಮಾಜಿಕ ಮತ್ತು ಧಾರ್ಮಿಕ ಹಕ್ಕನ್ನು

ಇಲ್ಲಿ ವಿಶೇಷವಾಗಿ ಗಮನಿಸಬಹುದಾಗಿದೆ. ಪ್ರತಿನಿತ್ಯ ಎರಡು ಬಾರಿ ಲಿಂಗಪೂಜೆಯನ್ನು ಮಾಡುವ ಇವಳು ಒಡೆಯರು ಮಾಡುವ ಎಲ್ಲ ಧಾರ್ಮಿಕ ಕಾರ್ಯಗಳನ್ನು ಮಾಡುವ ಅಧಿಕಾರವನ್ನು ಪಡೆದವಳಾಗಿದ್ದಾಳೆ. ಒಡೇರಮ್ಮ ತಮ್ಮ ಗಂಡನು ಅಲಭ್ಯ ಸಂದರ್ಭದಲ್ಲಿ ರೇವಣಸಿದ್ಧನ ಪೂಜಾದಿ ಕಾರ್ಯಗಳನ್ನು ನೆರವೇರಿಸಬಹುದು. ಆದರೆ ಅವಳ ತಿಂಗಳ ಋತುಚಕ್ರ ಸಂದರ್ಭದಲ್ಲಿ ಮಾತ್ರ ಈ ಕಾರ್ಯಮಾಡುವಂತಿಲ್ಲ. ಅದೂ ಅಲ್ಲದೆ ಒಡೆಯರುಗಳು ನಿರ್ವಹಿಸುವ ವ್ಯಾಜ್ಯ ಜಗಳಗಳನ್ನು ಪರಿಹರಿಸುವ ಕಾರ್ಯವನ್ನು ಮಾಡಬಹುದು.

ಹೀಗೆ ಒಡೆಯರುಗಳು ನಿರ್ವಹಿಸುವ ಎಲ್ಲ ಧಾರ್ಮಿಕ ಸಾಮಾಜಿಕ ಆಚರಣೆಗಳನ್ನು ನಿರ್ವಹಿಸುವ ಅಧಿಕಾರ ಒಡೇರಮ್ಮನಿಗೆ ದತ್ತವಾಗಿದೆ. ಒಡೆಯರಲ್ಲಿ ಆಚರಣೆಯಲ್ಲಿರುವ ಮತ್ತೊಂದು ಗಮನೀಯ ಅಂಶವೆಂದರೆ, ಒಡೇರಮ್ಮನಿಗೆ ಪತಿ ವಿಯೋಗದ ನಂತರವೂ ಆಕೆಯು ವಿಧವೆಯಾಗುವುದಿಲ್ಲ. ಕಾರಣ ಮದುವೆಯ ಸಂದರ್ಭದಲ್ಲಿ ಅವಳ ಮೈಮೇಲೆ ಧರಿಸಿರುವ ಲಿಂಗದ ಜೊತೆಯಲ್ಲಿಯು ಕೂಡ ಮದುವೆಯಾಗಿರುತ್ತದೆ. ಅವಳ ಗಂಡನಂತೆಯೇ ಅವಳ ಅಂಗದ ಮೇಲಿನ ಲಿಂಗವೂ ಅವಳ ಗಂಡನೇ ಆಗಿರುವುದು. ಕಾರಣ ಅವಳು ಚಿರಮುತ್ತೈದೆ. ಅವಳು ಎಲ್ಲ ಮಂಗಳ ಕಾರ್ಯದಲ್ಲಿ ಭಾಗಿಯಾಗಬಹುದು ಹಾಗೂ ಧಾರ್ಮಿಕ ಕಾರ್ಯಗಳ ನೇತೃತ್ವವನ್ನು ವಹಿಸಿಕೊಳ್ಳಬಹುದು.

ಕುರುಬರ ಗುರು ಒಡೆಯರುಗಳಲ್ಲಿ ಸ್ತ್ರೀಗೆ ದೊರಕಿರುವ ಆದರ್ಶ ಗೌರವಗಳು ಮುಂದುವರಿದ ಜನಾಂಗಗಳಲ್ಲಿಯೂ ಕಂಡುಬರುವುದಿಲ್ಲ. ಒಡೆಯರ ಮನೆಗೆ ಸೊಸೆಯಾಗಿ ಬರುವ ಕುರುಬರ ಹುಡುಗಿಗೆ ದೊರೆಯುವ ಸ್ಥಾನ ಮಾನಗಳು, ಒಡೆಯರ ಮನೆಯಲ್ಲಿ ಹುಟ್ಟುವ ಹೆಣ್ಣುಮಕ್ಕಳಿಗೆ ದೊರೆಯದಿರುವುದು ವಿಪರ್ಯಾಸದ ಸಂಗತಿಯಾಗಿದೆ. ಅವಳಿಗೆ ಲಿಂಗದೀಕ್ಷೆಯೂ ಇಲ್ಲ; ಏಕೆಂದರೆ ಮುಂದೆ ಅವಳು ಕುರುಬರ ಮನೆಗೆ ಸೊಸೆಯಾಗಿ ಹೋಗುವಳು ಎಂಬ ಭಾವನೆಯಿಂದಲೇ ಈ ಯಾವ ಆಧರಣಗಳು ಲಭ್ಯವಾಗಿಲ್ಲವೆಂದು ಅಭಿಪ್ರಾಯಿಸಬೇಕಾಗುವುದು. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಉತ್ತರ ದಕ್ಷಿಣವೆನ್ನದೆ, ಕರ್ನಾಟಕದ ಎಲ್ಲ ರೇವಣಸಿದ್ಧನ ನೆಲೆಗಳಲ್ಲಿ; ಸರೂರು ಶಾಂತಮುತ್ತಯ್ಯ ಪರಂಪರೆಯ ಎಲ್ಲ ಒಡೆಯರುಗಳು ಈ ಸಂಪ್ರದಾಯವನ್ನು ಇಂದಿಗೂ ಪರಿಪಾಲಿಸುತ್ತ ಬಂದಿರುವುದು ಕಂಡುಬರುತ್ತದೆ.

೬.೩.೧೦ ಕಾಲಿಲ್ದ ಐನೋರು ದೀಕ್ಷೆ

ಐನೋರು ಎಂದರೆ ಅಯ್ಯನವರು, ಜಂಗಮರು, ಪುರೋಹಿತರು ಎಂದು ಅರ್ಥೈಸಿಕೊಳ್ಳಲಾಗಿದೆ. ಕುರುಬರ ಗುರು ಪರಂಪರೆಗಳನ್ನು ಅವಲೋಕಿಸಿದಾಗ, ಅದರಲ್ಲೂ ವಿಶೇಷವಾಗಿ ರೇವಣಸಿದ್ಧ ಗುರು ಪರಂಪರೆಯನ್ನು ಅವಲೋಕಿಸಿದಾಗ, ಕುಲಗುರುಗಳು

ಒಡೆಯರುಗಳೇ ಎಂಬುದನ್ನು ಹೇಳಬೇಕಾಗಿಲ್ಲ. ಈ ಗುರು ಪರಂಪರೆಯಲ್ಲಿ ಕಂಡುಬರುವ "ಕಾಲಿಲ್ದ ಐನೋರು" ಸಂಪ್ರದಾಯವು ಬಹು ವಿಶೇಷವಾದದ್ದು ಹಾಗೂ ಅದ್ಬುತ ಕಲ್ಪನೆಯಾಗಿದೆ. ಕುರುಬರ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಹಾಗೂ ಜನನ, ಮರಣ, ಮದುವೆ, ನಾಮಕರಣಗಳಂತಹ ಸಂದರ್ಭಗಳಲ್ಲಿ ಅವರ ನೇತೃತ್ವ ಬಹುಮುಖ್ಯವಾದದ್ದು. ಕಾರಣ ಇಂತಹ ಸಂದರ್ಭಗಳಲ್ಲಿ ಒಡೆಯರುಗಳು ದೊರಕದೇ ಇರುವ ಸಂದರ್ಭದಲ್ಲಿ ಪರ್ಯಾಯ ಮಾರ್ಗವನ್ನು ಕಂಡುಕೊಂಡದ್ದೆ ಕಾಲಿಲ್ದ ಐನೋರು ಸಂಪ್ರದಾಯ. ಇಲ್ಲಿ ಕಾಲಿಲ್ದ ಐನೋರು ಎಂದರೆ ವ್ಯಕ್ತಿಯಲ್ಲ ಬದಲಾಗಿ ಒಡೆಯರುಗಳು ಮಂತ್ರಿಸಿಕೊಟ್ಟ ವಿಭೂತಿ ಗಟ್ಟಿ. ಇಲ್ಲಿ ಈ ವಿಭೂತಿಗಟ್ಟಿಯೇ ಒಡೆಯರ ಸ್ಥಾನ ತುಂಬುವುದು ವಿಶೇಷವಾಗಿದೆ.

ಒಡೆಯರುಗಳ ಇಂತಹ ಕ್ಲಿಷ್ಟ ಸಂದರ್ಭಗಳನ್ನು ಪಾರು ಮಾಡುವ ಉದ್ದೇಶದಿಂದ, ಮಂತ್ರಿಸಿ ಕೊಟ್ಟ ವಿಭೂತಿ (ಕಾಲಿಲ್ದ ಐನೋರು) ಸಾಮಾನ್ಯವಾಗಿ ಕುರುಬಗೌಡನ ಮನೆಯಲ್ಲಿರುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಶಿವನಿ ರೇವಣಸಿದ್ಧನ ನೆಲೆಯಲ್ಲಿ ಇಂದಿಗೂ ಈ ಸಂಪ್ರದಾಯ ಮುಂದುವರಿದಿದೆ. ಇಲ್ಲಿ ೧೫-೨೦ ಮನೆಗಳನ್ನು ಸೇರಿಸಿ, ಒಂದು ಹರಿವಾಣವನ್ನು ಮಾಡಿ, ಹರಿವಾಣಕ್ಕೊಂದಂತೆ ಕಾಲಿಲ್ಲದ ಐನೋರನ್ನು ನೀಡುವ ಸಂಪ್ರದಾಯವಿದೆ. ಗೌಡರ ಮನೆಯ ಜೋಳಿಗೆಯಲ್ಲಿ ಕಾಲಿಲ್ದ ಐನೋರನ್ನು ಇಟ್ಟಿರುತ್ತಾರೆ. ಯಾವುದೋ ಧಾರ್ಮಿಕ ಕಾರ್ಯಗಳ ಸಂದರ್ಭದಲ್ಲಿ ಒಡೆಯರುಗಳು ಅಲಭ್ಯವಿದ್ದಾಗ; ಕಾಲಿಲ್ದ ಐನೋರನ್ನು ಕರೆತನ್ನಿ ಎಂದಾಗ ಗೌಡರು ಅದನ್ನು ಕರೆತರುತ್ತಾರೆ. ಹಾಗೂ ಮುಂದಿನ ಧಾರ್ಮಿಕ ವಿಧಿವಿಧಾನಗಳು ಸಂಪ್ರದಾಯ ದಂತೆ ನೆರವೇರುವವು. ಈ ಸಂದರ್ಭಗಳಲ್ಲಿ, ಕಾಲಿಲ್ದ ಐನೋರಿಗೆ ಬಂದ ಹಣವನ್ನು ಅದೇ ಜೋಳಿಗೆಯಲ್ಲಿ ಹಾಕಿರುತ್ತಾರೆ. ಮುಂದೆ ಯಾವಾಗಲಾದರೂ ಒಡೆಯರು ಬಂದಾಗ ಅದನ್ನು ಅವರಿಗೆ ನೀಡುವರು. ಕುರುಬ ಜನಾಂಗದಲ್ಲಿ ಕುಲಗುರುಗಳಾದ ಒಡೆಯರುಗಳು ಮಾಡಿ ನೆರವೇರಿಸಬೇಕಾದ ಧಾರ್ಮಿಕ ಕಾರ್ಯವನ್ನು ಅವರು ಮಂತ್ರಿಸಿಕೊಟ್ಟ ವಿಭೂತಿಗಟ್ಟಿಯು ಮಾಡುವುದು ವಿಶೇಷವಾಗಿದೆ. ಪವಿತ್ರ ವ್ಯಕ್ತಿಗಳ ಸ್ಪರ್ಶ ಪಡೆದ ವಸ್ತುವು, ಸಾಮಾನ್ಯವಾಗಿ ಮೂಲ ಚೇತನದ ಸಾಂಕೇತವಾಗುತ್ತದೆಯೇ ವಿನಃ ಮೂಲ ಚೇತನವಾಗಲಾರದು; ಆದರೆ ಈ ಸಂಪ್ರದಾಯದಲ್ಲಿ ವಿಭೂತಿಗಟ್ಟಿಯೇ ಮೂಲಚೇತನವಾಗಿ ಕಾಲಿಲ್ದ ಐನೋರಾಗಿ, ಒಡೆಯರೇ ಆಗಿ ಅವರ ಧಾರ್ಮಿಕ ಕಾರ್ಯವನ್ನು ನಿರ್ವಹಿಸುವುದು ಒಂದು ಅಪರೂಪದ ಸಂಪ್ರದಾಯ ವಾಗಿದೆ.

ಈ ಕಾಲಿಲ್ಲದ ಐನೋರು ಪರಿಕಲ್ಪನೆಯು ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಮಧ್ಯಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ, ಶಿವನಿ ಮತ್ತು ತುಮಕೂರು

ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ರೇವಣಸಿದ್ಧನ ನೆಲೆಗಳಲ್ಲಿ ಕಾಣಬಹುದಾಗಿದೆ. ಸದರಿ ವಿವರಗಳನ್ನು ಅಧ್ಯಾಯ –೫ರಲ್ಲಿ ನೀಡಲಾಗಿದೆ. ಉತ್ತರ ಕರ್ನಾಟಕದ ಭಾಗದಲ್ಲಿ ಕಾಲಿಲ್ಲದ ಐನೋರು ಪರಿಕಲ್ಪನೆಯು ಕಂಡು ಬರುವುದಿಲ್ಲ. ಈ ಭಾಗದಲ್ಲಿ ಒಡೆಯರುಗಳು ಸಿಗದೇ ಇದ್ದಾಗ; ಕುರುಬ ಜನಾಂಗದವರು ತಮ್ಮ ಧಾರ್ಮಿಕ ಕಾರ್ಯಗಳ ನೇತೃತ್ವವನ್ನು ಲಿಂಗಾಯತ ಜಂಗಮರಿಂದಲೇ ನೆರವೇರಿಸಿಕೊಳ್ಳುವರು. ಲಿಂಗಾಯತ ಧರ್ಮದ ಪ್ರಭಾವವು ಈ ಭಾಗದಲ್ಲಿ ತುಂಬಾ ಇರುವುದೇ ಇದಕ್ಕೆ ಕಾರಣವಾಗಿರಬಹುದಾಗಿದೆ.

೬.೩.೧೧ ದಳವಾಯಿ ದೀಕ್ಷೆ

ಸಾಮಾನ್ಯವಾಗಿ ದಳವಾಯಿ ಎಂದರೆ ಒಂದು ದಳವನ್ನು (ಗಣವನ್ನು) ಮುನ್ನೆಡೆಸುವ ನೇತಾರ ಅಥವಾ ಸೇನಾಪತಿ ಎಂದು ಅರ್ಥೈಸುವುದಾದರೆ; ಕುರುಬ ಜನಾಂಗದ ಕುಲದೈವ ಬೀರಪ್ಪನ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಆತನು ಬೀರಪ್ಪನ ಜೀವಂತ ರೂಪವೆನ್ನಬಹುದು. ಈ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವುದಾದರೆ, ಬೀರಪ್ಪನ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ, ಮೆರವಣಿಗೆ ಉತ್ಸವಗಳಲ್ಲಿ ಮೊದಲ ಸಾಲಿನಲ್ಲಿ ತನ್ನ ಪರಿಚಾರಕ ವರ್ಗದವರೊಡನೆ ನಿಂತು ದೇವಗನ ಮತ್ತು ಭಕ್ತ ವರ್ಗದವರನ್ನು ಮುನ್ನೆಡೆಸಿಕೊಂಡು ಹೋಗುವವನು ದಳವಾಯಿ. ಇಲ್ಲಿ ದಳವಾಯಿ ಕೇವಲ ಮನುಷ್ಯ ಸೈನ್ಯದ ನಾಯಕನಾಗದೇ, ದೇವಗಣದ ಸೇನಾಪತಿಯೂ ಹೌದು.

ದಳವಾಯಿ ಆಚರಣೆಯು ಕರ್ನಾಟಕದ ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳ ಸೀಮಿತ ಪ್ರದೇಶಗಳ ರೇವಣಸಿದ್ಧ ಧಾರ್ಮಿಕ ನೆಲೆಗಳ ವ್ಯಾಪ್ತಿಗೆ ಒಳಪಟ್ಟ ಬೀರಪ್ಪನ ಗುಡಿಕಟ್ಟುಗಳಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. ಬೀರದೇವರು ಹಾಗೂ ರೇವಣಸಿದ್ಧ ಸಂಪ್ರದಾಯಗಳಲ್ಲಿ ದಳವಾಯಿಗಳ ಪಾತ್ರ ಗಣನೀಯ ಹಾಗೂ ಪ್ರಮುಖವಾದದ್ದು. ದಳವಾಯಿ ದೀಕ್ಷೆ ಪಡೆದವರು ಬೀರದೇವರ ಅಲಗು ಸೇವೆಯಂತಹಾ ಸಂದರ್ಭಗಳಲ್ಲಿ ಅತ್ಯಂತ ನೇಮನಿಷ್ಠೆಯಿಂದ ಇರಬೇಕಾಗುವುದು. ಈ ತರಹದ ಆಚರಣೆಗಳಲ್ಲಿ ಆತನ ತಲೆಗೆ ಅಡಿಕೆ ಹೊಂಬಾಳಿ ಇಟ್ಟು ಪೇಟಸುತ್ತುತ್ತಾರೆ. ಸೊಂಟಕ್ಕೆ ಕೆಂಪು ರೇಷ್ಮೆ ಮಡಿಯನ್ನು ಕಟ್ಟುತ್ತಾರೆ. ಬಲಗಾಲಿಗೆ ಬೆಳ್ಳಿ ಚೈನಿನ ಗಂಟೆ ಕಟ್ಟುತ್ತಾರೆ. ಕೊರಳಲ್ಲಿ ಹೂವಿನ ಹಾರ, ರುದ್ರಾಕ್ಷಿಸರ, ತುಳಸಿಮಾಲೆ ಹಾಕುವರು ಮತ್ತು ಬಲಗೈಯಲ್ಲಿ ಲಿಂಬೆ ಹಣ್ಣನ್ನು ಕೊಟ್ಟು ಕೈಗೆ ದಂಡು ಕಟ್ಟುವರು. ಹೀಗೆ ಬೀರದೇವರ ಸ್ಥಾವರ ಮೂರ್ತಿಯಾಗಿ ದಳವಾಯಿ ರೂಪಗೊಳ್ಳುತ್ತಾನೆ. ರೇವಣಸಿದ್ಧನ ನೆಲೆಯಲ್ಲಿ; ದಳವಾಯಿಗಳನ್ನಾಗಿ ಪರಿವರ್ತಿಸುವ ಸಂದರ್ಭದಲ್ಲಿ ಒಡೆಯರುಗಳು ನೀಡುವ ದೀಕ್ಷೆಯೇ ದಳವಾಯಿ ದೀಕ್ಷೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲ್ಲೂಕಿನ ಶಿವನಿಯಲ್ಲಿರುವ ರೇವಣಸಿದ್ಧೇಶ್ವರ ಸಿಂಹಾಸನದಲ್ಲಿ ಇಂದಿಗೂ

ದಳವಾಯಿ ದೀಕ್ಷೆ ನೀಡುವ ಆಚರಣೆಯು ಪ್ರಸ್ತುತ ಆಚರಣೆಯಲ್ಲಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಯಿತು. ಈ ನೆಲೆಯಲ್ಲಿ ಬಾಲ್ಯಾವಸ್ಥೆಯಲ್ಲಿಯೇ ಗಂಡು ಮಗುವಿಗೆ ದಳವಾಯಿ ದೀಕ್ಷೆ ನೀಡಲಾಗುವುದು. ಹೀಗೆ ಧೀಕ್ಷೆ ಕೊಳ್ಳಲ್ಲು ಅಣಿಯಾಗಿರುವ ಬಾಲಕನನ್ನು ಧೀಕ್ಷಾ ಮುನ್ನಾ ದಿನ ಇದಕ್ಕೆಂದೆ ನಿರ್ಮಾಣ ಮಾಡಲಾದ ಬಾವಿ(ಗುಂಡಿಯಲ್ಲಿ) ರಾತ್ರಿ ಬಿಟ್ಟು ಬರುವರು. ಮರುದಿನ ಆತನನ್ನು ಬಾವಿಯಿಂದ ಮೇಲೆತ್ತುಕೊಂಡು ರೇವಣಸಿದ್ಧನ ದೇವಾಲಯಕ್ಕೆ ಕರೆತರುವರು. ಆತನಿಗೆ ಸ್ನಾನಮಾಡಿಸಿ, ಮಡಿಬಟ್ಟೆಗಳನ್ನು ತೊಡಿಸುವರು. ಒಡೆಯರುಗಳು ಬಾಲಕನಿಗೆ ದಳವಾಯಿಯು ಪ್ರಾಮುಖ್ಯತೆ; ದೀಕ್ಷೆ ತೆಗೆದುಕೊಂಡ ನಂತರ ಆಚರಿಸಬೇಕಾದ ಕಟ್ಟು ನಿಟ್ಟಿನ ನಿಯಮಗಳನ್ನು ; ಸಾಮಾಜಿಕವಾಗಿ ಧಾರ್ಮಿಕವಾಗಿ ಆತನಿಗೆ ದೊರೆಯಬಹುದಾದ ಸ್ಥಾನಮಾನಗಳ ಬಗ್ಗೆ ತಿಳಿಸುವರು. ನಂತರ ಸಾಂಪ್ರದಾಯಿಕ ವಿಧಿವಿಧಾನಗಳಿಂದ ದಳವಾಯಿ ದೀಕ್ಷೆ ಗೈಯುವರು. ದೀಕ್ಷೆ ಪಡೆದ ಬಾಲಕ ಅಂದಿನಿಂದ ದಳವಾಯಿಯಾಗಿ ಪರಿವರ್ತನೆಗೊಳ್ಳುತ್ತಾನೆ. ಕುರುಬರ ದೈವ ಬೀರಪ್ಪನ ಸಾಂಸ್ಕೃತಿಕ ರಾಯಭಾರಿಯಾಗುವ ದಳವಾಯಿ ಹಾಗೂ ಈ ದಳವಾಯಿ ದೀಕ್ಷೆಯನ್ನು ನೀಡುವ ರೇವಣಸಿದ್ಧ ಪರಂಪರೆಯ ಗುರುವರ್ಗಗಳ ನಡುವೆ ಇರುವ ಸಂಬಂಧಗಳನ್ನು ಬೀರದೇವರು ಮತ್ತು ರೇವಣಸಿದ್ಧ ನಡುವೆ ಇರಬಹುದಾದ ಸಾಂಸ್ಕೃತಿಕ ಆಯಾಮಗಳೆಡೆ; ದಳವಾಯಿ ದೀಕ್ಷೆ ಗಮನ ಸೆಳೆಯುವುದು.

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ರೇವಣ್ಣಸಿದ್ಧ ಪರಂಪರೆ: ಸಾಂಸ್ಕೃತಿಕ ಅಧ್ಯಯನದ ಮಹಾಪ್ರಬಂಧವನ್ನು ಪೂರ್ವ ಕಲ್ಪಿತ ಸಾರಲೇಖದಲ್ಲಿನ ಉದ್ಧೇಶದಂತೆ ಇಲ್ಲಿ ಆರು ಅಧ್ಯಾಯಗಳಲ್ಲಿ ಕಟ್ಟಿಕೊಡಲಾಗಿದೆ. ಮಹಾಪ್ರಬಂಧದ ಉದ್ಧೇಶ, ವ್ಯಾಪ್ತಿ ಹಾಗೂ ಸ್ವರೂಪವನ್ನು ನಿಖರವಾಗಿ ಗುರುತಿಸಿಕೊಂಡು; ಅನ್ವಯ ಅಧ್ಯಾಯಗಳನ್ನು ವಿಂಗಡಿಸಿಕೊಳ್ಳಲಾಗಿದೆ. ಈವರೆಗೂ ರೇವಣ್ಣಸಿದ್ಧ ಪರಂಪರೆಯ ಕುರಿತಾದ ಸಮಗ್ರ ಅಧ್ಯಯನ ನೆಡೆದಿಲ್ಲವಾದರೂ; ರೇವಣ್ಣಸಿದ್ಧನ ಕುರಿತಾದ ಕೆಲ ಕೃತಿಗಳು, ಲೇಖನಗಳು ಪ್ರಕಟವಾಗಿವೆ. ಈಗಾಗಲೇ ವಿದ್ವಾಂಸರು ನಡೆಸಿದ ಅಧ್ಯಯನಗಳನ್ನು ಪಟ್ಟೀಕರಿಸಿ; ಅವುಗಳಲ್ಲಿ ಹುದುಗಿರುವ, ರೇವಣ್ಣಸಿದ್ಧ ಹಾಗೂ ಆತನ ಪರಂಪರೆಯ ಕುರಿತಾದ ಚರ್ಚೆ, ಅಭಿಪ್ರಾಯಗಳನ್ನು ಅಧ್ಯಾಯ-೨ರಲ್ಲಿ ಅವಲೋಕಿಸಲಾಗಿದೆ. ಹಾಗೂ ಈವರೆಗಿನ ಅಧ್ಯಯನಗಳ ಶೀರ್ಷಿಕೆ ಅಡಿಯಲ್ಲಿ ಚರ್ಚೆಗಳನ್ನು ಗಮನಿಸಲಾಗಿದೆ.

ಕರ್ನಾಟಕದ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಸಿದ್ಧನಾಗಿರುವ ರೇವಣ್ಣಸಿದ್ಧನನ್ನು ಕುರಿತು ಲಿಖಿತ ಪರಂಪರೆ ಹಾಗೂ ಮೌಖಿಕ ಪರಂಪರೆಯಲ್ಲಿ ಸಾಕಷ್ಟು ಪ್ರಮಾಣದ ದಾಖಲೆಗಳು ದೊರೆಯುತ್ತವೆ. ರೇವಣ್ಣಸಿದ್ಧ ಪರಂಪರೆಗೆ ಸಂಬಂಧಿಸಿದ, ಆಕರಗಳನ್ನು; ಸಾಹಿತ್ಯಿಕ ಆಕರಗಳು ಮತ್ತು ದಾಖಲಾತ್ಮಕ ಆಕರಗಳೆಂದು ವಿಭಾಗಿಸಿಕೊಳ್ಳಲಾಗಿದೆ. ರೇವಣ್ಣಸಿದ್ಧನಿಗೆ ಸಂಬಂಧಿಸಿದ ಕಾವ್ಯ – ಪುರಾಣಗಳು, ಲಿಖಿತ, ಮೌಖಿಕ ಹಾಗೂ ದಾಖಲಾತ್ಮಕ ಆಕರಗಳನ್ನು ಬಳಸಿಕೊಂಡು; ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ. ಅವುಗಳಲ್ಲಿ ಒಡಮೂಡಿರುವ ಸಾಂಸ್ಕೃತಿಕ ಆಯಾಮಗಳನ್ನು ಅಧ್ಯಾಯ-೩ರಲ್ಲಿ ಗುರುತಿಸಲಾಗಿದೆ.

ರೇವಣ್ಣಸಿದ್ಧನ ಕುರಿತಾದ ಆಕರಗಳ ಅಧ್ಯಯನದಿಂದ ರೇವಣ್ಣಸಿದ್ಧನು ವ್ಯಕ್ತಿಯಿಂದ ವ್ಯಕ್ತಿತ್ವವಾಗಿ; ವ್ಯಕ್ತಿತ್ವದಿಂದ ದೈವತ್ವಕ್ಕೆ ಏರಿದವನಾಗಿರುವುದು ಮನನವಾಗುವುದು. ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಸೀಮಿತವಾಗದೆ. ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಂತ-

ಹಂತವಾಗಿ ಬೆಳೆದು ಬಹುಮುಖಿ ವ್ಯಕ್ತಿತ್ವವುಳ್ಳವನಾಗಿದ್ದಾನೆ. ಸಾವಿರ ವರುಷಗಳ ಇತಿಹಾಸವುಳ್ಳ ರೇವಣ್ಣಸಿದ್ಧನು ಕಾಲದ ಕುಲುಮೆಯಲ್ಲಿ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ರೂಪಾಂತರಗೊಂಡಿದ್ದಾನೆ.

ಈ ಕಾರಣಗಳಿಂದಾಗಿ ಆತನ ಕುರಿತಾದ ಕಾವ್ಯ ಪುರಾಣಗಳಲ್ಲಿ ಕೆಲವೊಮ್ಮೆ ಅಯೋನಿಜನಾಗಿ ಮತ್ತೊಮ್ಮೆ ಯೋನಿಜನಾಗಿ ಜನ್ಮತಾಳಿದವನಾಗಿದ್ದಾನೆ. ರೇವಣ್ಣಸಿದ್ಧ; ಚಾರಿತ್ರಿಕ ಹಿನ್ನೆಲೆಯನ್ನು (ಅಧ್ಯಾಯ–೪) ರೇವಣ್ಣಸಿದ್ಧನ ಇತಿವೃತ್ತ ವಿಚಾರಗಳನ್ನು; ಕಾವ್ಯ ಪುರಾಣ ಹಾಗೂ ಶಾಸನಗಳ ಮುಖಾಂತರ ಇಲ್ಲಿ ಕಟ್ಟಿಕೊಡಲಾಗಿದೆ. ಹಾಗೂ ಆತನ ಜೀವಿತ ಅವಧಿಯ ಕಾಲಮಾನವನ್ನು ನಿಖರವಾಗಿ ಗುರುತಿಸಲಾಗಿದೆ. ಸಿದ್ದ ಪರಂಪರೆ ಅವಲೋಕನದೊಂದಿಗೆ; ಶೈವಸಿದ್ಧ ಪರಂಪರೆಯ ಮೇಲೆ ನಾಥ ಪಂಥೀಯ ಸಿದ್ಧರಿಂದಾದ ಪಂಥ–ಪ್ರಭಾವಗಳನ್ನು ಗುರುತಿಸಲಾಗಿದೆ.

ಕರ್ನಾಟಕ ಸಿದ್ಧ ಪರಂಪರೆಯಲ್ಲಿ ರೇವಣ್ಣಸಿದ್ಧರದ್ದು ಬಹುದೊಡ್ಡ ಹೆಸರು. ಹಾಗೂ ನಾಡಿನಾದ್ಯಂತ ಸಂಚರಿಸಿದ ಆತ ತನ್ನದೇ ಆದ ಗುರು ಪರಂಪರೆಯ ಹುಟ್ಟಿಗೆ ಕಾರಣವಾದವನು. ಇತ್ತೀಚೆಗೆ ರೇವಣ್ಣಸಿದ್ಧನನ್ನು ಕುರಿತಾದ ಹಲವು ಆಕರ ಸಾಮಗ್ರಿಗಳು ಬೆಳಕಿಗೆ ಬಂದಿದ್ದರೂ ರೇವಣ್ಣಸಿದ್ಧನ ಪೂರ್ವಾಭ್ಯಾಸಕ್ಕೆ ಸಂಪೂರ್ಣವಾಗಿ ವಿವರಗಳನ್ನು ಒದಗಿಸಲು ಇದುವರೆಗೆ ಸಾಧ್ಯವಾಗಿಲ್ಲ. ಹೀಗಾಗಿ ಈತನಿಗೆ ಸಂಬಂಧಿಸಿದ ಸಾಂಸ್ಕೃತಿಕ, ಬೌತಿಕ, ಲಿಖಿತ, ಮೌಖಿಕ ಇತ್ಯಾದಿ ಸಾಮಗ್ರಿಗಳಿಗಾಗಿ; ರೇವಣ್ಣಸಿದ್ಧನ ನೆಲೆಗಳಿಗೆ ಸಂಚರಿಸಿ, ಕ್ಷೇತ್ರಕಾರ್ಯ ಮಾಡಿ ಅಲ್ಲಿ ದೊರೆತಿರುವ ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ.

ರೇವಣ್ಣಸಿದ್ಧನು ಕೆಲಕಾಲ ನೆಲೆ ನಿಂತಿದ್ದನೆಂದೂ, ಅಲ್ಲಿಗೆ ಬಂದಿದ್ದನೆಂದೂ ಹೇಳಲಾಗುವ ನೆಲೆಗಳು ಹಾಗೂ ರೇವಣ್ಣಸಿದ್ಧ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವ ಒಡೆಯರು ಸ್ಥಾಪಿಸಿಕೊಂಡಿರುವ ನೆಲೆಗಳು ಅಪಾರ ಸಂಖ್ಯೆಯಲ್ಲಿವೆ. ಕರ್ನಾಟಕದ ಭೌಗೋಳಿಕ ವ್ಯಾಪ್ತಿಯನ್ನು ಮೀರಿ, ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಆಂದ್ರಪ್ರದೇಶ ಹಾಗೂ ತಮಿಳುನಾಡು ರಾಜ್ಯಗಳ ವ್ಯಾಪ್ತಿಯಲ್ಲಿ ಅವು ಹರಪಿವೆ. ಬಹುಪ್ರಸ್ತುತ ಭೌಗೋಳಿಕ ವಿಸ್ತಾರದಲ್ಲಿರುವ ರೇವಣ್ಣಸಿದ್ಧನ ನೆಲೆಗಳನ್ನು ಒಂದು ಚೌಕಟ್ಟಿನಲ್ಲಿ ಅಧ್ಯಯನಕ್ಕೆ ಒಳಪಡಿಸಿರುವುದು ಕಷ್ಟಸಾಧ್ಯವಾದುದು, ಅಧ್ಯಯನದ ದೃಷ್ಟಿಯಿಂದ, ಭೌಗೋಳಿಕವಾಗಿ ರೇವಣ್ಣಸಿದ್ಧನ ನೆಲೆಗಳನ್ನು (೧) ಉತ್ತರ ಕರ್ನಾಟಕದ ನೆಲೆಗಳು (೨) ಮಧ್ಯ ಕರ್ನಾಟಕದ ನೆಲೆಗಳು ಮತ್ತು (೩) ಕರ್ನಾಟಕೇತರ ನೆಲೆಗಳೆಂದು ವಿಂಗಡಿಸಿಕೊಳ್ಳಲಾಗಿದೆ. ಈ ಶೀರ್ಷಿಕೆಯಡಿಯಲ್ಲಿ; ಆಯಾ ಭೌಗೋಳಿಕ ವ್ಯಾಪ್ತಿಯಲ್ಲಿರುವ, ರೇವಣ್ಣಸಿದ್ಧನ ನೆಲೆಗಳ ಜಿಲ್ಲಾವಾರು, ತಾಲೂಕುವಾರು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಮೇಲಿನಂತೆ ಪಟ್ಟೀಕರಿಸಿದ ನೆಲೆಗಳ ಪೈಕಿ ಮಹಾಪ್ರಬಂಧಕ್ಕೆ ಪೂರಕವಾದ, ಮುಖ್ಯ ನೆಲೆಗಳನ್ನು (ಕರ್ನಾಟಕೇತರ ನೆಲೆಗಳನ್ನು ಸೇರಿದಂತೆ) ಅಧ್ಯಯನದ ಅವಧಿಯಲ್ಲಿ ಕ್ಷೇತ್ರಕಾರ್ಯ ಮಾಡಲಾಗಿದೆ. ಅಲ್ಲಿ ಸಂಗ್ರಹಿಸಿದ ವಿವರಗಳನ್ನು ಅಧ್ಯಯನ–೫ ರಲ್ಲಿ ಶಿಸ್ತುಬದ್ಧ ಅಧ್ಯಯನಕ್ಕೆ ಒಳಪಡಿಸಲಾಗಿದೆ. ರೇವಣ್ಣಸಿದ್ಧನ ನೆಲೆಗಳ ಬಹುವಿಸ್ತೃತವಾದ ಕ್ಷೇತ್ರ ಕಾರ್ಯಗಳ ಸಂಧರ್ಬದಲ್ಲಿ; ಆಯಾ ನೆಲೆಗಳಲ್ಲಿ ಇಂದಿಗೂ ಆಚರಣೆಯಲ್ಲಿರುವ ಜಾತ್ರೆ – ಉತ್ಸವ, ಆಚರಣೆ ಮತ್ತು ಕಟ್ಟಳೆಗಳಂತಹ ಸಾಂಸ್ಕೃತಿಕ ಅನನ್ಯತೆಗಳನ್ನು ಸಂಗ್ರಹಿಸಿ; ಆಯಾ ಶೀರ್ಷಿಕೆಗಳ ಅಡಿಯಲ್ಲಿ ಕ್ರೋಢಿಕರಿಸಲಾಗಿದೆ. ಹಾಗೂ ಈ ಸಂಬಂಧವಾದ ಶಿಸ್ತುಬದ್ಧ ಅಧ್ಯಯನವನ್ನು; ರೇವಣ್ಣಸಿದ್ಧ; ಸಾಂಸ್ಕೃತಿಕ ಅನ್ಯನತೆ ಶೀರ್ಷಿಕೆಯಡಿಯಲ್ಲಿ ಅಧ್ಯಾಯ–೬ರಲ್ಲಿ ನಿರೂಪಿಸಲಾಗಿದೆ.

ಆರು ಅಧ್ಯಾಯಗಳ ಮಹಾಪ್ರಬಂಧದ ಬರವಣಿಗೆಯಲ್ಲಿ ನಾವು ಕಂಡ ಫಲತಗಳಿವು. ಕುರುಬರ ಕುಲಗುರುಗಳಲ್ಲಿ ಮೂರು ಪರಂಪರೆಗಳಿರುವುದನ್ನು ಈಗಾಗಲೇ ಸಂಶೋಧನಾ ಕ್ಷೇತ್ರ ಸ್ವೀಕರಿಸಿಯಾಗಿದೆ. ಈ ಮೂರು ಗುರು ಪರಂಪರೆಗಳ ಪೈಕಿ, ರೇವಣಸಿದ್ಧ ಪರಂಪರೆಯ ನೆಲೆಗಳು ಬಹುವಿಸ್ತೃತ ಭೌಗೋಳಿಕ ವಿಸ್ತಾರವನ್ನು ಹೊಂದಿವೆ. ಹಾಗೂ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಶಿರೂರ ಗ್ರಾಮದಲ್ಲಿ ಜನ್ಮತಾಳಿದೆ. ರೇವಣ್ಣಸಿದ್ಧ ಪರಂಪರೆಯು ಬಹುವಿಸ್ತೃತ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿರುವುದನ್ನು ನೆಲೆಗಳ ಕ್ಷೇತ್ರ ಕಾರ್ಯ ಮಾಡುವುದರ ಮೂಲಕ ನಿರೂಪಿಸಲಾಗಿದೆ. ಹಾಗೂ ಈ ನೆಲೆಗಳನ್ನು ಉತ್ತರ ಕರ್ನಾಟಕದ ನೆಲೆಗಳು, ಮಧ್ಯ ಕರ್ನಾಟಕದ ನೆಲೆಗಳು, ದಕ್ಷಿಣ ಕರ್ನಾಟಕದ ನೆಲೆಗಳೆಂದು ವಿಭಾಗಿಸಿಕೊಂಡು; ರೇವಣ್ಣಸಿದ್ಧನ ನೆಲೆಗಳ ಕ್ರೋಢಿಕೃತ ಪಟ್ಟಿಮಾಡಲಾಗಿದೆ. ಹಾಗೂ ರೇವಣ್ಣಸಿದ್ಧ ಪರಂಪರೆಯ ಪ್ರಭಾವಗಳನ್ನು ಗುರುತಿಸಲಾಗಿದೆ.

ಅಧ್ಯಯನದ ಅವಧಿಯಲ್ಲಿ ಮಾಡಲಾದ ರೇವಣ್ಣಸಿದ್ಧನ ನೆಲೆಗಳ ಕಾರ್ಯಕ್ಷೇತ್ರಗಳಿಂದ; ಇಂದಿಗೂ ರೇವಣ್ಣಸಿದ್ಧನಿಗೆ ಕುರುಬ ಸಮಾಜದಲ್ಲಿ ಪೂಜ್ಯಭಾವನೆಯಿದೆ ಎಂಬುದು ದೃಢಪಟ್ಟಿದೆ. ರೇವಣ್ಣಸಿದ್ಧ ತನ್ನ ನಂತರದಲ್ಲಿ ಗುರುಸ್ಥಾನವನ್ನು ಶಾಂತಮುತ್ತಯ್ಯನಿಗೆ ವಹಿಸಿರುವುದು; ಒಡೆಯರುಗಳು ಈ ಪರಂಪರೆಯನ್ನು ಇಂದಿಗೂ ತಲೆಮಾರುಗಳಿಂದ ಮುಂದುವರೆಸಿಕೊಂಡು ಬರುತ್ತಿರುವುದನ್ನು ವಂಶವೃಕ್ಷ ಸಮೇತ ನಿರೂಪಿಸಲಾಗಿದೆ.

ರೇವಣ್ಣಸಿದ್ಧನ ನೆಲೆಗಳಲ್ಲಿ ಇಂದಿಗೂ ನಡೆಯುತ್ತಿರುವ ಜಾತ್ರೆ ಉತ್ಸವ, ಹಬ್ಬಗಳು, ಸೇವೆಗಳು, ದೀಕ್ಷೆ ಇತ್ಯಾದಿ ಆಚರಣೆಗಳನ್ನು ಕ್ಷೇತ್ರ ಕಾರ್ಯಗಳ ಮುಖಾಂತರ ದಾಖಲಿಸಲಾಗಿದೆ. ಫಲಿತವಾಗಿ ರೇವಣ್ಣಸಿದ್ಧರು ಕುಲಗುರುವಾಗಿ ಹಾಲುಮತದವರನ್ನು ಸಾತ್ವಿಕ ಮಾರ್ಗದಲ್ಲಿ ಕೊಂಡೊಯ್ದುದನ್ನು ಹಾಗೂ ರೇವಣ್ಣಸಿದ್ಧನ ನೆಲೆಗಳಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಅನನ್ಯತೆಗಳು

ಒಂದೇ ತೆರನಾಗಿರದೆ, ಆಯಾ ಪ್ರದೇಶಾನುಸಾರ ಅಲ್ಲಲ್ಲಿ ಭಿನ್ನತೆ ಹೊಂದಿರುವುದನ್ನು ಗುರುತಿಸಲಾಗಿದೆ.

ಪ್ರಾಚೀನ ನೆಲೆಗಳಾದ ಇಂಗಳೇಶ್ವರ, ಹುಲ್ಲೂರು ನೆಲೆಗಳಲ್ಲಿ ಧ್ಯಾನಯೋಗಸ್ಥನಾಗಿ ಕುಳಿತಿರುವ ರೇವಣ್ಣಸಿದ್ಧನ ಶಿಲಾವಿಗ್ರಹಗಳು ನಿಜ ರೇವಣ್ಣಸಿದ್ಧನ ವಿಗ್ರಹಗಳೆಂದು ಹಾಗೂ ೧೩ನೇ ಶತಮಾನದಷ್ಟು ಪ್ರಾಚೀನ ಎಂದು ಒಪ್ಪಲಾಗಿದೆ. ಪುರಾಣ ಐತಿಹ್ಯಗಳ ಲೋಕದಲ್ಲಿ ಬದುಕುತ್ತಿದ್ದ ರೇವಣ್ಣಸಿದ್ಧನನ್ನು ಚರಿತ್ರೆಯ ಚೌಕಟ್ಟಿನಲ್ಲಿ ತರಲಾಗಿದೆ. ಆತನು ಅಯೋನಿಜನಲ್ಲ; ಯೋನಿಜನಾಗಿ ಹುಟ್ಟು ಪಡೆದವನು ಎಂದು ಒಪ್ಪಿಕೊಳ್ಳಲಾಗಿದೆ. ಆತನ ಜೀವಿತ ಅವಧಿಯನ್ನು ಕ್ರಿ.ಶ. ೧೦೨೦ ರಿಂದ ಮೊದಲುಮಾಡಿ ಕ್ರಿ.ಶ. ೧೯೫ರ ಮಧ್ಯದ ಅವಧಿಯೆಂದೂ, ಆತ ೧೧೫ ರಿಂದ ೧೩೫ ವರ್ಷಗಳ ಕಾಲ ಬದುಕಿರಬಹುದಾಗಿದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಈ ಅಧ್ಯಯನ ಒಂದು ನಿರ್ದಿಷ್ಟ ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕಾದುದರಿಂದ ಹಲವಾರು ಅಂಶಗಳು ಬಯಸುವ ವಿಸ್ತಾರದ ಚರ್ಚೆಯನ್ನು ಮಾಡಲಾಗಿಲ್ಲ. ಕಾರಣ ನಂತರ ಚರ್ಚೆಗೆ ಒಳಪಡಿಸಲು ಸಾಧ್ಯವಿರುವ ಅಂಶಗಳನ್ನು ಇಲ್ಲಿ ಕೊಡಲಾಗಿದೆ. ಕರ್ನಾಟಕ ಶರಣ ಚಳುವಳಿಯ ಸಂದರ್ಭದಲ್ಲಿ ಸಿದ್ಧ (ನಾಥ) ಮತ್ತು ಲಾಕುಳ ಶೈವ ಪಂಥಗಳ ವಿಲೀನಕರಣದ ಇತಿಹಾಸ ಗಮನಾರ್ಹವಾದುದು. ಇಲ್ಲಿ ವಿಲೀನಿಕರಣಕ್ಕೆ ಗುರಿಯಾದ ವ್ಯಕ್ತಿ ರೇವಣಸಿದ್ಧ. ಇಲ್ಲಿನ ಚರಿತ್ರೆಯು ಐತಿಹ್ಯೀಕರಣ ಮತ್ತು ಪುರಾಣೀಕರಣ ಹಿನ್ನೆಲೆಯಲ್ಲಿ ರೂಪಗೊಂಡು ಸಿದ್ಧ ಸಂಪ್ರದಾಯ, ಆಚಾರ್ಯ ಸಂಪ್ರದಾಯ ಎಂಬ ಕವಲುಗಳಾಗಿ ಬೆಳೆದು ಬಂದಿರುವುದನ್ನು ಗಮನಿಸಬಹುದಾಗಿದೆ. ಈ ಕುರಿತು ಮುಂದಿನ ಅಧ್ಯಯನಕ್ಕೆ ದಾರಿ ತೆರೆದಿದೆ.

ಅನುಬಂಧ ಒಂದು
ಛಾಯಾಚಿತ್ರಗಳು

೧ : ಸರೂರು ತಾ॥ ಮುದ್ದೇಬಿಹಾಳ ಜಿ॥ ವಿಜಯಪುರ



ಶ್ರೀ ರೇವಣಸಿದ್ಧೇಶ್ವರ (ಏಳುಗುಡಿ) ದೇವಸ್ಥಾನ



ಒಡೆಯ ವಂಶಸ್ಥರ ಶವಸಂಸ್ಕಾರ ಸ್ಥಳ



ಏಳುಗುಡಿ ದೇವಸ್ಥಾನ ಆವರಣದಲ್ಲಿರುವ ಶಿಲಾಶಾಸನ



ತೂಗುಡ್ಡದಲ್ಲಿರುವ ರೇವಣಸಿದ್ಧೇಶ್ವರ ದೇವಸ್ಥಾನ

೨ : ಇಂಗಳೇಶ್ವರ ತಾ॥ ಬಾಗೇವಾಡಿ ಜಿ॥ ವಿಜಯಪುರ



ಶ್ರೀ ರೇವಣಸಿದ್ಧೇಶ್ವರ ದೇವಾಲಯ



ಶ್ರೀ ರೇವಣಸಿದ್ಧೇಶ್ವರ



ಶ್ರೀ ರೇವಣಸಿದ್ಧೇಶ್ವರರ ಪಾದಗಟ್ಟಿ



ತಪೋನಂದಿ ಬೆಟ್ಟದ ಮೇಲಿರುವ ಸುರಂಗ ಮಾರ್ಗ



ಸುರಂಗದಲ್ಲಿರುವ ಸ್ತ್ರೀ ಹಾಗೂ ಗಂಡು ದೇವರ ವಿಗ್ರಹಗಳು



ತಪೋನಂದಿ ಬೆಟ್ಟದ ಮೇಲಿರುವ ಅಕ್ಕನಾಗಮ್ಮನ ದೇವಾಲಯ

೩ : ಹೊರ್ತಿ ತಾ।।, ಇಂಡಿ ಜಿ।। ವಿಜಯಪುರ



ಶ್ರೀ ರೇವಣಸಿದ್ಧೇಶ್ವರ ದೇವಾಲಯ (ಬನದಗುಡಿ)



ಶ್ರೀ ರೇವಣಸಿದ್ಧೇಶ್ವರಸ್ವಾಮಿ



ಶ್ರೀ ರೇವಣಸಿದ್ಧೇಶ್ವರ ದೇವಾಲಯ (ಹೊಸಗುಡಿ)



ಶ್ರೀ ರೇವಣಸಿದ್ಧೇಶ್ವರಸ್ವಾಮಿ (ಹೊಸಗುಡಿ)

೪ : ಹುಲ್ಲೂರು ತಾ॥ ಮತ್ತು ಜಿ॥ ಚಿತ್ರದುರ್ಗ



ಶ್ರೀ ರೇವಣಸಿದ್ಧೇಶ್ವರ ದೇವಾಲಯ (ಒಳಪ್ರಾಂಗಣ)




ಶ್ರೀ ರೇವಣಸಿದ್ಧೇಶ್ವರಸ್ವಾಮಿ

೫ : ಭೇಂಡವಾಡ ತಾ॥ ರಾಯಭಾಗ ಜಿ॥ ಬೆಳಗಾವಿ



ಶ್ರೀ ರೇವಣಸಿದ್ಧೇಶ್ವರ ದೇವಾಲಯ



ಶ್ರೀ ರೇವಣಸಿದ್ಧೇಶ್ವರಸ್ವಾಮಿ

೬ : ರಂಗವ್ವನ ಹಳ್ಳಿ ತಾ॥ ಚಳ್ಳಕೆರೆ ಜಿ॥ ಚಿತ್ರದುರ್ಗ



ಶ್ರೀ ರೇವಣಸಿದ್ಧೇಶ್ವರ ಮೂಲ ದೇವಾಲಯ



ಶ್ರೀ ರೇವಣಸಿದ್ಧೇಶ್ವರಸ್ವಾಮಿ

೭ : ಗೋವನಕೊಪ್ಪ ತಾ॥ ಬೈಲಹೊಂಗಲ ಜಿ॥ ಬೆಳಗಾವಿ



ಶ್ರೀ ರೇವಣಸಿದ್ಧೇಶ್ವರ ಗುಡಿ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೮ : ಕೊಟಬಾಗಿ ತಾ॥ ಮತ್ತು ಜಿ॥ ಧಾರವಾಡ



ಶ್ರೀ ರೇವಣಸಿದ್ಧೇಶ್ವರ ಗುಡಿ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೯ : ಬಾಗೂರು ತಾ॥ ಹೊಸದುರ್ಗ ಜಿ॥ ಚಿತ್ರದುರ್ಗ



ಶ್ರೀ ರೇವಣಸಿದ್ಧೇಶ್ವರ ಮಠ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೧೦ : ಕಡ್ಲೆಕಂಸಾಗರ ತಾ॥ ಹೊಸದುರ್ಗ ಜಿ॥ ಚಿತ್ರದುರ್ಗ



ಶ್ರೀ ರೇವಣಸಿದ್ಧೇಶ್ವರ ದೇವಾಲಯ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೧೧ : ಹುಣಸಿಹೊಳೆ ತಾ॥ ಸುರಪುರ ಜಿ॥ ಯಾದಗೀರ



ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೧೨ : ಶಿವನಿ ತಾ॥ ತರೀಕೆರೆ ಜಿ॥ ಚಿಕ್ಕಮಗಳೂರು



ಶ್ರೀ ರೇವಣಸಿದ್ಧೇಶ್ವರ ಸ್ವಾಮಿ ಗದ್ದುಗೆ



ಶ್ರೀ ರೇವಣಸಿದ್ಧೇಶ್ವರ ಸಿಂಹಾಸನದಲ್ಲಿರುವ ತಾಮ್ರ ಚಪ್ಪಡ

೧೩ : ಹರ್ತಿಕೋಟೆ ತಾ॥ ಹಿರಿಯೂರು ಜಿ॥ ಚಿತ್ರದುರ್ಗ



ಶ್ರೀ ರೇವಣಸಿದ್ಧೇಶ್ವರ ಮಠ



ಶ್ರೀ ರೇವಣಸಿದ್ಧೇಶ್ವರಸ್ವಾಮಿ ಗದ್ದುಗೆ



ಶ್ರೀ ರೇವಣಸಿದ್ಧೇಶ್ವರ ದೇವಾಲಯ



ಒಡೆಯರ ಗದ್ದುಗೆ



ಒಡೆಯರ ಶಿಷ್ಯನ ಗದ್ದುಗೆ



ಮಕರ ಸಂಕ್ರಾಂತಿಯ ಸಂದರ್ಭದಲ್ಲಿನ ಶ್ರೀ ರೇವಣಸಿದ್ಧೇಶ್ವರಸ್ವಾಮಿ ಮೂರ್ತಿ ಮೆರವಣಿಗೆ

ಲ.ಶಿ.೧.೧೩ : ಹಿರೇನಸಬಿ ತಾ॥ ಬದಾಮಿ ಜಿ॥ ಬಾಗಲಕೋಟೆ



ಶ್ರೀ ರೇವಣಸಿದ್ಧೇಶ್ವರ ಗುಡಿ



ಶ್ರೀ ರೇವಣಸಿದ್ಧೇಶ್ವರಸ್ವಾಮಿ

೧೬ : ಮಣ್ಣೂರು ತಾ॥ ಸವಣೂರು ಜಿ॥ ಹಾವೇರಿ



ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ



ಪದ್ಮಗೌಡ ಮತ್ತು ಚಿಮ್ಮಲಾದೇವಿ



ಶ್ರೀ ರೇವಣಸಿದ್ಧೇಶ್ವರಸ್ವಾಮಿಗೆ ಅರ್ಪಿಸುವ ಇಪ್ಪತ್ತೊಂದು ಏಡಿನ (ನೂಲಿನ) ಕಂಬಳಿ



ಶ್ರೀ ರೇವಣಸಿದ್ಧರ ಜಾತ್ರಾ ಮಹೋತ್ಸವ ಸಂದರ್ಭದಲ್ಲಿನ ಈರಗಾರರ ಅಲಗು ಸೇವೆ



ಶ್ರೀ ರೇವಣಸಿದ್ಧರ ಜಾತ್ರಾ ಮಹೋತ್ಸವ ಸಂದರ್ಭದಲ್ಲಿನ ಕುರಿ ಹಾಲಿನ ಮೆರವಣಿಗೆ



ಶ್ರೀ ರೇವಣಸಿದ್ಧರ ಜಾತ್ರಾ ಮಹೋತ್ಸವ ಸಂದರ್ಭದಲ್ಲಿನ ಹುಗ್ಗಿ ಪವಾಡ



ಶ್ರೀ ರೇವಣಸಿದ್ಧರ ಜಾತ್ರಾ ಮಹೋತ್ಸವ ಸಂದರ್ಭದಲ್ಲಿನ ಡೊಳ್ಳಿನ ಪದಗಳ ಹಾಡುವಿಕೆ

೧೭ : ಸೂಳೀಭಾವಿ ತಾ॥ ಹುನಗುಂದ ಜಿ॥ ಬಾಗಲಕೋಟೆ



ಶ್ರೀ ರೇವಣಸಿದ್ಧೇಶ್ವರ ಗುಡಿ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೧೮ : ಕಂದಿಕೆರೆ ತಾ॥ ಚಿಕ್ಕನಾಯಕನಹಳ್ಳಿ ಜಿ॥ ತುಮಕೂರು



ಶ್ರೀ ಗುರು ರೇವಣಸಿದ್ಧೇಶ್ವರ ಸಿಂಹಾಸನ



ಶ್ರೀ ಗುರು ರೇವಣಸಿದ್ಧರ ಗದ್ದುಗೆ

೧೯ : ಹಂದನಕೆರೆ ತಾ॥ ಚಿಕ್ಕನಾಯಕನಹಳ್ಳಿ ಜಿ॥ ತುಮಕೂರು



ಶ್ರೀ ಗುರು ರೇವಣಸಿದ್ಧರ ಸಿಂಹಾಸನ ಮಠ



ಶ್ರೀ ಗುರು ರೇವಣಸಿದ್ಧರ ಗದ್ದುಗೆ

೨೦ : ಹೊನ್ನವಳ್ಳಿ ತಾ॥ ಚಿಕ್ಕನಾಯಕನಹಳ್ಳಿ ಜಿ॥ ತುಮಕೂರು



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ ಮಠ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೨೧ : ಹುಳಿಯಾರು ತಾ॥ ಚಿಕ್ಕನಾಯಕನ ಹಳ್ಳಿ ಜಿ॥ ತುಮಕೂರು



ಶ್ರೀ ರೇವಣಸಿದ್ಧೇಶ್ವರ ಸಿಂಹಾಸನ



ಶ್ರೀ ರೇವಣಸಿದ್ಧೇಶ್ವರ ಗದ್ದುಗೆ

೨೨ : ಕಾರೇಹಳ್ಳಿ ತಾ॥ ಹೊಸದುರ್ಗ ಜಿ॥ ಚಿತ್ರದುರ್ಗ



ಶ್ರೀ ಗುರು ರೇವಣಸಿದ್ಧೇಶ್ವರ ಸ್ವಾಮಿ ಮಹಾಸಂಸ್ಥಾನ (ದೊಡ್ಡಮಠ)



ಶ್ರೀ ಗುರು ರೇವಣಸಿದ್ಧೇಶ್ವರಸ್ವಾಮಿ ಮಹಾಸಂಸ್ಥಾನ (ದೊಡ್ಡಮಠ) ಗದ್ದುಗೆ



ಶ್ರೀ ಗುರು ರೇವಣಸಿದ್ಧೇಶ್ವರ ಸ್ವಾಮಿ ಮಹಾಸಂಸ್ಥಾನ (ಚಿಕ್ಕಮಠ) ಗದ್ದುಗೆ

೨೩ : ಬಸವಾಪಟ್ಟಣ ತಾ॥ ಗಂಗಾವತಿ ಜಿ॥ ಕೊಪ್ಪಳ



ಶ್ರೀ ನಂಜುಡೇಶ್ವರ ದೇವಸ್ಥಾನ



ಶ್ರೀ ನಂಜುಡೇಶ್ವರ ದೇವಸ್ಥಾನದ ಗರ್ಭಗುಡಿಯ ಗೂಡಿನಲ್ಲಿರುವ
ಶ್ರೀ ರೇವಣಸಿದ್ಧನ ಮುಖವಾಡ



ಊರ ಹೊರಗಿನ ಮೂಲ ಶ್ರೀ ರೇವಣಸಿದ್ಧೇಶ್ವರ ದೇವಾಲಯ

೨೪ : ಚೌಡಯ್ಯದಾನಪುರ ತಾ॥ ರಾಣೇಬೆನ್ನೂರು ಜಿ॥ ಹಾವೇರಿ



ಶ್ರೀ ಮುಕ್ತೇಶ್ವರ ದೇವಸ್ಥಾನ



ಶ್ರೀ ಮುಕ್ತೇಶ್ವರ ದೇವಸ್ಥಾನದ ಆವರಣ

೨೫ : ಚಿಕ್ಕನಾಯಕನ ಹಳ್ಳಿ ತಾ॥ ತುಮಕೂರು ಜಿ॥ ತುಮಕೂರು



ಕಂಥಾಧಾರಣ ಮಹೋತ್ಸವದ ಸ್ವಾಗತ ಕಮಾನು



ಶ್ರೀ ರೇವಣಸಿದ್ಧೇಶ್ವರ ಮಠ



ಕಂಥಾಧಾರಣ ಮಹೋತ್ಸವದ ಮೆರವಣಿಗೆ



ಕಂಥಾಧಾರಣೆ ಸಂದರ್ಭ

೨೬ : ತೆನೆಗಲ್ಲು, ಕುಂದರ್ವೆ ಮಂಡಳ ತಾ॥ ಕಲ್ಯಾಣದುರ್ಗ ಜಿ॥ ಅನಂತಪುರ, ಆಂಧ್ರಪ್ರದೇಶ



ಶ್ರೀ ರೇವಣಸಿದ್ಧೇಶ್ವರ ಸ್ವಾಮಿ ಮತ್ತು ಶ್ರೀ ಬೀರೇಶ್ವರ ಸ್ವಾಮಿ



ಶ್ರೀ ರೇವಣಸಿದ್ಧೇಶ್ವರಸ್ವಾಮಿ ವಿಶೇಷ ಅಲಂಕಾರದ ಛಾಯಾಚಿತ್ರ



ಕಂಥಾಧಾರಣೆ ಸ್ಥಳದಲ್ಲಿ (ವಜ್ರ ಕಣಿವೆ, ಚಿ.ನಾ.ಹಳ್ಳಿ) ಅಲಂಕೃತ ರೇವಣಸಿದ್ಧ



ಕಂಥಾಧಾರಣೆ ಸಂದರ್ಭದಲ್ಲಿ ಒಡೆಯರ ದೀಕ್ಷೆ

೨೭ : ಗೌಡನ ಹಳ್ಳಿ ತಾ॥ ಮಡಕಸಿರಾ ಜಿ॥ ಅನಂತಪುರ



ಶ್ರೀ ರೇವಣಸಿದ್ಧೇಶ್ವರ ಸ್ವಾಮಿ ದೇವಾಲಯ ಗದ್ದುಗೆ

೨೮ : ಗೋವಿಂದವಾಡ ತಾ॥ ಮೊಮ್ಮನಾಳ ಮಂಡಳ ಜಿ॥ ರಾಮದುರ್ಗ




ಶ್ರೀ ರೇವಣಸಿದ್ಧೇಶ್ವರ ದೇವಾಲಯ

೨೯ : ಮಾಸ(ಚ)ನೂರು ತಾ॥ ಮಂಗಳವೇಡೆ ಜಿ॥ ಸೊಲ್ಲಾಪುರ, ಮಹಾರಾಷ್ಟ್ರ.



ಶ್ರೀ ಸಿದ್ಧೇಶ್ವರ ಮಂದಿರ (ಮುನ್ನೋಟ)



ಶ್ರೀ ಸಿದ್ಧೇಶ್ವರ ಮಂದಿರ (ಒಳನೋಟ)



ಶ್ರೀ ರೇವಣಸಿದ್ಧೇಶ್ವರ ಮಂದಿರ ಭೀಮಾನದಿಯೆಡೆಯ ನೋಟ



ಭೀಮಾ ನದಿಯಲ್ಲಿ ನಿರ್ಮಿಸಲಾದ ಶ್ರೀ ಜಟೇಶ್ವರ ದೇವಸ್ಥಾನ



ಶ್ರೀ ಸಿದ್ಧೇಶ್ವರ ಮಂದಿರ



ಶ್ರೀ ಸಿದ್ಧೇಶ್ವರ ಸ್ವಾಮಿ

೩೦ : ಸೊಲ್ಲಾಪುರ ತಾ॥ ಮತ್ತು ಜಿ॥ ಸೊಲ್ಲಾಪುರ



ಶ್ರೀ ರೇವಣಸಿದ್ಧೇಶ್ವರ ದೇವಾಲಯ



ಶ್ರೀ ರೇವಣಸಿದ್ಧೇಶ್ವರ ಸ್ವಾಮಿ



ಶ್ರೀ ರೇವಣಸಿದ್ಧೇಶ್ವರ ದೇವಾಲಯದ ಸಮೀಪದಲ್ಲಿರುವ ರೇವಣಸಿದ್ಧನ ಕೆರೆ




ಶ್ರೀ ಕಪಿಲ ಮಲ್ಲಿಕಾರ್ಜುನ ದೇವಾಲಯ

ಅನುಬಂಧ ಎರಡು

ದಾಖಲಾತಿಗಳು

೧



ಯಾದಾ ತಿಲಕಪ್ಪ ಬಾಳಪ್ಪ ರತಿ

ಅವಮಪ್ಪ ಬಸಪ್ಪ ಹಿಂಪಳ್ಳಿ
ಗೌಡಪ್ಪ ಸಿಂಗಪ್ಪ ಗ್ರಾಮಪಂಚಾಯಿತಿ

ಬಸ ಸಂಗಪ್ಪ ಕುಡೇದ
ಶಂಕ್ರಪ್ಪ ನಿಂಗಪ್ಪ ಅಂಗಡಿ

ಈ ಎಡಗೈ ಹೆಬ್ಬೆರಳ ಗುರುತು ದದ್ದಪ್ಪ ಯ ಯಾ
ರಡ್ಡ ಅವ

ಬಾಳಪ್ಪ ಬಂಡೆಪ್ಪ ಬಿಸ್ರೋಟಿ
ಸಂಗಪ್ಪ ಬಸಪ್ಪ ಕುರಬರ ದ॥ ಹಿ॥
ರತ್ನಪ್ಪ ನಾಗಪ್ಪ ಜ॥
ಇಲ ಗ್ರಾಮ ಪಂಚಾಯಿತಿ ಸದಸ್ಯರು
ಸಂಗಪ್ಪ ಪುರಪ್ಪ ನಾಯ್ಕರ

ಈ ಎಡಗೈ ಹೆಬ್ಬೆರಳ ಗುರುತು ರದ್ದಪ್ಪ
ವಗ್ಗೆ ಯ ಯಾ ರಡ್ಡ ಅವ

ಲಮಣಪ್ಪ ನಾಗಾಲಿ

ಈ ಎಡಗೈ ಹೆಬ್ಬೆರಳ ಗುರುತು ಚಂದ್ರಪ್ಪ
ಹೊಸಕೋಟಿ ಯ ನರಸಪ್ಪ ಲಕ್ಕಪ್ಪ

ಈ ಬಲಗೈ ಹೆಬ್ಬೆರಳ ಗುರುತು ಹಿರೇಗೌಡ ಗೌಡಪ್ಪ ರತ್ನಪ್ಪ
ರಡಿ ಸಂ. ಗಪ ಯರಡ ದ॥ ಸ॥

ಶ್ರೀ ಗುರುಪ್ರಸನ್ನ:

ವೇ|| ರಾ|| ರಾ|| ಗುರುವರ್ಯರಾದ ಶ್ರೀ ವೆಂಕಣ್ಣಯ್ಯನವರ
ಪಾದಸನ್ನಿಧಿಗೆ — ಈ ಪತ್ರ ಬರೆಯಲಿಕ್ಕೆ ಕಾರಣವೇನೆಂದರೆ
ಮಲ್ಲಪ್ಪ - ಸತ್ಯಪ್ಪ - ಜೋಗಿಪ್ಪ - ಹನುಮಪ್ಪ ಹೊಸಳ್ಳಿ ಯವರು
[illegible]

[illegible] ಹೊಸಳ್ಳಿ
ಹನುಮಪ್ಪ [illegible] ಹೊಸಳ್ಳಿ
[illegible] ಹೊಸಳ್ಳಿ
ಮಲ್ಲಪ್ಪ ಹೊಸಳ್ಳಿ
[illegible]
[illegible] ಹೊಸಳ್ಳಿ
[illegible] ಸತ್ಯಪ್ಪ ಹೊಸಳ್ಳಿ

[illegible] A-2

[illegible]

[illegible]

[illegible]

[illegible]

[illegible]

ಶ್ರೀ

ಶ್ರೀ ಶಿವಯೋಗಿ ಸಿದ್ಧೇಶ್ವರ ಸಿಂಹಾಸನಾಧಿಪತಿಗಳಾದ ಹಾಲಮಠದ

ಮೂಲಪೀಠದ ಆಚಾರ ವಿಚಾರಕ್ಕೆ ಕರ್ತರಾದ ರಾಜಾಧಿರಾಜ

ಪ್ರೌಢರಾದ ಶ್ರೀ. ಇಂತು ಪ್ರಮುಖ ಸ್ವಾಮಿ ಸಾ। ಡಂಬಳ

ತಾ। ಗದಗ ಜಿ। ಧಾರವಾಡ ।ತ್ತಾ। ಅ। ಉ

ಹಾಲಮಠ ... ಅದ್ವೈತ ... ಇಂತು ಮಂತ್ರ ಸಕಲ ...

ಮಂಡಳಿಯವರಿಗೆ ಪ್ರಕಟ ಮಾಡುವ ದೇವಸಂದ ... ಅದಿವೆಷ್ಟು


ಸಾಂಸಾರಿಕ ಕಟ್ಟು ಮಾನಿ ಮೊದಲಿಗೆ ಗ್ರಾಮದ ದೇವಸ್ಥಾನ ... ಇದ್ದೇವೆ

ದಳಗೆ ನ್ಯಾಯ ಬದ್ಧವಾಗ್ಯಾ ... ಶಿವಗುರುರಾಯರು ಕರೆದ ನ್ಯಾಯ

ತೀರ್ಪಿನ ಮಾತ್ತು ಇದಿವೆಷ್ಟು ನಿಗೆ ಕರೆಯುತ್ತೇವೆ ೧೦೬ ಆಕ್ಷೇಪಾದರೆ



ಇ ಬರದ ಸಹಿ ಹೆಬ್ಬೆಟ್ಟು ಶಂಕರಗೌಡ ಪಾಟೀಲ



ಇ ಬರದ ಸಹಿ ಹೆಬ್ಬೆಟ್ಟು ರಾಮಪ್ಪ ನಾಯಿಕ




ಇ ಬರದ ಸಹಿ ಹೆಬ್ಬೆಟ್ಟು ನಾಗಪ್ಪ ...




ಇ ಬರದ ಸಹಿ ಹೆಬ್ಬೆಟ್ಟು ಸಿಂಗಪ್ಪ ಬಿನ

ಸಾ। ಡಂಬಳ

ଋ




FOUR ANNAS

[illegible]

[illegible]

[illegible]


[illegible]


[illegible]

[illegible]

FOUR ANNAS

[illegible]


FOUR AYNAS


TWO ANNAS
INDIA

EIGHT ANNAS (৮)

[illegible]

2 Rs

ಕ್ರಮ ಸಂಖ್ಯೆ: 177
ಸನ್ 19 71 ನೇ ಇಸವಿಯ [illegible] ತಿಂಗಳ
20 ನೇ ತಾರೀಖಿನ ದಿವಸ 2 ಘಂಟೆ 3
ಹಗಲಿನ ನಡುವೆ [illegible] ಸಬ್ ರಿಜಿಸ್ಟ್ರಾರರ ಕಚೇರಿ
ಯಲ್ಲಿ ತಂದು ಕೊಟ್ಟರು.

ನಕಲಿಗೆ ಬರೆದ ಪುಟಗಳ [illegible]
ನೋಂದಿಸುವ ಫೀ [illegible] 1/-
ನಕಲು ಮಾಡುವ ಫೀ (2 ಪುಟ) 4
ಒಟ್ಟು ರೂ. 1-4

[illegible]

ಸಬ್ ರಿಜಿಸ್ಟ್ರಾರ್,

ಸಬ್ ರಿಜಿಸ್ಟ್ರಾರ್,

[illegible]

No 15

ಶ್ರೀ ಶಾರದಾ ಚಂದ್ರಮೌಳೀಶ್ವರ ಪ್ರಸನ್ನ: —

ಶ್ರೀಮತ್ಪರಮಶಿವಾವತಾರ ಶಾಸ್ತ್ರಾರ್ಥವಿಚಾರಮಾ
ತ್ರಾರ್ಥ ವಿದ್ವಜ್ಜನ ಸಾಧನ ಸಂಧಾನ ಯುಕ್ತ ಶ್ರೀ
ಮದ್ರಾಜಾಧಿರಾಜ ಮಹಾರಾಜ ಪೂಜಿತರವರ
ಕರವೀರ ಕೊಲ್ಹಾಪುರ ಶ್ರೀ ಸಂಕೇಶ್ವರ ಶ್ರೀಕ್ಷೇ
ತ್ರ ಪಾರವಿಟ್ಟು ಜಿತ ಶ್ರೀಮತ್ಪ್ರಾಪ್ತ ಸರಸ್ವರ
ಸಿಂಹಾಸನಾಧೀಶ್ವರ ಮುದ್ರಿಕೆ ಪರಮ ಪವಿತ್ರ
ಶ್ರೀಮತ್ಕುರುಬರೂಲಾ (ಷೇರಮುತಾ) ಸ್ವಯಂ
ದ್ವಾರ ರಾರವ ಕರ್ತೃಗಳಾದ ಶ್ರೀಮನ್ನಗದ್ಗು
ರು ತತ್ವಾದ್ವೈಷ್ಯೆ ಭಕ್ತಾವತೀರ್ಣ ಶ್ರೀಮದ್ರು ರೀವನ
ಸಿದ್ಧೇಶ್ವರ ಬಿಡಿಯರ್ ಮಹಾಸ್ವಾಮಿಗಳವರ
ದಿವ್ಯ ಶ್ರೀಸನ್ನಿಧಿಗೆ

ಶಂಬಳ ಸಂಸ್ಥಾನದ ಸೇರಿದ ಧಾರವಾಡ ಜಿಲ್ಲಾ ~~ಹಾನಗಲ~~ ಹುಬ್ಬಳ್ಳಿ ತಾಲೂಕ
ಪೈಕಿ ವರದಾ ತೀರ ಗ್ರಾಮದಲ್ಲಿಯ [illegible] ಸಮಾಜದವರು
ಮಾಡುವ ವಿಜ್ಞಾಪನ ನಮಸ್ಕಾರಗಳು ಶ್ರೀ ಜಗದ್ಗುರು ಸ್ವಾಮಿಗಳ
ವರದುಚ್ಛೇದಿಯು ನಮ್ಮ ಗ್ರಾಮಕ್ಕೆ ॥ ತಾ. ೨೨ ॥ ೧ ॥ ೩೫
ದಿವಸ ಅಂದರೆ ಯ ಗ್ರಾಮಕ್ಕೆ ದಯ ಮಾಡಿಸಿದ್ದರಿಂದ ಪಾವಿಲ್ಲರು
ದಿವಸ ಅಂದರೆ ಯು ಗ್ರಾಮಕ್ಕೆ ದಯ ಮಾಡಿಸಿದ್ದನ್ನು [illegible]
ಸೇರಿ ಶ್ರೀಸ್ವಾಮಿಗಳವರ ವಿಲ್ಲಕ್ಕೆಯ ರಥೋತ್ಸವ ವಿಜ್ರಂಭಣೆ
ಯಿಂದ ನೆರವೇರಿಸಿ ಕುಂಬಾರ್ತಿ ತಾಜ್ಞಾನ ಶಂಬಳಗಳು ಯಮತ
ಸೇರಿದ ಪಕ್ಕಾ ಸ್ವರ ಗ್ರಾಮದ ನಮ್ಮ ಸಮಾಜದವರು ಸೇರಿ
ಕೈಲಾದ ಮಟ್ಟಿಗೆ ಯಪ್ಪ ( ) ಹಣ ಕಾಣಿಕೆಯನ್ನು ಪಾದಕ್ಕೆ
ಅರ್ಪಿಸಿರುತ್ತೇವೆ ಯಂತ ಸಾಷ್ಟಾಂಗ ನಮಸ್ಕಾರಗಳು —

ತಾ ॥ ೨೨ ॥ ೧ ॥ ೧೯೩೫

[illegible]

[illegible]

[illegible]

[illegible] ಗ್ರಾಮದಲ್ಲಿ ನಡೆಯುವದು.

[illegible] ತಾ॥ 17-8-1935 [illegible] ತಾರೀಖು 18-8-1935

[illegible]

రా॥ రా॥ మ్యాజిష్ట్రేటు రాజిష్ట్రేటు కలెక్టరు ముట్టిశీవర

శీ॥ తెలుపు సాడ చేసే వినంవు కొఢల పొలిత్రు

నూరు యూరు గ్రామ వల్లి మురులు ధా శిబిష్టి గుడులు

తనవ నన చెందె యు నన్ను వ కుంటు గ్రా ముద్దల్లి

నల్లి యల్లిష్టి కలిగారు నగ నన్న రి కుల

స్త్రీ యాడి గల అవర నాను తం వనము ల యుక్తి

వలిం దన్న దొచ్చి కల్గ వదిస్తారి దినన గాండవు

నన్ను బద్దలు తన్ని చూడి ద్వరిం ద నాను వెం త్రోక్తి

దిం ద వన్న గం ధాశిలే గద గా గంగ్టిల వుల గ్రా నన

మ్యాద ఇట్ల గం కన నా మా సు గల నా గారు ప్రియ మ్మ

న్న గంవన లొక్క వయి నాలి నేగ గ్గ న్న గాంచనాను

నాను సం తలి కిల్లిం వ బి ట్టుల చి ట్టుల బ్బ నవం

వన్నె గాంత మ్యాలన్న దక్కల గ్రాఖ్యా నవ మ్యాలన్న

గాలన దక్కల ఇబ్బందం ధా నాయు ఆక్తై గం యుద్య

దం వ ఎ నారుల్కం సాద తి బిల్ది బాటిలిల్లి

ముందు వడు దన్ని ॥

ఉత్తరువు కిమ్మత్తిన గుంటుర్ కేశ్వ ప్రభావం

నమ్మజ్ఞాలి గారు మాలిదు ముదలు ప్రసాద కలశం॥

ఱం. ౧౧ - ౧ - ౧౮౪౦ ము ఫై

[illegible]

BOMBAY PROVINCE

ಅನುಬಂಧ: ಮೂರು

ಹಾಡುಗಳು

೧

ತನ್ನೀರ ಮಿಂದು ಬಟ್ಟೆಯ ಪಣದೊಟ್ಟು
ಅಪ್ಪಾ ನಿನ್ನ ಮಠಕ ನಾವು ಬಂದು

ಅಪ್ಪಾ ನಿನ್ನ ಮಠಕೆ ನಾವು ಬಂದು । ರೇವಣ್ಣ
ಕುಂಬಳದ ಮರಿಗೆ ಹೋಗಬೇಕು
ಕುಂಬಳದ ಮರಿಗೆ ಹೋಗಬೇಕು । ರೇವಣ್ಣ
ಲಿಂಗದ ಮ್ಯಾಗಳ ಹೂವ್ವ ದಯಮಾಡು

ಕಂತೆಯ ನೇಯುವರು ಎಂಥ ಮನೆತನದವರೊ
ಚಾಜ ಮನೆತನ ಬರಬೇಕು
ಹೊತ್ತೀಲಿ ಬೀರಲಿಂಗವ ಕರಕೊಂಡು । ರೇವಣ್ಣ
ಕುಂಬಳದ ಮರಿಗೆ ಹೊರಟಾನೆ

ಹೊತ್ತೀಲಿ ಬೀರಲಿಂಗನ ಕರಕೊಂಡು
ಕುಂಬಳದ ಮರಿಯ ಹಿಡಿದಾರೆ
ಕುಂಬಳದ ಮರಿಯ ಹಿಡಿದಾರೆ । ಅವರಿನ್ನು
ಕಂತೆಯ ನೇಯತಾರೆ

ಕಂತೆಯ ನೇಯುತಾರೆ ಹಳೆಕಂತೆ ಮಡಗಾಕೆ
ಅವರಿನ್ನು ಆಗ ಹೊರಟಾರೆ

ಚಂದುಳ್ಳಿ, ಮಲ್ಲನ ಕಟ್ಟಿ ಚಂದುಳ್ಳಿ . . . . .
ಶಂಬು ರೇವಣ್ಣ ಗದ್ದಿಗಾದ
ತುಂಬಿಟ್ಟು ಮಾವು ಕಿರಿನಲ್ಲಿ ಮರದಡಿಯ
ಶಂಬು ರೇವಣ್ಣ ಗದ್ದಿಗಾದ
ಹಾಲದಟ್ಟಿಯ ಮೇಲೆ ಸೀಳಿ ಮರಿನಾಟ
ಶಂಬು ರೇವಣ್ಣ ಬರುತಾನೆ

ತುಪ್ಪ ದಟ್ಟಿಯ ಮೇಲೆ ಸೀಳಿ ಮರಿಯನಾಟ
ಶಂಬು ರೇವಣ್ಣ ಬರುತಾನೆ
ಹಳೆಕಂತೆ ಮಡಿಗಾರ ಹೊಸಕಂತೆ ದರುಸಾರೆ
ಆಗ ರೇವಣ್ಣ ಬರುತಾನೆ

ಶಿಷ್ಯರು ಆಗ ಬಂದರೆ । ರೇವಣ್ಣ
ಪಟಸಾಲೆ ದಿನಿದಿನಿ ಆಗಲಿ
ಪಟ್ಟಸಾಲೆಲ್ಲ ದಿನಿದಿನಿ ಆಗಲಿ
ಶಿಷ್ಯರು ಆಗಬರುತಾರೆ

ಎಬ್ಬಿದರು ಬಿದುರಲ್ಲ ಗುದ್ದಿನಾಟುಗವಲ್ಲ
ಬುದ್ದಿಗೇಡಿ ಮಂಕಯ್ಯ ಗುರುವಲ್ಲ
ಬುದ್ದಿಗೇಡಿ ಮಂಕಯ್ಯ ಗುರುವಲ್ಲ । ರೇವಣ್ಣ
ಹನ್ನೆರೆಡು ಬೀದಿ ಪಡುದಾನೆ

ಹನ್ನೆರಡು ಬೀದಿ ಪಡುದಾನೆ ರೇವಣ್ಣ
ಅವನು ವಾಲಾಡಿ ಮಠಕ್ಕೆ ನಡೆದಾನೆ
ವಾಲಾಡಿ ಮಠಕ್ಕೆ ನಡುದಾನೆ । ರೇವಣ್ಣ
ಶಂಬು ರೇವಣ್ಣ ಗದ್ದಿಗಾದ
(ಹಾಡಿದವರು:ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಗ್ರಾಮದ ಲಕ್ಷ್ಮಜ್ಜ

೨

ಪೊಡಿವುತ್ತ ಪೊಡಿದು ಜಡೆ ಬೇರಿಗಿಳಿದಾವು
ತಲೆಯಾಗಳುಲ್ಲ ಕರಮೇದು । ರೇವಣನೋರ
ನೆತ್ತಿಮ್ಯಾಲತ್ತಿ ಮರನುಟ್ಟ । ರೇವಣನೋರ
ಅಣೆಮ್ಯಾಲಳ್ಳಿ ಪಲವಾದು । ರೇವಣನೋರ

ಉಬ್ಬಿನಾಗ ಗುಬ್ಬಿ ಚಿಗುತಾವು । ರೇವಣನೋರ
ರೆಪ್ಪೆಯಾಗೆ ಇಪ್ಪೆ ಪಲವಾದು । ರೇವಣನೋರ
ಕಣ್ಣಾಗ ಕಳುಲೆ ಪೊಡುದಾವು । ರೇವಣನೋರ
ಮೂಗಿನಾಗೆ ಮುಗುಳಿ ಪೊದುದಾವ । ರೇವಣನೋರ

ತುಟಿಯಾಗೆ ತೊಂಡೆ ಫಲನಾದು । ರೇವಣನೋರ
ವಾಯಾಗೆ ಬನ್ನಿ ಮರನುಟ್ಟಿ । ರೇವಣನೋರ
ಗಡ್ಡದಾಗ ಗೌಜು ಮರಿಮಾಡಿ । ರೇವಣನೋರ
ಕುತಿಗ್ಯಾಗೆ ಕುಸುಮೆ ಪೊಡುದಾವೊ । ರೇವಣನೋರ

ಎದೆಯ ಮ್ಯಾಮೊನ್ನೆ ಮರನುಟ್ಟಿ । ರೇವಣನೋರ
ಒಕ್ಕುಳದಾಗುತ್ತ ಪೊಡುದಾವೊ । ರೇವಣನೋರ
ತೊಡೆಯಾಗೆ ತೊಂಡೆ ಫಲವಾದು । ರೇವಣನೋರ
ಮೊಳಕಾಲು ತೊಂಡೆ ಫಲವಾದು । ರೇವಣನೋರ
ಪಾದ್ದಲ್ಲಿ ಪದುಮ ಬೆಳೆದಾವು

೩

ಕಲ್ಯಾಣ ಪಟ್ಟಣದಲ್ಲಿನೊಬ್ಬನಿದ್ದಾನ
ಕಲ್ಲಿ ಶೆಟ್ಟಿ ಅನ್ನುವ ಜಾತಿ ಗಾಣಿಗನು
ಬಡವನಾಗಿದ್ದ ಅವನಿಗೆ ಇತ್ತು ಒಂದೆ ಕಣ್ಣಾ
ಆಹಾರ ಇಲ್ಲದ ಎತ್ತು ಆಗಿತ್ತು ಬಹಳ ನಿತ್ರಾಣ
ಅವನು ಇಲ್ಲದೆ ಸಾಕಿದ ಎತ್ತಿಗಾದರು ಇತ್ತ ಒಂದೆ ಕಣ್ಣಾ

ಎತ್ತನು ನೋಡಿ ರೇವಣಸಿದ್ಧಗ ಬಂದಿತು ಕರುಣಾ
ಗಾಡಿಯಿಂದ ನೀರು ತರುವಾಗ ಎತ್ತು ಬಿತ್ತನ್ನಾ
ರೇವಣ ಸಿದ್ಧ ಅದನು ನೋಡಿ ಕೈ ಹಚ್ಚ್ಯನಾ
ಕೈಹಚ್ಚಿದಾಗ ಅದಕ್ಕೆ ಬಂತು ಜೋಡು ಶಕ್ತಿನಾ

ಅದನು ನೋಡಿ ಉಳಿದ ಗಾಣಿಗರ ಕಣ್ಣು ತೆರಿಸ್ಯಾನ
ನನಗೆ ಅಂಬಲಿ ಹಾಕಿದರೆ ಇಲ್ಲೆ ಉಳಿಯುವೆನಾ
ಅಂಬಲಿ ಹಾಕುವಾಗ ನೋಡಿದರು ಅವನ ಹೇಣ್ತಿನಾ

ಆಕೆಗಾದರು ಒಂದೆ ಕಣ್ಣ ನೋಡಿದ ರೇವಣ್ಣಾ
ಅವರನ್ನ ನೋಡಿ ಅವರ ಮೇಲೆ ಬಂದಿತು ಕರುಣಾ
ಕರುಣಾ ಬಂದು ಸಿದ್ಧಪುರುಷ ಕೊಟ್ಟಾನ ಸಂಪೂರ್ಣ

ಎತ್ತಿಗಾದರೂ ಬಂದು ಬಿಟ್ಟವು ಎರಡು ಕಣ್ಣಾ
ಇವರ ನೋಡಿ ಉಳಿದ ಗಾಣಿಗರಿಗೆ ಬಂತು ಸಿಟ್ಟನ್ನಾ
ಕಲ್ಯಾಣ ಪಟ್ಟವನ್ನು ಆಳುತ್ತಿದ್ದ ರಾಜ ಬಿಜ್ಜಳನಾ

ಎಲ್ಲ ಗಾಣಿಗೇರು ಹೋಗಿ ಹೇಳ್ತಾರ ತಮ್ಮ ದೊರೆಗೇನಾ
ದೊರೆಯು ಕರದ ಕೇಳ್ತಾನ ಕಲ್ಲಿ ಶೆಟ್ಟಿನಾ
ಉಳಿದ ವಿಷಯ ಹೇಮಾ ಸಾವಿತ್ರಿ ಹೇಳ್ತಾರ ಮುಂದಿನ ಸಂದಿಗೇನಾ
ಗಾಣಿಗರನು ಕರಸತಾನ ಬಿಜ್ಜಳ ರಾಜನಾ
ಲಗ್ನಕ್ಕಾಗಿ ಸಾವಿರ ಬಂಡಗ ಕೊಡದೇಶ ಎಣ್ಣಿಯನಾ
ಕಲ್ಲಿಶೆಟ್ಟಿ ಬಿಟ್ಟು ನೀವು ಕೊಡಬೇಕಂದನಾ

ಕಲ್ಲಿಶೆಟ್ಟಿ ನಮಕ್ಕಿಂತ ಶ್ರೀಮಂತನಾದನಾ
ನಮನ ಬಿಟ್ಟು ಅವನ ಕೊಡಬೇಕು ಎಲ್ಲಾ ಎಣ್ಣೆಯನಾ
ಅವನ ಮಾತು ಕೇಳಿರಾಜ ಆಗಲೆಂದನಾ

ರಾಜನ ಮಾತು ಕೇಳಿ ಶೆಟ್ಟಿ ಮೂರ್ಚ್ಛೆ ಹೋದಾನಾ
ಬಿದ್ದದು ನೋಡಿ ರೇವಣಸಿದ್ಧ ಹೇಳಿದ ಸಾಮಾದಾನಾ
ರೇವಣಸಿದ್ಧನ ಮಾತು ಕೇಳಿ ಮೂರ್ಛೆ ಎದ್ದಾನೂ

ಅಂದಿನಿಂದ ಗಾಣ ತಿರುವಲು ಕುಂತಾವ ರೇವಣ್ಣ
ಲಕ್ಷ ಖಂಡಗ ಎಣ್ಣಿ ಹೊರಟಿತು ಕೇಳ್ರಿ ಮಜಕೂರನಾ
ಎಣ್ಣಿ ಡೆಬ್ಬಿ ತಾವಾಗಿಯೆ ಅರಮನೆಗೆ ಸಾಲ ಹಚ್ಚಿನಾ

ಅರಮನೆ ತುಂಬಿ ಹೊರಗೆ ನಿಂತವು ಎಣ್ಣಿ ಡೆಬ್ಬಿನಾ
ಅದನ ನೋಡಲಾಕ ಬಂದಿತು ಲೋಕದ ಜನಾ
ರಾಜ ನೋಡಿಕಲ್ಲಿ ಶೆಟ್ಟಿಗೆ ಮಾಡಿದ ಸನ್ಮಾನಾ

ರಾಜ ಬಂದು ನೋಡತಾನಾ ರೇವಣಸಿದ್ಧನಾ
ತಪ್ಪಾತು ಎಂದು ರಾಜನುಡಿದು ಪಾದಿಗೆ ಬಿದ್ದಾನಾ
ಅಂದಿನಿಂದ ತೇಲಿಯರಿಗೆ ಗುರುವು ಆದಾನಾ

ಶರಣರ ಮಹಿಮೆ ಹೀಗೆ ಐತಿ ತಿಳಿಯುವರ್‍ಯಾರಣ್ಣಾ
ಬಲ್ಲವನೆ ಬಲ್ಲ ಅವನ ಮಹಿಮೆ ತಿಳಿದವನೆ ಜಾಣಾ
ಹೇಮಾ ಸಾವಿತ್ರಿ ಹೀಗೆ ಹಾಡತಾರ ತಿಳಿಸಿ ಇದರ ಖೂನಾ

೪

ನವನಾಥರು ಅಧಿಪತಿ ಇದ್ರು ಕೊಲ್ಲಾಪುರಕ
ಎಲ್ಲ ಜನರಿಗೆ ಸುರುವು ಮಾಡಿದ್ರು ಮೋಸ ಮಾಡೋದಕ
ಮೋಸ ವಂಚನೆ ತಾಳಲಾರದೆ ಇದ್ರೊ ಸುಮ್ಮಕ

ಹಂಪೆಯಲ್ಲಿ ಇದ್ದ ಸಿದ್ದ ತಿಳದ್ರೊ ತಮ್ಮ ತನಕ
ಮಂಗಳವಾಡಾ ದಾರಿಯಿಂದ ನಡೆದ್ರೊ ಪಶ್ಚಿಮಕ
ಹೋಗುವಾಗ ವಸ್ತಿ ಆತು ಭೇಂಡಾವಾಡ ಗ್ರಾಮಕ

ಭೇಂಡವಾಡ ಬಿಟ್ಟು ನಡೆದ್ರೊ ಅವರು ಊರ ಉತ್ತರಕ
ಸಿದ್ಧ ಪುರುಷ ತಪಸ್ಸು ಮಾಡಲು ಕುಂತ್ರೊ ಗುಡ್ಡಕ
ಪವಾಡ ಮಾಡಿ ರೇವಣಸಿದ್ಧ ನಡೆದ್ರೊ ಮುಂದಕ

ಲಗುಬಗೆಯಿಂದ ಹೋಗಿ ಬಿಟ್ರು ಕೊಲ್ಲಾಪುರಕ
ಸಿದ್ದಪುರುಷ ಬಂದದ್ದು ನೋಡಿ ತಿಳದ ಗೋರಖ
ಸತಿಪತಿ ಅವರು ಸಿದ್ಧನನ್ನು ನಾಶಮಾಡುದಕ

ಕೃಪಾಣವನ್ನು ತಂದು ನೀಡಿದರು ಅವರ ಉಡಿಯಾಕ
ಪ್ರಸಾದ ಮಾಡಿರೆಂದು ಬಿದ್ರೊ ಅವರ ಪಾದಕ
ಕೃಪಾಣವನ್ನು ಕರಗಿಸಿ ಕುಡುದ್ರು ಇದ್ದ ಸುಮ್ಮಕ

ಬಿದ್ದು ಹೊರಳಾಡುತ್ತಿದ್ದ ಸ್ವಾಮಿ ಗೋರಖ
ಲಕ್ಕಾದೇವಿ ಬಂದು ನೋಡತಾಳ ತಿಳಿದೊ ತನ್ನ ಮನಕ
ತಪ್ಪಾಯಿತೆಂದು ಸತಿಪತಿ ಇಬ್ಬರೂ ಬಿದ್ರೊ ಪಾದಕ

ಶ್ರೀ

ರುದ್ರಮುನಿಯು ದೀಕ್ಷೆ ಕೊಟ್ಟ ಮಹಾ ಶರಣಗ
ಬಳ್ಳಾರಿ ಜಿಲ್ಲೆಯ ಹಾವಿನಹಾಳ ಶರಣ ಕಲ್ಲಯ್ಯಗ
ಇವನ ತಾಯಿ ಕಲ್ಲೇಶ್ವರಗ ನಡೆದು ಕೊಂಡಾಗ

ಆಶೀರ್ವಾದ ಬಲದಿಂದ ಹುಟ್ಟ್ಯಾ ನಿವನೀಗ
ಒಂದು ದಿವಸ ಗಟ ಸರ್ಪ ಬಂತು ಇದರೀಗ
ಕಚ್ಚಿದರು ನೋಡಲಿಲ್ಲ ಹೊಂಟೋ ಅವಹಂಗ

ಹಿಂಗೆ ಐತಿ ಶರಣರ ಮಹಿಮೆ ತಿಳಿರಿ ಮನದಾಗ
ಫಾಳಿದು ನಡಿರಿ ಭಕ್ತಿಯಿಂದ ಭೋಳೆ ಶಂಕರಗ
ಅವನ ಸೇವಾ ಮಾಡಿದವಗ ಫಲ ಸಿಗುವಾಗ

ಕಲ್ಲಯ್ಯ ಸಾಯಲಿಲ್ಲ ನೋಡ್ರಿ ಎಂಥ ಶರಣೀಗ
ಹಾವು ಸತ್ತಿತ್ತು ಅವನು ಉಳಿದ ಕೇಳ್ರಿ ಸೋಜಿಗ
ಹಾವಿನ ಹಾಳ ಎಂದು ಅದಕ ಬಂತು ಹೆಸರೀಗ

ಪ್ರಪಂಚ ಮಾಡಿ ಪಾರಮಾರ್ಥ ಕಡೆಗೆ ಇಟ್ನೋ ಮನಸೀಗ
ಕೆಲವು ದಿವಸ ಹೋಗೊದ್ರಾಗ ಹುಟ್ಟಿತೊ ಮಗು ಇವಗ
ಕಲ್ಲವ್ವನೆಂದು ಹೆಸರಿಟ್ಟು ಕರದ್ರೊ ಆ ಮಗುವೀಗ

ನಾ ಹೆಚ್ಚು ನೀ ಹೆಚ್ಚು ಅನ್ನುವಾದ ಎದ್ದಿತೋ ಆವಾಗ
ನಾಯಿಯ ಕರೆದು ವೇದ ನುಡಿಸಿದ ಎಂಥ ಸೋಜಿಗ
ಕಲ್ಲಿನಾಗ ನಾಯಿ ಮೂರ್ತಿ ಕೆತ್ತಿದ್ದ ರಾವಾಗ

೬

ಬಿಯಾಳಿ ಸಿದ್ಧನು ಜಗದೊಳಗೆ ಹೆಚ್ಚಿನ ವೀರಾ
ಬೆಂಕಿಯಲ್ಲಿ ಬಿದ್ದು ಸತ್ತವರನ್ನ ಬದುಕಿಸಿದಂಥವರಾ
ಸಗರ ರಾಯನಿಗೆ ವಯಸ್ಸಾಗಿ ಬಗ್ಗಿ ನಡೆದಾರಾ

ರಾಯನ ನೋಡಿ ಬಿಯಾಳಿಸಿದ್ದ ಏನು ಅಂದಾರಾ
ಮುಪ್ಪು ಬಂದವರ್ಗಿ ತಾರುಣ್ಯ ಕೊಡುತಿನಿ ಎಂದು ಹೇಳ್ಯಾರಾ
ಕಾದ ಎಣ್ಣಾಗ ಜಿಗಿದ ಬಂದವರ ಆಗುತಾರ ಹರೆದಾವರ

ರಾಯನ ಜನರು ಮೊದಲು ಅವನು ಜಿಗಿಲಿ ಅಂದಾರಾ
ನೀವು ಜಿಗಿದು ಬಂದ ಮ್ಯಾಲೆ ಜಿಗಿತಾರ ರಾಯರಾ
ತಾನು ಜಿಗ್ಯಾಕ ತಯಾರ ಆಗಿ ಕೊಟ್ಟು ಎರಡು ಬೇರಾ

ಎಣ್ಣೆಯಲ್ಲಿ ಬಿದ್ದ ಮೇಲೆ ಹಾಕು ಒಂದ ಬೇರಾ
ಕರಗಿದ ಮೇಲೆ ಮತ್ತೊಂದು ಬೇರಾ ಹಾಕೊ ನೀ ಚದುರಾ
ಎರಡನೇ ಬೇರಾ ಹಾಕಿದ ಮೇಲೆ ಹರೆದ ಮಾನವರಾ

ಇಷ್ಟು ಹೇಳಿ ತಾನು ಜಿಗಿದ ನೋಡು ಸಿದ್ದರಾ
ಜಿಗಿದ ಮೇಲೆ ಒಂದು ಬೇರಾ ಹಾಕ್ಯಾರ ರಾಯಾರು
ಸಿದ್ಧ ಕರಗಿ ಎಣ್ಣಿ ಆದ ಕೇಳ್ರಿ ಚಮತ್ಕಾರಾ

ಇನ್ನೊಂದು ಬೇರು ಹಾಕುವಾಗ ಕೈಹಿಡದ್ರೊ ಪ್ರಮುಖರಾ
ಧರೆಯನ್ನು ಆಳುವ ನೀವು ನಮ್ಮ ರಾಯರಾ
ಇಲ್ಲದಂತೆ ಮಾಡಿ ಬಿಟ್ಟಾರ ಈ ಸಿದ್ಧರಾ

ಹಾಗೆ ಇರಲಿ ಹಾಕ ಬೇಡ್ರಿ ಇನ್ನೊಂದು ಬೇರಾ
ಎಣ್ಣೆಯಲ್ಲಿ ಬೆಳ್ಳಿ ಗುಂಡಾಗಿ ಆಗಿ ಬಿದ್ದಾರ
ಹೇಮಾ ಸಾವಿತ್ರಿ ಹಿಂಗ ಹಾಡತಾರ ಸಣ್ಣಬಾಲರಾ

೭

ಪ್ರಯಾಣ ಮಾಡುತ ಮದಗದ ಹತ್ತಿರ ಬಂದ್ರೊನಾಥರು
ಮಳೆಗಾಲದಲ್ಲಿ ತುಂಬಿ ಹರಿಯುತ್ತಿತ್ತು ಹೊಳೆಯು ಬರಪೂರಾ
ನೀರು ತುಂಬಿದಾಗ ನಾವ ಹಾಕುತಿದ್ರು ಅಲ್ಲಿಯ ಅಂಬೀಗೇರಾ

ನಾವ ನಡಸಾಂವ ಭೂತಯ್ಯಂತ ಇತ್ತೊ ಅವನ ಹೆಸರಾ
ನನ್ನನ್ನು ಆಚೆಗೆ ಒಯ್ಯಬೇಕಂತ ಹೇಳಿದ್ರೊ ಇವರಾ
ಸಿಟ್ಟಿನ ಅಂಬಿಗ್ಯ ಒಯ್ಯದಿಲ್ಲಂತ ಹಟವ ತೊಟ್ಟಾರಾ

ನೀ ಏನ ನನಗ ನಾವ ಕೊಟ್ಟಿಲ್ಲ ಒಯ್ಯುದಿಲ್ಲಂದಾರಾ
ಎದೆಗೆ ಕೈಹಾಕಿ ಭೂತಯ್ಯನು ನುಗಿಸಿ ಕೊಟ್ಟಾರಾ
ರೇವಣಸಿದ್ಧರು ಹೋಗಿ ಬಿದ್ದರು ಅಲ್ಲಿ ಇತ್ರೊನೀರಾ

ಪೆಟ್ಟಿ ಹತ್ತಲಿಲ್ಲ ರೇವಣನಾಥರು ಎದ್ದು ನಿಂತರಾ
ಹೊತ್ತ ಅರವಿನ ಕಡಿಕ ತೆಗೆದು ಮಡಿಕಿ ಮಾಡ್ಯಾರಾ
ಮಡಕಿ ಮಾಡಿದ ವಸ್ತ್ರವನು ನೀರಿನ ಮೇಲೆ ಹಾಸ್ಯಾರಾ

ಶರಣರ ಲೀಲಾ ನಮಗ ತಿಳಿದುಲ್ಲ ನಾವು ಪಾಮರರಾ
ನಮ್ಮಂತೆ ಅವರು ಮಾನವರಲ್ಲ ದೇವಮಾನವರಾ
ಹಾಗಂತ ಅವರು ಆಕಾಶದಲ್ಲಿ ಹೋಗುತ್ತಿದ್ದರು

ಶರಣರಂದರ ಪರಶಿವನಲಿಲಾ ತಿಳಿದುಕೊಂಡವರಾ
ನಾವು ಅಂದರ ಭೂಮಿಯ ಮ್ಯಾಲಾ ಇದ್ದು ಸತ್ತವರಾ
ಮಹಾತ್ಮ ಅಂದರ ಭೂಮಿಯ ಮ್ಯಾಲಾ ಸತ್ತು ಇದ್ದವರಾ

ಸತ್ತು ಇದ್ದವರೊಳಗೆ ಬರುತಾರ ಇವರಾ ರೇವಣಸಿದ್ಧರಾ
ಇಂಥವರ ಲೀಲಾ ಹುಡುಕಿ ತೆಗೆದು ಹಾಡುತ್ತ ಹೊರಟಾರಾ
ಹೇಮ ಸಾವಿತ್ರಿ ಎಂದು ಐತಿ ಅವರ ಹೆಸರಾ
ನೀರಿನ ಮೇಲೆ ವಸ್ತ್ರ ಹಾಸಿ ಅದರ ಮೇಲೆ ಕುಂತಾರಾ
ಕೈಯೊಳಗಿನ ಲಾಕುಳವನು ಹುಟ್ಟು ಮಾಡ್ಯಾರಾ
ಸದ್ಗುರುನಾಥನ ನೆನೆಯುತ ಅವರು ಕಣ್ಣು ಮುಚ್ಚ್ಯಾರಾ

ಹಟ್ಟು ಹೊಡೆಯುತ ನಾವಿನಕಿಂತ ಮುಂದೆ ಹೊರಟಾರಾ
ಎರಡು ದಂಡೆಗೆ ಬಹಳ ಜನ ನೋಡುತ ನಿಂತಾರಾ
ಅವರೆಲ್ಲ ತಿಳಿದ್ರು ಮಾನವರಲ್ಲ ಸಿದ್ಧಪುರುಷರಾ

ರೇವಣಸಿದ್ಧರಿಗೆ ಜಯವಾಗಲೆಂದು ಘೋಷಣೆ ಮಾಡ್ಯಾರ
ನೀರಿನ ಮೇಲೆ ತೇಲುತ್ತ ಹೊರಟ್ರೊ ರೇವಣಸಿದ್ಧರಾ
ಎಲ್ಲ ಜನರಿಗೆ ಆಶ್ಚರ್ಯ ಆತು ದಂಡೆಗೆ ಹೋದಾರಾ

ನಾವ ಹಿಂದೆ ಬಿತ್ತು ಮುಂದೆ ಹೋದರು ನೋಡಿ ಅಂಬಿಗೇರಾ
ಮಾರಿಯ ಮೇಲೆ ಬಡದಂಗಾತು ಸುಮ್ಮನೆ ಕುಂತಾರಾ
ನಮ್ಮ ಕಡೆ ತಪ್ಪಾತೆಂದು ಕಾಲು ಹಿಡಿದಾರಾ

ತಪ್ಪಾದ ಮೇಲೆ ಒಪ್ಪಿಗೆ ಕೊಟ್ಟರು ಸಿದ್ಧನಾಥರಾ
ಇನ್ನು ಮುಂದೆ ಹಿಂಗ ಮಾಡಬೇಡ್ರಿ ಬುದ್ಧಿ ಹೇಳ್ಯಾರಾ
ಬುದ್ಧಿಮಾತಿಗೆ ಗೋಣುಹಾಕಿ ಕಣ್ಣೀರು ತಂದಾರಾ

ಕೆರೆಯಲ್ಲಿದ್ದ ಖಡ್ಗಗಳು ಸಣ್ಣಕೂಸು ಆಗ್ಯಾರಾ
ಕೈಯಲ್ಲಿ ಆರುತಿ ಹಿಡಿದುಕೊಂಡು ಆರುತಿ ಬೆಳಿಗ್ಯಾರಾ
ಕೂಸುಗಳಿಗೆ ರೇವಣಸಿದ್ಧರು ಆಶೀರ್ವಾದ ಮಾಡ್ಯಾರಾ

ಸಣ್ಣಕೂಸು ಹೋಗಿ ಖಡ್ಗವಾಗಿ ಮರಳಿ ಹೋಗ್ಯಾರಾ
ಮರಳಿ ಹೋಗಿ ಮಾಸನೂರ ಕೆರ್‍ಯಾಗ ಕುಳಿತು ಬಿಟ್ಟಾರಾ
ಹೇಮಾ ಸಾವಿತ್ರಿ ಕಲಿತು ಹಾಡತಾರ ಸಣ್ಣ ಬಾಲಕರಾ

೮

ಕಲ್ಯಾಣವನು ಆಳುವಾಗ ಬಿಜ್ಜಳ ರಾಜರಾ
ಜೈನ ಬ್ರಾಹ್ಮಣ ಉತ್ತಮವಾದ ಜಾತಿಯ ಜನರಾ
ಕುರುಬರು ಬಂದು ಕಲ್ಯಾಣದಾಗ ಮಾಂಸ ಮಾರ್‍ಯಾರಾ

ಹೆಚ್ಚಿನ ಜಾತಿಯ ಜನರು ಬಂದು ಕಿವಿಯ ಉದ್ಯಾರ
ಅದನು ಕೇಳಿ ಬಿಜ್ಜಳ ರಾಜ ಆಜ್ಞ ಮಾಡ್ಯಾರಾ
ಕಲ್ಯಾಣದಾಗ ಹೊಲಸು ಕುರುಬರು ಬರದಂತೆ ಮಾಡ್ಯಾರಾ

ಆಗಿನ ವೇಳಕ ಕುರುಬರ ಮುಖಂಡ ಯಾರು ಇದ್ದಾರಾ
ತೆಗೆದ ನೋಡ್ರಿ ವಿಚಾರಮಾಡಿ ನೀವು ಬಲ್ಲರಾ
ಈ ಸುದ್ದಿ ಸಿದ್ದರಾಮಾ ರೇವಣಸಿದ್ಧ ಅಲ್ಲಮಪ್ರಭು ದೇವ್ರಾ

ಇವರಿಗೆ ತಿಳಿದ ಮೇಲೆ ಬಂದ್ರು ಮೂರು ಜನರಾ
ಇವರ ಕೂಡ ಮತ್ತೊಬ್ಬ ಬಂದ ಮಂಕವಡೇರಾ
ಬಸವಣ್ಣನ ಕರಕೊಂಡ ಬಂದ್ರೊ ಇವರು ಐವರಾ

ಬಿಜ್ಜಳ ರಾಜಗ ಬೆಟ್ಟ ಆಗಿ ತಿಳಿಸಿದ್ರೂ ವಿಚಾರ
ನಮ್ಮ ಕುರುಬರನ್ನು ಹೊರಗೆ ಯಾಕೆ ಹಾಕಿದಿ ಅಂದಾರ
ಮೇಲಿನ ಜಾತಿಯ ಮಾತುಕೇಳಿ ಹಾಕೇವಿ ಮನಸಾರಾ

ಐವರು ಕೂಡಿ ಗಾದೆಯ ಮಾತಾ ಒಂದು ಹೇಳ್ಯಾರಾ
ಆ ಮಾತು ಯಾವದು ಎಂದು ಹೇಳಬೇಕಂದರಾ
ಈ ಮಾತಿಗೆ ಒಪ್ಪಿಗೆ ಕೊಟ್ಟ ಬಿಜ್ಜಳ ರಾಯರಾ

ಅದೇ ದಿವಸ ಗೂಳಿಸತ್ತಿತ್ತು ಕೆಲವು ಜನರಾ
ಮಣ್ಣ ಕುಡಾಕ ಎಲ್ಲ ಜನರು ತರತಿದ್ದಾರಾ
ಹೇಮಾಸಾವಿತ್ರಿ ಮುಂದಿನ ಸಂದಿಗೆ ಹಾಡು ಹೇಳುವರಾ
ಕಲ್ಯಾಣದೊಳಗ ಗೂಳಿ ಸತ್ತಿತೆಂದು ಹೇಳುತ್ತಿದ್ದರಾ
ಏನು ಆಗಿ ಸತ್ತಿತ್ತೆಂದು ನೀವು ಹೇಳ್ಬೇಕಂದರಾ
ಎಷ್ಟು ಜನರು ಹೊತ್ತುಕೊಂಡು ತರುವತಿದ್ದಾರಾ

ಅಗಸಿಯ ಹೊರಗೆ ನಿಂತು ಕುರುಬರು ಅದನುತರುಬ್ಯಾರಾ
ಅದನು ತರುಬಿದ ಸುದ್ದಿ ಹೋಗಿ ಶರಣರು ಹೇಳ್ಯಾರ
ಓಡುತ ಬಂದು ಅಲ್ಲಿಗೆ ನಿಂತಾರ ಮುಖಂಡರೆಲ್ಲಾರಾ

ಎಲ್ಲಾರಕ್ಕಿಂತ ಮುಂದೆ ನಿಂತಾರ ರೇವಣಸಿದ್ಧರಾ
ಗೂಳಿ ತರುವಾಗ ಎಷ್ಟುವಾದ್ಯ ಬಾರಿಸುತಿದ್ದಾರಾ
ಎಷ್ಟು ಎಂದು ಅಕಡಾ ಹೇಳಬೇಕ ತಿಳಿದವರಾ

ಮೇಲ ಜಾತಿಯವರನ್ನ ಕರದ ಕೇಳತಾರ ಮಂಕವಡೇರಾ
ನಿಮ್ಮ ಗೂಳಿನ ನೀವು ಎಬಿಸಿರಿ ದೊಡ್ಡ ಶರಣರಾ
ಸತ್ತ ಟಗರನಾ ನಾವು ಎಬಿಸತೇವು ಆದೇವು ಶ್ಯಾನೇರಾ

ಇದನ ಕೇಳಿ ಕೆಲಸಾ ನೋಡಿ ಶರಣರು ಬೊಟ್ಟು ಕಚ್ಯಾರ
ಕುರುಬ ಜನರಾ ನಮಕ್ಕಿಂತ ಹೆಚ್ಚಿನ ಜನರಾ
ಸತ್ತ ಟಗರಿನ ಮ್ಯಾಲಾ ರೇವಣಸಿದ್ಧ ಒಗೆದರೋ ಭಂಡಾರಾ

ಇವರ ಕೆಲಸಾ ನೋಡಿ ಶರಣರು ಬೊಟ್ಟು ಕಚ್ಯಾರಾ
ಕುರುಬ ಜನರಾ ನಮಕ್ಕಿಂತ ಹೆಚ್ಚಿನ ಜನರಾ
ನಮಗೆ ಆಗುಲ್ದ ಕೆಲಸಾ ಇವರು ಮಾಡಿಬಿಟ್ಟಾರಾ

ಅದೇ ವೇಳೆಕ ಕುರುಬರ್ನೆಲ್ಲಾ ಒಳಗೆ ತೆಗೆದು ಕೊಂಡಾರಾ
ಕುಂತರೆ ಕುರುಬ ನಿಂತರೆ ಕಿರುಬ ಎಂದು ಹೇಳ್ಯಾರಾ
ಹೇಮಾ ಸಾವಿತ್ರಿಗೆ ಈ ಹಾಡಿಗೆ ಶಭಾಶ ಅಂದಾರಾ

೯

ಸಂಚಾರ ಮಾಡುತ ಹಾಗೆ ನಡೆದ್ರೊ ರೇವಣಸಿದ್ಧರಾ
ಧರ್ಮದ ಬಗ್ಗೆ ಬೋಧನೆ ಮಾಡುತ ನಡೆದ್ರೊ ಗುರುವರಾ
ಕೊಲ್ಲಾಪುರಕ ಹೋಗಿ ನಿಂತ್ರೊ ತನ್ನ ಮನಸಾರಾ

ರಾಣಿ ಅನಿಸಿದ ಮಾಯಾದೇವಿನ ನೋಡಿದ್ರೊ ಸಿದ್ಧರಾ
ಅಲ್ಲಿಯ ಜನರು ರೇವಣಸಿದ್ಧಾಗ ಹೇಳಿದ್ರೊ ಹುಷಾರಾ
ನಿನ್ನಿಂಥ ಸಿದ್ಧು ಆಕೆಯ ಹಂತೇಲಿ ಎಷ್ಟೋ ಇದ್ದಾರಾ

ಅದರಲೆಕ್ಕ ಹೇಳುತೀನಿ ನವಕೋಟಿ ಸಿದ್ಧರಾ
ಅವರು ಎಲ್ಲಾ ಕಾರಾಗ್ರಹದ ಬಳಗ ಇದ್ದಾರಾ
ಆನರ ಮಾತು ಕೇಳಿ ರೇವಣಸಿದ್ಧ ಆದೊಹುಷಾರಾ

ಮಂದಿಯ ಮಾತ್ಕೇಳಿ ರೇವಣನಾಥಾ ಹೋದೊ ಬರರರಾ
ಅಂತಃಪುರಕೆ ಹೋಗಿ ನಿಂತನೊ ತಾನು ಬಳೆಧೀರಾ
ಮಾಯಾದೇವಿ ನೋಡಿ ಇವನ ಮಾಡಿ ವಿಚಾರಾ

ದಾಸಿಯರಿಗೆ ಹೇಳಿಬಿಟ್ಟಳು ತನ್ನಮನಸಾರಾ
ಕಾರಾಗ್ರಹಕೆ ಹಾಕಿ ಬಿಡ್ರಿ ಇವನ್ಯಾರ ಕೇಳಾವಾರಾ
ರೇವಣಸಿದ್ಧ ಕರಕೊಂಡ ಹೊಂಟ್ರೊ ದಾಸಿದಾಸೇರಾ

ಜೇಲಕ ನನ್ನನ್ನು ಯಾಕೆ ಹಾಕ್ತೇರಿ ಅಂದ್ರುನಾಥಾರಾ
ಅದೇನ ಕೇಳ್ತಿ ಇಲ್ಲಿ ಬಂದೇವಿ ನಿನಗೆಲ್ಲಿ ಅಧಿಕಾರಾ
ನಿನ್ನ ಹಂತಾವ್ರು ನನ್ನ ಹಂತೇಲಿ ಇದ್ದಾರ ನವಕೋಟಿ ಸಿದ್ಧರಾ

ರಾಣಿಯ ಮಾತ್ಕೇಳಿ ಸುಮ್ಮನ ಕುಂದ್ರಲಿಲ್ಲ ರೇವಣಸಿದ್ಧರಾ
ಅವರನ್ನ ಬಿಡಸಾರ ನಾನು ಬಂದೆನಿ ಇದ್ದೇನಿ ಒಳೆರೂರಾ
ಹೇಮಾ ಸಾವಿತ್ರಿಗೆ ಹೇಳಿ ಕೊಟ್ರೊ ಗುರುನಾಥಾ ರಾಯರಾ
ಅವರ್ನ ಬಿಡ್ಸಾಕ ನೀನು ಬಂದದಿಕುಂಡ್ರು ಸುಮ್ಮಕ
ನೋಡಿ ಬಿಡತಿನಿ ಎಷ್ಟು ಅದೆ ನಿನ್ನ ದಿಮಾಕಾ
ಮಾಯಾದೇವಿ ಇವನ ನೋಡಿ ಕುಣಿತಾಳ ತಕತಕ

ಭಾಳ ಕುಣಿಬ್ಯಾಡ ನಿಂದು ನಾನು ಮುರಿತೇನಿ ಸೊನಕಾ
ನನ್ನ ಕೈಯಾಗಿನಿಂದ ಉಳ್ಕೊ ನೀನು ಭಾಳ ಐತಿ ಸೊಕ್ಕಾ
ಇಷ್ಟ ಹೇಳಿ ಮಾಯಾದೇಔಇ ಬಂದಾಳ ವಿಷಯಕ

ಬಟ್ಟಲ ತುಂಬ ವಿಷವನು ಕುಡಿ ನೋಡ್ತೇನ ಕೌತುಕ
ದತ್ತಾತ್ರೆಯನ ನೆನೆಯುತ ಕೈಹಾಕ್ಯಾವ ಬಟ್ಟಲಕ
ಬಟ್ಟಲ ತುಂಬಾ ವಿಷಾ ಕುಡಿದು ಇದ್ರೊ ಸುಮ್ಮಕ

ಮಾಯಿದೇವಿಗೆ ರೇವಣ ಸಿದ್ಧ ಹೇಳ್ತಾನ ಕಡಕ
ಕೊಡಗಟ್ಲೆ ವಿಷ ತಂದು ಇಟ್ಕೊ ಅವನ ಹಂತೇಕ
ಎಲ್ಲಾ ಕುಡಿದು ಮತ್ತೆ ಬೇಡ್ತಾನ ಕುಂತ್ಯಾಗ ಸುಮ್ಮಕ

ತಪ್ಪಾಗೇತಿ ಎಂದು ಬಿದ್ದು ಬಿಟ್ಟಳೊ ಅವನ ಪಾದಕ
ಶಿಕ್ಷೆಕೊಟ್ಟರು ಅನುಭವಿಸತೇವಿ ಶ್ವೀಕಾರ ಮಾಡೊದಕ
ನಿನ್ನ ಹಂಗ ನಾನು ಮಾಡೋದಿಲ್ಲ ತಿಳಕೊ ಮನಕ

ಬಂದೇನಿ ನಾನು ನವಕೋಟಿ ಸಿದ್ಧರ್ನ ಬಿಡುಗಡೆ ಮಾಡೋದಕ
ತಪ್ಪಿಗೆ ನಾನು ಒಪ್ಪಿಗೆ ಕೊಡುತೇನಿ ಬೀಳೊ ಚರಣಕ
ಸಿದ್ಧ ಅನ್ನುವ ಸ್ವಾಮಿ ಇದ್ದಾನ ಇದೇ ಅರಣ್ಯಕ

ಭಕ್ತಿಲೆ ಹೋಗಿ ಉಪದೇಶ ಪಡ್ಕೊ ಅವನ ಹಂತೇಕ
ಮುಂದೆ ನೀನು ಹಿಂಗ ಮಾಡಬೇಡ ಮಾತು ನೆನಪಿಟ್ಕೊ
ಗುರುವಿನ ಮಾತ್ಕೇಳಿ ಹಿಂಗ ಹಾಡತಾರ ಹೇಮಾಸಾವಕ

ಸಿದ್ಧು ಸ್ವಾಮಿನಾ ಕರಸಿ ಹೇಳ್ತಾಳ ಮಾಡಿನಮನಾ
ನಿನ್ನ ಗುರುಗಳು ನನ್ನ ಕಳಿಸ್ಯಾರು ಮಾಡು ಉಪದೇಶ್ನಾ
ನನ್ನ ಗುರುಗಳು ಎಲ್ಲಿ ಆದಾರು ತೋರ್ಸು ಅವರನಾ

ಶಿವಾಲಯದಲಿ ಮಾಡುತ ಕುಳಿತಾರ ಶಿವನ ಧ್ಯಾನವನಾ
ಅಲ್ಲಿಗೆ ಹೋಗಿ ಚರಣ ಹಿಡಿದಾನೊ ಸಿದ್ಧುಶರಣ
ಈಕೆಯ ಸೊಕ್ಕಾಮುರಿದು ಬಿಟ್ಟೇನಿ ಬೋಧಕೊಡೊನೀನಾ

ಬಿಟ್ಟು ಬರಬೇಕು ಅಲ್ಲಿಯ ಸ್ಥಾನಾ ಕಟ್ಟಿ ಆಶ್ರಮನಾ
ಇಲ್ಲಿಯ ಜನರಿಗೆ ಬೋಧೆ ಮಾಡ್ಬೇಕ ಪರಮಾರ್ಥ ವಿಷಯನಾ
ಗುರುಗಳ ಮಾತಾ ಕೇಳಿ ಅಂತಾನಾ ಒಳ್ಳೆದಂದಾನಾ

ರಾಣಿಯ ಕರೆದು ಸಿದ್ಧು ಹೇಳತಾನ ಬೋಧ ಕೊಡತೇನಾ
ನಿನ್ನ ಬೋಧಾ ನಿನ್ನ ಹಂತೇಕಿರಲಿ ನಾನು ಹೇಳ್ತೆನಾ
ಜಗದ್ಗುರು ಶಿಷ್ಯನೀನಾದ ಮೇಲೆ ನೀನು ಒಳ್ಳೆಶಾನ್ಯಾ

ಬಟ್ಟಲ ತುಂಬ ವಿಷಾ ಕೊಟ್ಟು ಕಳಿಸ್ಯೊ ದಾಸಿನಾ
ಎಲ್ಲಾನು ಕುಡಿದು ಅಂದುಬಿಟ್ಟೊ ಸದ್ಗುರುನಾಥನಾ
ರಾಣಿನ ಕರೆದು ಆಕೆಗೆ ಹೇಳ್ತಾವ ನನ್ನ ಕೂದಲನಾ

ಅಲುಗಾಡಿಸುವ ಶಕ್ತಿ ನಿನಗಿಲ್ಲ ಇಸ್ಟೇಟ ರಾಣೀನಾ
ನಮ್ಮಂಥವರ ಹಂತೇಲಿ ಇರ್ತದ ಆಧ್ಯಾತ್ಮ ಶಕ್ತಿನಾ
ಮಾವಿನ ಕೊಂಯದಂಗ ಮಾರಿ ಮಾಡಿಕೊಂಡ ಹಿಡದ್ಯೊ ಪಾದಾನಾ

ಸಿದ್ಧು ಇದ್ದ ಜಾಗಾಕ ಹೆಸರಿಟ್ಟ ಕರದ್ರೊ ಸಿದ್ಧಗಿರಿನಾ
ಇರುವ ತರುವಾಯ ಪ್ರಸಿದ್ಧಿಗೆ ಬಂದ್ರೊ ಕಾಡಸಿದ್ಧರನಾ
ಹೇಮಾ ಸಾವಿತ್ರಿಗೆ ಹಿಂಗ ಹಾಡತಾರ ನೆನಸಿ ಗುರುವಿನಾ

೧೦

ಜಗದ್ಗುರು ಆದಾಂವ ನೀನೆ
ಜಗದ ಪಾಲನ ಮಾಡಿದಾಂವ ನೀನೆ
ಅಗಣಿತ ಅವತಾರ ತಾಳಿದಾಂವ ನೀನೆ

ಬಗೆಬಗೆಯಿಂದ ರೂಪ ತೋರಿದಂತಾವ ನೀನೆ
ಭಕ್ತರ ಮನಿಯಾಗ ಇದ್ದಾಂವ ನೀನೆ
ದುಷ್ಟರ ನಾಶ ಮಾಡಿದಾಂವ ನೀನೆ

ಸೃಷ್ಟಿಯೊಳಗ ಮೆರೆದ ಗುರುವ ನೀನೆ
ಮುಕ್ತಿಯ ಕೊಡುವಂತ ಅಧಿಕಾರ ಗುರು ಆದಾಂವ ನೀನೆ
ಸೆಡಗರದೊಡೆಯ ಆದಾಂವ ನೀನೆ

ಯಡಿಯೂರ ಶಂಬ ಹಿಡಿದಾಂವ ನೀನೆ
ಕಾಡಸಿದ್ಧನಾಗಿ ಮಾಯಿನ ಹೊಡೆದಾಂವ ನೀನೆ
ಪೊಡವಿಯೊಳಗ ಮಿಗಿಲಾದ ಕೊಲ್ಲಿಪಾಕಿ ಒಡೆಯ ನೀನೆ

ಕೊಲ್ಲಾಪುರ ಹ್ವಾದಾಂವ ನೀನೆ
ಬಲ್ಲಿದ ಗೋರಕ್ಷಕನ ಹೊಡಿದಾಂವ ನೀನೆ
ಸಿದ್ಧರನ ಬಂದಿ ಬಿಡಿಸಿದಾಂವ ನೀನೆ

ಹಾಲುಮತಕ ಬಂದ ಮೂಲಗುರು ಎನಿಸಿದಾಂವ ನೀನೆ
ಆದಿಗೊಂಡನ ಮನಿಗೆ ಹ್ವಾದಾಂವ ನೀನೆ
ಐದುಮಳ ಭೂಮಿದಾನ ಬೇಡಿದಾಂವ ನೀನೆ

ಮೇದಿನಿಯೊಳಗ ಗವಿ ಹೊಡೆದಾಂವ ನೀನೆ
ಸಾವಿರ ಕುರಿ ಹಿಂಡ ಗವಿಯೊಳಗೆ ಇಟ್ಟಂತಾಂವ ನೀನೆ
ಕಲ್ಯಾಣ ಪಟ್ಟಣಕ ಹ್ವಾದಾಂವ ನೀನೆ
ಅಲ್ಲಮಪ್ರಭುಗ ವರ ಕೊಟ್ಟಾಂವ ನೀನೆ
ಶರಣರಿಗೆ ಮಹಿಮಾ ತೋರಿದಾಂವ ನೀನೆ
ಬಲ್ಲಿದ ಬಸವಣ್ಣಗ ನಿಜರೂಪ ತೋದವ ನೀನೆ

ಲಂಕಪಟ್ಟಣಕ ಹೋದಾಂವ ನೀನೆ
ಮೂರು ಕೋಟಿ ಲಿಂಗದಾಗ ಇದ್ದಾಂವ ನೀನೆ
ಸರುವರಿಗೆ ಗುರು ಆದಾಂವ ನೀನೆ

ಸಿರದಲ್ಲಿ ಜಡಿಕಟ್ಟಿ ಕರದಲಿ ಕಮಂಡಲ ಹಿಡಿದಾಂವ ನೀನೆ
ಬೀರಸಿದ್ಧನ ಗುರು ಆದಾಂವ ನೀನೆ
ಜಗದ ಮಾಳಪ್ಪಗ ವರಕೊಟ್ಟಾಂವ ನೀನೆ

ಜಗದ ಗುರು ಆದಾಂವ ನೀನೆ
ಸೃಷ್ಟಿಯೊಳಗೆ ಬಂದು ಶಾಂತದಿಂದ ಸಾಕ್ಷಾತ ಮಾದೇವ ನೀನೆ
ಕೊಲ್ಲಿಪಾಕಿಯಲ್ಲಿ ನೆನೆದಾಂವ ನೀನೆ

ನಂಬಿದ ಭಕ್ತರಿಗೆ ವರಕೊಟ್ಟಾಂವ ನೀನೆ
ಪಂಚಪೀಠದಾಗ ಇದ್ದಾಂವ ನೀನೆ
ಹುಲಿಜಂತಿ ಊರುಗುರು ಅಡಿವೆಪ್ಪಗ ವರಕೊಟ್ಟಾವ ನೀನೆ

೧೧

ಕಂಬಳೆಪ್ಪ ಕಂಬಳೊ ಸಣ್ಣನೂಲಿನ ಕಂಬಳೊ
ಸಣ್ಣನೂಲಿನ ಕಂಬಳೊ ಇದು ಯಾರಿಗೊಪ್ಪುವ ಕಂಬಳೊ
ಸ್ವಾಮಿಗೊಪ್ಪುವ ಕಂಬಳೊ ನಮ್ಮ ಸ್ವಾಮಿಗೊಪ್ಪುವ ಕಂಬಳೊ
ಸ್ವಾಮಿಗೊಪ್ಪುವ ಕಂಬಳೊಪ್ಪ ಮರದ ಕಪಪ್ಪಿ ಮಾಡಿಟ್ಟಾನ

ಮುರದಕಪಪ್ಪಿ ಮಾಡಿಟ್ಟಾನಪ್ಪ ಮುಂದಕ ಸಾಗಿ ಬಂದಾನ
ಮುಂದಕ ಸಾಗಿ ಬಂದಾನಪ್ಪ ಗೌಳೇರಣ್ಣನ ಕಂಡಾನ
ಗೌಳೇರಣ್ಣ ಗೌಳೇರ ತಮ್ಮ ಹಾಲಿನ ದಾನ ಮಾಡಂದಾನ
ಕಟ್ಟಿದ ಕರಗಳ ಕಣ್ಣಿನ ಹೊಡೆದು ತಂಬಿಗೆ ನೊರೆಹಾಲ ಕರದಾನ

ತಂಬಿಗೆ ನೊರೆ ಹಾಲ ಕರದಾನಪ್ಪ ಸ್ವಾಮಿಗೆ ಸಲುಸತ ಕೊಟ್ಟಾನ
ಕರಕುಡದ್ಹಾಲು ಎಂಜಲುವೆಂದು ಮುಂದಕ ಸಾಗಿ ಹೋದಾನ
ಮುಂದಕಸಾಗಿ ಹೋದನಪ್ಪ ಕುರುಬರಣ್ಣನ ಕಂಡಾನ
ಕುರುಬರಣ್ಣಾ ಕುರುಬ ರ ತಮ್ಮ ಹಾಲಿನ ದಾನ ಮಾಡಂದಾನ

ಮುಟ್ಟಿದ ಮರಿಗಳು ಮುಚ್ಚಿದಂಗೈದಾವ ಬಿಂದಿಗೆ ನೊರೆಹಾಲ ಕರದಾನ
ಬಿಂದಿಗೆ ನೊರೆಹಾಲ ಕರದಾನಪ್ಪ ಸ್ವಾಮಿಗೆ ಸಲಿಸುತ ಕೊಟ್ಟಾನ
ಇವ ನನ್ನ ಮೀಸಲ ಹಾಲವೆಂದು ಮುರು ಬೊಗಸಿ ಸಲಿಸ್ಯಾನ
ಮೂರು ಬೊಗಸಿ ಸಲಿಸ್ಯಾನಪ್ಪ ಮುಂದಕ ಸಾಗಿ ಹೋಗ್ಯಾನ

ಅವಕಾಶ ಗುರು ಹಿರಿಯರ ನಮ್ಮ ಗುರುವ ನೀವು ಕಂಡೀರೆ
ನಮ್ಮ ಗುರುವ ನೀವು ಕಂಡೀರ ನಮ್ಮ ಗುರುವಿನ ಗುರುತ ಹೇಳಿರೆ
"ಅಂಡಗೊಂಗಡಿ ಸರಗಿನ ಬೆತ್ತ ಸದರ ಕಂಬಿನ ಹಚ್ಚಡ
ಬಟ್ಟನ್ನ ಮಾರಿ ಬಗರಿಯ ಗಡ್ಡ ನೆಟ್ಟಿನ ಮೂಗಿನ ಚಲುವನ

ನೆಟ್ಟನ್ನ ಮೂಗಿನ ಚೆಲುವನ ನಮ್ಮ ಹಡಗಲಿ ಹಾಲಸ್ವಾಮೇಳು
ಹಾಕ ಚೌರ ಉಲ್ಲಾಸ ಪಾವುಡ ದೇಶದ ಮ್ಯಾಲ ನಮ್ಮ ಮೆರವಣಿಗೆ

ಅನುಬಂಧ: ನಾಲ್ಕು ವಕ್ತೃಗಳ ವಿವರ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೧	ಶರಣಪ್ಪಒಡೆಯರ್	೪೫	ಸರ್ಕಾರಿ ಕೆಲಸ	ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೨	ಜಗದೀಶ್ಒಡೆಯರ್	೬೩	ವ್ಯವಸಾಯ	ಚಿಕ್ಕನಾಯಕನಹಳ್ಳಿ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೩	ಎಸ್.ವಿಜಯಕುಮಾರ್	೩೦	ಅರ್ಚಕ	ರಾಮನಗರ	ರಾಮನಗರ	ರಾಮನಗರ	ಕರ್ನಾಟಕ
೪	ಟಿ.ಸಿದ್ದಲಿಂಗಪ್ಪ	೫೦	ಪಾರುಪತ್ತೆದಾರರು	ರಾಮನಗರ	ರಾಮನಗರ	ರಾಮನಗರ	ಕರ್ನಾಟಕ
೫	ಶಿವಲಿಂಗಯ್ಯ	೫೦	ಸಂಚಾಲಕರು	ರಾಮನಗರ	ರಾಮನಗರ	ರಾಮನಗರ	ಕರ್ನಾಟಕ
೬	ಗಂಗಮ್ಮ ಬಸವರಾಜು ಒಡೆಯರ್	೪೫	ಒಡೇರಮ್ಮ	ಹೊನ್ನವಳ್ಳಿ	ತಿಪಟೂರು	ತುಮಕೂರು	ಕರ್ನಾಟಕ
೭	ಲೋಕೇಶ್	೩೫	ಎನ್.ಜಿ.ಓ ನೌಕರ	ಹೊನ್ನವಳ್ಳಿ	ತಿಪಟೂರು	ತುಮಕೂರು	ಕರ್ನಾಟಕ
೮	ರಮೇಶ್ ೩೫	ವ್ಯಾಪಾರ	ಹೊನ್ನವಳ್ಳಿ	ತಿಪಟೂರು	ತುಮಕೂರು	ಕರ್ನಾಟಕ	
೯	ಕುಮಾರಯ್ಯ	೩೫	ಸೀರೆ ನೇಯ್ಗೆ	ಹೊನ್ನವಳ್ಳಿ	ತಿಪಟೂರು	ತುಮಕೂರು	ಕರ್ನಾಟಕ
೧೦	ಅಲ್ಲೂರಯ್ಯ	೪೦	ಪೂಜಾರಿಕೆ	ಹೊನ್ನವಳ್ಳಿ	ತಿಪಟೂರು	ತುಮಕೂರು	ಕರ್ನಾಟಕ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೧೧	ರಾಣಿಚಂದ್ರಶೇಖರ್	೩೮	ಎನ್.ಜಿ.ಒ	ತುಮಕೂರು	ತುಮಕೂರು	ತುಮಕೂರು	ಕರ್ನಾಟಕ
೧೨	ಕಮಲ ೪೦	ಎನ್.ಜಿ.ಒ	ರಾಮನಗರ	ರಾಮನಗರ	ರಾಮನಗರ	ಕರ್ನಾಟಕ	
೧೩	ಕರಿಸಿದ್ದಯ್ಯ ಶಾಂತಯ್ಯಗುರುವಿನ	೭೦	ಗುರುವಿನವರು	ಸರೂರು	ಮುದ್ದೇಬಿಹಾಳ	ವಿಜಯಪುರ	ಕರ್ನಾಟಕ
೧೪	ತಪಸಯ್ಯ ಶರಬಯ್ಯಗುರುವಿನ	೫೦	ಶಿಕ್ಷಕರು	ಸರೂರು	ಮುದ್ದೇಬಿಹಾಳ	ವಿಜಯಪುರ	ಕರ್ನಾಟಕ
೧೫	ಶ್ರೀಮತಿ ತಪಸಯ್ಯ ಶರಬಯ್ಯಗುರುವಿನ	೪೫	ಶಿಕ್ಷಕರು	ಸರೂರು	ಮುದ್ದೇಬಿಹಾಳ	ವಿಜಯಪುರ	ಕರ್ನಾಟಕ
೧೬	ರವಿಪೂಜಾರಿ	೫೦	ಅರ್ಚಕ (ಬನದಗುಡಿ)	ಹೊರ್ತಿ	ಇಂಡಿ	ವಿಜಯಪುರ	ಕರ್ನಾಟಕ
೧೭	ಹನುಮಂತಪೂಜಾರಿ	೫೨	ಅರ್ಚಕ (ಬನದಗುಡಿ)	ಹೊರ್ತಿ	ಇಂಡಿ	ವಿಜಯಪುರ	ಕರ್ನಾಟಕ
೧೮	ವಿಠಲಪೂಜಾರಿ	೫೦	ಅರ್ಚಕ (ಬನದಗುಡಿ)	ಹೊರ್ತಿ	ಇಂಡಿ	ವಿಜಯಪುರ	ಕರ್ನಾಟಕ
೧೯	ಸಂತೋಷ	೩೦	ಸರ್ಕಾರಿ ನೌಕರ	ವಿಜಯಪುರ	ವಿಜಯಪುರ	ವಿಜಯಪುರ	ಕರ್ನಾಟಕ
೨೦	ಭೂಪತಿ ಕಂಬಳಿ	೩೫	ಸಂ.ಹಾಲುಮತ ಪತ್ರಿಕೆ	ಚಿ.ನಾ ಹಳ್ಳಿ	ಚಿ.ನಾ ಹಳ್ಳಿ	ತುಮಕೂರು	ಕರ್ನಾಟಕ
೨೧	ಮಲ್ಲಿಕಾರ್ಜುನಜೇವರ್ಗಿ	೬೮	ನಿವೃತ್ತ ಪ್ರಾಂಶುಪಾಲರು	ಇಂಡಿ	ಇಂಡಿ	ವಿಜಯಪುರ	ಕರ್ನಾಟಕ
೨೨	ಆನಂದಕುಂಬಾರ	೭೦	ಸಂಶೋಧಕರು	ಸೊಲ್ಲಾಪುರ	ಸೊಲ್ಲಾಪುರ	ಸೊಲ್ಲಾಪುರ	ಮಹಾರಾಷ್ಟ್ರ
೨೩	ಖಾಕಾಸಾಹಿ ದತ್ತಾತ್ರೇಯ ಪೂಜಾರಿ	೩೫	ಅರ್ಚಕರು(ಮಾಚನೂರು)	ರಾನಾ ಬ್ರಹ್ಮಪುರಿ	ಮಂಗಳವೇಡಾ	ಸೊಲ್ಲಾಪುರ	ಮಹಾರಾಷ್ಟ್ರ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೨೪	ಪ್ರಶಾಂತಗುಂಡೋಪಂಥದೇಶಮುಖ	೩೫	ಅರ್ಚಕರು(ಮಾಚನೂರು)	ರಾನಾ ಬ್ರಹ್ಮಪುರಿ	ಮಂಗಳವೇಡಾ	ಸೊಲ್ಲಾಪುರ	ಮಹಾರಾಷ್ಟ್ರ
೨೫	ಗಜಾನನ ಪೂಜಾರಿ	೩೪	ಅರ್ಚಕರು(ಮಾಚನೂರು)	ರಾನಾ ಬ್ರಹ್ಮಪುರಿ	ಮಂಗಳವೇಡಾ	ಸೊಲ್ಲಾಪುರ	ಮಹಾರಾಷ್ಟ್ರ
೨೬	ಭೀಮರಾಯ ಸಿದ್ಧಪ್ಪ ಶೇಕಣ್ಣವರ	೬೭	ಡೊಳ್ಳಿನ ಪದಗಳ ಹಾಡುಗಾರರು.	ಇಂಗಳೇಶ್ವರ	ಬಸವನ ಬಾಗೇವಾಡಿ	ವಿಜಯಪುರ	ಕರ್ನಾಟಕ
೨೭	ಶಿಪ್ಪರಾಯ ಪೂಜಾರಿ	೬೭	ಬೀರದೇವರ ಪೂಜಾರಿಗಳು	ಇಂಗಳೇಶ್ವರ	ಬಸವನ ಬಾಗೇವಾಡಿ	ವಿಜಯಪುರ	ಕರ್ನಾಟಕ
೨೮	ಯಲ್ಲಪ್ಪರಾಮಪ್ಪ, ರೊಳ್ಳಿ	೪೦	ಗ್ರಾ.ಪಂ. ಸದಸ್ಯರು	ಮನಗೂಳಿ	ಬಸವನ ಬಾಗೇವಾಡಿ	ವಿಜಯಪುರ	ಕರ್ನಾಟಕ
೨೯	ಚಂದ್ರಶೇಖರತಿಮ್ಮರಾಯ	೩೫	ವ್ಯವಸಾಯ	ಯರನಾಳ	ಬಸವನ ಬಾಗೇವಾಡಿ	ವಿಜಯಪುರ	ಕರ್ನಾಟಕ
೩೦	ವಿಠಲ್ ಮನಗೇನಿ ಬನ್ನೆ	೬೧	ಕುರಿಗಾರಿಕೆ	ನವಲಿಹಾಳ	ಚಿಕ್ಕೋಡಿ	ಬೆಳಗಾವಿ	ಕರ್ನಾಟಕ
೩೧	ಯಲ್ಲಪ್ಪ ಜೇಮಪ್ಪಗಡ್ಡೆ	೬೪	ಕುರಿಗಾರಿಕೆ	ಹುಲಿಕಟ್ಟಿ	ಶಿಗ್ಗಾಂವ್	ಹಾವೇರಿ	ಕರ್ನಾಟಕ
೩೨	ಲಕ್ಷ್ಮಣ ಜೀರಪ್ಪ ಪೂಜಾರಿ	೮೧	ಕುರಿಗಾರಿಕೆ	ಬೊಂಬಲವಾಡಿ	ಚಿಕ್ಕೋಡಿ	ಬೆಳಗಾವಿ	ಕರ್ನಾಟಕ
೩೩	ಲಗುಮಣ್ಣ ವಿಠಲ್ ಪುಕ್ಕೇರಿ	೬೦	ಕುರಿಗಾರಿಕೆ	ಹೊಸೂರು	ಗಡ್‌ಇಂಗ್ಲೇಜ್	ಸೋಲ್ಲಾಪುರ	ಮಹಾರಾಷ್ಟ್ರ
೩೪	ಶ್ರೀ ಮಾಳಪ್ಪ ಚಿಂಗಳೆ	೬೦	ಕುರಿಗಾರಿಕೆ	ಅಕ್ಕೋಳ	ಚಿಕ್ಕೋಡಿ	ಬೆಳಗಾವಿ	ಕರ್ನಾಟಕ
೩೫	ಮುರಾರಿ ಸಿದ್ಧಪ್ಪ ಹೆಗಡೆ	೪೫	ಕುರಿಸಾಗಾಣಿಕೆ	ಕುರಣಿ	ಚಿಕ್ಕೋಡಿ	ಬೆಳಗಾವಿ	ಕರ್ನಾಟಕ
೩೬	ಗೌಡಪ್ಪ ಮಾಳಪ್ಪ ಬನ್ನೆ	೪೫	ಕುರಿಸಾಗಾಣಿಕೆ	ಹುಲೀಕಟ್ಟಿ	ಶಿಗ್ಗಾಂವ್	ಹಾವೇರಿ	ಕರ್ನಾಟಕ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೩೭	ಅಣ್ಣಪ್ಪ ಹೆಗಡೆ	೩೬	ಉಪನ್ಯಾಸಕರು / ಸಂಶೋಧಕರು	ನವಲಿಹಾಳ	ಚಿಕ್ಕೋಡಿ	ಬೆಳಗಾವಿ	ಕರ್ನಾಟಕ
೩೮	ನಾಗರಾಜದೇವರಗುಡ್ಡ	೨೯	ಪಶು ವೈದ್ಯಾಧಿಕಾರಿಗಳು	ಕಾಗಿನೆಲೆ	ಬ್ಯಾಡಗಿ	ಹಾವೇರಿ	ಕರ್ನಾಟಕ
೩೯	ಸತ್ಯಪ್ಪ ಹಾಲಪ್ಪ ಕದ್ದಿ	೫೦	ಡೊಳ್ಳಿನ ಪದ ಹಾಡುಗಾರರು	ಹಳ್ಳೂರ	ಗೋಕಾಕ	ಬೆಳಗಾವಿ	ಕರ್ನಾಟಕ
೪೦	ಸುಮಿತ್ರಾ ದಳವಾಯಿ	೪೦	ಡೊಳ್ಳಿನ ಪದ ಹಾಡುಗಾರರು	ಮುಗಳಿಹಾಳ	ಸವದತ್ತಿ	ಬೆಳಗಾವಿ	ಕರ್ನಾಟಕ
೪೧	ಎಂ.ಇ.ನಾರಾಯಣಸ್ವಾಮಿ	೪೫	ಗೌಡರು	ಮತ್ತಿಘಟ್ಟ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೨	ಕುಮಾರಸ್ವಾಮಿ	೩೫	ಕುರಿಸಾಕಾಣಿಕೆ	ಮತ್ತಿಘಟ್ಟ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೩	ಶ್ರೀನಿವಾಸ	೩೫	ವ್ಯವಸಾಯ	ಮತ್ತಿಘಟ್ಟ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೪	ತಿಮ್ಮಪ್ಪ	೫೦	ಕುರಿಸಾಕಾಣಿಕೆ	ಮತ್ತಿಘಟ್ಟ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೫	ಜೀರಪ್ಪ	೩೨	ದಳವಾಯಿ	ಮತ್ತಿಘಟ್ಟ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೬	ಎ.ಎಂ.ರೇವಣಸಿದ್ದಯ್ಯ	೫೮	ಒಡೆಯರು	ಆಸಂದಿ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೭	ಅಜ್ಜಯ್ಯಒಡೆಯರ್	೩೫	ಒಡೆಯರು	ಆಸಂದಿ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೮	ಶಿವಪ್ಪ	೪೦	ಬೀರದೇವರಅರ್ಚಕರು	ಆಸಂದಿ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೪೯	ರೇವಣಸಿದ್ದಯ್ಯ ಒಡೆಯರ್	೮೦	ಹಿರಿಯಅರ್ಚಕರು	ಆಸಂದಿ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೫೦	ಎಸ್.ವೈ.ಬಸವರಾಜು	೫೦	ಇಂಜಿನಿಯರ್	ಸಖರಾಯಪಟ್ಟಣ	ಕಡೂರು	ಚಿಕ್ಕಮಗಳೂರು	ಕರ್ನಾಟಕ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೫೧	ರೇವಣ್ಣಒಡೆಯರ್	೬೩	ಮುಖ್ಯಅರ್ಚಕರು	ಸಖರಾಯಪಟ್ಟಣ	ಕಡೂರು	ಚಿಕ್ಕಮಗಳೂರು	ಕರ್ನಾಟಕ
೫೨	ರಾಜರಾಜೇಶ್ಒಡೆಯರ್	೨೨	ವಿದ್ಯಾರ್ಥಿ	ಹರ್ತಿಕೋಟೆ	ಹಿರಿಯೂರು	ಚಿತ್ರದುರ್ಗ	ಕರ್ನಾಟಕ
೫೩	ನಾಗಯ್ಯಒಡೆಯರ್	೪೪	ಒಡೆಯರು	ಹರ್ತಿಕೋಟೆ	ಹಿರಿಯೂರು	ಚಿತ್ರದುರ್ಗ	ಕರ್ನಾಟಕ
೫೪	ರೇವಪ್ಪಒಡೆಯರ್	೪೨	ವ್ಯವಸಾಯ್ಯ	ದೊಡ್ಡೇರಿ	ಚಳ್ಳಕೆರೆ	ಚಿತ್ರದುರ್ಗ	ಕರ್ನಾಟಕ
೫೫	ಮಲ್ಲಿಕಾರ್ಜುನ ಮಹದೇವ ಪೂಜಾರಿ	೪೧	ಅರ್ಚಕರು	ಬೆಂಡವಾಡ	ರಾಯಬಾಗ	ಬೆಳಗಾವಿ	ಕರ್ನಾಟಕ
೫೬	ಶಿವಯ್ಯ ಅಯ್ಯಪ್ಪಒಡೆಯರ್	೪೫	ಒಡೆಯರು	ಕೊಟಬಾಗಿ	ಧಾರವಾಡ	ಧಾರವಾಡ	ಕರ್ನಾಟಕ
೫೭	ಸಿದ್ದಯ್ಯ ಶಿವಯ್ಯ ಒಡೆಯರ್	೨೫	ವ್ಯವಸಾಯ	ಕೊಟಬಾಗಿ	ಧಾರವಾಡ	ಧಾರವಾಡ	ಕರ್ನಾಟಕ
೫೮	ಗುರುಸ್ವಾಮಿ ಶಿವಯ್ಯ ಒಡೆಯರ್	೨೨	ವಿದ್ಯಾರ್ಥಿ	ಕೊಟಬಾಗಿ	ಧಾರವಾಡ	ಧಾರವಾಡ	ಕರ್ನಾಟಕ
೫೯	ಓಂಕಾರಸ್ವಾಮಿಒಡೆಯರ್	೪೨	ಒಡೆಯರು	ಕಡ್ಲೆಕಂಸಾಗರ	ಹೊಸದುರ್ಗ	ಚಿತ್ರದುರ್ಗ	ಕರ್ನಾಟಕ
೬೦	ಬಸವರಾಜಒಡೆಯರ್	೨೮	ಒಡೆಯರು	ಕಾರೇಹಳ್ಳಿ	ಹೊಸದುರ್ಗ	ಚಿತ್ರದುರ್ಗ	ಕರ್ನಾಟಕ
೬೧	ಯತೀಶ್ಒಡೆಯರ್	೨೩	ವ್ಯವಸಾಯ	ಕಾರೇಹಳ್ಳಿ	ಹೊಸದುರ್ಗ	ಚಿತ್ರದುರ್ಗ	ಕರ್ನಾಟಕ
೬೨	ಸೋಮಶೇಖರಯ್ಯಒಡೆಯರ್	೪೮	ಒಡೆಯರು	ಕಾರೇಹಳ್ಳಿ	ಹೊಸದುರ್ಗ	ಚಿತ್ರದುರ್ಗ	ಕರ್ನಾಟಕ
೬೩	ಚಂದ್ರಶೇಖರಯ್ಯಒಡೆಯರ್	೪೦	ವ್ಯವಸಾಯ	ಕಾರೇಹಳ್ಳಿ	ಹೊಸದುರ್ಗ	ಚಿತ್ರದುರ್ಗ	ಕರ್ನಾಟಕ
೬೪	ಶಿವಕುಮಾರ ಒಡೆಯರ್	೨೩	ಒಡೆಯರು	ಕಾರೇಹಳ್ಳಿ	ಹೊಸದುರ್ಗ	ಚಿತ್ರದುರ್ಗ	ಕರ್ನಾಟಕ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೬೫	ನಿಂಗಯ್ಯ ಹನುಮಂತರಾಯ ಬೂದಗುಂಪಿ	೫೫	ಕಾರ್ಯದರ್ಶಿ	ಕಕ್ಕೇರ	ಸುರಪುರ	ಯಾದಗಿರಿ	ಕರ್ನಾಟಕ
೬೬	ಸಿಂಗಯ್ಯಗುರುವಿನ್	೬೦	ಒಡೆಯರು	ಹುಣಸಿಹೊಳೆ	ಸುರಪುರ	ಯಾದಗಿರಿ	ಕರ್ನಾಟಕ
೬೭	ಮಾನಯ್ಯ ರೇವಣಸಿದ್ದಯ್ಯ	೨೫	ವ್ಯವಸಾಯ	ಹುಣಸಿಹೊಳೆ	ಸುರಪುರ	ಯಾದಗಿರಿ	ಕರ್ನಾಟಕ
೬೮	ಗಂಗಾಧರ ಜೋಯರ್	೨೫	ವ್ಯವಸಾಯ	ಹುಣಸಿಹೊಳೆ	ಸುರಪುರ	ಯಾದಗಿರಿ	ಕರ್ನಾಟಕ
೬೯	ಸರಸ್ವತಿ ಪರಮಣ್ಣ ನಾಗನಾಳ್	೧೮	ವಿದ್ಯಾರ್ಥಿನಿ	ಹುಣಸಿಹೊಳೆ	ಸುರಪುರ	ಯಾದಗಿರಿ	ಕರ್ನಾಟಕ
೭೦	ಲಿಂಗಯ್ಯರೇವಯ್ಯಗುರುವಿನ್	೨೯	ಬ್ಯಾಂಕ್ ನೌಕರ	ಬಸವಾಪಟ್ಟಣ	ಗಂಗಾವತಿ	ಕೊಪ್ಪಳ	ಕರ್ನಾಟಕ
೭೧	ಶಾಂತಯ್ಯ ಹನುಮಂತಯ್ಯಗುರುವಿನ್	೪೦	ವ್ಯವಸಾಯ	ಬಸವಾಪಟ್ಟಣ	ಗಂಗಾವತಿ	ಕೊಪ್ಪಳ	ಕರ್ನಾಟಕ
೭೨	ಸಿದ್ದರಾಮಯ್ಯ ನಂಜುಂಡಯ್ಯಗುರುವಿನ್	೩೫	ಪೂಜಾರಿ	ಬಸವಾಪಟ್ಟಣ	ಗಂಗಾವತಿ	ಕೊಪ್ಪಳ	ಕರ್ನಾಟಕ
೭೩	ಸಿದ್ದಯ್ಯ ಸಿದ್ದರಾಮಯ್ಯ ಗುರುವಿನ್	೪೧	ಪೂಜಾರಿ	ಬಸವಾಪಟ್ಟಣ	ಗಂಗಾವತಿ	ಕೊಪ್ಪಳ	ಕರ್ನಾಟಕ
೭೪	ಶಂಕರಪ್ಪಒಡೆಯರ್	೪೫	ಒಡೆಯರು	ಗೌಡನಹಳ್ಳಿ	ಮಡಕಸಿರಾ	ಅನಂತಪುರ	ಆಂಧ್ರಪ್ರದೇಶ
೭೫	ರೇವಣ್ಣಒಡೆಯರ್	೫೦	ಒಡೆಯರು	ಈದಲೊಡ್ಡಿ	ಮಡಕಸಿರಾ	ಅನಂತಪುರ	ಆಂಧ್ರಪ್ರದೇಶ
೭೬	ಮಾಳಯ್ಯ ಕರಿಯಣ್ಣ	೫೫	ಚಿಕ್ಕಬೀರೇಶ್ವರ ಪೂಜಾರರು	ಹರೆಸಮುದ್ರಂ	ಮಡಕಸಿರಾ	ಅನಂತಪುರ	ಆಂಧ್ರಪ್ರದೇಶ
೭೭	ಕೆ.ಚಂದ್ರಪ್ಪ	೩೫	ವ್ಯವಸಾಯ	ಗೋವಿಂದವಾಡ	ರಾಯದುರ್ಗ	ಅನಂತಪುರ	ಆಂಧ್ರಪ್ರದೇಶ
೭೮	ಗಂಗಾಧರಒಡೆಯರ್	೫೮	ಒಡೆಯರು	ಗೋವಿಂದವಾಡ	ರಾಯದುರ್ಗ	ಅನಂತಪುರ	ಆಂಧ್ರಪ್ರದೇಶ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೭೬	ಕೆ.ರಂಗಸ್ವಾಮಿ	೩೫	ವ್ಯವಸಾಯ	ಗೋವಿಂದವಾಡ	ರಾಯದುರ್ಗ	ಅನಂತಪುರ	ಆಂಧ್ರಪ್ರದೇಶ
೭೭	ಮೃತ್ಯುಂಜಯಒಡೆಯರ್	೪೬	ವ್ಯವಸಾಯ	ಓಬಳಾಪುರಂ	ರಾಯದುರ್ಗ	ಅನಂತಪುರ	ಆಂಧ್ರಪ್ರದೇಶ
೭೮	ಪಂಪಾಪತಿಒಡೆಯರ್	೩೭	ವಕೀಲರು	ಓಬಳಾಪುರಂ	ರಾಯದುರ್ಗ	ಅನಂತಪುರ	ಆಂಧ್ರಪ್ರದೇಶ
೭೯	ಹನುಮಂತಪ್ಪಜೂಜಪ್ಪ	೮೪	ನಿವೃತ್ತ ರೈಲ್ವೇ ಉದ್ಯೋಗಿ	ಓಬಳಾಪುರಂ	ರಾಯದುರ್ಗ	ಅನಂತಪುರ	ಆಂಧ್ರಪ್ರದೇಶ
೮೦	ಶಿವಲಿಂಗಯ್ಯ ಒಡೆಯರ್	೫೬	ಒಡೆಯರು	ಓಬಳಾಪುರಂ	ರಾಯದುರ್ಗ	ಅನಂತಪುರ	ಆಂಧ್ರಪ್ರದೇಶ
೮೧	ಗೋಪಾಲ್	೪೫	ವ್ಯವಸಾಯ	ತೆನಗಲ್ಲು	ಕಲ್ಯಾಣದುರ್ಗ	ಅನಂತಪುರ	ಆಂಧ್ರಪ್ರದೇಶ
೮೨	ಆಂಜನೇಯಲು	೨೪	ವಿದ್ಯಾರ್ಥಿ	ಗೌಡನಹಳ್ಳಿ	ಮಡಕಸಿರಾ	ಅನಂತಪುರ	ಆಂಧ್ರಪ್ರದೇಶ
೮೩	ಶಿವಣ್ಣ ಒಡೆಯರ್	೪೭	ಒಡೆಯರು	ಗೌಡನಹಳ್ಳಿ	ಮಡಕಸಿರಾ	ಅನಂತಪುರ	ಆಂಧ್ರಪ್ರದೇಶ
೮೪	ರೇವಣ್ಣಒಡೆಯರ್	೫೦	ಒಡೆಯರು	ಗೌಡನಹಳ್ಳಿ	ಮಡಕಸಿರಾ	ಅನಂತಪುರ	ಆಂಧ್ರಪ್ರದೇಶ
೮೫	ನಾಗರಾಜಪ್ಪ	೬೦	ಮಾಜಿ ಮ.ಪಂ. ಅಧ್ಯಕ್ಷರು	ಗೌಡನಹಳ್ಳಿ	ಮಡಕಸಿರಾ	ಅನಂತಪುರ	ಆಂಧ್ರಪ್ರದೇಶ
೮೬	ಸಿದ್ಧಪ್ಪ ಜೋಗಪ್ಪ	೭೦	ವ್ಯವಸಾಯ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೮೭	ಸತ್ಯನಾರಾಯಣ	೬೭	ವ್ಯಾಪಾರಿ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೮೮	ಶ್ರೀನಿವಾಸ	೫೦	ವ್ಯಾಪಾರಿ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೮೯	ಟಿ.ಎಸ್.ಬಸವರಾಜು	೪೫	ವ್ಯವಸಾಯ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೯೪	ಧರ್ಮರಾಜು	೫೨	ವ್ಯವಸಾಯ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೯೫	ಶಿವಣ್ಣ	೪೭	ವೀಳ್ಯದೆಲೆ ವ್ಯಾಪಾರಿ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೯೬	ಟಿ.ಸಿ.ವೆಂಕಟೇಶ್	೩೪	ಸರ್ಕಾರಿ ನೌಕರ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೯೭	ನವೀನ್	೩೨	ಸ್ವಯಂಉದ್ಯೋಗಿ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೯೮	ಎಂ.ವೆಂಕಟೇಶ್	೩೨	ವ್ಯಾಪಾರಿ	ತರೀಕೆರೆ	ತರೀಕೆರೆ	ಚಿಕ್ಕಮಗಳೂರು	ಕರ್ನಾಟಕ
೯೯	ಶಾಂತರಾಜಒಡೆಯರ್	೫೦	ಒಡೆಯರು	ಹುಲ್ಲೂರು	ಚಿತ್ರದುರ್ಗ	ಚಿತ್ರದುರ್ಗ	ಕರ್ನಾಟಕ
೧೦೦	ಚಂದ್ರಶೇಖರ್ಒಡೆಯರ್	೪೦	ಒಡೆಯರು	ಹುಲ್ಲೂರು	ಚಿತ್ರದುರ್ಗ	ಚಿತ್ರದುರ್ಗ	ಕರ್ನಾಟಕ
೧೦೧	ಜಯಶ್ರೀ ನೇರಲಗಿಮಠ	೪೨	ಕನ್ನಡಉಪನ್ಯಾಸಕರು	ರಾಣಿಬೆನ್ನೂರು	ರಾಣಿಬೆನ್ನೂರು	ಹಾವೇರಿ	ಕರ್ನಾಟಕ
೧೦೨	ಕೋರದಾಯ್ಯನ ಮಠ	೫೦	ಎಲ್.ಐ.ಸಿ.	ರಾಣಿಬೆನ್ನೂರು	ರಾಣಿಬೆನ್ನೂರು	ಹಾವೇರಿ	ಕರ್ನಾಟಕ
೧೦೩	ಹಳ್ಳಪ್ಪ ತಳವಾರ	೮೦	ನಿವೃತ್ತ ಶಿಕ್ಷಕರು,ಸಂಶೋಧಕರು	ತಿಪ್ಪಾಯಿಕೊಪ್ಪ	ಹಿರೇಕೆರೂರು	ಹಾವೇರಿ	ಕರ್ನಾಟಕ
೧೦೪	ಚಂದ್ರಶೇಖರ್ ಟಿ.	೩೦	ವಿದ್ಯಾರ್ಥಿ	ಕೋಡಮಗ್ಗಿ	ಹಿರೇಕೆರೂರು	ಹಾವೇರಿ	ಕರ್ನಾಟಕ
೧೦೫	ಹೊನ್ನಪ್ಪ ಕಂಬಳಿ	೩೧	ಸಮಾಜಸೇವೆ	ನೆಗಳೂರು	ಹಿರೇಕೆರೂರು	ಹಾವೇರಿ	ಕರ್ನಾಟಕ
೧೦೬	ಮನೋಜ್ಎನ್	೨೩	ವಿದ್ಯಾರ್ಥಿ	ಕುಂದವಾಡ	ದಾವಣಗೆರೆ	ದಾವಣಗೆರೆ	ಕರ್ನಾಟಕ
೧೦೭	ಸೋಮಲಿಂಗಪ್ಪ	೫೦	ವ್ಯವಸಾಯ	ದಾದಾಪುರ	ಹರಪ್ಪನಹಳ್ಳಿ	ದಾವಣಗೆರೆ	ಕರ್ನಾಟಕ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೧೦೮	ಕೆ.ಆರ್.ನಾಗರಾಜು	೫೧	ಕಾ: ರೇವಣಸಿದ್ಧೇಶ್ವರ ಕಮಿಟಿ	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೦೯	ರಂಗನಾಥ ಕೆ.	४೯	ವ್ಯವಸಾಯ, ಪಂಚಾಯ್ತಿ ಸದಸ್ಯರು	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೦	ಕೆ.ಎಸ್.ಕೃಷ್ಣಯ್ಯ	೬೫	ಖಜಾಂಚಿ, ರೇವಣಸಿದ್ಧೇಶ್ವರ ಕಮಿಟಿ	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೧	ತೇಜಾಶಂಕರಒಡೆಯರ್	೨೮	ಇಂಜಿನಿಯರ್	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೨	ಲೋಕೇಶ್	೩೫	ಪಂಚಾಯ್ತಿ ಮಾಜಿಅಧ್ಯಕ್ಷರು	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೩	ಜಯದೇವಒಡೆಯರ್	೬೦	ಒಡೆಯರ್	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೪	ರೇವಣ್ಣಒಡೆಯರ್	೭೦	ಒಡೆಯರ್	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೫	ಬಸವರಾಜ್ಒಡೆಯರ್	೩೦	ಒಡೆಯರ್	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೬	ಕೃಷ್ಣಯ್ಯ	४೬	ವ್ಯವಸಾಯ	ಹಂದನಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೭	ಹನುಮಂತಯ್ಯ	೬೦	ವ್ಯವಸಾಯ	ಹಂದನಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೮	ಶಾಂತಯ್ಯಒಡೆಯರ್	೫೦	ಒಡೆಯರು	ತಿಮ್ಲಾಪುರ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೧೯	ದೊರೆರಾಜು	೫೨	ಇಂಜಿನಿಯರ್	ತುಮಕೂರು	ತುಮಕೂರು	ತುಮಕೂರು	ಕರ್ನಾಟಕ
೧೨೦	ಬಸವರಾಜ್ಒಡೆಯರ್	೩೦	ಒಡೆಯರ್	ಕಂದಿಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	ಕರ್ನಾಟಕ
೧೨೧	ಡಾ. ಎಸ್.ಎಫ್.ಜಕಬಾಳ	೬೧	ಸಂಶೋಧಕರು, ಮಾರ್ಗದರ್ಶಕರು	ಗದಗ	ಗದಗ	ಗದಗ	ಕರ್ನಾಟಕ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲ್ಲೂಕು	ಜಿಲ್ಲೆ	ರಾಜ್ಯ
೧೨೨	ಸಿದ್ದಯ್ಯ ಹಿರೇಮಠ್	೫೬	ಪೂಜಾರರು	ಗದಗ	ಗದಗ	ಗದಗ	ಕರ್ನಾಟಕ
೧೨೩	ಸಿ.ಜಯಮ್ಮ	೩೭	ಸಂಶೋಧಕರು	ಟಿ.ನರಸೀಪುರ	ಟಿ.ನರಸೀಪುರ	ಮೈಸೂರು	ಕರ್ನಾಟಕ
೧೨೪	ಬಸವರಾಜು ಕರಿಯಪ್ಪ ತಾರೀಕೊಪ್ಪ	೨೩	ವ್ಯವಸಾಯ	ಡಂಬಳ	ಗದಗ	ಗದಗ	ಕರ್ನಾಟಕ
೧೨೫	ಪುಂಡಲೀಕಪ್ಪ ಪಾರಪ್ಪನವರ	೨೪	ವ್ಯವಸಾಯ	ಡಂಬಳ	ಗದಗ	ಗದಗ	ಕರ್ನಾಟಕ
೧೨೬	ಶಿವಕುಮಾರ ಚನ್ನವೀರಯ್ಯಗುರುವಿನ	೩೨	ಗುರುವಿನವರು	ಡಂಬಳ	ಗದಗ	ಗದಗ	ಕರ್ನಾಟಕ
೧೨೭	ಜಿ.ಟಿ.ಹೂಲಿ	೭೧	ನಿವೃತ್ತ ಶಿಕ್ಷಕರು	ಚಿಕ್ಕನರಗುಂದ	ನರಗುಂದ	ಗದಗ	ಕರ್ನಾಟಕ
೧೨೮	ಹನುಮಂತಪ್ಪ ಬಸಪ್ಪಚವಡಿ	೩೩	ವ್ಯವಸಾಯ	ಚಿಕ್ಕನರಗುಂದ	ನರಗುಂದ	ಗದಗ	ಕರ್ನಾಟಕ
೧೨೯	ಎಸ್.ಬಿ.ಚವಡಿ	೪೦	ವ್ಯವಸಾಯ	ಚಿಕ್ಕನರಗುಂದ	ನರಗುಂದ	ಗದಗ	ಕರ್ನಾಟಕ
೧೩೦	ಪಿ.ಕೆ.ಗೊಬ್ಬರಗುಂಪಿ	೪೧	ವ್ಯವಸಾಯ	ಚಿಕ್ಕನರಗುಂದ	ನರಗುಂದ	ಗದಗ	ಕರ್ನಾಟಕ
೧೩೧	ಆಯಪ್ಪ ನರಸಣ್ಣನವರು	೪೩	ವ್ಯವಸಾಯ	ಚಿಕ್ಕನರಗುಂದ	ನರಗುಂದ	ಗದಗ	ಕರ್ನಾಟಕ
೧೩೨	ಭಾಸ್ಕರಪ್ಪ ಹೆಚ್ಚೀರಪ್ಪ ಬಡಿಗೇರ	೪೫	ಬಡಗಿ	ಹಿರೇನಸಬಿ	ಬಾದಾಮಿ	ಬಾಗಲಕೋಟೆ	ಕರ್ನಾಟಕ
೧೩೩	ಶಾಂತಪ್ಪ ನಿಂಗಪ್ಪಕೇಲೂರ	೫೮	ವ್ಯವಸಾಯ	ಹಿರೇನಸಬಿ	ಬಾದಾಮಿ	ಬಾಗಲಕೋಟೆ	ಕರ್ನಾಟಕ
೧೩೪	ಸಿದ್ಧಯ್ಯ ಗುರಯ್ಯಕಾಡಯ್ಯನವರು	೭೪	ಒಡೆಯರು	ಹಿರೇನಸಬಿ	ಬಾದಾಮಿ	ಬಾಗಲಕೋಟೆ	ಕರ್ನಾಟಕ
೧೩೫	ರೇವಣಸಿದ್ಧಯ್ಯ ಸಂಗಯ್ಯ ಪೂಜಾರಿ	೨೪	ಪೂಜಾರಿಕೆ	ಸೂಳೀಬಾವಿ	ಹುನಗುಂದ	ಬಾಗಲಕೋಟೆ	ಕರ್ನಾಟಕ
೧೩೬	ಷಣ್ಮುಕಪ್ಪಈರಪ್ಪಇಜೇರಿ	೨೪	ವಿದ್ಯಾರ್ಥಿ	ಸೂಳೀಬಾವಿ	ಹುನಗುಂದ	ಬಾಗಲಕೋಟೆ	ಕರ್ನಾಟಕ

ಅನುಬಂಧ: ಐದು

ಪರಾಮರ್ಶನ ಗ್ರಂಥಗಳು

೧ ಅಜ್ಜಂಪುರ ಚಂದ್ರಪ್ಪ ಹೆಚ್: 'ಕುರುಬರ ಕುರುಹುಗಳು', ವಿದ್ಯಾನಿಧಿ ಪ್ರಕಾಶನ, ಗದಗ.

೨ ಅಡಿವೆಪ್ಪ ಮಹಾರಾಯರು: 'ಹಾಲುಮತ ಚರಿತ್ರೆಗಳ ವಿಮರ್ಶೆ', ಟಿ.ಇಸ್.ಎ. ಪ್ರಕಾಶನ, ಅಡವಿಸೋಮಾಪುರ

೩ ಒಡೆಯರ್ ಗುರುಸಿದ್ಧ: 'ಕುರುಬರ ಗುರುಪರಂಪರೆ' (ಲೇಖನ), ಎಂ.ಎಂ.ಮೆಣಸಹಿ ಸಂಸ್ಮರಣ ಗ್ರಂಥ, ವಿದ್ಯಾನಿಧಿ ಪ್ರಕಾಶನ, ಗದಗ.

೪ ಒಡೆಯರ್ ಡಿ. ಹೆಗ್ಗಡೆ: 'ಶ್ರೀ ರೇವಣ ಸಿದ್ಧೇಶ್ವರ ಮತ್ತು ಬೀರೇಶ್ವರರು', ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು.

೫ ಕಟ್ಟಿ ಚೆನ್ನಪ್ಪ: 'ಅರಿಕೇರೆ ಅಮೋಘಸಿದ್ಧೇಶ್ವರ', ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬ ಕಟ್ಟಿ ಚೆನ್ನಪ್ಪ, ವಾಡೇದ ಎಸ್ (ಸಂ): 'ಕುರುಬ ಜನಪದ', ಕನಕ ಜಯಂತೋತ್ಸವ ಸಮಿತಿ, ಸಿಂದಗಿ.

೭ ಕರಿಯಪ್ಪ ಎಂ. (ಸಂ): 'ಹಾಲುತೊರೆ', ನಗರ ಕುರುಬರ ಸಂಘ(ರಿ), ದಾವಣಗೆರೆ.

೮ ಕಲಬುರ್ಗಿ ಎಂ.ಎಂ.: 'ಕುರುಬ ಸಮಾಜ ಮತ್ತು ಲಿಂಗಾಯತ ಸಮಾಜ' ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯ ಕಲಬುರ್ಗಿ ಎಂ.ಎಂ., ಪರಶುರಾಮಯ್ಯ ಸಿ.ಕೆ. ಹಳ್ಳಿಕೇರಿ ಎಫ್. ಟಿ. (ಸಂ): 'ತಗರ ಪವಾಡ' ವಿದ್ಯಾನಿಧಿ ಪ್ರಕಾಶನ, ಗದಗ.

೧೦ ಕಲಬುರ್ಗಿ ಎಂ.ಎಂ., ಬಾನುಮತಿ ವೈಸಿ (ಸಂ): 'ಸಿದ್ಧಮಂಕ ಚರಿತೆ', ಶ್ರೀ ಜಗದ್ಗುರು ತೋಂಟದಾರ್ಯ, ಸಂಸ್ಥಾನ ಮಠ, ಗದಗ.

೧೧ ಕುಂಬಾರ ಶಂಕರ ಶಿ.: ‘ಹಾಲುಮತದ ರೇವಣಸಿದ್ಧರ ಹಾಡುಗಳು’, ವಿಜೇತ ಪ್ರಕಾಶನ, ಗದಗ.

೧೨ ಕುಂಬಾರ ಶಂಕರ ಶಿ.: ‘ಹಾಲುಮತದ ಶರಣರ ಚರಿತೆ ಹಾಗೂ ವಚನಗಳು’, ವಿಜೇತ ಪ್ರಕಾಶನ, ಗದಗ.

೧೩ ಕುಂಬಾರ ಶಂಕರ ಶಿ.: ‘ಹಾಲುಮತದ ಸಿದ್ಧರಾಮ’, ವಿದ್ಯಾನಿಧಿ ಪ್ರಕಾಶನ, ಗದಗ.

೧೪ ಕೃಷ್ಣಮೂರ್ತಿ ಮ.ಸು: ‘ಸಿದ್ದ ಸಾಹಿತ್ಯ’, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೧೦

೧೫ ಕೊಪ್ಪಾ ಎಸ್.ಕೆ. (ಸಂ): ‘ಎಂ..ಎಂ. ಕಲಬುರ್ಗಿಯವರ ‘ಸಿದ್ಧರಾಮ ಮತ್ತು ..’ ಸಂವಹನ ಪ್ರಕಾಶನ, ಮೈಸೂರು.

೧೬ ಗೊಸ್ಬಾಳ ಅನ್ನಪೂರ್ಣ: ‘ಹಾಲಮತ ಕಿರಣ’, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಹೊಸಪೇಟೆ.

೧೭ ಗೊಸ್ಬಾಳ ಅನ್ನಪೂರ್ಣ: ‘ಹಾಲಮತದ ಅಧ್ಯಯನದ ಆಕರಗಳು’, ವಿದ್ಯಾನಿಧಿ, ಪ್ರಕಾಶನ, ಗದಗ.

೧೮ ಗೊಸ್ಬಾಳ ಅನ್ನಪೂರ್ಣ (ಸಂ): ‘ಮಲ್ಲನಗೌಡ ಫ ಅತ್ತಿಕೊಳ್ಳ ಅವರ ಹಾಲುಮತ ಚರಿತ್ರೆ’, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ ಹೊಸಪೇಟೆ.

೧೯ ಗುಬ್ಬಣ್ಣವರ ಶಿವಾನಂದ:‘ಕರ್ನಾಟಕದ ಕುರುಬರು‘ ಅಕ್ಷಯ ಪ್ರಕಾಶನ, ಧಾರವಾಡ.

೨೦ ಗೋಪಶೆಟ್ಟಿ ಶಕುಂತಲಾ: ‘ರೇವಣಸಿದ್ಧ ಒಂದು ಅಧ್ಯಯನ’, ಅಪೂರ್ವ ಪ್ರಕಾಶನ, ರಾಯಚೂರು.

೨೧ ಜಕಬಾಳ ಎಸ್. ಎಫ್.: ‘ಕುರುಬರ ಕಟ್ಟುಮತ ಶಾಸ್ತ್ರ’, ವಿದ್ಯಾನಿಧಿ ಪ್ರಕಾಶನ, ಗದಗ.

೨೨ ಜಕಬಾಳ ಎಸ್. ಎಫ್.: ‘ಸಿದ್ಧರಾಮ ಚಾರಿತ್ರ’, ವಿದ್ಯಾನಿಧಿ ಪ್ರಕಾಶನ, ಗದಗ.

೨೩ ಜೈಕುಮಾರ ಎಂ.: ‘ಚೆಲುವು ಚಪ್ಪರ’, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಹೊಸಪೇಟೆ.

೨೪ ಜೈನಕೇರಿ ಜಯದೇವಪ್ಪ: ‘ತರೀಕೆರೆಯ ಶರಣೆ ಅಕ್ಕನಾಗಮ್ಮನ ಗದ್ದುಗೆ’ (ಲೇಖನ), ಬಸವಪಥ’, ಬಸವಸಮಿತಿ, ಬೆಂಗಳೂರು.

೨೫ ತರಿಕೇರಿ ರಹಮತ್: 'ಕರ್ನಾಟಕದ ನಾಥಪಂಥ', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬ ನಂಜುಂಡಾರಾಧ್ಯ ಎಂ. (ಸಂ): 'ಶರೀಪ ಕವಿ ವಿರಚಿತ ಶಿವದೇವ ವಿಜಯಂ', ಪ್ರಭೋದ ಪುಸ್ತಕ ಮಾಲೆ, ಬೆಂಗಳೂರು.

೨೭ ನೆಗಳೂರು ರಂಗನಾಥ: ಬೆಳವಡಿ ಗವಿಸಿದ್ದಪ್ಪ (ಸಂ): 'ಹಾಲುಮತ ದರ್ಶನ, ಶಂಭಾ ಜೋಶಿ', ಸವದತ್ತಿ

೨೮ ಪಡಶೆಟ್ಟಿ ಎಂ. ಎಂ. (ಸಂ): 'ಹೇಳಿಕಿ ಮಾಡ್ಯಾರ ಒಡೆಯರು', ನೆಲೆ ಪ್ರಕಾಶನ, ಸಿಂದಗಿ.

೨೯ ಪರುಶರಾಮಯ್ಯ ಸಿ.ಕೆ.: 'ಕುರುಬ ಜನಾಂಗದ ಒಂದು ಪ್ರಚಲಿತ ಪ್ರಾಚೀನ ಸಂಪ್ರದಾಯ (ಲೇಖನ), ಕಾಗಿನೆಲೆ ಕನಕ ಗುರುಪೀಠ ಸಂಸ್ಮರಣ ಸಂಚಿಕೆ, ಕಾಗಿನೆಲೆ.

೩೦ ಪಾಟೀಲ ರಾಜಶ್ರೀ: "ಹಾಲುಮತ ಗುರು ಸರೂರು ಶಾಂತಮುತ್ತಯ್ಯ", ವಿಕಾಸ ಪ್ರಕಾಶನ, ಹೊಸಪೇಟೆ.

೩೧ ಪೂಜಾರಿ ಎಸ್. ಎಸ್.: 'ಸುಕ್ಷೇತ್ರ ಹೊರ್ತಿಯಲ್ಲಿ ರೇವಣಸಿದ್ಧೇಶ್ವರ ಪವಾಡಗಳು', ಶ್ರೀ ರೇವಣಸಿದ್ಧೇಶ್ವರ ಸಂಸ್ಥೆ, ಹೊರ್ತಿ.

೩೨ ಪೂಜಾರಿ ಮ.ಸಿ.: 'ಶ್ರೀ ರೇವಣಸಿದ್ಧೇಶ್ವರ ಚರಿತ್ರೆ', ಶ್ರೀ ರೇವಣಸಿದ್ಧೇಶ್ವರ ಸಂಸ್ಥೆ, ಹೊರ್ತಿ.

೩೩ ಬಿಜ್ಜರಗಿ ಚಂದ್ರಕಾಂತ: 'ಕುರುಬರ ಹೆಜ್ಜೆಗಳು; ಒಂದು ಅಧ್ಯಯನ', ಶೈಲಚಂದ್ರ ಪ್ರಕಾಶನ, ವಿಜಯಪುರ.

೩೪ ಬಿರಾದರ ಬಿ.ಜಿ.: 'ಕುರುಬರ ಗುರು ಒಡೆಯರು', ವಿಕಾಶ ಪ್ರಕಾಶನ. ಹೊಸಪೇಟೆ.

೩೫ ಭೈರನಟ್ಟಿ ಎಂ. ಎಸ್.: "ಸಂಪೂರ್ಣ ಹಾಲುಮತ ಪುರಾಣ ಭಾಗ-೧", ಪಂಚಾಕ್ಷರಿ ಪ್ರಕಾಶನ, ಗೋಕಾಕ.

೩೬ ಮಗಾಯಿ ರಾ. ಕನ್ನಡ ಅನುವಾದ ಹನಗುಂಡಿ ಲ.ಸಿ.: 'ಶ್ರೀ ಸಿದ್ಧರಾಮೇಶ್ವರ ಚರಿತ್ರೆ' (ಮೂಲ ಮರಾಠಿ). ಶ್ರೀ ಸಿದ್ಧೇಶ್ವರ ದೇವಸ್ಥಾನ ಪಂಚಕಮಿಟಿ, ಸೊಲ್ಲಾಪುರ.

೩೭ ಮುತ್ತೂರು ಅಣ್ಣಪ್ಪ ವಾ: 'ಶ್ರೀ ಕರಿಸಿದ್ಧೇಶ್ವರ ಪುರಾಣ', ವಿದ್ಯಾನಿಧಿ ಪ್ರಕಾಶನ, ಗದಗ.

೩೮ ರವಿಂದ್ರನಾಥ ಕೆ.(ಸಂ): "ಡಾ.ಎಂಎಂ. ಕಲಬುರ್ಗಿಯವರ ರೇವಣಸಿದ್ಧ ಮತ್ತು.., 'ಸಂವಹನ ಪ್ರಕಾಶನ, ಮೈಸೂರು-೨೦೧೨.

೩೯ ರಾಯ್ಕರ ಬ.ಪ.: 'ಹಾಲುಮತಸ್ಥರು', ವಿದ್ಯಾನಿಧಿ ಪ್ರಕಾಶನ, ಗದಗ.

೪೦ ವಾಲಿ ಎ.ಸಿ.: 'ಜನಪದರು ಕಂಡ ಜಗದ್ಗುರು', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧ ವೆಂಟಗೋಡಿ ಟಿ.ಎಸ್.: 'ರಾಯಭಾಗ ತಾಲ್ಲೂಕಿನ ಹಾಲುಮತ ದೈವಗಳು', ವಿದ್ಯಾನಿಧಿ ಪ್ರಕಾಶನ, ಗದಗ.

೪೨ ಶಂಕರಾನಂದಪ್ಪ ಎನ್.: 'ಹಾಲುಮತ ಪುರಾಣ', ವಿದ್ಯಾನಿಧಿ ಪ್ರಕಾಶನ, ಗದಗ.

೪೩ ಸಿದ್ಧರಾಮಯ್ಯ ಎಸ್. ಜಿ: 'ಜನಪದ ಕವಿ ಕಂಡ ರೇವಣಸಿದ್ಧ (ಲೇಖನ)', ಕಾಗಿನೆಲೆ ಕನಕ ಗುರುಪೀಠ ಸಂಸ್ಮರಣ ಸಂಚಿಕೆ, ಕಾಗಿನೆಲೆ.

೪೪ ಸುಂಕಾಪುರ ಎಸ್. ಎಂ.(ಸಂ):'ಜಾಲವಾದಿಯ ಮಲ್ಲಣ್ಣಕೃತ ರೇವಣಸಿದ್ಧೇಶ್ವರ ಕಾವ್ಯ', ಶ್ರೀ ಮುರುಘಾ ಮಠ, ಧಾರವಾಡ.

೪೫ ಸೋಮುತ್ತೆ ಅಡಿವೆಪ್ಪ ಮಾಳಪ್ಪ: 'ಹಾಲುಮತ ಪುರಾಣ', ವಿದ್ಯಾನಿಧಿ, ಪ್ರಕಾಶನ, ಗದಗ.

೪೬ ಹನುಮಾಕ್ಷಿ ಗೋಗಿ: 'ಅನುಶಾಸನ', ಮಹಿಳಾ ಸಾಹಿತ್ಯಕಾ, ಹುಬ್ಬಳ್ಳಿ

೪೭ ಹಳವಳ್ಳಿ ಬಸವಣೆಪ್ಪ ನೀಲಪ: 'ಹಾಲುಮತದ ಪುರಾಣವು', ವಿದ್ಯಾನಿಧಿ ಪ್ರಕಾಶನ, ಗದಗ.

೪೮ ಹಳ್ಳಿಕೇರಿ ಎಫ್. ಟಿ.: 'ಅಲಿಖಿತ ಆಕರಗಳಲ್ಲಿ ರೇವಣಸಿದ್ಧ', ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೯ ಹಳ್ಳಿಕೇರಿ ಎಫ್. ಟಿ:. 'ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೦ ಹಳ್ಳಿಕೇರಿ ಎಫ್. ಟಿ.: 'ರೇವಣಸಿದ್ಧ ಪರಂಪರೆಯ ಹಾಲುಮತ ಮಠಗಳು'. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೧ ಹಳ್ಳಿಕೇರಿ ಎಫ್. ಟಿ.: 'ಶಾಂತಮುತ್ತಯ್ಯನನ್ನು ಕುರಿತು ಕಿರುಕೃತಿ ಶೋಧ'. ಪ್ರಸಾರಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೨ ಹಳ್ಳಿಕೇರಿ ಎಫ್. ಟಿ.: 'ಹಾಲುಮತ ಅಧ್ಯಯನಗಳು', ವಿಕಾಸ ಪ್ರಕಾಶನ, ಹೊಸಪೇಟೆ–೨೦೧೦

೫೩ ಹಳ್ಳಿಕೇರಿ ಎಫ್. ಟಿ.: 'ಹಾಲುಮತ ಸಂಸ್ಕೃತಿ', ವಿಕಾಸ ಪ್ರಕಾಶನ, ಹೊಸಪೇಟೆ–೨೦೧೧

೫೪ ಹಳ್ಳಿಕೇರಿ ಎಫ್. ಟಿ.(ಸಂ): 'ಹಾಲುಮತ ಅಧ್ಯಯನ', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೫ ಹಳ್ಳಿಕೇರಿ ಎಫ್. ಟಿ.(ಸಂ);'ಹಾಲುಮತ ವ್ಯಾಸಂಗ–೧', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬ ಹಳ್ಳಿಕೇರಿ ಎಫ್. ಟಿ.(ಸಂ):'ಹಾಲುಮತ ವ್ಯಾಸಂಗ–೨', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭ ಹಳ್ಳಿಕೇರಿ ಎಫ್. ಟಿ.(ಸಂ): 'ಹಾಲುಮತ ವ್ಯಾಸಂಗ–೩', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೮ ಹಳ್ಳಿಕೇರಿ ಎಫ್. (ಸಂ): 'ಹಾಲುಮತ ವ್ಯಾಸಂಗ–೪', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.


೫೯ ಹಳ್ಳಿಕೇರಿ ಎಫ್. ಟಿ.(ಸಂ): 'ಹಾಲುಮತ ವ್ಯಾಸಂಗ–೫', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦ ಹೆಗ್ಗಡೆ ರಾಮಣ್ಣ ಎಂ.: 'ಹಾಲುಮತ ಆರ್ಯ ಹೆಗ್ಗಡೆಗಳು', ಇಂದಿರಾ ಚಂದಿರಾ ಪ್ರಕಾಶನ, ಮೈಸೂರು.

೬೧ ಹಿರೇಕೆರೂರು ತಾಲ್ಲೂಕು ಶಾಸನ ಸಂಪುಟ.

೬೨ ಧಾರವಾಡ ಜಿಲ್ಲೆಯ ಶಾಸನ ಸೂಚಿ.

೬೩ Nandish S.C.: Chowdadanapur - A Monograph, Vishwabharati Vidyapeetha, Bangalore.



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ